ಜನಪ್ರಿಯ
ಪುಸ್ತಕ ಮಾಲೆ

ಬೇಟೆಯ ನೆನಪುಗಳು

ಕೆದಂಬಾಡಿ ಜತ್ತಪ್ಪ ರೈ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

ಬೇಟೆಯ ನೆನಪುಗಳು

ಲೇಖಕರ ಪರಿಚಯ

ಶ್ರೀ ಕೆದಂಬಾಡಿ ಜತ್ತಪ್ಪ ರೈ (ಜನನ: ೧೧.೨.೧೯೧೬)-ಕನ್ನಡ ಮೃಗಯಾ ಸಾಹಿತ್ಯದಲ್ಲಿ ಹಿರಿಯ ಹೆಸರು. ಓದಿದ್ದು ಕೇವಲ ಎಂಟನೆಯ ಇಯತ್ತೆಯಾದರೂ ಅನುಭವ ಶ್ರೀಮಂತಿಕೆ, ಬರೆವ ಹುಮ್ಮಸ್ಸು ಅವರ ಬರಹಕ್ಕೆ ಅನನ್ಯತೆ ತಂದುಕೊಟ್ಟಿದೆ.

ಶ್ರೀ ರೈ ವೃತ್ತಿಯಿಂದ ವ್ಯವಸಾಯಗಾರರಾದರೂ ಪ್ರವೃತ್ತಿಯಿಂದ ನಿಪುಣ ಬೇಟೆಗಾರ ಹಾಗೂ ಪ್ರವಚನಕಾರರೆಂದು ಹೆಸರಾದವರು. 'ಬೇಟೆಯ ನೆನಪುಗಳು; 'ಈಡೊಂದು ಹುಲಿ ಎರಡು; 'ಬೇಟೆಯ ಉರುಳು, 'ಬೆಟ್ಟದ ತಪ್ಪಲಿಂದ ಕಡಲ ತಡಿಗೆ,' ಮತ್ತಿತರ ಕೃತಿಗಳನ್ನು ರೈಯವರು ರಚಿಸಿದ್ದಾರೆ.

'ಬೇಟೆಯ ನೆನಪುಗಳು' ಕೃತಿ ಶ್ರೀ ರೈ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟಿದೆ. ಇವರ ಸಾಹಿತ್ಯ ಸೇವೆಯನ್ನು ಗಮನಿಸಿ ವಿವಿಧ ಸಂಘ ಸಂಸ್ಥೆಗಳೂ ಪ್ರಶಸ್ತಿ, ಪುರಸ್ಕಾರಗಳೊಂದಿಗೆ ಗೌರವಿಸಿವೆ.

ಶ್ರೀ ಕೆದಂಬಾಡಿ ಜತ್ತಪ್ಪ ರೈ ಅವರಿಗೆ ಈ ವರ್ಷ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್ ಸಹ ಲಭ್ಯವಾಗಿದೆ.

ಜನಪ್ರಿಯ ಪುಸ್ತಕ ಮಾಲೆ

ಬೇಟೆಯ ನೆನಪುಗಳು

ಕೆದಂಬಾಡಿ ಜತ್ತಪ್ಪ ರೈ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

BETEYA NENAPUGALU - Memories of Hunting sketches in Kannada by Kedambady Jathappa Rai; Sulya, Mangalore Dist. Published by Kannada Pusthaka Pradhikara (Kannada Book Authority) Chamarajpet, Bangalore – 560 018. Pages : 123 + xii Rs.25/-

First Impression 1978

Second Impression 1979

Third Impression 1998

ಬೆಲೆ : ರೂ. ೨೫/-

ಹಕ್ಕು: ಕನ್ನಡ ಪುಸ್ತಕ ಪ್ರಾಧಿಕಾರ

ಅಕ್ಷರ ಜೋಡಣೆ : 'ದಿಕ್ಸೂಚಿ' ಮುದ್ರಣಾಲಯ

ಮುದ್ರಕರು:

ಸ್ವತಂತ್ರ ಮುದ್ರಣಾಲಯ

ನಂ. ೩, ಬಿ.ಸಿ.ಸಿ. ಬ್ಯಾಂಕ್ ಕಟ್ಟಡ,

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು -೫೬೦ ೦೧೮

ನ್ಯಾಯವಾದಿ

ಸಾಹಿತಿ

ಕನ್ನಡದ ಹೋರಾಟಗಾರ

ದಿ। ಕಳ್ಳಿಗೆ ಮಹಾಬಲ ಭಂಡಾರಿಯವರ

ನೆನಪಿಗೆ

ಅಧ್ಯಕ್ಷರ ಮಾತು

ಜ್ಞಾನಾರ್ಜನೆಗೆ ಅಕ್ಷರ ಮಾಧ್ಯಮವೇ ಪ್ರಮುಖ ಸಾಧನ. ಆಧುನಿಕ ಕಾಲದಲ್ಲಿ ತಿಳುವಳಿಕೆಯನ್ನು ನೀಡಲು ಅನೇಕ ಮಾಧ್ಯಮಗಳು ಸಿದ್ಧವಾಗಿದ್ದರೂ ಸಾಹಿತ್ಯ ಕೃತಿಗಳಿಗೆ ಮಾತ್ರ ಅಪೂರ್ವವಾದ ಅನನ್ಯತೆ ಇದೆ. ಸಾಹಿತ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಅನುಭವಜ್ಞಾನದಿಂದ ಮಾನವನ ಹೃದಯದಲ್ಲಿ ಆತ್ಮಸೌಂದರ್ಯ ವೃದ್ಧಿಸುತ್ತದೆ. ಭವ್ಯವಾದ ಪರಂಪರೆಯನ್ನು ನಿರಂತರವಾಗಿ ಮುಂದುವರಿಸಲು ಭಾಷೆಯ ಮೂಲಕ ಅನುವಾಗುವ ಗ್ರಂಥಗಳು ಸಂಸ್ಕೃತಿಯ ಜೀವನಾಡಿಯಾಗಿ ಜೀವಂತವಾಗಿ ಸಾಗಬೇಕಾಗುತ್ತದೆ. ಈ ಸಾಗುವಿಕೆಯಲ್ಲಿ ಮಾನವರು ತಂತಮ್ಮ ನಡುವಿನ ತಿಳುವಳಿಕೆಯನ್ನು ಪರಸ್ಪರ ಅರಿಯುತ್ತ ವಿಸ್ತರಿಸುತ್ತ ಸಾಮರಸ್ಯಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ವಾಚಕರಿಗೆ ತಲುಪಿಸುವ ಜವಾಬ್ದಾರಿಯನ್ನು 'ಕನ್ನಡ ಪುಸ್ತಕ ಪ್ರಾಧಿಕಾರ ' ಹೊತ್ತಿದೆ.

ಕರ್ನಾಟಕ ಸರ್ಕಾರ ಬಹುದಿನಗಳಿಂದ ಇಂತಹ ಮೌಲಿಕವಾದ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿಯ ಪ್ರಸರಣ ಕಾರ್ಯಕ್ಕೆ ಒತ್ತಾಸೆಯಾಗಿದ್ದರು. ಕುವೆಂಪು ಮತ್ತು ಮಾಸ್ತಿ ಅವರು ಸೇರಿ ಸಂಪಾದಿಸಿಕೊಟ್ಟ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಈ ಇಲಾಖೆಯಿಂದ ಪ್ರಕಟವಾದ 'ಕುಮಾರ ವ್ಯಾಸ ಭಾರತ' ಗ್ರಂಥ ಇಂದಿಗೂ ವಿದ್ವಾಂಸರ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿದೆ. ಆನಂತರ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಕರ್ನಾಟಕ ಸರ್ಕಾರವು ಇದೇ ಇಲಾಖೆಯ ಮೂಲಕ ಕನ್ನಡದ ಮೌಲಿಕವಾದ ಹಾಗೂ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ನೂರಕ್ಕೂ ಹೆಚ್ಚಿನ ಗ್ರಂಥಗಳನ್ನು 'ಜನಪ್ರಿಯ ಪುಸ್ತಕ ಮಾಲೆ ' ಯ ಮೂಲಕ ಆಯ್ದು ಪ್ರಕಟಿಸಿ ಓದುಗರ ಮೆಚ್ಚುಗೆ ಗಳಿಸಿತು.

ಕರ್ನಾಟಕ ಸರ್ಕಾರ ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಪ್ರಕಟಿಸುತ್ತಿದ್ದ ಇಂತಹ ಅಪರೂಪದ ಕೃತಿಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಲಿದೆ. ಹಿಂದಿನ ಪೀಳಿಗೆಗಳ ಅನೇಕ ಉತ್ತಮ ಕೃತಿಗಳನ್ನು ಇಂದಿನ ಪೀಳಿಗೆಯ ಓದುಗರಿಗೆ ಎಟುಕುವ ಬೆಲೆಯಲ್ಲಿ ಲಭ್ಯಗೊಳಿಸುವುದೇ ಈ ಯೋಜನೆಯ ಆಶಯವಾಗಿದೆ. ಅಲಭ್ಯವಾಗಿರುವ ಇತ್ತೀಚಿನ ಉತ್ತಮ ಕೃತಿಗಳನ್ನೂ ಈ ಮಾಲೆಯಲ್ಲಿ ಪ್ರಕಟಿಸಲು ಉದ್ದೇಶಿಸಿದೆ.

'ಮೃಗಯಾಸಾಹಿತ್ಯ'ದ ಹಿರಿಯ ಲೇಖಕ ಶ್ರೀಮಾನ್ ಕೆದಂಬಾಡಿ ಜತ್ತಪ್ಪರೈ ಅವರ ಜನಪ್ರಿಯ ಕೃತಿ 'ಬೇಟೆಯ ನೆನಪುಗಳು' ಅನ್ನು ಈಗ ಪ್ರಾಧಿಕಾರ ಓದುಗರ ಕೈಗಿಡುತ್ತಿದೆ.

ಈ ಪುಸ್ತಕದ ಪ್ರಕಟಣೆಗೆ ಒಪ್ಪಿದ ಪ್ರಾಧಿಕಾರದ ಸದಸ್ಯರಿಗೆ, ಪುಸ್ತಕ ಪ್ರಕಟಿಸಲು ಅನುಮತಿ ನೀಡಿದ ಕೆದಂಬಾಡಿ ಜತ್ತಪ್ಪರೈ ಅವರಿಗೆ, ಅಕ್ಷರ ಜೋಡಣೆ ಮಾಡಿದ 'ದಿಕ್ಸೂಚಿ' ಮುದ್ರಣಾಲಯ ಹಾಗೂ ಅಂದವಾಗಿ ಮುದ್ರಿಸಿಕೊಟ್ಟ ಸ್ವತಂತ್ರ ಮುದ್ರಣಾಲಯದವರಿಗೆ ಕೃತಜ್ಞತೆಗಳು.

ನೆಲಮನೆ ದೇವೇಗೌಡ
ಅಧ್ಯಕ್ಷರು,
ಕನ್ನಡ ಪುಸ್ತಕ ಪ್ರಾಧಿಕಾರ.

ಮುನ್ನುಡಿ

ಕವಿಕುಲಗುರು ಕಾಳಿದಾಸ ತನ್ನ ಅಮರ ಕೃತಿಯಾದ 'ಅಭಿಜ್ಞಾನ ಶಾಕುಂತಲ' ದಲ್ಲಿ ಮೃಗಯಾ (ಬೇಟೆ) ವಿನೋದದ ಕುರಿತು ಮನೋಹರವಾದ ಪದ್ಯ ಪಂಕ್ತಿಗಳನ್ನು ಇಂತು ಬರೆದಿದ್ದಾನೆ:

"ಮೇದಶ್ಛೇದ ಕೃಶೋದರಂ ಲಘು ಭವತ್ಯುತ್ಥಾನ ಯೋಗ್ಯಂವಪುಃ
ಸತ್ವಾನಾಮಪಿ ಲಕ್ಷ್ಯತೇ ವಿಕೃತಿ ಮಚ್ಚಿತ್ತಂ ಭಯ ಕ್ರೋಧಯೋಃ
ಉತ್ಕರ್ಷಃ ಸ ಚ ಧನ್ವಿನಾಂಯದಿಷವಃ ಸಿದ್ಧ್ಯಂತಿ ಲಕ್ಷ್ಯೇ ಚಲೇ
ಮಿಥ್ಯೈವ ವ್ಯಸನಂ ವದಂತಿ ಮೃಗಯಾ ಮೀದೃಗ್ವಿನೋದಃ ಕುತಃ"

ಬೊಜ್ಜು ಕರಗಿ ಹೋಗುತ್ತದೆ; ಹೊಟ್ಟೆ ಕಿರಿದಾಗುತ್ತದೆ: ಶರೀರ ಚುರುಕುಗೊಂಡು ಲಘುವಾಗುತ್ತದೆ; ಹೆದರಿಕೆಯಲ್ಲಿ ಅಥವಾ ಸಿಟ್ಟಿನಲ್ಲಿ ಜಂತುಗಳ ವಿಕಾರವಶವಾದ ಚಿತ್ತ ಹೇಗಿರುತ್ತದೆಂದು ಅರಿವಾಗುತ್ತದೆ. ಚಲಿಸುತ್ತಿರುವ ಸಮಯದಲ್ಲಿ ಕೂಡಾ ಬಾಣಗಳು ಸರಿಯಾಗಿ ಲಕ್ಷ್ಯಕ್ಕೇ ನಾಟುವಂತೆ ಸಿದ್ಧಿ ದೊರಕುತ್ತದೆಎಂಬುದು ಬಿಲ್ಲುಗಾರರಿಗೆ ಬಲ್ಮೆಯಾಗಿದೆ. ಇಷ್ಟೆಲ್ಲಾ ಗುಣ ವಿಶೇಷಗಳಿದ್ದರೂ ಬೇಟೆಯನ್ನು ವ್ಯಸನಗಳಲ್ಲಿ ಒಂದು ಎನ್ನುವುದು ಕೇವಲ ಸುಳ್ಳೇ ಆಗಿದೆ. ಬೇಟೆಯಂತಹ ವಿನೋದ ಇನ್ನೆಲ್ಲಿದೆ?

-ಮೇಲಿನ ಕಾವ್ಯ ಪಂಕ್ತಿ ನನ್ನ ಸ್ಮರಣೆಗೆ ಬಂದುದು ನನ್ನ ಆತ್ಮೀಯರಾದ ಶ್ರೀ ಕೆದಂಬಾಡಿ ಜತ್ತಪ್ಪ ರೈಗಳ 'ಬೇಟೆಯ ನೆನಪುಗಳು' ಎಂಬ ಕೃತಿಯನ್ನು ಓದಿದಾಗ. ಜೀವನದ ವಿವಿಧ ಕ್ಷೇತ್ರಗಳಲ್ಲಿ ವಿಶಾಲವಾದ ಅನುಭವವನ್ನು ಗಳಿಸಿಕೊಡಿರುವ ಶ್ರೀ ರೈಗಳು, ತಮ್ಮ ಇಂದಿನ ಈ ಇಳಿವಯಸ್ಸಿನಲ್ಲಿ ತಾವು ಗಳಿಸಿಕೊಂಡಿರುವ ನಾನಾ ಪರಿಣತ ಅನುಭವಗಳ ಒಂದು ಮುಖವನ್ನು ಈ ಕೃತಿಯ ಮೂಲಕ ಭಟ್ಟಿಯಿಳಿಸಿ ಕನ್ನಡ ವಾಚಕಲೋಕಕ್ಕೆ ನೀಡಿರುವುದು ತುಂಬಾ ಶ್ಲಾಘನೀಯ. ಬೇಟೆಯಲ್ಲಿ ಅದರಲ್ಲೂ ಮುಖ್ಯವಾಗಿ ಹುಲಿಬೇಟೆಯಲ್ಲಿ ಸಾಹಸವಿದೆ, ಶೌರ್ಯವಿದೆ, ರಸವಿದೆ, ರುಚಿಯಿದೆ ಎಂಬೀ ವಿಪುಲ ಪ್ರಯೋಜನವನ್ನು ಪ್ರಕೃತ ಪುಸ್ತಕದಲ್ಲಿ ಲೇಖಕರು ಕೊಟ್ಟಿರುವ ಹಲವು ಘಟನೆಗಳಿಂದ, ಕಥನ ಕ್ರಮದಿಂದ, ವರ್ಣನಾ ವೈಖರಿಯಿಂದ ನಾವು ಸರಿಯಾಗಿ ತಿಳಿದುಕೊಂಡು ಆಸ್ವಾದಿಸಬಹುದಾಗಿದೆ.

ಶ್ರೀ ಜತ್ತಪ್ಪರೈಗಳು ಬಾಲ್ಯವನ್ನು ಕಳೆದ ಊರು ಬಂಟರಗ್ರಾಮದ ಪಿಲಿಮಜಲು. ಆ ಗ್ರಾಮಕ್ಕೆ ಹೆಸರು ಬಂದದ್ದೇ ಬಂಟರೆಂಬ ಯೋಧ ಜನಾಂಗದಿಂದ, ಮನೆಯೋ ಹುಲಿಮಜಲು; ಪರಿಸರವೋ ಕುದುರೆಮುಖ, ಕುಮಾರ ಪರ್ವತ, ಸುಬ್ರಹ್ಮಣ್ಯ. ವಕೀಲರಾಗಿದ್ದುದು, ಮತ್ತೆ ಅವರ ಸಂಬಂಧಿಕರು ಶ್ರೀ ಕವಿಭೂಷಣ ವೆಂಕಪ್ಪ ಶೆಟ್ಟರು

ಕಡಬ ಇಂತಹ ಮಲೆನಾಡು ಪ್ರದೇಶ, ಇಂತಹ ಸನ್ನಿವೇಶದಲ್ಲಿ ಅಜ್ಜನ ಕಾಲದಿಂದ ರಕ್ತಗತವಾಗಿ ಬಂದ ಮೃಗಯಾ ವಿನೋದವನ್ನು ಶ್ರೀ ರೈಗಳು ಮೈಗೂಡಿಸಿಕೊಂಡವರು, ಹಂದಿ, ಹುಲಿ, ಕಾಡುಕೋಣ ಇಂತಹ ಕ್ರೂರ ಮೃಗಗಳು ದಿನ ನಿತ್ಯ ಕೃಷಿಕರಿಗೆ ಕೊಡುವ ಕಾಟ; ಅದಕ್ಕಾಗಿ ಹಗಲು ಹೊತ್ತಿನಲ್ಲಿ ಕಾಡನ್ನು ಸೋವಿ ಮಾಡುವ ಬೇಟೆ; ರಾತ್ರಿಯ ಮರಸು ಬೇಟೆ, ಕೋವಿ, ಭರ್ಚಿ, ನಾರೆಕತ್ತಿ, ಬಿಲ್ಲು ಪಗರಿ, ಕವಣೆ ಕಲ್ಲು ಇತ್ಯಾದಿ ಆಯುಧಗಳನ್ನು ಹೊಂದಿಬರುವ ಬೇಟೆಗಾರ ಪರಿವಾರ ; ಪಟ್ಟದ ಮೇರರು, ಬೊಟ್ಟದ ಮಾರಿ ಹೊಲೆಯರು, ದಟ್ಟಿಗೆಯ ಅಜಲರು, ಕೊಟ್ಯದ ಕೊರಗರು, ಚೇರದ ಮೈಲರು, ಗಿಡ್ಡ ಶರೀರದ, ಅರೆನರೆತ ಕೂದಲಿನ, ಗಿರಿಜಾ ಮೀಸೆಯ ಕಾಸಿಂ ಸಾಹೇಬ್, ಹುಲಿಮೀಸೆ ಕಿತ್ತುತರುವ ಮೋಂತು, ಬ್ರಿಟಿಷ್ ಕುಟುಂಬದೊಂದಿಗೆ ಕುದುರೆ ಮುಖದಲ್ಲಿ ಗಾರ್ಡರ ಬಲಿಪ ಶಿಕಾರಿ, ಜೋನ್ ಬೃಗಾಂಜ, ಕೊಂಬಾರಿನ ಸಾಂತ ಗೌಡ - ಹೀಗೆ ನಾನಾ ರೀತಿ, ನಾನಾ ಪ್ರಕೃತಿ, ವಿಧ ವಿಧ ವಿನೋದದ ಸಾಹಸಮಯ ಜೀವನದ, ರಸರೋಮಾಂಚದ ಈ ಬೇಟೆಯ ಪ್ರವೃತ್ತಿಯಲ್ಲಿ ತಲ್ಲೀನರಾಗಿ ಶ್ರೀ ರೈಗಳು, ಹೈಸ್ಕೂಲ್ ವಿದ್ಯಾಭ್ಯಾಸವನ್ನೂ ಮುಂದೆ ಸಂಸ್ಕೃತ ಕಾಲೇಜಿನ ವಿದ್ವತ್ಪದವಿಯನ್ನೂ ಪೂರ್ತಿಮಾಡದೆ ಹೋದರೂ, ಬದುಕಿನಲ್ಲಿ ಉಲ್ಲಾಸಮಯ, ರಸಮಯ, ಸಾಹಸಮಯವಾದ ಬೇಟೆಯಲ್ಲಿ, ಅದರಲ್ಲೂ ಹುಲಿಬೇಟೆಯಲ್ಲಿ ಜೀವವನ್ನು ಪಣವಾಗಿಟ್ಟು ಶೌರ್ಯಪ್ರದರ್ಶನ ಮಾಡಿ, ಆ ಕಾರ್ಯದಲ್ಲಿ ಪರಮ ಸಿದ್ಧಿಯನ್ನು, ಕೀರ್ತಿಶಿಖರವನ್ನು ತಲುಪಿದರೆಂದು ಈ ರುದ್ರ ರಮ್ಯಕಥೆ, ಅವರ ಬದುಕಿನ ಈ ಸತ್ಯಕಥೆ ನಮಗೆ ತಿಳಿಯಪಡಿಸುತ್ತದೆ. ಇಂತಹ ಬರವಣಿಗೆ ಕನ್ನಡ ಸಾಹಿತ್ಯಕ್ಕೆ ಒಂದು ಅಪೂರ್ವವಾದ ಕೊಡುಗೆಯಾಗಿದೆ. ಇಂಗ್ಲಿಷ್, ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಸಾಕಷ್ಟು ಹಿಡಿತವನ್ನು ಸಂಪಾದಿಸಿದ ಶ್ರೀ ರೈಗಳ ಸುಂದರ ಶೈಲಿಗೆ ಅವರ ತುಳು ಭಾಷಾಜ್ಞಾನವೂ ಸೇರಿ ಮುಪ್ಪುರಿಗೊಂಡು ಬರವಣಿಗೆಯ ಓಟ ನಮ್ಮನ್ನು ಮುಂದೆ ಮುಂದಕ್ಕೆ ಸೆಳೆಯುತ್ತದೆ. ಬೆಳ್ತಮೇರನ ಜತೆ ಆತನ ಮೇರಿತಿ ಜೋಮು ಬೇಟೆಗೆ ಸಂಗಾತಿಯಾಗಿ ಹೊರಡುವುದು, ಆತನು ಬಿಲ್ಲನ್ನು ನೆಲಕ್ಕೂರಿ, ಮೊಣಕಾಲನ್ನು ಮಧ್ಯಕ್ಕೆ ಕೊಟ್ಟು ಬಾಗಿಸಿ ಬೆತ್ತದ ಹುರಿಯನ್ನು ಬಿಲ್ಲಕೊಪ್ಪಿಗೆ ಸಿಕ್ಕಿಸಿದಾಗ ಹೊರಡುವ ಧನುಷ್ಟೇಂಕಾರ, ಆ ನಾದಕ್ಕೆ ವೀಣಾವಾದಕನಂತೆ ಆತ ಹರ್ಷಿತನಾಗುವುದು, ಮಡದಿಯತ್ತ ದೃಷ್ಟಿ ಹಾಯಿಸುವುದು, ಮೇರಿತಿ ಕೊಟ್ಟ ಎಲೆಗೆ ಸುಣ್ಣ ಸವರುವುದು ಈ ವಿವರವಾದ ವರ್ಣನೆ ನಮಗೆ ಹಳಗನ್ನಡದ ಪದ್ಯ ಪಂಕ್ತಿಗಳನ್ನು ನೆನಪಿಗೆ ತರುತ್ತದೆ:

"ಕೆಲದೊಳ್ ಪುಳಿಂದಿಯರ ಪೆ
ರ್ಬುಲಿ ಬಂದೊಡಮ್ ಜನಳ್ನೋಡಂ ನೋಡಂ
ಚಲದಿಂ ಕಾಡಂ ಕಾಡಂ
ಸಲೆ ಪಸಿವಂ ಮರೆದು ತಣಿದು ಬೇಡಂ ಬೇಡಂ."

ಇಂತಹ ಸಹಜ ಸುಂದರ ಶೃಂಗಾರದ ಸನ್ನಿವೇಶಗಳು ಒಟ್ಟಿನಲ್ಲಿ ಬರುವ ವೀರ, ರೌದ್ರ, ಭಯಾನಕಗಳಿಗೆ ಮಾರ್ದವತೆಯ ಮೆರುಗನ್ನು ನೀಡಿ ನಮ್ಮನ್ನು ರಸವೀಚಿಯಲ್ಲಿ ತೇಲಿಸುತ್ತವೆ.

ಪ್ರವಾಸ ಕಥನ ಸಾಹಿತ್ಯದ ಒಂದು ಪ್ರಕಾರ; ಅದರಲ್ಲಿ ಕತೆಗಾರಿಕೆಯ ಅಂಶ ಅಡಕವಾಗಿರುವುದರಿಂದ ಆ ಪ್ರಬಂಧ ಪ್ರಕಾರ ಹೆಚ್ಚಿನ ಮೆಚ್ಚುಗೆ ಪಡೆದಿದೆ. 'ಬೇಟೆಯ ನೆನಪುಗಳು' ಎಂಬೀತೆರನ ಬರವಣಿಗೆ ಅದೇ ಹಾದಿಯಲ್ಲಿ ಸಾಗಿದರೂ, ಅದಕ್ಕಿಂತಲೂ ಆಕರ್ಷಕವಾಗಿ ಮೂಡಿಬಂದ ಒಂದು ಮಹತ್ತರ ಸಾಹಿತ್ಯ ಪ್ರಕಾರವೆನ್ನಬೇಕು. ಇದರಲ್ಲಿನ ವರ್ಣನೆ ಕಾದಂಬರಿಗಳ ವರ್ಣನೆಯ ಮಟ್ಟವನ್ನು ಮುಟ್ಟಬಲ್ಲುದು; ಅನೇಕ ಕುತೂಹಲಕಾರೀ ಘಟನೆಗಳು ಅಲ್ಲಲ್ಲಿ ಮೂಡಿ ಬರುವುದರಿಂದ ಪತ್ತೇದಾರೀ ಕತೆಗಳ ಆಸಕ್ತಿ ಕೆರಳಿಸುವ ಅಂಶಗಳೂ ಇಲ್ಲಿ ವಿಪುಲವಾಗಿ ತುಂಬಿರುತ್ತವೆ. ಹಾಗಾಗಿ ಈ ಬರವಣಿಗೆ ಪ್ರಕಾರ ಪ್ರವಾಸ ಕಥನಕ್ಕಿಂತ ಹೆಚ್ಚು ರೋಚಕವೂ ಆಕರ್ಷಕವೂ ಆಗಿರುವುದು. ಅನುಭವದ ತೀವ್ರತೆ, ವರ್ಣನೆಯ ವೈಖರಿ, ಭಾಷೆಯ ಹಿಡಿತ ಇವು ಮುಪ್ಪುರಿಗೊಂಡ ಶ್ರೀ ರೈಗಳ ಈ ನೆನಪಿನ ಕೃತಿ ಬಹುಕಾಲ ನಿಲ್ಲಬಲ್ಲ ಒಂದು ಉತ್ತಮ ಕೃತಿಯಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ಶ್ರೀ ರೈಗಳನ್ನು ನಾನು ಕಳೆದ ನಲ್ವತ್ತು ವರ್ಷಗಳಿಂದ ಬಲ್ಲೆನು. ಪೆರಡಾಲ ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿ ನಾನು ಹೋದ ವರ್ಷ ಅವರು ಅಲ್ಲಿ ಸೇರಿದರು. ಮೇಲಿಂದ ಮೇಲೆ ನೋಡುವಾಗ ಸ್ವಲ್ಪ ಒರಟು ಸ್ವಭಾವವೆಂದು ತೋರಿದರೂ, ಹತ್ತಿರ ಬಂದಾಗ ತುಂಬಾ ಮೃದು ಸ್ವಭಾವವುಳ್ಳ, ಸೌಹಾರ್ದತೆಯುಳ್ಳ, ಆದರೂ ಸತ್ಯ ನಿಷ್ಠುರತೆಯನ್ನು ಬಿಡದ ಅವರ ಪ್ರಕೃತಿಯನ್ನು ನಾನು ಅರಿತಿದ್ದೇನೆ. ಕುಂಬಳೆಯಿಂದ ಆಗ ಶ್ರೀ ಕೆ. ಹೈದರ್ 'ಜ್ಯೋತಿ' ಎಂಬೊಂದು ಪತ್ರಿಕೆ ಹೊರಡಿಸುತ್ತಿದ್ದರು; ನಾನೂ ಆ ಪತ್ರಿಕೆಯ ಲೇಖಕರ ಬಳಗಕ್ಕೆ ಸೇರಿದ್ದೆ. ಅದರಲ್ಲಿ ಪ್ರಕಟವಾದ ಕೆಲವು ಲೇಖನಗಳ ಬಗ್ಗೆ ಪ್ರತಿ ಪುಟದಲ್ಲಿ ಅಡಿಗೆರೆ ಹಾಕಿ, ಪ್ರಶ್ನಾರ್ಥಕ ಚಿಹ್ನೆ ಗುರುತಿಸಿ ಅವುಗಳ ಕುರಿತು ಕಟುವಾದ ವಿಮರ್ಶೆಯನ್ನು ನನ್ನ ಮುಂದೆ ಅವರು ಇಟ್ಟ ನೆನಪು. ಶ್ರೀ ರೈಗಳ ಸೋದರ ಮಾವ ಡಾ। ಮಂಜುನಾಥ ರೈಗಳು ಖ್ಯಾತ ಡಾಕ್ಟರರಾಗಿದ್ದುದು, ಅವರ ಸೋದರ ಶ್ರೀ ನಾರಾಯಣ ರೈಗಳು ಪ್ರಸಿದ್ಧ

ಯಕ್ಷಗಾನ ಕ್ಷೇತ್ರದ ದಿಗ್ಗಜವಾಗಿ ಮೆರೆದಿದ್ದುದು- ನನ್ನ ಬರವಣಿಗೆಯ ಕುರಿತು ಸದಾ ಆಸಕ್ತಿ ತೋರಿಸುತ್ತಿದ್ದುದು- ಈ ಎಲ್ಲ ಕಾರಣಗಳಿಂದ, ಇತ್ತೀಚೆಗೆ ತುಳು ಸಾಹಿತ್ಯ ರಚನೆಗೂ ಕೈ ಹಾಕಿದುದರಿಂದ, ಶ್ರೀ ರೈಗಳು ನನಗೆ ಹೆಚ್ಚು ಹೆಚ್ಚಾಗಿ ಪರಿಚಿತರಾಗಿದ್ದಾರೆ; ಹತ್ತಿರವಾಗಿದ್ದಾರೆ. ಅವರಲ್ಲಿ ಮೆಚ್ಚತಕ್ಕ ಹಲವಾರು ಒಳ್ಳೆಯ ಹವ್ಯಾಸಗಳಿದ್ದು, ಪುಸ್ತಕ ಪ್ರಕಟಣೆಯ ಕೆಲಸದಲ್ಲಿ ಇದೇ ಮೊದಲ ಬಾರಿಯಾಗಿ ಅವರು ಕೈಹಾಕಿದ್ದರೂ, ಮೊದಲ ಈ ಕೃತಿಯೇ ಇದರಲ್ಲಿನ ಸಾಹಿತ್ಯಿಕ ಮೌಲ್ಯದ ನಿಮಿತ್ತ ಕನ್ನಡ ಸಾಹಿತ್ಯದಲ್ಲಿ ಅವರಿಗೆ ಸ್ಥಿರವಾದೊಂದು ಸ್ಥಾನವನ್ನು ಒದಗಿಸಲು ಶಕ್ತವಾದೀತೆಂದು ನಾನು ಭರವಸೆ ಪಡುತ್ತೇನೆ.

ಬೇಟೆಯ ಕುರಿತು ಇಂಗ್ಲಿಷ್ ಭಾಷೆಯಲ್ಲಿ ಧಾರಾಳ ಪುಸ್ತಕಗಳು ಬಂದಿದ್ದರೂ ಕನ್ನಡದಲ್ಲಿ ತೀರಾ ವಿರಳ. ಮಹಾ ಕವಿ ಕುವೆಂಪು ರಚನೆಗಳಲ್ಲಿ ಬೇಟೆಯ ಕುರಿತು ವರ್ಣಿಸಿದ್ದರೂ, ಅಲ್ಲಲ್ಲಿ ಕೆಲವು ಪತ್ರಿಕೆಗಳಲ್ಲಿ ಬೇಟೆಯ ಕುರಿತಾದ ಇತರ ಕೆಲವರ ಲೇಖನ ಓದಿದ ನೆನಪು ಇದ್ದರೂ ತುಳುನಾಡಿನ ಸೆರಗಾಗಿರುವ ಮಲೆನಾಡಿನಲ್ಲಿ ನೆಲಸಿದ ತೌಳವ ಜನತೆಯ ರಮ್ಯ ರೋಮಾಂಚಕ ಸಾಹಸದ ಕಥೆಯನ್ನು, ಒಂದು ಆತ್ಮಕತೆಯ ರೂಪದಲ್ಲಿ ತನ್ನದೇ ವಿಶಿಷ್ಟವಾದ ಆಕರ್ಷಕ ಶೈಲಿಯಿಂದ ಇಷ್ಟೊಂದು ಸಮಗ್ರವಾಗಿ ಚಿತ್ರಿಸಿದವರು ಅಪೂರ್ವ;

ಸುಮಾರು ಮೂವತ್ತೈದು ವರ್ಷಗಳ ಹಿಂದೆ 'ಸ್ವಗತ' ಎಂಬ ಕವನದಲ್ಲಿ ಈ ಪದ್ಯ ಪಂಕ್ತಿಗಳನ್ನು ಬರೆದೆ.

"ಬೇಟೆ ಕಂಬಳ ಕೋಲ ತಾಳಮದ್ದಳೆಗಳಲಿ
ನಮ್ಮ ಹಿರಿಯರ ಹುರುಪು ನೋಡಬೇಕು,
ಅಶ್ವ ಧಾಟಿಯ ಹಿಡಿದು ನಮ್ಮಜ್ಜ ಜೈಮಿನಿಯ
ಓದುತಿರೆ ಸರಸತಿಯೆ ಕುಣಿಯಬೇಕು!"

ಇಂದಿಗೆ ಆ ನೆನಪುಗಳೆಲ್ಲಾ ಗತಕಾಲದ ವೈಭವ, ಬೇಟೆಯಾಡಲು ಇಂದು ಪ್ರಾಣಿಗಳೂ ಇಲ್ಲ ; ಪ್ರಾಣಿಗಳ ಇರುವಿಕೆಗೆ ಅನುಕೂಲವಾದ ಅರಣ್ಯಗಳೂ ಇಲ್ಲ.

ಮತ್ತೆ ಶ್ರೀ ಕೆದಂಬಾಡಿ ಜತ್ತಪ್ಪ ರೈಗಳಂತಹ ಬೇಟೆಗಾರರೂ ಬೇರೆ ಇಲ್ಲ. ಹಾಗಿದ್ದರೂ, ಈ ನೆನಪಿನ ಕೃತಿ ಒಳ್ಳೆಯ ರಸಾಸ್ವಾದನೆ ನೀಡುತ್ತದೆ.

ಪೆರಡಾಲ
೨೩-೧೦-೭೮

ಕಯ್ಯಾರ ಕಿಞ್ಞಣ್ಣ ರೈ

ಪರಿವಿಡಿ

ಪ್ರವೇಶ

ಸಾಹಸ ಪ್ರದರ್ಶನದ ಸನ್ನಿವೇಶಗಳೆಡೆಯಲ್ಲಿ ರಸನಿಮಿಷಗಳು ಅಡಕವಾಗಿರುವ ಮಾಧ್ಯಮವು ಕಾಡಬೇಟೆಯಾಗಿದೆ. ಇದು ವೀರ, ಭಯಾನಕ, ರೌದ್ರ, ಬೀಭತ್ಸ, ಹಾಸ್ಯವೇ ಮೊದಲಾದ ನವರಸ ಗಳಿಗೆ ವಿಪುಲ ಅವಕಾಶವೀಯುವ ರೋಚಕ ಪ್ರಸಂಗ. ಮಾತ್ರವಲ್ಲದೆ, ಮಾಂಸದೌತಣದ ವೀರೋಚಿತ ಭೋಜನದೊಂದಿಗೆ ಮೆಲುಕಿಗೆ ದೊರೆಯುವ ಬುದ್ಧಿಯ ಗ್ರಾಸವೂ ಆಗಿದೆ.

ಬೇಟೆಯು ಹಳ್ಳಿಗರ ಹವ್ಯಾಸವಾದುದರಿಂದ ಸಾಹಿತ್ಯದ ಚಿಕಿತ್ಸಕ ದೃಷ್ಟಿಯಿಂದ ಇದನ್ನು ನೋಡಿ ದವರು ವಿರಳ. ಅಲ್ಲದೆ ಮೃಗಯಾವಿಹಾರವು ಮುಗಿದ ನಂತರ ಮುಂದಿನ ಮಾಂಸದೌತಣಕ್ಕೆ ಆತುರ ಪಡುವವರೇ ವಿನಾ ಹೃದಯಸ್ಪರ್ಶಿ ಸನ್ನಿವೇಶ ಗಳನ್ನು ವಿಶದೀಕರಿಸುವುದಕ್ಕೆ ಸಮಯವಾ ದರೂ ಎಲ್ಲಿ? ಅಂದಿನ ದಿನಗಳಲ್ಲಿ ಇದು ಮಲೆನಾಡ ಅಕ್ಷರಹೀನರ ಹವ್ಯಾಸವಾದುದರಿಂದ ಗತಿಸಿದ ಸಾಹಸಮಯ ಸನ್ನಿವೇಶಗಳನ್ನು ಸ್ಮರಿಸಿ ಸಂಗ್ರಹಿಸಲು ಅವಕಾಶವಿರಲಿಲ್ಲವೆನ್ನಬಹುದು.

ನನ್ನ ಜೀವನದಲ್ಲಿ ಘಟಿಸಿದ ಇಂಥ ಹಲವಾರು ರಸಮಯ ಪ್ರಸಂಗಗಳನ್ನು ನೆನೆದುಕೊಂಡರೆ ಇಂದೂ ಮೈನವಿರೇಳುತ್ತಿದೆ. ಏರು ಜವ್ವನದ ಕಾಲದಲ್ಲಿ ಅನುಭವಿಸಿದ ಆ ಪ್ರಸಂಗಗಳು ಇನ್ನು ಮುಂದಿನ ಜೀವನದಲ್ಲಿ ಮತ್ತೆ ದೊರೆಯದಲ್ಲಾ ಎಂದು ಪರಿತಪಿಸಬೇಕಾಗಿದೆ. ಮರವೆಯ ಕಾಲ, ನರೆತ ತಲೆ, ಗುಳಿಬಿದ್ದ ಕಣ್ಣು, ಬೊಚ್ಚು ಬಾಯಿ; ಅದೆಷ್ಟೋ ರಸಕವಳಗಳು ಜಗುಳಿ ಹೋಗಿವೆ.

ಈಗ ನಾನು ಬರೆಯುತ್ತಿರುವ ವಿಷಯಗಳು ಈ ಶತಮಾನದಲ್ಲಿ ನಡೆದುದು. ಇಂದು ವನ್ಯಮೃಗ ರಕ್ಷಣೆಯು ನಾಡವರ ಕರ್ತವ್ಯವಾದರೆ, ಅಂದು ಮಲೆನಾಡವರ ಬೆಳೆಗೆ, ಜೀವಕ್ಕೆ, ಜೀವನಕ್ಕೆ ಆತಂಕ ಕಾರಿಗಳಾದ ಅವನ್ನು ಕಂಡಲ್ಲಿ ಬೇಟೆಯಾಡಿ, ಗುಂಡಿಕ್ಕಿ ಕೊಲ್ಲಿರೆಂಬ ಕಾಲ. ಆದುದರಿಂದ ನಿಮ್ಮನ್ನು ಕೃತಕ ನಾಗರಿಕತೆಯ ವಾತಾವರಣದಿಂದ ಸೃಷ್ಟಿಯ ಸುಂದರ, ಮುಗ್ಧ, ನೈಜ ತಾಣಕ್ಕೆ ಕರೆದೊಯ್ಯುತ್ತೇನೆ. ನಮ್ಮ ಮನೆ 'ಪಿಲಿ ಮಜಲು'. ಅಲ್ಲಿಂದ ಶ್ರೀ ಕ್ಷೇತ್ರ ಸುಬ್ರಹ್ಮಣ್ಯವು ಹನ್ನೊಂದು ಮೈಲು ಮೂಡಗಡೆ. ಉಪ್ಪಿನಂಗಡಿಗೆ ಇಪ್ಪತ್ತೊಂದು ಮೈಲು. ಆ ಕಾಲದ ಮದರಾಸು ಸಂಸ್ಥಾನಕ್ಕೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ರ ಗ್ರಾಮವು ಪುತ್ತೂರು ತಾಲೂಕಿಗೆ ಸೇರಿತ್ತು. ಅಂದು ಸುಬ್ರಹ್ಮಣ್ಯಕ್ಕೆ ಹೋಗಲು ಇಂದಿನಂತೆ ಕಾರು, ಬಸ್ಸು, ಉಗಿ ಬಂಡಿಯ ಸೌಕರ್ಯದ ಮಾತು ಒತ್ತಟ್ಟಿಗಿರಲಿ, ಎತ್ತಿನ ಬಂಡಿಗೂ ಅಭಾವ. ಗಾಡಿ ಸಿಕ್ಕಿದರೂ ಹೋಗಬೇಕಿದ್ದರೆ, ಎರಡು ಮೂರು ಗಾಡಿಯಾದರೂ ಒಟ್ಟಾಗಿ ಹೊರಡ ಬೇಕು. ದಾರಿಯಲ್ಲಿ ಕಾಡು ಮೃಗಗಳ ಬಾಧೆಯ ಅಪಾಯವು ಕಾದಿಟ್ಟುದು.

ಮಾತ್ರವಲ್ಲ, ಮಾರ್ಗಕ್ಕೆ ಅಡ್ಡಲಾಗಿ ಹರಿಯುವ ಬಜಕ್ಕುರೆ ಸಾರು, ನೆಟ್ಟಣ, ಬೊಳ್ಳಾಯಿಲ, ಬೋರಿ ಪೋಪಿಸಾರು, ಕುಮಾರಧಾರಾ ನದಿಗಳನ್ನು ದಾಟಬೇಕಿದ್ದರೆ ಮುಂದುಗಡೆಯಿಂದ ಕೈಯಲ್ಲಿ ಲಾಟಾನು ಹಿಡಿದು ಗಾಡಿಗೆ ದಾರಿ ತೋರಿಸಲು ಮುನ್ನಡೆಯುವವರ ಅಗತ್ಯವಿತ್ತು. ಹಸಿದು ಹೊಳೆಯಲ್ಲಿ ಕಾದಿದ್ದ ಮೊಸಳೆಗಳು ಅಂಥವರನ್ನು ಕಚ್ಚಿಕೊಂಡು ಹೋದರೂ ಹೋಯಿತೆ! ಮಾರ್ಗ ಕೊರಕಲು; ಮಣ್ಣು ಜೌಗು. ಮಳೆಗಾಲದ ನೀರು ಮಾರ್ಗದಿಂದಲೇ ಹರಿದು ಮಾರ್ಗ ಮಧ್ಯದಲ್ಲಿ ಮುಂಡುದ್ದ ಗುಂಡಿಗಳು. ಇದರಲ್ಲಿ ಗಾಡಿಯ ಚಕ್ರವು ಬಿದ್ದೆದ್ದು ಆಗುವ ಶಬ್ದಕ್ಕೆ, ಬಾನೆತ್ತರಕ್ಕೆ ಚಾಚಿ ನಿಂತಿರುವ ತೇಗ, ಬೇಂಗ, ಬೀಟಿ, ಚಿರ್ವೆ, ಮರುವ ಮೊದಲಾದ ರಾಕ್ಷಸಾಕೃತಿಯ ಮರಗಳ ಕತ್ತಲೆಯಲ್ಲಿ, ಅಲ್ಲಲ್ಲಿ ದೆವ್ವಗಳಂತೆ ಎದ್ದು ತೋರುವ ಬಂಡೆಗಳ ಎಡೆಯಿಂದ, ಕಲ್ಲಿಂದ ಕಲ್ಲಿಗೆ ಹಾರಿಬಿದ್ದು ಆಗುವ ಶಬ್ದವನ್ನು ಕೇಳಿ ಗಾಡಿ ಬಂತೆಂದು ತಿಳಿದು ಮಾರ್ಗಮಧ್ಯಕ್ಕೆ ಹಾರುವ ಪಟ್ಟೆಹುಲಿ, ಕಿರುಬ, ಚಿರತೆ, ಕಾಡು ನಾಯಿಗಳನ್ನು ಕಂಡು ಗಾಡಿಯೆತ್ತುಗಳು ಮಾರ್ಗಬಿಟ್ಟು ಓಡುವ ರಭಸಕ್ಕೆ ಗಾಡಿಯಲ್ಲಿದ್ದ ಸವಾರರೂ, ಗಾಡಿ ಹೊಡೆಯುವವನೂ, ಎತ್ತುಗಳೂ ಉರುಳಿಬಿದ್ದು ಕೈಕಾಲು ಕಳಕೊಂಡ ಪ್ರಸಂಗಗಳು ಹಲವಾರಿದ್ದವು. ಹುಲಿ, ಕಾಡುಕೋಣಗಳ ಹಿಂಡು ದಾರಿಯಲ್ಲಿ ಸಿಕ್ಕಿಲ್ಲವೆಂದಾದರೆ, ಆನೆಗಳು ಎಲ್ಲಿವೆ ಎಂದು ಎವೆ ಮುಚ್ಚದೆ ನಿರುಕಿಸುತ್ತ ಜಾಗರೂಕತೆಯಿಂದ ಗಾಡಿ ಹೊಡೆಯಬೇಕೆಂದು ಅರ್ಥ. ಅದಕ್ಕಾಗಿ ಜಾತ್ರೆಯ ಕಾಲದಲ್ಲಿ ಗಾಡಿಗಳ ಸಾಲುಸಾಲೇ ಹೋಗುವುದನ್ನು ಎಲ್ಲರೂ ಕಾಯುತ್ತಿದ್ದರು. ಆ ಸಮಯದಲ್ಲೂ ಹೋಗುವ ಗಾಡಿಗಳ ಹಿಂದುಮುಂದಿನಿಂದ ಆಯುಧ ಪಾಣಿಗಳಾದ ಗುತ್ತಿನ ಕಾಲಾಳುಗಳು ಬೊಂಬಡಿ ಬಾರಿಸುತ್ತಾ ಹೋಗುವುದು ಅನಿವಾರ್ಯ. ಕೊರಕಲು ದಾರಿಯ ಜೌಗು ಪ್ರದೇಶದಲ್ಲಿ ನಡೆಯುವವನ ಕಾಲಿಗೆ ಇಬ್ಬಾಯಿಯ ಇಂಬಳಗಳು ಕಚ್ಚಿ ಸೋರುವ ರಕ್ತದಿಂದ ಅರ್ಧದಾರಿ ಮುಟ್ಟಬೇಕಿದ್ದರೆ ಅಳಿಗೆ ರಕ್ತಸ್ನಾನ! ನಂಜೇರಿ ತಡೆಯಲಸಾಧ್ಯವಾದ ತುರಿಕೆ. ಕಚ್ಚಿದ ಇಂಬಳಗಳು ರಕ್ತ ಹೀರಿ, ಕರಿದ ಕೋಡುಬಳೆಯಂತಾಗಿ, ಕಚ್ಚಿ ಹಿಡಿದವುಗಳನ್ನು ಬಿಡಿಸಬೇಕಿದ್ದರೆ ಪಯಣಿಗನಲ್ಲಿ ಸುಣ್ಣ ಮಿಶ್ರಿತ ತಂಬಾಕಿನುಂಡೆಯು ಇಲ್ಲವಾದಲ್ಲಿ ಕ್ಷೇತ್ರ ತಲುಪುವಾಗ, ಅವನ ದೇಹದ ಒಂದಂಶ ರಕ್ತವು ಈ ರಕ್ತಬೀಜಾಸುರನ ಸಂತತಿಗೆ ಅರ್ಪಿತವಾದಂತೆಯೆ. ಇದನ್ನು ತೆಗೆಯಲು ಮಾರ್ಗದ ಬದಿಯಲ್ಲಿ ಒಂದರೆಗಳಿಗೆ ನಿಂತನೆಂದಾದರೆ ಅವನ ಮೈಯ ವಾಸನೆಗೆ ಮುಕುರಿ ಬೀಳುವ ಅಂಗುಲ ಗಾತ್ರದ ನುಸಿ ನೊಣಗಳ ಕಾಟ. ಇದರೆಡೆಯಲ್ಲಿ ಒಮ್ಮೊಮ್ಮೆ ಹಿಂಡು-ಹಿಂಡು ಕಾಡುಕೋಣ, ಕಡವೆ, ಜಿಂಕೆಗಳು ಮಾರ್ಗಮಧ್ಯೆ ಹಾದು ಓಡುವ ರಭಸಕ್ಕೆ ಅಂಜಿದ ಆಳುಗಳು ಹೊಡೆಯುವ ಬೊಬ್ಬೆಗೆ ಹೆದರಿ ಗಡಬಡಿಸಿದ ಸವಾರರು ಗಾಡಿಯ

ಮಾಡಿಗೆ ತಲೆ ತಾಗಿಸಿ ನೆರಪ್ಪಿಗೆ ಮುಖ ಬಡಿದು ಹಲ್ಲುದುರಿಸಿಕೊಂಡ ಪ್ರಸಂಗಗಳು ಲೆಕ್ಕವಿಲ್ಲದಷ್ಟು! ಹಲವಾರು ಗಾಡಿಗಳೂ, ಮುನ್ನಡೆವವರೂ ಸದ್ದು ಮಾಡಿ ಸಂಧಿ, ಘಾಡ್ದನಗಳನ್ನು ಹೆದರಿಕೆಯನ್ನು ಹೋಗಲಾಡಿಸಲೆಂದು ಹಾಡುತ್ತಾ ಪಯಣಿಸುತ್ತಿದ್ದರೂ, ಇದಾವುದಕ್ಕೂ ಹೆದರದ ಮೃಗಗಳೇ ಹೆಚ್ಚಾಗಿ ಮನುಷ್ಯರು ವಿರಳವಾಗಿದ್ದ ಮಲೆನಾಡ ಪ್ರದೇಶ; ಅದು ಪಶ್ಚಿಮ ಘಟ್ಟದ ತಪ್ಪಲು.

ಮಲೆನಾಡು ಬತ್ತದ ಕೃಷಿಗೆ ಪ್ರಧಾನವಾದುದು. ಆ ಕಾಲದಲ್ಲಿ ತೆಂಗಿನ ಮರಗಳು ಗದ್ದೆಯ ಬದುವಿನಲ್ಲಿ ಮಾತ್ರ ಕಾಣಸಿಗುತ್ತಿದ್ದುವು. ಅಡಿಕೆ ತೋಟಗಳು ಅತಿ ವಿರಳ; ಇದ್ದರೂ ಕಾಡಿನ ಮಧ್ಯೆ, ನೂರು, ನೂರೈವತ್ತು ಮರಗಳಿಂದ ದೊಡ್ಡ ತೋಟಗಳೇ ಇರಲಿಲ್ಲ. ಭತ್ತದ ಕೃಷಿ ಮಾಡುವ ವನು ಹತ್ತು ಮುಡಿ ಗದ್ದೆ ಸಾಗುವಳಿ ಮಾಡುವುದಿದ್ದರೆ ಇಪ್ಪತ್ತು ಮುಡಿ ಬೀಜದ ನೇಜಿ ಹಾಕಿದರೂ ಅದು ಸಾಕಾಗುತ್ತಿರಲಿಲ್ಲ. ಬಿತ್ತಿದ ಬೀಜವು ಮೊಳಕೆ ಬರುವ ತನಕ ಹಿಂಡುಹಿಂಡು ಪಾರಿವಾಳ, ಗುಬ್ಬಚ್ಚಿ, ಕಾಡುಕೋಳಿ, ಕೇಂಕಣ, ಮುಳ್ಳುಹಂದಿಗಳು ಹೆಕ್ಕಿ ತಿಂದರೆ, ಮೊಳಕೆ ಮೇಲೆದ್ದೊಡನೆ ಮೊಲ, ಅಳಿಲು ತಿಂದುಳಿದ- ಹುಳ ಮೇದವನ ತಲೆಯಂತೆ ಅಲ್ಲಲ್ಲಿ ತೋರುವ ಎಳೆ ಸಸಿಗಳನ್ನು ಕಾಡುಮೇಕೆ, ಜಿಂಕೆ, ಕಡವೆಗಳು ತಿಂದ ಬಳಿಕ, ಉಳಿದುದನ್ನು ಕಿತ್ತು ನಟ್ಟು ತೆಂಡೆ ಹೊಡೆಯುವಾಗ ಕಾಡುಕೋಣಗಳ ಹಿಂಡು, ಕಡವೆ ಜಿಂಕೆ ಹಂದಿಗಳ ದಂಡು ತಮಗೆ ಬೇಕಾದಷ್ಟು ತಿಂದು ನಾಶಗೊಳಿಸಿ ಮಿಕ್ಕಿದ್ದನ್ನು ಆನೆಗಳ ಹಿಂಡು ಬಂದು ಮೆಟ್ಟಿ ಧ್ವಂಸ ಪಡಿಸಿದ ಮೇಲೆ ಬೇಸಾಯಗಾರರಿಗೆ ಉಳಿಯುವುದು ಕಾಡಿನ ನಾರುಗೆಣಸು, ಇಯೆರು, ಪುಂಡಿಕೇನೆ, ಬೊಳ್ಗಂಡೆ, ಸೋಣೆಸೊಪ್ಪು ಗಳಲ್ಲದೆ ಬೇರೇನು ? ಈ ಮಲೆನಾಡವರು ತಮ್ಮ ಗದ್ದೆಯ ಬದುವಿನಲ್ಲಿ ಕಟ್ಟಿದ್ದ ಜೋಪಡಿಯಲ್ಲಿ ಅಗ್ಗಿಷ್ಟಿಕೆ ಬೆಂಕಿಯನ್ನು ರಾತ್ರಿಯೆಲ್ಲ ಉರಿಸಿ, ಬೊಬ್ಬೆ ಹೊಡೆದು, ಸೈರಿಸಲು ಸಾಧ್ಯವಾಗದ ನುಸಿ ನೊಣಗಳಿಂದ ಕಡಿಸಿಕೊಂಡು ಮಳೆ ಮಂಜಿನ ಪೆಟ್ಟನ್ನು ಸಹಿಸಿಕೊಂಡು ಪಡೆಯುವ ಪ್ರತಿಫಲವು ವರ್ಷಾಂತ್ಯಕ್ಕೆ ಮಲೇರಿಯಾ ಜ್ವರಗಡ್ಡೆಯ ಪ್ರಸಾದ ! ಅಂಥವರನ್ನು ಕಂಡ ಗುತ್ತು ಬೀಡಿನವರು, ಪೇಟೆಯವರು ''ಗಂಡಸು ಹೆರಲು ಇನ್ನು ಒಂದೆರಡೇ ತಿಂಗಳು'' ಎನ್ನುವ ಗೇಲಿ !

ಮನೆಗಳಲ್ಲಿದ್ದ ನಾಯಿಗಳು ತೆಪ್ಪಗೆ ಬಿದ್ದಿರಬೇಕಲ್ಲದೆ, ಮೃಗದ ಇರವನ್ನು ಅರಿತು ಬೊಗಳಿದವೆಂದರೆ ರಾತ್ರಿ ಅವು ನಾಯಿಹುಲಿಯ ಪಾಲೇ. ನಾಯಿಗಳಲ್ಲಿ ಪ್ರೀತಿಯಿದ್ದ ಗೌಡ, ಮಲೆಕುಡಿಯರು ತಮ್ಮ ಗುಡಿಸಲಲ್ಲಿ ನಾಯಿ ಸಾಕಲು ಹೆದರುತ್ತಿದ್ದರು. ತಡಿಕೆಯೆಡೆಯಿಂದ ನಾಯಿಹುಲಿ ಒಳನುಗ್ಗಿ ಅದನ್ನು ಕತ್ತು ಹಿಡಿದು ಹೊರಗೆಳೆಯುವ ರಭಸಕ್ಕೆ ಹೆದರಿದ ನಾಯಿಯ ಮಲಮೂತ್ರದಿಂದ ನೆನೆದವರು ಎಷ್ಟೋ ಮಂದಿ ! ಹೀಗೆ ಅದು ಮೃಗ ಬಾಧೆಯಿಂದ ಜೀವನವನ್ನು ಸಾಗಿಸುವುದೇ

ದುಸ್ತರವಾಗಿದ್ದ ಕಾಲ. ವೈವಿಧ್ಯಮಯ ತುಳು ಅಂದಿನ ಆ ನಾಡಬಂಟ, ಜೈನ, ಗೌಡ, ಬ್ರಾಹ್ಮಣ, ಮಲೆಕುಡಿಯರ, ಹಲವಾರು ಪಂಗಡಗಳ ಹೊಲೆಯರೆಂಬವರ ಆಡು ಭಾಷೆ. ಕನ್ನಡವು ಕಸ್ತೂರಿಯಷ್ಟು ಅಪೂರ್ವ.

ನಮ್ಮ ಮನೆಯ ಪೂರ್ತಿ ಹೆಸರು-ಬಂಟರ ಗ್ರಾಮದ ಮುಂಡ್ರಾಡಿ ಪಿಲಿಮಜಲು. ಇದು ಅಳಿಯಕಟ್ಟಿನ ಅವಿಭಕ್ತ ಬಂಟ ಮನೆತನ. ಮುಂಡ್ರಾಡಿ ಪಿಲಿಮಜಲಿಗೆ ನಮ್ಮಜ್ಜ ಕೊರಗಪ್ಪ ರೈಗಳು ಯಜಮಾನರಾಗಿ, ಪಿಲಿಮಜಲು ಮತ್ತಿತರ ಆಸ್ತಿಗಳ ಉಸ್ತುವಾರಿಯನ್ನು ನನ್ನ ತೀರ್ಥರೂಪ ದಾಸರೈಗಳೂ, ತರವಾಡಿನಲ್ಲಿ ಚಿಕ್ಕ ತಂದೆ, ಕಿರಿಯಜ್ಜನವರೂ ಮೇಲ್ತನಿಖೆ ನಡೆಸಿಕೊಂಡಿದ್ದರು. ಇವುಗಳ ಮಧ್ಯೆಯಿರುವ ಅಳೇರಿ ಆಸ್ತಿಯು ನಮ್ಮಜ್ಜಿ ಲಕ್ಷ್ಮಮ್ಮನವರ ಯಜಮಾನ್ತಿಕೆಯಲ್ಲಿದ್ದು, ಇವರ ಮಗ ಗುಡ್ಡಪ್ಪ ರೈಗಳು ಪ್ರಾಯ ಪ್ರಬುದ್ಧರಾಗಿ ಬರುತ್ತಿರುವುದರಿಂದ, ಹೆಂಡತಿಯ ಮನೆಯ ಮೇಲ್ವಿಚಾರವನ್ನೂ ಅಜ್ಜಯ್ಯನವರೇ ನೋಡಿಕೊಂಡು ಬರಬೇಕಿದ್ದುದರಿಂದ ಮರ್ದಾಳ ಬೀಡಿನ ದೊಡ್ಡದೊಂದು ಆಸ್ತಿಯನ್ನು ಬಿಟ್ಟರೆ ಉಳಿದೆಲ್ಲ ಆಸ್ತಿಯೂ ಬಂಟರದ್ದೇ ಆಗಿ ಬಂಟರ ಗ್ರಾಮವೆಂಬುದು ಅನ್ವರ್ಥನಾಮವಾಗಿತ್ತು. ಪಿಲಿಮಜಲು ಎಂಬುದೂ ಹೆಸರಿಗೆ ತಕ್ಕಂತೆ ರಾತ್ರಿ ಮಜಲಿನಲ್ಲಿ ಕಾದಿದ್ದ ಹುಲಿ ಅಂಗಳದಿಂದ ನಾಯಿಗಳನ್ನಲ್ಲದೆ ಕಟ್ಟಿ ಹಾಕಿದ ಕರುಗಳನ್ನೂ ಹೊತ್ತುಕೊಂಡು ಹೋಗಿ ಪಿಲಿಮಜಲಿನ ಬದಿಯ ಸೀಗೆ ಬಲ್ಲೆಯಲ್ಲಿ ತಿಂದು ಮಲಗಿದ್ದುದನ್ನು ಕಂಡವರೆಷ್ಟೋ ಮಂದಿ ಇದ್ದರು. ನಮ್ಮ ಅಜ್ಜ ಕೊರಗಪ್ಪ ರೈಗಳು ಬಂಟ್ರ, ನೆಕ್ಕಿಲಾಡಿ ಗ್ರಾಮಗಳ ಜನಪ್ರೀತ ಪಟೇಲರು. ಇವರು ಆ ದಿನ ಹೆಚ್ಚಾಗಿ ಗೋಚರಿಸುತ್ತಿದ್ದ 'ರುಜು ಪಟೇಲ'ರಾಗಿರದೆ, ಪಟೇಲ್ ಕೊರಗಪ್ಪ ರೈ ಎಂದು ಸ್ವತಃ, ರಿಕಾರ್ಡ್ ಬರೆದಾದ ನಂತರವೇ, ರುಜು ಹಾಕಿ ಅಂದಿನ ಬಿಳಿ ಮುಖದ ಕಲೆಕ್ಟರರಿಂದ ಶಿಫಾರಸು ಪಡೆದವರು. ಹೊಯಿಗೆ ಬರಹವನ್ನು ಕಲಿತು ಪಟೇಲರ ಸಾಲಿನಲ್ಲಿ ವಿದ್ಯಾವಂತರೆನಿಸಿಕೊಂಡವರು. ಇವರು ಅಂದಿನ ನುರಿತ ಬೇಟೆಗಾರ. 'ಜಾಮುಂಗೆ ಕೋವಿ'ಯಲ್ಲಿ ಪರಿಣತರಾಗಿ, 'ಕೇಪಿನ ಕೋವಿಗೆ' ಬಡ್ತಿಹೊಂದಿ ಊರವರಿಗೆ ರಾತ್ರಿ ಹಗಲು ಉಪದ್ರವ ವೀಯುವ ಹುಲಿ ಹಂದಿಗಳನ್ನು ಹೊಡೆದುರುಳಿಸಿದವರು. ಆಗಾಗ್ಗೆ ಧಾಳಿಯಿಡುವ ಕಾಡಾನೆ, ಕಾಟಗಳ ಹಿಂಡನ್ನು ಗುಂಡಿಕ್ಕಿ ಹೆದರಿಸಿ ಗಡಿದಾಟಿಸಿಯೇ ಬರುವವರಾದುದರಿಂದ ಊರವರೆಲ್ಲರಿಗೂ ಇವರ ಮೇಲೆ ಆದಾರಾಭಿಮಾನ.

ಜಾಮುಂಗೆ ಹಾಗೂ ಕೇಪಿನ ಕೋವಿಗಳಿಂದ ಹೊಡೆದು ಕೊಂದು, ಓಡಿಸಿದರೂ ಬೆಳೆಗೆ ಹಾನಿಕಾರಕವಾದ ಮೃಗಸಂತತಿ ವೃದ್ಧಿಸುತ್ತಲೇ ಇತ್ತು. ಹೀಗೆ ಕೊಲ್ಲುವುದಲ್ಲದೆ 'ಕರ್ಪು' ತೋಡಿ ಮೃಗಗಳನ್ನು ಕೊಂದರೂ ಬೆಳೆಯು ಮತ್ತೂ ಮೃಗಗಳ ಪಾಲೆ! ಕರ್ಪು ಎಂದರೆ ಗದ್ದೆಗೆ ಕಾಡಿನಿಂದ ಸದಾ ಮೃಗಗಳು ಇಳಿಯುವ ದಾರಿಯನ್ನು ಕಂಡು

ಹಿಡಿದು, ಅಲ್ಲಿ ದೊಡ್ಡ ಗುಳಿತೋಡಿ ಗುಳಿಯ ತಳದಲ್ಲಿ ಬರ್ಚಿ, ಚೂಪು ಸಲಾಕೆ ಗಳನ್ನು ಹೂತಿಟ್ಟು ಅದನ್ನು ತೆಳುವಾದ ಬಿದಿರ ಸಲಿಕೆಗಳಿಂದ ಮುಚ್ಚಿ, ಮೇಲೆ ತೆಳು ಮಣ್ಣು, ಹಸಿಹುಲ್ಲು ಹರಡಿ ಇಡುವುದು. ಸದಾ ಗದ್ದೆಗೆ ಆ ದಾರಿಯಿಂದಲೇ ಬರುವ ಮೃಗವು ಎಂದಿನಂತೆಯೇ ಬಂದು, ದಾರಿಯಲ್ಲಿರುವ ಈ ಕೃತ್ರಿಮವನ್ನರಿಯದೆ, ಬಿದಿರ ಬಾಸಿ ಹಾಸಿದ ಜಾಗಕ್ಕೆ ಕಾಲಿಡುತ್ತದೆ. ಆಗ ಅದು ಮೃಗದ ಭಾರಕ್ಕೆ ಕುಸಿದು ಅದರೊಂದಿಗೆ ಆ ಮೃಗವೂ ಬಿದ್ದು, ಅಡಿಯಲ್ಲಿ ಹೂತಿಟ್ಟ ಬರ್ಚಿ, ಸಲಾಕೆಗಳ ಇರಿತದಿಂದ ಸಾಯುವುದು. ಇದಲ್ಲದೆ, ಮಲೆಕುಡಿಯರು ಒಡ್ಡುವ ಉರುಳಿಗೂ ಜಗ್ಗದೆ, ಕೋವಿ ಎತ್ತಿ ಕಟ್ಟುವುದಕ್ಕೂ ಬಗ್ಗದೆ ದಿನೇ ದಿನೇ ಕಾಡು ಪ್ರಾಣಿಗಳ ಉಪದ್ರವವು ಏರುತ್ತಿತ್ತಲ್ಲದೆ ಕಡಿಮೆಯಾಗುತ್ತಿರಲಿಲ್ಲ.

ಕೋವಿ ಎತ್ತಿಕಟ್ಟುವ ಕ್ರಮವು ಬಹಳ ಅಪಾಯಕಾರಿ. ಮೃಗಗಳ ಬಾಧೆಯನ್ನು ತಡೆಯಲಾರದೆ ಅದಕ್ಕೂ ಜನರು ಹಿಂದೆಗೆಯುತ್ತಿರಲಿಲ್ಲ. ಈ ವಿಧಾನವನ್ನು ಅನುಸರಿಸುವುದು ಪ್ರಾಣಾಪಾಯವನ್ನು ಉಂಟುಮಾಡುವಂಥದಾದ್ದರಿಂದ ಸರಕಾರವು ಇದನ್ನು ನಿಷೇಧಿಸಿತ್ತು . ಇದು ಪತ್ತೆಯಾದರೆ ಕಠಿಣ ಶಿಕ್ಷೆಯೆಂದೂ ಸಾರಿತ್ತು. ಆದುದರಿಂದ, ಮೃಗಗಳ ಹಾವಳಿಯಿಂದ ನೊಂದ ಬೇಸಾಯಗಾರರು ಇದಕ್ಕಾಗಿ ಪರವಾನಿಗೆ ಇಲ್ಲದ ಕೋವಿಗಳನ್ನು ಉಪಯೋಗಿಸಿ, ಯಾರಾದರೂ ತನಿಖಾಧಿಕಾರಿಗಳ ಕೈಯಲ್ಲಿ ಸಿಕ್ಕಿಬಿದ್ದಾಗ ಕೋವಿಯು ತನ್ನದಲ್ಲವೆಂದು ಸಾಧಿಸುತ್ತಿದ್ದರು. ಇದೊಂದು ತುಂಬಿಸುವ ಕೋವಿಯಿಂದ ಸ್ವಯಂಚಾಲಿತವಾಗಿ ಮೃಗವನ್ನು ಕೊಲ್ಲುವ ವಿಧಾನ. ಅದಕ್ಕಾಗಿ ಒಳ್ಳೆಯ ಕೋವಿಗಳನ್ನು ತಯಾರಿಸಿ ಈ ಕಸಬುದಾರರು ಇದಕ್ಕೆ ಉಪಯೋಗಿಸುತ್ತಿದ್ದರು. ಈ ಕೋವಿಗೆ ಬೇಕಾದ ಮದ್ದುಗುಂಡನ್ನು ತುಂಬಿಸಿ, ಒಳ್ಳೆಯ ಕೇಪನ್ನು ನಿಪ್ಪಲಿಗೆ ಇಟ್ಟು, ಕೋವಿಯ ಕುದುರೆ ಯನ್ನು ಎತ್ತಿ ನಿಲ್ಲಿಸಿ 'ಕುತ್ತು' (ಟ್ರಿಗರ್) ಗೆ ಉದ್ದವಾದ ಹುರಿನೂಲನ್ನು ಕಟ್ಟಿ ಮೃಗವು ಬರುವ ಉದ್ದಗಲವನ್ನು ಕಂಡು ನಿರ್ಧರಿಸಿ, ಆ ಅಳತೆಯಂತೆ ಹಿಂದಿನ ದಿನ ಬಂದ ಮೃಗದ ಹೆಜ್ಜೆಯಿಂದ ಅದು ಯಾವ ಜಾತಿಯ ಮೃಗ, ಅದರ ಎತ್ತರ ಎಷ್ಟಿರಬಹು ದೆಂದು ಅರಿತುಕೊಂಡು, ಅಡಿಗೆ ಅಂಗುಲವೆಂಬ ನಿಯಮದಂತೆ, ತುಂಬಿಸಿದ ಕೋವಿಯನ್ನು ಸಜ್ಜುಗೊಳಿಸಿ, ಅದನ್ನು ನೀಳವಾಗಿ ಎರಡು ಕಂಬಗಳಿಗೆ ಬಿಗಿದು ಸಿದ್ಧಗೊಳಿಸಿಟ್ಟು, ಬೇರೆ ಸ್ಥಳದಿಂದ ಇಳಿಯುವ ಮೃಗಗಳನ್ನು ಹೆದರಿಸಲು ಹೋಗುವುದು ರೂಢಿ. ಬೇಸಾಯಗಾರನು ಕೋವಿಯ ಬಳಿಯಲ್ಲೆ ಕುಳಿತರೆ ಉಳಿದ ಕಡೆಗಳಿಂದ ಇಳಿದು ಪೈರನ್ನು ನಾಶಪಡಿಸುವ ಮೃಗಗಳನ್ನು ಓಡಿಸುವವರಾರು? ಗದ್ದೆಗೆ ಇಳಿಯುವ ಆತುರದಲ್ಲಿರುವ ಮೃಗಗಳು, ಎತ್ತಿಕಟ್ಟಿದ ಹಗ್ಗವು ಕಾಲಿಗೆ ತೊಡಕಿದಾಗ, ಬೀಳೆಂದು ಭ್ರಮಿಸಿ ನೂಕಿಕೊಂಡು ಬರುವಾಗ ಕುತ್ತು ಎಳೆಯಲ್ಪಟ್ಟು,

ಎತ್ತಿಟ್ಟ ಕುದುರೆಯು ಬಿದ್ದು, ಕೋವಿ ಈಡಾಗುವುದು. ತೂಕವಾಗಿ ಕಟ್ಟಿದ ಕೋವಿಯ ಗುರಿಯು ಹೆಚ್ಚಾಗಿ ಸರಿಯಾಗಿಯೇ ಇರುವುದು. ಬಂದ ಮೃಗವು ಹಂದಿಯ ಬದಲು ಕಡವೆಯಾಗಿದ್ದರೆ ಕಾಲಿಗಾದರೂ ಪೆಟ್ಟಾಗದಿರದು. ಒಮ್ಮೊಮ್ಮೆ ಗೋಂಕುರು ಕಪ್ಪೆಯು ಹಗ್ಗದತ್ತ ಹಾರಿದರೂ ಈಡಾಗಿಯೇ ಆಗುವುದು. ಹೀಗೆ ಕಟ್ಟಿದ್ದನ್ನರಿಯದೆ ಬೇರೆ ಬೇಟೆಗಾರರಾದರೂ ಸಾರ್ತೆ ಬೇಟೆಗೆ ಬಂದು ಈ ಹಗ್ಗಕ್ಕೆ ಕಾಲಿಟ್ಟರೆ ಅವರ ಗತಿಯೂ ಮೃಗದ ಗತಿಯೆ ! ಆದುದರಿಂದ ಇದು ಸಾಮಾಜಿಕ ವಾಗಿಯೂ, ಕಾನೂನಿನ ದೃಷ್ಟಿಯಲ್ಲಿಯೂ ನ್ಯಾಯ ಬಾಹಿರವಾದುದು. ಕೆಲವೊಮ್ಮೆ ಜನರು ಕೈಬಾಂಬಿನಂಥ ಸ್ಫೋಟಕವನ್ನು ನಾರುವ ಮಾಂಸದ ಒಳಗೆ ಇಟ್ಟು ಹಂದಿ ಹುಲಿಗಳು ಬರುವ ಗುಂಡಿಯಲ್ಲಿಟ್ಟು ಎಷ್ಟೋ ಮೃಗಗಳನ್ನು ಕೊಲ್ಲುತ್ತಿದ್ದರು. ಹೀಗಿದ್ದರೂ ದಿನದಿಂದ ದಿನಕ್ಕೆ ಕಾಡುಪ್ರಾಣಿಗಳ ಉಪಟಳ ಮಿತಿ ಮೀರುತ್ತಿತ್ತು. ಇದರಿಂದ ನೊಂದ ಕಂಗಾಲಾದ ನಮ್ಮ ಊರವರು ದಾರಿಕಾಣದೆ ನಿವಾರಣೋಪಾಯವನ್ನು ಸೂಚಿಸಬೇಕೆಂದು ಊರಪಟೇಲರಾದ ನಮ್ಮಜ್ಜನವರನ್ನು ಕಾಣಲು ಬಂದರು. ಇವರಾದರೆ ಏನು ತಾನೇ ಮಾಡುವುದು ? ತಮ್ಮಿಂದ ಸಾಧ್ಯವಾದಷ್ಟು ಹುಲಿ, ಹಂದಿಗಳನ್ನು ಕೊಂದು, ಆನೆ, ಕಾಡುಕೋಣಗಳನ್ನು ಗಡಿ ದಾಟಿಸಿದ್ದಾರೆ. ಇವರ ಕೇಪಿನ ಕೋವಿಗೆ ಆನೆ ಕಾಡುಕೋಣಗಳು ಮಣಿಯುವುದಿಲ್ಲ. ಅದಲ್ಲದೆ ದೊಡ್ಡ ಬೇಟೆಯನ್ನಾದರೂ ಮಾಡೋಣವೆಂದರೆ ಊರಲ್ಲಿರುವುದು ಆರೇಳು ತುಂಬಿಸುವ ಕೋವಿಗಳು. ಮೂರು ನಾಲ್ಕು ಗ್ರಾಮಗಳವರು ಒಗ್ಗೂಡದೆ ಕಾಡು ನಾಡನ್ನು ತುಂಬಿ ಕೀಟಲೆ ಕೊಡುವ ಮೃಗಗಳನ್ನು ಕುಮಾರ ಪರ್ವತದ ಗಡಿ ದಾಟಿಸುವ ಬಗೆ ಹೇಗೆ? ಇವರು ಹೇಳಿದಾಗ ಉಳಿದ ಗ್ರಾಮಗಳಪಟೇಲ, ಗುರಿಕಾರರು ನೆಪವೊಡ್ಡುತ್ತಿದ್ದರಲ್ಲದೆ ಬೇಟೆಗೆ ಬರುತ್ತಿರಲಿಲ್ಲ. ಈ ತುಂಬಿಸುವ ಕೋವಿಗಳನ್ನೇ ನಂಬಿ ಬೇಟೆಗೆ ಹೋಗಿ ಕಾಡೆಬ್ಬುವಾಗ ಹೊರಬಿದ್ದ ಮೃಗಕ್ಕೆ ಒಂದು ಈಡು ಹೊಡೆದು ಮತ್ತೊಂದು ಈಡು ತುಂಬಿಸಬೇಕಾದರೆ ಕಾಲು ಗಂಟೆ ಬೇಕು ಶಕ್ತಿಹೀನ ಗುಂಡಿನ ಏಟಿನಿಂದ ಚೇತರಿಸಿ ಓಡಿದ ಮೃಗವು ಪುನಃ ಇತ್ತ ಬರುವಾಗ ತನ್ನ ಬಳಗವನ್ನೇ ಕೂಡಿಸಿಕೊಂಡು ಬರುವುದು ರೂಢಿ. ಹೀಗಿರಲು ಪರಿಹಾರೋಪಾಯವೇನು ಕಲೆಕ್ಟರರಿಗೇ ಅರ್ಜಿ ಬರಕೊಳ್ಳುವುದು. ಅವರೇ ಸ್ವತಃ ತಮ್ಮ ಮಿತ್ರರೊಂದಿಗೆ ಬಂದು ನಾಲ್ಕಾರು ದಿನ ಬೇಟೆಯಾಡಿ ಬಂಟ್ರನೆಕ್ಕಿ ಲಾಡಿ, ಸುಂಕದಕಟ್ಟೆ ಗ್ರಾಮಸ್ಥರ ಸಂಕಟವನ್ನು ಪರಿಹಾರ ಮಾಡಬೇಕೆಂದು ನಮೂದಿಸಿ ಅಜ್ಜಯ್ಯನವರೇ ಅರ್ಜಿಯೊಂದನ್ನು ಬರೆದು ಅಂಚೆ ಮುಖಾಂತರ ಜಿಲ್ಲಾ ಕಲೆಕ್ಟರ್ ದೊರೆಗಳಿಗೆ ಕಳುಹಿಸಿ, ಬಂದ ಊರವರನ್ನು ಸಮಾಧಾನ ಪಡಿಸಿದರು. ಆ ಸಮಯ ಕಾಲ್ನಡಿಗೆಯಿಂದ ಮೂಡು ಪ್ರಾಂತ್ಯದ ಅಂಚೆಯು ಪುತ್ತೂರು ತನಕ ಹೋಗಿ ಅಲ್ಲಿಂದ ಜಟಕಾ ಬಂಡಿಯಿಂದ

ಮಂಗಳೂರನ್ನು ತಲುಪ ಬೇಕಾದರೆ ನಾಲ್ಕೈದು ದಿನಗಳೇ ಹಿಡಿಯುತ್ತಿತ್ತು. ಆಗ ತಾನೇ ಬಂದಿದ್ದ ಜಿಲ್ಲಾಧಿಕಾರಿ ಇಂಗ್ಲಿಷ್ ಸದ್ಗೃಹಸ್ಥ ಇ. ಗೋನ್ (*E.Gown*) ಎಂಬುವರು ತುಂಬ ಕಟ್ಟುನಿಟ್ಟಿನವರೆಂದೂ, ಬಡಜನರ ಮೇಲೆ ಪ್ರೀತಿಯುಳ್ಳವರೆಂದೂ ಬಂದ ಕೆಲವು ದಿನಗಳಲ್ಲೇ ಪ್ರಸಿದ್ಧರಾಗಿದ್ದರು. ಮಲೆನಾಡವರ ಈ ಗೋಳಿನ ಪತ್ರವು ಅಲ್ಲಿಗೆ ಮುಟ್ಟಿದೊಡನೆಯೇ, ಅಲ್ಲಿಯತನಕ ಮಲೆನಾಡಿಗೆ ಬಾರದಿದ್ದ ಕಲೆಕ್ಟರರು ತಾವು ಮುಂದಿನ ವಾರ ಇಂತಿಷ್ಟನೇ ತೇದಿಗೆ ಬರುವುದಾಗಿಯೂ, ಸುಂಕದಕಟ್ಟೆಯ ಬಂಗ್ಲೆಯನ್ನು ಸ್ವಚ್ಛಗೊಳಿಸಿ ತಮಗೂ ತಮ್ಮ ಮಿತ್ರವೃಂದಕ್ಕೂ ಅನುಕೂಲವಾಗುವಂತೆ ಬೇಕಾದ ಪರಿಕರಗಳನ್ನು ಅಣಿಗೊಳಿಸಬೇಕೆಂದೂ ತಿಳಿಸಿದ್ದರು. ಆ ಬಗ್ಗೆ ಕಡಬ, ನೂಜಿಬಾಳ್ತಿಲ, ಸುಂಕದಕಟ್ಟೆ ಗ್ರಾಮ ಪಟೇಲರಿಗೆ ತಿಳಿಸುವುದಲ್ಲದೆ ಊರವರೆಲ್ಲ ಬೇಟೆಗೆ ಬರುವಂತೆ ಪ್ರತಿ ಮನೆಗೂ ತಳೆಯಾರಿಗಳು ಹೋಗಿ ತಿಳಿಸಬೇಕೆಂದೂ ನಮ್ಮಜ್ಜ ಪಟೇಲ್ ಕೊರಗಪ್ಪ ರೈಗಳಿಗೆ ತಾಕೀತು ಮಾಡಿದ್ದರು. ಹೊಸಮಠ ಕಡವಿನಲ್ಲಿ ಉಪ್ಪಿನಂಗಡಿಯಿಂದ ಬಂದ ಗಾಡಿಗಳನ್ನು ಬಿಡಬೇಕಾಗಿರುವುದ ರಿಂದ ಬಂಟ್ರ ನೆಕ್ಕಿಲಾಡಿಯಿಂದ ಬರುವ ಗಾಡಿಗಳನ್ನು ಹೊಸಮಠ ಕಡವಿನಲ್ಲಿ ಜಂಗಲ್ ಹತ್ತಿಸಿ ಕಡಬ ಮುಟ್ಟಬೇಕಾದರೆ ಹೊತ್ತು ಇಳಿಯಬಹುದೆಂದೂ ಮಂಗಳೂರಿಂದ ಬರುವ ಶಿಕಾರಿ ಗೆಳೆಯರಿಗೆ ಇದರಿಂದ ಅಸಮಾಧಾನ, ಅನಾನುಕೂಲವಾಗಬಹುದೆಂದೂ ಕಲೆಕ್ಟರರು ತಮ್ಮ ಪತ್ರದಲ್ಲಿ ಸಮೂದಿಸಿದ್ದರು. ನಮ್ಮ ಮನೆಯ ಸವಾರಿ ಗಾಡಿಯನ್ನೂ, ಮರ್ದಾಳ ಬೀಡು ತಿಮ್ಮಯ ಕೊಂಡೆ ಯವರ ಚಿತ್ರಕಲೆಯಿಂದ ಸಿಂಗರಿಸಿದ ಸಾರೋಟನ್ನೂ, ಆಳೇರಿಯ ಮತ್ತು ಅತ್ಲಾಜೆ ಅಣ್ಣು ಶೆಟ್ಟರ ಬೆಟ್ಟದ ಪುರದ ಗಾಡಿ ಹೋರಿಗಳನ್ನೂ ಕಳುಹಿಸುವುದಾಗಿ ಕಲೆಕ್ಟರರಿಗೆ ಮರು ಓಲೆ ಬರೆದು ದೊರೆಗಳ ಬರವನ್ನು ಗಾಡಿ ಸಾರೋಟಿನೊಂದಿಗೆ ಹೊಸಮಠದ ಈಚೆಯ ದಡದಲ್ಲಿ ಕಾದು ನಿಲ್ಲುವುದಾಗಿ ನಮ್ಮ ಉತ್ತರದಲ್ಲಿ ತಿಳಿಸಿದ್ದಾಯಿತು.

ಆ ಕಾಲದಲ್ಲಿ ಉಪ್ಪಿನಂಗಡಿಯಿಂದ ಮಂಗಳೂರು ತನಕ ಹೋಗಿ ಬರಲು ಎತ್ತಿನ ಗಾಡಿ, ಕುದುರೆಗಾಡಿ, ಮೋಟರ್ ಬಂಡಿಯಲ್ಲದೆ ಎಡೆ ಎಡೆಯಲ್ಲಿ ಮೋಟರು ಕಾರಿನ ಸೌಕರ್ಯವೂ ಇತ್ತು. ಮೂಡು ಪ್ರಾಂತ್ಯ ಸುಬ್ರಹ್ಮಣ್ಯದಿಂದ ಉಪ್ಪಿನಂಗಡಿಗಾಗಿ ಪಾಣೆಮಂಗಳೂರು ಮೂಲಕ ಮಂಗಳೂರಿಗೆ ಹೋಗುವ ಅಕ್ಕಿ, ಭತ್ತ, ರಾಮಪತ್ರೆ, ಸೀಗೆ, ಉಂಡೆಹುಳಿ ಇತ್ಯಾದಿಗಳು ಎತ್ತಿನ ಬಂಡಿಯಲ್ಲಿಯೇ ರವಾನೆಯಾಗಬೇಕಿತ್ತು. ಮಂಗಳೂರಿಂದ ಇತ್ತ ಬರುವ ಉಪ್ಪು, ಬೆಲ್ಲ, ಸಕ್ಕರೆ, ಸಂಬಾರ ಜೀನಸುಗಳು ಗಾಡಿಗಳ ಮುಖಾಂತರವೇ ಉಪ್ಪಿನಂಗಡಿತನಕ ಸರಾಗವಾಗಿ ಬಂದು ಹೋಗುತ್ತಿದ್ದರೂ, ಉಪ್ಪಿನಂಗಡಿ ಕಡವಿನಲ್ಲಿ ಜಂಗಲ್ ಏರಿ ಬರಬೇಕಾದರೆ

ಭರ್ತಿಗಾಡಿಗಳಿಗೆ ತುಂಬಾ ಪ್ರಯಾಸ. ಜಂಗಲ್ ಎಂದರೆ ಎರಡು ಭಾರೀ ದೋಣಿಗಳನ್ನು ಎದುರು ಬದುರಾಗಿ ಮರದ ದಿಮ್ಮಿಗಳಿಂದ ಜೋಡಿಸಿ, ಅದರಲ್ಲಿ ಮೂರು ನಾಲ್ಕು ಗಾಡಿಗಳು ನಿಲ್ಲುವಷ್ಟು ವಿಶಾಲ ತಳದಲ್ಲಿ ಉತ್ತಮ ಜಾತಿಯ ಮರದ ಹಲಗೆಗಳನ್ನು ಹಾಸಿ ಗಾಡಿಯು ಅದರ ಮೇಲೆ ಏರುವಂತೆ ಅನುವು ಮಾಡಿಕೊಟ್ಟು, ಉ. ದ ನಾಲ್ಕು ಸುತ್ತಿಗೂ ಬೇಲಿಯಂತೆ ಮರದ ರೀಪನ್ನು ಅಲ್ಲಲ್ಲಿ ಅದಕ್ಕೆ ಜಡಿದ ಗೂಟಗಳಿಗೆ ಬಡಿದು ಮಾಡಿದ ಚಿಕ್ಕ ತೆರನ ಹಡಗಿನ ಆಕೃತಿಯದು. ನಾಲ್ಕು ಜನ ನುರಿತ ಅಂಬಿಗರು ದೋಣಿಯ ನಾಲ್ಕು ಮೂಲೆಗಳಲ್ಲಿ ನಿಂತು ಹುಟ್ಟುಹಾಕಿ, ಜಳ್ಳ ಒತ್ತಿ ದೋಣಿಯನ್ನು ಮುನ್ನೂಕಿ ಈಚೆ ದಡವನ್ನು ಮುಟ್ಟಿಸುವುದು ಸಾಹಸದ ಕೆಲಸ. ಉಪ್ಪಿನಂಗಡಿ ಕಡವನ್ನು ದಾಟಿ ಬಂದ ಗಾಡಿಗಳು ಕಡಬ, ಮರ್ದಾಳ, ಸುಬ್ರಹ್ಮಣ್ಯವನ್ನು ಸೇರಬೇಕಾದರೆ ಹೊಸ ಮಠ ಕಡವಿನಲ್ಲಿಯೂ ಇದೇ ಸುಖೋಪಚಾರವನ್ನು ಅನುಭವಿಸಿಯೇ ತೀರವನ್ನು ಸೇರಬೇಕು. ಆ ಕಾಲದಲ್ಲಿ ಪಾಣೆಮಂಗಳೂರಲ್ಲಿ ಅಲ್ಲದೆ ಬೇರಾವ ಕಡವಿಗೂ ಅಡ್ಡ ಸಂಕವಿರಲಿಲ್ಲ.

ಉಪ್ಪಿನಂಗಡಿ ಕಡವು ವಿಶಾಲವಲ್ಲದೆ ಪಶ್ಚಿಮ ಘಟ್ಟದಿಂದ ಹರಿದು ಬರುವ ನೇತ್ರಾವತಿ, ಕುಮಾರಧಾರಾ ನದಿಗಳ ಸಂಗಮ. ಅಲ್ಲಿ ಎರಡು ಹೊಳೆಗಳೂ ನಿಂತು ಮುಂದುವರಿಯಬೇಕಾದು ದರಿಂದ ಒಯ್ಲು ಕಡಿಮೆ ಆದರೆ ಹೊಸಮಠದಲ್ಲಿ ಕುಮಾರಧಾರೆಯು ನೇತ್ರಾವತಿಯನ್ನು ಉಪ್ಪಿನಂಗಡಿಯಲ್ಲಿ ಕೂಡುವ ತವಕದಿಂದ ಎಂಬಂತೆ ಒಬ್ಬಂಟಿಯಾಗಿ ಹರಿಯುವುದರಿಂದ ಸೆಳೆತ ವಿಪರೀತ. ಈ ಸೆಳೆತದ ರಭಸಕ್ಕೆ ಪಳಗಿದ ನಾವಿಕರೂ ಎಷ್ಟೋ ಸಲ ತಮ್ಮ ಜಂಗಲ್ ದೋಣಿಯಲ್ಲಿ ಹತ್ತಿರದ ರಾಮಕಯದ ಸುಳಿಗೆ ಸಿಕ್ಕಿ ತಿರ್‍ರನೆ ತಿರುಗಿ ದೋಣಿಯೊಂದಿಗೆ ಮುಳುಗಿ ಅಸುತೊರೆದ ಸಂದರ್ಭಗಳು ಹಲವಾರು. ಇದನ್ನೆಲ್ಲಾ ಜಿಲ್ಲಾಧಿಕಾರಿಗಳು ಅರಿತವರು. ಊರವರು ಮಾನ್ಯ ಅತಿಥಿ ಗಳನ್ನು ಈ ಪರಿಸ್ಥಿತಿಯಲ್ಲಿ ಸ್ವಾಗತಿಸುವುದು ಸೂಕ್ತವಲ್ಲದುದರಿಂದ ಮರ್ದಾಳ ಬೀಡಿನ ಸಾರೋಟು ಗಾಡಿ, ಮನೆಯ ಶೃಂಗರಿಸಿದ ಬೆಟ್ಟದಪುರದ ಟಾಕಣ ಕುದುರೆಯಂಥ ಬಿಳಿ ಎತ್ತುಗಳಿರುವ ಗಾಡಿಗಳನ್ನು ಹೊಂದಿಸಿದ್ದರು. ಅಂತಹ ಶೋಭೆಯ ಬಿಳಿ ಎತ್ತುಗಳಿಗೆ ಜೂಲಿ ಹೊದಿಸಿ, ಕೊಂಬುಗಳಿಗೆ ಲಕಲಕಿಸುವ ಹಿತ್ತಾಳೆಯ ಮುಗುಳಿಯ ತೆರೆದ ಗುಬ್ಬಿ ಸಿಕ್ಕಿಸಿ, ಅದಕ್ಕೆ ತೇರಿನಂತೆ ತೋರುವ ವಿವಿಧ ಬಣ್ಣದ ಉಣ್ಣೆಯ ಗೊಂಡೆಯನ್ನು ತೊಡಿಸಿ, ಕತ್ತಿಗೆ ಮೂರು ನಾಲ್ಕು ಸುತ್ತು ಹುರಿಗೆಜ್ಜೆ, ಕಿರುಗೆಜ್ಜೆಗಳಿಂದ ಮಾಡಿದ ಸರಗಳನ್ನು ಹಾಕಿ ಕೊಂಬುಗಳ ತಳಕ್ಕೆ ತಲೆಗೆ ಎರಕವಾಗುವಂತೆ ಬಿಲ್ಲಿನ ಅಕಾರದ ಕಂಚಿನ ಹೊಳೆಯುವ ಸರಪಳಿಗಳನ್ನು ಇಳಿಯಬಿಟ್ಟಾಗ ಅವುಗಳನ್ನು ನೋಡುವುದೇ ಒಂದು ಸೊಬಗಿನ ಸಿರಿ; ಸಾಕಿದವನಿಗೆ ಹೆಮ್ಮೆಯ ಗರಿ! ಗಾಡಿ ಹೊಡೆಯುವಾತನಿಗೆ

ಸಂತಸದ ಸಡಗರ. ಇದೇ ರೀತಿಯಲ್ಲಿ ಸಜ್ಜಾಗಿ ನಿಂತ ಬೀಡಿನ ಸಾರೋಟು, ಅತ್ತಾಜೆ ಅಣ್ಣು ಶೆಟ್ಟರ, ಅಳೇರಿಯ ಗಾಡಿಗಳಿಗೆ ಬೇಕಷ್ಟು ಮೆತ್ತನೆಯ ಬೈಹುಲ್ಲನ್ನು ಹರವಿ ಒಂದೊಂದು ಗಾಡಿಗೆ ಮೂರು ನಾಲ್ಕು ಕಂಬಳಿಗಳನ್ನು ಉದ್ದಕ್ಕೆ ಹಾಸಿ, ಅದರ ಮೇಲೆ ನಯವಾದ ಜಮಖಾನವನ್ನು ಬಿಡಿಸಿ, ಅಲ್ಲಲ್ಲಿ ಹತ್ತಿಯ ಲೋಡು, ತಲೆದಿಂಬುಗಳನ್ನು ಹೊಂದಿಸಿ ಊರ ಹಿರಿಯರು ಸಿದ್ಧರಾದರು. ಅತಿಥಿಗಳು ಹೊಸಮಠಕ್ಕೆ ಇಷ್ಟೇ ಹೊತ್ತಿಗೆ ಮುಟ್ಟುವರೆಂಬುದನ್ನು ತಿಳಿದು, ಆ ಸಮಯ ಅವರನ್ನು ಎದುರುಗೊಳ್ಳಲು ಎಳನೀರ ಗೊನೆಗಳನ್ನು ಗಾಡಿಗೆ ಹೇರಿ ಹೊಸ ಮಠಕ್ಕೆ ಹೊರಡಲನುವಾದರು. ಪೆಂಡಿಯಿಂದ ತೆಗೆದ ಮುಂಡನ್ನು ಉಟ್ಟು ಕರಿಕೋಟನ್ನು ತೊಟ್ಟು, ಕೋಟಿನ ಒಂಭತ್ತು ಗುಂಡಿಗಳನ್ನೂ ಹಾಕಿ, ಜರಿಯ, ಕೆಂಪು ಪಟ್ಟೆಶಾಲನ್ನು ಮುಂಡಾಸು ಸುತ್ತಿ ಅಂಥದೇ ಜರಿಯ ಶಾಲನ್ನು ಕತ್ತಿಗೆ ಹಾಕಿ, ಕಂಕುಳ ಎಡೆ ಬರುವಂತೆ ಮಾಡಿ ಗಂಟಿಕ್ಕಿ, ಕಲೆಕ್ಟರರನ್ನು ಸ್ವಾಗತಿಸಲು ಸಿದ್ಧರಾದ ಹಿರಿಯರನ್ನು ನೋಡುವಾಗ ಸಮವಸ್ತ್ರದ ದವಾಲಿಯನ್ನು ಹಾಕಿದ ಪೇದೆ ಗಳಂತೆ ಕಾಣುತ್ತಿದ್ದರು. ನಮಗಿಂತ ಮೊದಲೇ ಹೋಗಿ ಅಲ್ಲಿ ಕೂಡಿದ್ದ ಕಡಬ ಪೇಟೆಯ ಸಾಹುಕಾರ ನಾರಾಯಣ ಪೈ, ವೆಂಕಟೇಶ ಪೈ ಸಹೋದರರೂ, ನೆರೆಕರೆಯ ಹಿರಿಯರೂ, ಅತಿಥಿಗಳೂ ಯಾವುದೇ ಅನಾನುಕೂಲತೆ, ಅಪಾಯಗಳಿಗೀಡಾಗದೆ ಹೊಸಮಠದ ಈಚೆ ದಡವನ್ನು ಮುಟ್ಟುವಂತೆ ಸರ್ವ ಸನ್ನಾಹವನ್ನೂ ಸಮರ್ಪಕವಾಗಿ ಮಾಡಿದ್ದರು.

ನಾವು ಮನೆಯಿಂದ ಹೊರಟವರು ಸಾಧಾರಣ ಒಂಭತ್ತು ಗಂಟೆಗೆ ಹೊಸಮಠ ಕಡವಿನ ಬಳಿಗೆ ಬಂದೆವು. ಕಾಣಿಯೂರು ಪಟೇಲ ಸಂಜೀವ ರೈಗಳ ಸಹಕಾರದಿಂದ ಉಪ್ಪಿನಂಗಡಿಯ ಮೂರು ಎತ್ತಿನ ಗಾಡಿಗಳಲ್ಲಿ ಬಂದ ಕಲೆಕ್ಟರರು ಆಚೆ ದಡದಲ್ಲಿ ಜಂಗಲ್ ಏರಲು ಸಿದ್ಧರಾಗಿ ನಿಂತಿದ್ದರು. ಅವರೊಂದಿಗೆ ಮಂಗಳೂರಿನ ನುರಿತ ಶಿಕಾರಿ- ಅತ್ತಾವರ ಎ.ವಿ.ಪೂಂಜರೂ, ಅಜಾನುಬಾಹು ನಟ್ಟಬೈಲು ಸಂಜೀವ ರೈಗಳೂ ಇದ್ದುದು ಈಚೆ ದಡಕ್ಕೆ ಕಾಣುತ್ತಿತ್ತು. ನನಗಾಗ ಹದಿನಾಲ್ಕು, ಹದಿನೈದು ವರ್ಷ. ಹೈಸ್ಕೂಲಿಗೆ ರಜಾ ಸಮಯವಾದುದರಿಂದ ನಾನು ಮನೆಗೆ ಬಂದಿದ್ದೆ. ಬೇಟೆಯ ಸಂಭ್ರಮದಲ್ಲಿ ಪಾಲ್ಗೊಳ್ಳಲು ಉತ್ಸುಕನಾಗಿ, ಜಿಲ್ಲಾಧಿಕಾರಿಗಳನ್ನು ಕಾಣುವ ತವಕದಿಂದ ನನ್ನ ಸ್ಕೌಟ್ ಡ್ರೆಸ್ಸನ್ನು ನೀಟಾಗಿ ಧರಿಸಿ ಅಜ್ಜನೊಡನೆ ನಿಂತಿದ್ದೆ. ಚಿಕ್ಕ ದೋಣಿಯಲ್ಲಿ ಬರುವುದಕ್ಕಿಂತ, ಜಂಗಲಿನಲ್ಲಿಯೇ ಈಚೆಯ ದಡ ಮುಟ್ಟುವುದು ಅನುಕೂಲವೆಂದು ಜಂಗಲ್ ಏರಿ ಅದರ ಗೂಟಗಳನ್ನು ಹಿಡುದು ಸವಾರಿ ಮಾಡಿದ ಅತಿಥಿಗಳು ಈಚೆ ದಡ ಸೇರಿದಾಗ ನೆರೆದವರೆಲ್ಲ ವಿನೀತರಾಗಿ ನಮಸ್ಕಾರ ಮಾಡಿದುದನ್ನು ಕಂಡ ನಾನೂ ಸೆಟೆದು ನಿಂತು ಸ್ಕೌಟ್ ಪದ್ಧತಿಯಂತೆ, ಸೆಲ್ಯೂಟ್ ಮಾಡಿದುದನ್ನು ಕಂಡ ದೊರೆಗಳೂ, ಅತಿಥಿಗಳೂ ಸುಪ್ರೀತರಾಗಿ ನನಗೆ

ಅದೇ ರೀತಿ ಮರುವಂದನೆ ಸಲ್ಲಿಸಿ ನನ್ನ ಬೆನ್ನು ತಟ್ಟಿದರು. ಬಳಿಕ ಊರ ಹಿರಿಯರಿಗೆ ಪ್ರತಿ ನಮಸ್ಕಾರಗೈದರು; ನನ್ನ ಹೆಮ್ಮೆಗೆ ಪಾರವಿರಲಿಲ್ಲ. ದಡದಲ್ಲಿ ಬಂದು ಕುಳಿತ ಅತಿಥಿಗಳಿಗೆ ಎಳನೀರ ಸಮಾರಾಧನೆಯನ್ನು ಮಾಡಿ, ಅವರ ಕ್ಷೇಮ ಸಮಾಚಾರವನ್ನು ವಿಚಾರಿಸಿ ದಾರಿಯಲ್ಲಿ ಅವರಿಗಾದ ಬವಣೆಯನ್ನರಿತೆವು. ಅಲ್ಲಿಂದ ಮರ್ದಾಳಕ್ಕೆ ಗಾಡಿಯೇರುವಾಗ ಗಂಟೆ ಹನ್ನೊಂದಾಯಿತು. ನಮ್ಮ ಗಾಡಿ ಸವಾರಿ ಮರ್ದಾಳಕ್ಕೆ ಬರಬೇಕಾದರೆ ಹೆಚ್ಚೆಂದರೆ ಒಂದೂವರೆ ಗಂಟೆಯ ದಾರಿ. ಆದರೆ ಅಂದಿನ ಪ್ರಯಾಣಿಕರು ದೊರೆಗಳೂ, ಮಂಗಳೂರಿನ ಸುಖಜೀವಿಗಳೂ ಆಗಿದ್ದುದರಿಂದ ಗಾಡಿಯು ಮಂದಗತಿಯಿಂದ ಮುಂದುವರಿದು, ಇವರನ್ನು ಎದುರ್ಗೊಳ್ಳಲೆಂದು ಶೃಂಗರಿಸಿದ್ದ ಮರ್ದಾಳ ಶಾಲಾ ವಠಾರವನ್ನು ಸೇರುವಾಗ ಮಧ್ಯಾಹ್ನ ಒಂದೂಕಾಲು ಗಂಟೆ ಆಗಿತ್ತು.

ಎಲ್ಲರಿಗೂ ಪ್ರಯಾಣದ ದಣಿವಿನಿಂದಲೂ, ಹೊತ್ತು ಮೀರಿದ ದೆಸೆಯಿಂದಲೂ ಹೊಟ್ಟೆಯು ಚುರುಗುಟ್ಟುತ್ತಿತ್ತು. ಆದುದರಿಂದ ವಿಚಾರ ವಿನಿಮಯದ ಮುನ್ನ ಊಟವೆಂದು ಅಭಿಪ್ರಾಯ ಪಟ್ಟರು ಅಂದಿನ ಊಟವು ಊರಿನ ವಿವಿಧ ಜಾತಿಯವರ ಸಮ್ಮಾನವೆಂದು ಮೊದಲೇ ನಿಶ್ಚಯ ವಾಗಿತ್ತು. ಮಾಂಸಾಹಾರ, ಸಸ್ಯಾಹಾರಗಳ ಭೋಜನ ಕೂಡಿದ್ದುದರಿಂದ ಬರಿಯ ಸಸ್ಯಾಹಾರಿಗಳಾರೂ ಅಲ್ಲಿ ಆಹಾರ ಸ್ವೀಕರಿಸುವಂತಿರಲಿಲ್ಲ. ಮಾಂಸಾಹಾರಿಗಳಾದ- ಇನ್ನಷ್ಟು ಸ್ಪಷ್ಟಗೊಳಿಸುವುದಾದರೆ ಮಿಶ್ರಾಹಾರಿಗಲಾದ- ಬಂಟರೂ, ಗೌಡರೂ ಮಾತ್ರ ಅಲ್ಲಿ ಊಟ ಮಾಡಲು ತಯಾರಿದ್ದರು. ಉಳಿದ- ಕೊಂಕಣಿ, ಜೈನ- ಬಂಧುಗಳು ತಮ್ಮ ವಿಶೇಷ ಔತಣದ ಅಡುಗೆಯನ್ನು, ಬಡಿಸಲು ಅಡಿಗೆಯಾಳುಗಳನ್ನೂ ಕಳುಹಿಸಿದ್ದರು. ಎದುರು ಬದುರಾಗಿ ಬೆಂಚುಗಳನ್ನು ಜೋಡಿಸಿ- ಎಲೆ ಹಾಸಲೂ, ಕುಳಿತುಕೊಳ್ಳಲೂ ಸಿದ್ಧತೆಯನ್ನು ಮಾಡಿದ್ದರು. ಉಪ್ಪಿನಕಾಯಿ ತಯಾರಿಯಲ್ಲಿ ಪ್ರಸಿದ್ಧರೆಂದಿದ್ದ ಜೈನರ ಮಾವಿನಕಾಯಿಯ ಹುರಿದ ಉಪ್ಪಿನಕಾಯಿಯನ್ನು ಮರ್ದಾಳ ಬೀಡಿನ ತಿಮ್ಮಯ ಕೊಂಡೆಯವರ ಅಡುಗೆಯಾಳು ಅಗ್ರಪಂಙ್ತಯಲ್ಲಿ ಕುಳಿತ ಕಲೆಕ್ಟರರ ಎಲೆಯ ತುದಿಗೆ ಬಡಿಸಿದೊಡನೆ ತೋರ್ಬೆರಳಿಂದ ಮುಟ್ಟಿ, ನಾಲಿಗೆ ಗಿರಿಸಿದ ಅವರು ಅದರ ರುಚಿಗೆ ಬಾಯಿ ಚಪ್ಪರಿಸಿಕೊಂಡರೂ ಖಾರಕ್ಕೆ ಇಳಿಯುವ ಕಣ್ಣೀರನ್ನು ಎಡಗೈಯಲ್ಲಿದ್ದ ಅಂಗವಸ್ತ್ರದಿಂದ ಒರೆಸಿಕೊಳ್ಳಬೇಕಾಯಿತು ! ಇದರೊಂದಿಗೆ ಬಡಿಸಿದ ಜೈನರ ಮೂಡೆಯ ತುಂಡುಗಳನ್ನು ಒಗ್ಗರಣೆಯಿಕ್ಕಿದ ಗಟ್ಟಿ ಮೊಸರಿನೊಂದಿಗೆ ಕಲಸಿ ಆ ಆಂಗ್ಲ ವಿದ್ಯಾಪರಿಣತರು ತಿನ್ನುವ ರೀತಿಯನ್ನು ಕಂಡರೆ ಹಳ್ಳಿಯ ಹೊಟ್ಟೆಬಾಕನೂ ನಾಚಬೇಕು. ಮತ್ತೆ ಬಡಿಸಲಾದ ಕಟ್ಟುಮಂಡಿಗೆ- ಭಕ್ಷ್ಯಗಳ ರಾಜ. ಜೈನರಲ್ಲದೆ ಬೇರಾರಿಗೂ ಇಂದಿನವರೆಗೆ ಆ ಪಾಕವು ಕರಗತವಾಗಿಲ್ಲ! ಅದರ

ಉರುಟುರುಟಾದ ತುಂಡುಗಳ ಸೊಬಗನ್ನು ನೋಡುವಾಗಲೇ ಬಾಯಲ್ಲಿ ನೀರೂರುತ್ತಿತ್ತು. ಬಿಡಿಸಿ ನೋಡಿದರೆ ಪದರುಪದರಾಗಿ ಅಕ್ಕಿಯ ಅತಿ ತೆಳು ಜಾಲಂದರದಂತಹ ದೋಸೆಯ ಮೇಲೆ ಕುಂಕುಮ ಕೇಸರಿ, ಬಾದಾಮಿ, ಸಕ್ಕರೆಯ ರವೆಯೊಂದಿಗೆ ಬೆರೆಸಿ ಪನ್ನೀರ ಪರಿಮಳ ಬರುವ ಆ ಸಿಹಿ ಬಾದಾಮಿ ಸಕ್ಕರೆ ಖಾದ್ಯದ ರುಚಿಯನ್ನು ತಿಂದವರೇ ಬಲ್ಲರು ! ಬಾಯಿ ಚಪ್ಪರಿಸುತ್ತಿದ್ದ ದೊರೆಗಳು- ''ಎಕ್ಸಲೆಂಟ್, ಟೇಸ್ಟೀ'' ಎಂದೇನೇನೋ ಉದ್ಗರಿಸುತ್ತ ಮುಂದಿನದೇನೆಂದು ಪ್ರಶ್ನಾರ್ಥಕವಾಗಿ ಬಂಟ್ರ ಪಟೇಲರ ಮುಖವನ್ನು ದಿಟ್ಟಿಸುವಾಗ ಪಟೇಲರು, ''ಭಟ್ಟರೇ, ಬಡಿಸಿ'' ಎಂದರು. ಬೈಪಾಡಿತ್ತಾಯರ ಕಳಮೆಯ ಅನ್ನದ ಮೇಲೆ ಇಕ್ಕಿದ, ಅಂದೇ ಬೆಣ್ಣೆ ಕಾಯಿಸಿದ ತುಪ್ಪದ ಪರಿಮಳಕ್ಕೆ ಸೋತ ಕಲೆಕ್ಟರರು ಸಾಕೆಂದು ಹೇಳುವುದನ್ನೂ ಮರೆತಂತೆ ಕಾಣುತ್ತಿತ್ತು. ತಿಳಿಸಾರನ್ನು ಬಡಿಸಿದೊಡನೆ ಪಟೇಲರು ಅನ್ನವನ್ನು ಕಲಸಿ ಊಟ ಮಾಡುವುದನ್ನು ಕಂಡ ಕಲೆಕ್ಟರರು ಬ್ರಾಹ್ಮಣರ ಊಟದ ರೀತಿ ಇದೆಂದು ಊಹಿಸಿ ತಾವೂ ಹಾಗೆಯೇ ತುತ್ತುಗಳನ್ನು ಬಾಯಿಗಿಟ್ಟರು. ಒಂದಾದ ಮೇಲೊಂದರಂತೆ ಕೊದ್ದೆಲು, ಹುಳಿ ಬಡಿಸಿದ ನಂತರ ಉಳಿದ ಅನ್ನಕ್ಕೆ ಕಡಬ ಸಾಹುಕಾರ ನಾರಾಯಣ ಪೈಗಳ ದಾಳಿ ತೋವೆ ! ದಾಳಿತೋವೆಯೊಂದಿಗೆ ಪತ್ರೊಡೆಯನ್ನು ನುರಿಸಿ ತಿನ್ನುವ ವೈಖರಿಯಲ್ಲಿ ಕಲೆಕ್ಟರರು ಕೊಂಕಣಿಗರನ್ನೂ ಮೀರಿಸಿದರೆನ್ನಬೇಕು ! ಹೀಗೆ- ಜೈನ, ಬ್ರಾಹ್ಮಣ, ಕೊಂಕಣಿಗರ- ಸಸ್ಯಾಹಾರದ ಸೇವೆಯಾಯಿತು. ಇನ್ನು- ಬಂಟ, ಗೌಡರ- ಮಿಶ್ರಾಹಾರದ ಭೋಜನದ ಸರದಿ ಕಾದಿತ್ತು.

ನಮ್ಮ ಮನೆಯ ಗರಿಮುರಿಯಾದ ಕುರುಕುರು ರೊಟ್ಟಿಯ ಮೇಲೆ ಕೋಳಿಯ ಕೊದ್ದೆಲನ್ನು ಹದವಾದ ತುಂಡುಗಳೊಂದಿಗೆ ಗೋರಿ ಗೋರಿ ಬಡಿಸುವಾಗ ಇಷ್ಟರ ತನಕದ ಊಟವನ್ನೂ ಮರೆತವರಂತೆ ದೊರೆಗಳು ಪರಿಮಳವನ್ನು ಆಘ್ರಾಣಿಸಿ ಆಸ್ವಾದಿಸತೊಡಗಿದರು. ಬಂಟರ ಪ್ರಸಿದ್ಧ ಸಿಹಿ ತಿಂಡಿ ಸುಕ್ಕಿನುಂಡೆಯ ಸರದಿ ಬಂತು. ಅದರ ಅಂದವನ್ನು ತಿರುಗಿಸಿ, ತಿರುಗಿಸಿ ನೋಡಿದ ದೊರೆಗಳು ಕೈಯಲ್ಲಿಯೇ ಹುಡಿಮಾಡಿ ಬಾಯಿಗಿಕ್ಕಿ ನಾಲಗೆ ಚಪ್ಪರಿಸಿ ಆ ರುಚಿಗೆ ಸೋತೆನೆಂಬ ಮುಖಭಾವವನ್ನು ಪ್ರದರ್ಶಿಸಿದರು. ಅಜ್ಜನೆಂದರು-''ಇದು ಸುಕ್ಕಿನುಂಡೆ. ಶುದ್ಧ ಬೆಲ್ಲ, ಅರಳು, ಗೋಡಂಬಿ, ಬಾದಾಮಿ, ಏಲಕ್ಕಿ ಮಿಶ್ರಿತ ಉಂಡೆಯನ್ನು ಅಕ್ಕಿಯ ತೆಳು ಹಿಟ್ಟಿನಲ್ಲಿ ಅದ್ದಿ ಗಾಣದ ತೆಂಗಿನೆಣ್ಣೆಯಲ್ಲಿ ಕಾಯಿಸಿದ ಈ ಉಂಡೆಯು ನಮ್ಮ ಸಮಾಜದಲ್ಲಿ ನಡೆಯುವ ಎಲ್ಲಾ ಶುಭಶೋಭನಗಳಲ್ಲೂ ಇರುತ್ತದೆ. ''ಓ ಹೀಗೊ?!'' ಎಂದು ಕಲೆಕ್ಟರರು ಮೆಚ್ಚುಗೆ ವ್ಯಕ್ತಪಡಿಸಿ, ಭೋಜನವನ್ನು ಮುಂದುವರಿಸಿದರು.

ಕೊಲ್ಲ ಮಾಸ್ತರ ಸುಬ್ರಾಯ ಗೌಡರ ಅದ್ದೂರಿಯ ಔತಣದ ಒಂದು ಭಾಗವು ಮಾತ್ರ ಇನ್ನು ಬಾಕಿ. ಊರ ಹಂದಿಯ ಹುರಿದ ಮಾಂಸ; ಅಂಗುಲ- ಅಡ್ಡಗಲ ಕ್ಕೊದ ಗಟ್ಟಿ ರೊಟ್ಟಿಯನ್ನು ಬಡಿಸುವಾಗ ಬಂದ ಪರಿಮಳಕ್ಕೇ ಸೋತ ಅತಿಥಿಗಳು 'ಅಯ್ಯೋ, ಇದು ಮೊದಲೇ ಬರಬಾರದಾಗಿತ್ತೇ? ಬೇಕಾದಷ್ಟು ತಿನ್ನೋಣವೆಂದರೆ ಹೊಟ್ಟೆ ತುಂಬುತ್ತಾ ಬರುತ್ತಿದೆ. ಬಿಟ್ಟು ಏಳೋಣವೆಂದರೆ ಬೇಕೆಂಬ ಆಸೆ ಬೆಳೆಯುತ್ತಿದೆ' ಎಂಬಂಥ ಮುಖಭಾವವನ್ನು ಪ್ರದರ್ಶಿಸುತ್ತಿದ್ದಾರೆ. ರೊಟ್ಟಿಯ ತುಂಡುಗಳನ್ನು ಕಂಡರೆ ಇದನ್ನು ಜಗಿಯುವ ಹಲ್ಲುಗಳು ಉದುರಿಹೋಗವೆ? ಎಂಬಂತಿದ್ದರೆ ಬಾಯಿಗೆ ಇಕ್ಕಿ ಅತ್ತಿತ್ತ ದವಡೆಯನ್ನು ಆಡಿಸಿದರೆ ಸಾಕು; ಆ ರೀತಿಯ ಪಾಕದಲ್ಲಿ ಬೆಂದ ರೊಟ್ಟಿಯು ರುಚಿಕರವಾಗಿ ಕಡುಬಿನಂತೆ ಕರಗುತ್ತಿತ್ತು. ಇಂದು ಅಂಥ ರೊಟ್ಟಿ, ಪದಾರ್ಥಗಳು ಆ ಸಮಾಜದಲ್ಲಿಯೇ ಅಪೂರ್ವ. ಆ ತೆರನಾದ ಅಡುಗೆಯು ಗೌಡ ಸಮಾಜದ ಮಹಿಳೆಯರಿಗೇ ಮೀಸಲು. ಆದರೆ ನವನಾಗರಿಕತೆಯು ಆ ವೈಶಿಷ್ಟ್ಯಪೂರ್ಣವಾದ ಅಡುಗೆಯನ್ನು ಅಡಗಿಸಿ ಬಿಟ್ಟಂತೆ ಕಾಣುತ್ತದೆ. ಒಂದು ಸೇರು ಅಕ್ಕಿಗೆ ನಾಲ್ಕು ರೊಟ್ಟಿ. ಗಟ್ಟಿ ಹಿಟ್ಟನ್ನು ಅಂಗೈ ದಪ್ಪದ ಬಳಪದ ಸುಡುವ ಕಾವಲಿಯಲ್ಲಿಟ್ಟು ತಟ್ಟಿ ಮಣ್ಣಿನಬಾವಡೆ ಮುಚ್ಚಿ, ಸೊಪ್ಪು ತರಲು ಮನೆಯ ಬದಿಯ ಗುಡ್ಡಕ್ಕೆ ಹೋದ 'ಉಗ್ಗೊದಬ' ಕಟ್ಟಸೊಪ್ಪನ್ನು ತಂದು ಹಟ್ಟಿಯಲ್ಲಿ ಹರಡಿ ಬಂದೇ ಅಡಿಭಾಗವು ಬೆಂದ ರೊಟ್ಟಿಯನ್ನು ಮತ್ತೊಂದು ಮಗ್ಗುಲಿಗೆ ಮಗುಚಿಹಾಕಿ ಪುನಃ ಸೊಪ್ಪು ಹೆರೆಯಲು ಹೋದರೆ ಮತ್ತೊಂದು ಹೊರೆ ಸೊಪ್ಪನ್ನು ತಂದೇ ಕಾವಲಿಯಿಂದ ಆ ರೊಟ್ಟಿಯನ್ನು ತೆಗೆಯುವುದೆಂದು ಪ್ರತೀತಿ. ಇಷ್ಟು ಹೊತ್ತಾದರೂ ರೊಟ್ಟಿ ಕರಟದೆ ಬೇಕಷ್ಟೇ ಬೇಯುವುದು. ಹಲ್ಲಿಲ್ಲದವರಾದರೂ, ಸಮತೂಕದಲ್ಲಿ ಬೆಂದು ಕೈಯಿಂದ ಹಾಳೆ ಹಾಳೆಯಾಗಿ ಬಿಡಿಸಿ ಬಾಯಿಗಿಕ್ಕಿ ನುಲಿದರೆ ನೀರಾಗುವ ಇಂಥ ರೊಟ್ಟಿ ಈ ದಿನಗಳಲ್ಲಿ ಕಾಣಸಿಗದು. ಅದು ಕೇವಲ ಸ್ಮರಣೆಗೆ ಸಂದ ಗತಕಾಲದ ಪಳೆಯುಳಿಕೆಯಾಗಿದೆ, ಇಂದು! ಈ ಸೊಗಸಾದ ಭೋಜನವನ್ನು ಉಂಡ ಅತಿಥಿಗಳು ಲೋಟಕ್ಕೆ ಬಗ್ಗಿಸಿಕೊಟ್ಟ ಎಳನೀರನ್ನು ಕುಡಿದು ತೇಗುತ್ತಾ ಕೈ ತೊಳೆದು ಒಳಗೆ ಬಂದು ಒರಗು ಕುರ್ಚಿಯಲ್ಲಿ ಅರೆಗಣ್ಣು ಮಾಡಿ ವಿಶ್ರಮಿಸಿದರು.

ಮೂರೂವರೆ ಗಂಟೆಯ ಹೊತ್ತಿಗೆ ಎದ್ದ ಗೋನ್ ಸಾಹೇಬರು ಬಂಟ್ರ-ನೆಕ್ಕಿಲಾಡಿ, ನೂಜಿಬಾಳ್ತಿಲ, ಸುಂಕದಕಟ್ಟೆ, ಕೊಂಬಾರು ಗ್ರಾಮಗಳ ಪಟೇಲರನ್ನು ಬಳಿಗೆ ಕರೆದರು; ತಾವು ಸುಂಕದಕಟ್ಟೆ ಬಂಗ್ಲೆಗೆ ಹೋಗುವುದಾಗಿಯೂ ಮರುದಿನ ಬೆಳಗ್ಗೆ ಒಂಭತ್ತೂವರೆ ಗಂಟೆಗೆ ಊರ ಬೇಟೆಗಾರ, ಸೋವತರೊಂದಿಗೆ ಆದಷ್ಟು ಜನರನ್ನು ಕೂಡಿಸಿಕೊಂಡು ಬರುವುದಲ್ಲದೆ, ಸುಂಕದಕಟ್ಟೆಯ

ಆಸುಪಾಸಿನಲ್ಲಿ ಗದ್ದೆಯ ಪೈರನ್ನು ನಾಶಮಾಡಿ, ಯಾವ ಕಾಡಿನಲ್ಲಿ ಮೃಗಗಳು ಅವಿತಿವೆಯೆಂಬುದನ್ನು ನುರಿತ ಸೋವುಗಾರರ ಅರಸುವಿಕೆಯಿಂದ ತಿಳಿದು ಗ್ರಾಮ ಪಟೇಲರು ತಿಳಿಸಬೇಕೆಂದೂ ತಾಕೀತು ಮಾಡಿದರು. ಬಿಟ್ಟ ಕಣ್ಣುಗಳನ್ನು ಮುಚ್ಚದೆ ಅವರೆಡೆಗೆ ನೋಡುತ್ತಿದ್ದ ನನ್ನನ್ನು ಕಂಡು-''*Boy, we shall meet tomorrow* '' ಎಂದು ಮತ್ತೊಮ್ಮೆ ನನ್ನ ಬೆನ್ನು ತಟ್ಟಿ ಗ್ರಾಮಸ್ಥರ ನಮಸ್ಕಾರಗಳನ್ನು ವಿನಯದಿಂದ ಸ್ವೀಕರಿಸಿದರು. ಬಳಿಕ, ಅದಾಗಲೇ ಸಿದ್ಧವಾಗಿದ್ದ ಸಾರೋಟು ಸವಾರಿ.ಬಂಡಿಯನ್ನು ಏರುತ್ತಿದ್ದಂತೆ ಮಧ್ಯಾಹ್ನ ಉಂಡಿದ್ದ ಊಟವನ್ನು ಹೊಗಳಿದರು. ಮುಂದೆ ನೊಗ ಹೇರಿ ಸಿದ್ಧವಾಗಿ ನಿಂತಿದ್ದ ನಮ್ಮ ಸವಾರಿ ಗಾಡಿಯ ಎದುರು ಮೂಕಿಯತ್ತಣಿಂದ ಗಾಡಿಯಾಳು ಅಬ್ಬೋಕರೆಯು ಎತ್ತುಗಳ ಬೆನ್ನಿಗೊಮ್ಮೆ ಬಾರುಕೋಲಿನಿಂದ ಚಟೀಲೆಂದು ಬಾರಿಸಿ ಮುನ್ನುಗ್ಗಿ ಗಾಡಿಯೇರಿದಾಗ ಎತ್ತುಗಳು ಗುತ್ತು ತೆಗೆದು ನಾಗಾಲೋಟದಿಂದ ಓಡಲು ಪ್ರಾರಂಭಿಸಿದವು. ಹಿಂದಿನ ಗಾಡಿಗಳೂ ಅದೇ ರೀತಿಯಿಂದ ಮುಂದೊತ್ತಿ ಮರ್ದಾಳ ಜೈನ ಬಸದಿಯ ತಿರುವಿನಲ್ಲಿ ಮರೆಯಾದವು. ನಾನು ಹಿರಿಯರೊಂದಿಗೆ ಮನೆ ಮುಟ್ಟುವಾಗ ಗಂಟೆ ಎಂಟು. ವಿವಿಧ ಪಕ್ವಾನ್ನಗಳನ್ನು ಹೊಟ್ಟೆತುಂಬ ಉಂಡು, ತಾಯಿ ಕೊಟ್ಟ ಹಾಲನ್ನು ಕುಡಿದು, ಹೊಟ್ಟೆಯ ಭಾರವನ್ನು ತಾಳಲಾರದೆ ಕೂರುವ ಕಣ್ಣನ್ನು ಪ್ರಯಾಸದಿಂದ ಒತ್ತಿ, ಹಾಕಿದ್ದ ಸ್ಕೌಟ್ ಡ್ರೆಸ್ಸನ್ನು ಕಳಚಿ ಚಾಪೆಗೆ ಮೈ ಕೊಟ್ಟುದು ಮಾತ್ರ ನೆನಪು. ಮರುದಿನ ಮುಂಜಾನೆ ನಮ್ಮ ಮನೆಯ ಅಂಗಳ, ಕೊಟ್ಟಿಗೆಯಲ್ಲಿ ಬೇಟೆಗಾಗಿ ಬಂದು ಸೇರಿದ ಜನರ ಬೊಬ್ಬಾಟವನ್ನು ಕೇಳಿಯೇ ಎಚ್ಚರಗೊಂಡೆ.

ಲಗುಬಗೆಯಿಂದ ಎದ್ದು ಮುಖಕ್ಕೆ ನೀರು ಕಾಣಿಸಿ, ತಾಯಿಯವರು ಬಡಿಸಿದ ತಂಗಳನ್ನವನ್ನು ಮೊಸರಿನೊಂದಿಗೇ ಕಲಸಿ, ಉಪ್ಪಿನಕಾಯಿ, ಒಲೆಯಲ್ಲಿ ಸುಟ್ಟ ಒಣಕಲು ಮೀನಿನೊಂದಿಗೆ ಗಬಗಬನೆ ತಿಂದೆ. ಬೇಟೆಗೆ ನನ್ನನ್ನು ಕರೆಯುವರೋ ಇಲ್ಲವೋ ಎಂಬ ಶಂಕೆಯಿಂದ ನನ್ನ ದಿರಸಿಗೆ ಕೈ ಹಾಕಲು ಹವಣಿಸುತ್ತಿದ್ದೆ. ಆಗ ತಂದೆಯವರು ಗರ್ಜಿಸಿದರು. ''ಎಲ್ಲಿಗೆ''? ಆ ಗಲಾಟೆಯಲ್ಲಿ ನಿನಗೇನು ಕೆಲಸ?'' ಈ ನುಡಿಯನ್ನು ಕೇಳಿದ್ದೇ ನನ್ನ ಉಲ್ಲಾಸಕ್ಕೆ ತಣ್ಣೀರೆರಚಿದಂತಾಯಿತು. ಹತ್ತಿರವಿದ್ದ ಅಜ್ಜಯ್ಯನವರನ್ನು ಕಂಡು ಗೋಣಗಿದೆ. 'ನಿನ್ನೆ ಕಲೆಕ್ಟರರು ನನ್ನನ್ನೂ ಬರುವಂತೆ ಹೇಳಿರುವರು' ಎಂದು! ಅಜ್ಜಯ್ಯನವರೂ ''ಹೌದೂ'' ಎಂದಾಗ ತಂದೆಯವರು ಒಲ್ಲದ ಮನಸ್ಸಿನಿಂದ ಸಮ್ಮತಿಸಲೇ ಬೇಕಾಯಿತು. ತಂದೆಯವರಿಗೆ ಹಗಲು ಬೇಟೆಯೆಂದರೆ ಅಷ್ಟಕ್ಕಷ್ಟೆ. ಹಗಲು ಬೇಟೆಯಲ್ಲಿ ಅವರೇನೂ ನುರಿತ ಶಿಕಾರಿಯಲ್ಲ. ಕೋಳಿ ಅಂಕ, ರಾತ್ರಿಯ ಲೈಟ್ ಶಿಕಾರಿಯಲ್ಲಿ ಅವರದು ಎತ್ತಿದ ಕೈ. ಆದರೆ ಲೈಟ್ ಶಿಕಾರಿಯನ್ನು ಅಜ್ಜಯನವರು ಮೆಚ್ಚುತ್ತಿರಲಿಲ್ಲ. ಇದು ಮೃಗಗಳ ಕಣ್ಣು ಕಟ್ಟಿ

ಮೋಸದಿಂದ ಕೊಂದು ನಾಲಿಗೆಯ ಚಾಪಲ್ಯವನ್ನು ತೀರಿಸುವ ಪೌರುಷಹೀನ ವಿಹಾರ. ಹಗಲು ಬೇಟೆಯಾದರೆ ಮೃಗಗಳು ಪ್ರತಿಭಟಿಸಬಹುದು; ಇಲ್ಲವೇ ಸೋವು ತಿಳಿದು ಓಡಬಹುದು. ಇಲ್ಲಿ ಬೇಟೆಗಾರನ ತನ್ನ ಜಾಣ್ಮೆ, ತಂತ್ರಗಳನ್ನು ಪ್ರದರ್ಶಿಸಲು ಯೋಗ್ಯಾವಕಾಶವಿದೆ. ಕೋವಿ ಹಿಡಿಯುವ ತಾಕತ್ತಿದ್ದರೆ ಲೈಟು ಶಿಕಾರಿಯನ್ನು ಹೆಂಗಸರೂ ಮಾಡಬಹುದೆಂದು ಅಜ್ಜಯ್ಯ ಲೇವಡಿ ಮಾಡುತ್ತಿದ್ದರು. ಕಲೆಕ್ಟರರು ಶಿಕಾರಿಗೆ ಬಂದದ್ದಲ್ಲವಾದರೆ ತಂದೆಯವರು ಎಲ್ಲಿಯಾದರೂ ಕೋಳಿ ಅಂಕಕ್ಕೆ ಹೋಗುತ್ತಿದ್ದರು. ನನಗೆ ಅವರೊಂದಿಗೆ ಹೊರಡಲು ಅನುಮತಿ ದೊರಕಿಸಿಕೊಟ್ಟ ಅಜ್ಜಯ್ಯನವರಿಗೆ ಮನದಲ್ಲೆ ವಂದನೆಗಳನ್ನರ್ಪಿಸಿ, ಹಿಂದಿನ ದಿನದ ದಿರಸನ್ನೆ ಧರಿಸಿ ಹೊರಗೆ ಬಂದು ನೋಡುವಾಗ ಅಂಗಳ, ಕೊಟ್ಟಿಗೆಯಲ್ಲಿ ನೆರೆದಿದ್ದ ಬೇಟೆಯಾಳುಗಳು ತಮ್ಮ ತುಂಬಿಸುವ ಕೋವಿಗಳನ್ನು ಅಣಿಗೊಳಿಸುತ್ತಿದ್ದರು. ಕೆಲವರು ತೆಂಗಿನ ನಾರನ್ನು ಉಂಡೆಗೊಳಿಸುತ್ತಿದ್ದರೆ, ಕೆಲವರು ಡಬ್ಬಿಯಿಂದ ರಂಜಕವನ್ನು ಮುಚ್ಚಳಕ್ಕೆ ಸುರಿದು ತಮ್ಮ ಕೋವಿಗೆ ಬೇಕಾದ ಅಳತೆಯ ಮೂರು ನಾಲ್ಕು ಮುಚ್ಚಳ ರಂಜಕವನ್ನು ನಳಿಗೆಗಿಕ್ಕಿ ಅದನ್ನು ಎತ್ತಿಹಿಡಿದು ಪಾತಿಗೆ ತಟ್ಟಿ, ತಟ್ಟಿ ನಿಪ್ಪಲಿನ ಬಾಯಿಗೆ ಅಡಕವಾಗಿ ಬಂದು ಕೂತಿದೆಯೇ ಎಂದು ನೋಡುತ್ತಿದ್ದರು. ಬಳಿಕ ಅದಕ್ಕೆ ಕರಿಮದ್ದನ್ನು ತುಂಬಿಸಿ ತಮ್ಮ ಕೋವಿಯು ಇಂತಿಷ್ಟೇ ಬೆರಳು ಮದ್ದಿನಿಂದ ತುಂಬಬೇಕೆಂಬ ನಿರ್ಧಾರವಿದ್ದುದರಿಂದ, ತೆಂಗಿನ ಹುರಿಯನ್ನು ಮದ್ದು ಸೋರಿಹೋಗದಂತೆ ಈಡು ಬಲವಾಗಿ ಸುಡುವಂತೆ ಗಜಕೋಲಿನಿಂದ ಒತ್ತಿ, ಒತ್ತಿ ಜಡಿದು ಬಿಟ್ಟಾಗ ಅದು ಮೇಲೇಳುವ ಎತ್ತರದಿಂದ ಜಡಿತವು ಸಾಕೋ ಇನ್ನಷ್ಟು ಬೇಕೋ ಎಂದು ನಿಶ್ಚಯಿಸಿ ಸಿದ್ಧಪಡಿಸಿಕೊಂಡರು. ನಳಿಗೆಯ ಕೋವಿ ತುಂಬಿಸುವವರು ಬಲದ ನಳಿಗೆಗೆ ಒಂಟಿಗುಂಡಿನ ಶಲಾಕೆಯನ್ನೂ (ನೀಳವಾದ ಸೀಸದ ತುಂಡು), ಎಡ ನಳಿಗೆಗೆ ಕಿರು ಗಜ್ಜುಗದ ಗಾತ್ರದ ಎರಡು, ಮೂರು ಗುಂಡುಗಳನ್ನೂ ತುಂಬಿಸಿ ತಮ್ಮ ಈಡು ಎಷ್ಟು ಬೆರಳು ಗಾತ್ರವೆಂದು ಗಜಕೋಲನ್ನು ಹಾಕಿ ಅಳೆದುನೋಡಿ ಸಮಾಧಾನದ ಮುಖಭಾವವನ್ನು ಪ್ರದರ್ಶಿಸುತ್ತಿದ್ದರು. ಅಜ್ಜಯ್ಯನರು ಧೈರ್ಯ ನೀಡಿದ್ದರಿಂದ ಪರವಾನಿಗೆ ಇಲ್ಲದ ಕೋವಿಗಳೂ ಸೇರಿ ಹತ್ತಾರು ಕೋವಿಗಳು, ಈಡು ತುಂಬಿಕೊಂಡು ಕೊಟ್ಟಿಗೆಯ ಗೋಡೆಗೆ ಒರಗಿಸಿಟ್ಟದ್ದು ಗೋಚರವಾದುವು. ಬೆಳ್ತಮೇರನು ಹೊಗೆ ಹಿಡಿದು ಕಪ್ಪಾದ, ತನ್ನ ಬಿದಿರ ಬಿಲ್ಲನ್ನು ಗೋಡೆಗೆ ಒರಗಿಸಿ ಇಟ್ಟಿದ್ದಾನೆ. ಆ ಬಿಲ್ಲು ಹಿಡಿದು, ಹಿಡಿದು ನಯವಾಗಿ ಎಣ್ಣೆಯೊಸರುವಂತೆ ಕಾಣುತ್ತಿತ್ತು. ಅವನು ಮರದ ಒಚ್ಚೆಯಲ್ಲಿ ಕುಳಿತು ತನ್ನ ಬಿಲ್ಲಿನ ಇಬ್ಬಾಯಿಯ ಗಿಡುಗನ ಗರಿಯನ್ನು ಕೊನೆಗೆ ಸಿಕ್ಕಿಸಿದ- ಪಗರಿಗಳನ್ನು ಮಸೆಯುತ್ತಿದ್ದಾನೆ. ಬಳಿಯಲ್ಲೆ ಅವನ ಸೊಂಟದ ತೊಡಂಕಿಗೆ ತೂಗಾಡಿಸಲಿರುವ

ಮೊಳದುದ್ದ ಅಲಗಿನ ಮಸೆದಿಟ್ಟ ನಾರೆಕತ್ತಿಯು ಲಕಲಕಿಸುತ್ತಿದೆ. ಬೆಳ್ತನು ತನ್ನ ಹತ್ತಾರು ಪಗರಿಗಳನ್ನು ಉತ್ಸಾಹದಿಂದ ಮಸೆಯುತ್ತಲೇ ಇದ್ದಾನೆ. ಕೆಲವರು ತಮ್ಮ ಕವಣೆಗಳಿಗೆ ಆಸುಪಾಸಿನಿಂದ, ಉರುಟಾದ ಕಲ್ಲುಗಳನ್ನು ಆಯುವುದರಲ್ಲಿದ್ದಾರೆ. ಕುಂಞಮೋನು ಬ್ಯಾರಿಯು ತನ್ನ ಎರಡಾಳು ಉದ್ದದ ಬರ್ಚಿಗೆ ಆಣಿ ಜಡಿದು ಭದ್ರಗೊಳಿಸಿದ ಇಬ್ಬಾಯಿಯ ಕತ್ತಿಗೆ ಅರ ಹಾಕುವ ತವಕದಲ್ಲಿದ್ದಾನೆ. ನನ್ನನ್ನು ಮಾತಾಡಿಸುವವರೇ ಇಲ್ಲ! ನಾನು, ''ಅಜ್ಜಾ, ನಾನಿಂದು ನಿಮ್ಮ ಕೋವಿಯ ಚೀಲವನ್ನು ಹಿಡಿದುಕೊಂಡು ನಿಮ್ಮೊಂದಿಗೆ ನಿಲ್ಲುತ್ತೇನೆ'' ಎಂದೆ. ಅವರೆಂದರು-''ಕಾಲ್ತೊಡಕು! ಮೃಗವನ್ನು ಬೆನ್ನಟ್ಟಿ ಹೊಡೆಯಬೇಕಾದರೆ ಪ್ರಸಂಗ ಬಂದರೆ ತೊಂದರೆ, ನೀನು ಬೇಕಾದರೆ ದೊರೆಗಳನ್ನು ಕಾಣಲು ಸುಂಕದಕಟ್ಟೆಗೆ ಬಾ. ಬಂಗ್ಲೆಯಲ್ಲೇ ನಿಲ್ಲು.'' ನಾನು, ''ಉಹುಂ, ನಿಮ್ಮೊಂದಿಗೆ ಬರುತ್ತೇನೆ. ನಿಮಗೆ ಮೃಗದೊಂದಿಗೆ ಹೋಗುವ ಪ್ರಸಂಗ ಬಂದರೆ ನೀವು ಪುನಃ ಬರುವ ತನಕ ನಾನು ನಿಂತಲ್ಲಿಯೇ ನಿಲ್ಲುತ್ತೇನೆ. ನನಗೇನೂ ಹೆದರಿಕೆಯಿಲ್ಲ'' ಎಂದು ಒತ್ತಿ ಹೇಳಿದಾಗ ಅವರು ಸಮ್ಮತಿಸಲೇ ಬೇಕಾಯಿತು. ಎಂಟು ಗಂಟೆಯ ಹೊತ್ತಾಗುವಾಗ ಹೊಲೆಯರು ಹಿಂಬಾಗಿಲಿನ ಬಳಿಗೆ ಬಂದು ತಾಯಿಯವರು ಇಕ್ಕಿದ ತಂಗಳು, ತೆಳಿಗೆ ಉಪ್ಪು-ಮೆಣಸು ನುರಿದು ಕುಡಿದು ತೇಗಿ ತೃಪ್ತಿಯಿಂದ ಮೀಸೆ ತೀಡತೊಡಗಿದರು. ಅಂಥ ನೋಟದ ಸೊಗಸು ಇಂದು ಕಾಣಸಿಗದು. ಗೌಡ, ಬಿಲ್ಲವ, ನಾಯ್ಕರು ಜೋನಿಬೆಲ್ಲ-ನೀರನ್ನು ಕುಡಿದು ಹೊರಡುವ ಸಿದ್ಧತೆಗೆ ತೊಡಗಿದರು. ಅಜ್ಜಯ್ಯನವರು-ಸೋವತರೂ, ಕಳ್ಳಕೋವಿಯವರೂ ಸುಂಕದಕಟ್ಟೆಗೆ ಒಳದಾರಿಯಿಂದ ಹೋಗಬೇಕೆಂದರು. ಕೋವಿಯವರು ಪಳ್ಳಿಕಂಡದ ತೆಂಕು ಬದಿಯ ಗಂಡಿಗಳಲ್ಲಿ ನಿಲ್ಲಬೇಕೆಂದೂ, ಸೋವತರೂ, ಬಿರು,-ಪಗರಿಯವರೂ ಬಂಗಲೆಗೆ ಬಂದು ದೊರೆಗಳನ್ನು ಕಾಮಬಹುದೆಂದೂ ತಾಕೀತು ಮಾಡಿ ಹೊರಟರು. ಸುಮಾರು ಮೂವತ್ತು-ಮೂವತ್ತೈದು ಜನರ ತಂಡವು ಪಿಲಿಮಜಲಿನ ಮಜಲು ಹತ್ತುವಾಗ ಗಾಡಿ ಎತ್ತುಗಳನ್ನು ನೊಗಕ್ಕೆ ಹೂಡಿ ಅಬ್ಬೋಕರೆ ಬ್ಯಾರಿಯು ಗಾಡಿ ಹೊಡೆಯಲು ಸಿದ್ಧನಾಗಿದ್ದಾನೆ. ತಲೆಗೆ ಮಾಪಿಳ್ಳೆ ಟೊಪ್ಪಿಯ ಮೇಲೆ ಮುಂಡಾಸು ಸುತ್ತಿ ತನ್ನ ಮುಂಗಾಲಿನ ತನಕದ ಲುಂಗಿಯನ್ನು ಕಚ್ಚೆಯಂತೆ ಎತ್ತಿಕಟ್ಟಿ ನಮ್ಮ ಬರವನ್ನೇ ಕಾಯುತ್ತಿದ್ದಾನೆ. ಗಾಡಿಯ ಹಿಂದಿನ ತೆರಪ್ಪಿನಿಂದ ನನ್ನನ್ನು ಎತ್ತಿ ಗಾಡಿಯಲ್ಲಿ ಕುಳ್ಳಿರಿಸಿದರು. ನನ್ನ ತಂದೆ ದಾಸ ರೈಗಳೂ, ಚಿಕ್ಕತಂದೆ ಜತ್ತಪ್ಪ ರೈಗಳೂ, ಕಿರಿಯ ಅಜ್ಜ ಸುಬ್ಬಪ್ಪ ರೈಗಳೂ ಅಜ್ಜಯ್ಯನಿಗೂ ನನಗೂ ಎದುರು ಕೂರಲು ಎಡೆಮಾಡಿಕೊಟ್ಟು ತಾವು ಹಿಂದೆ ಗಾಡಿಯೇರಿ ತಮ್ಮ, ತಮ್ಮ ಕೋವಿಗಳನ್ನು-ಮೋಹದ ಮಗಳನ್ನು ಮಡಿಲಲ್ಲಿ ಕೂತುಕೊಳ್ಳಿಸುವಂತೆ-ಇರಿಸಿ

ಕುಳಿತುಕೊಂಡರು. ತುಂಬಿದ ಕೋವಿಗಳು ಗಾಡಿಯಲ್ಲಿದ್ದುದರಿಂದ ಎತ್ತುಗಳು ನಾಗಾಲೋಟದಲ್ಲಿ ಸಾಗದಂತೆ ನಿಯಂತ್ರಿಸಲು ತುಂಬ ಪಾಡುಪಡಬೇಕಾಯಿತು. ಬೀಡಿನ ಮೇಲ್ಗಡೆ ಮಿತ್ತೋಡಿಗೆ ಬರುವಾಗ ಕಾಮಸಿಕ್ಕಿದ ಗಿಡ್ಡ ಶರೀರದ ಅರೆನೆರೆತ ಕೂದಲಿನ, ಗಿರಿಜಾ ಮೀಸೆಯ ದೊಳ್ಳಜ್ಜನು ತನ್ನ ಆಳುಗಾತ್ರದ ಮದ್ದಿನ ಕೋವಿಯನ್ನು ಹಿಡಿದು, ಅರೆತೋಳಿನ ಕೋಟನ್ನು ಹಾಕಿ ಬಿಲ್ಲವರ ದಟ್ಟಿಯುಟ್ಟು ನಿಂತ ವೀರಠೀವಿಯು ನೋಡುವಂತಹದು. ಇವನು ಆ ಸಮಯದಲ್ಲಿ ಬಿಲ್ಲವರ ಸಮಾಜದ ಗುರಿಕಾರ; ಊರ ಬೋಂಟ್ರ; ತಕ್ಕಮಟ್ಟಿನ ಸ್ಥಿತಿವಂತ. ಇವನ ಕೈ ಕೆಳಗೆ ತೆಂಕಲಾಗಿನ ಮೂರು-ನಾಲ್ಕು ಜನ ಹೊಂತಕಾರಿ ಮೂರ್ತೆಯ ಆಳುಗಳು ದುಡಿಯುತ್ತಿದ್ದರು. ಈತ, ಅಜ್ಜಯ್ಯನವರಿಗೆ ಸರಿಮಿಗಿಲೆನಿಸುವ ಬೇಟೆಗಾರ. ಇವನು- ಹೊಗೆಸೊಪ್ಪನ್ನು ಸುರುಟಿ ಬಾಡಿಸಿದ ಬಾಳೆಯೆಲೆಯಲ್ಲಿ ಸುತ್ತಿ-ಸೇದುವ ಚುರುಟದಿಂದ 'ಫುಸ್ ಫುಸ್' ಎಂದು ಹೊರಬೀಳುತ್ತಿದ್ದ ಹೊಗೆಯು ತಿದಿಯಿಂದ ಹೊರಬೀಳುವ ಹೊಗೆಯನ್ನು ಜ್ಞಾಪಕಕ್ಕೆ ತರುತ್ತಿತ್ತು. ನಾವು ಹತ್ತಿರವಾಗುವಾಗ ತನ್ನ ಚುರುಟನ್ನು ಬಳಿಯಿದ್ದ ಮರದ ಬೊಡ್ಡೆಗೆ ಒರೆಸಿ ನಂದಿಸಿ ಉಳಿದ ತುಂಡನ್ನು ತನ್ನ ಕೋಟಿನ ಕಿಸೆಗೆ ಇಳಿಬಿಟ್ಟ. ಗಾಡಿಯ ತೆರಪಿನಿಂದ ಚಿಕ್ಕಪ್ಪನ ಕೈಗೆ ತನ್ನ ಕೋವಿಯನ್ನು ಕೊಟ್ಟು, ಮದ್ದಿನ ಚೀಲವನ್ನು ತಾನೇ ಹಿಡಿದುಕೊಂಡು, ಭರದಿಂದ ಸಾಗುತ್ತಿದ್ದ ಗಾಡಿಯನ್ನೇರಿ ಕುಳಿತ. ಹಿಂದಿನ ದಿನವೇ ದೊರೆಗಳು ಬಂದಿರುವುದನ್ನೂ ಊಟೋಪಚಾರದ ವಿಚಾರಗಳನ್ನೂ ಮಾತಾಡುತ್ತಿದ್ದಾಗ ಗಾಡಿಯು ಮರ್ದಾಳವನ್ನು ತಲುಪಿತು. ಉಪ್ಪಿನಂಗಡಿಯ ಮಾರ್ಗ ಕೂಡುವಲ್ಲಿ ಬರುವಾಗ ಫರ್ಲಾಂಗು ದೂರದಿಂದ ಬರುವ ಅತ್ಲಾಜೆ ಅಣ್ಣು ಶೆಟ್ಟರ ಗಾಡಿಯ ಗಡಗಡ ಕೇಳಿಸಿತು. ಹೋರಿಗಳ ಗೆಜ್ಜೆಯ ಸದ್ದನ್ನು ಆಲಿಸಿದಂತೆ ಗಾಡಿಯು ಹತ್ತಿರ ಬರುತ್ತಿರುವುದನ್ನು ಅರಿತ ಗಾಡಿಯಾಳು ನಮ್ಮ ಗಾಡಿಗೆ ಬಿರಿಯಿಕ್ಕಿ, ಮೂಗುದಾರದ ಹಗ್ಗವನ್ನು ಹಿಡಿದೆಳೆದು- ಬುಸುಗುಟ್ಟಿ ಮುನ್ನುಗ್ಗಲು ಹಾತೊರೆಯುತ್ತಿದ್ದ ಎತ್ತುಗಳನ್ನು ಒತ್ತಿ ನಿಲ್ಲಿಸಿ ಹಿಂತಿರುಗಿ ನೋಡಿದ. ಹಿಂದಿನ ಗಾಡಿಯಲ್ಲಿದ್ದ ನಡುಮಜಲು-ನೆಕ್ಕಿಲಾಡಿಯ ಬೇಟೆಗಾರರೂ, ಕೆಲವು ಸೋವತರೂ ನಮಗೆ ಮುಂದುವರಿಯಲು ಕೈ ಸನ್ನೆ ಮಾಡಿದರು. ಮೆಟ್ಟಿದ ಬಿರಿಯಿಂದ ಕಾಲ್ದೆಗೆದು, ಮೂಗುದಾರವನ್ನು ಸಡಿಲಿಸಿದಾಗ ಹಿಂದಿನ ಗಾಡಿಯ ಶಬ್ದದಿಂದ ಹುರುಪುಗೊಂಡ ಎತ್ತುಗಳು ತೀವ್ರಗತಿಯಿಂದ ಮುಂದೊತ್ತಿದವು. ಹಿಂದಿನ ಗಾಡಿಗಳೂ ಸಂಧಿ ಸಿಕ್ಕಿದರೆ ಮುಂದೆ ಹೋಗುವ ತವಕದಲ್ಲಿ ಹಿಂಬಾಲಿಸುತ್ತಿದ್ದವು. ಹಿರಿಯರು ಬೇಟೆಯ ವಿಚಾರವಾಗಿ ಏನೇನೊ ಮಾತುಗಳಲ್ಲಿ ತಲ್ಲೀನರಾಗಿದ್ದರು. ನಾನು ಹಿಂದಿನಿಂದ ಪೈಪೋಟಿಗೊಂಡು ಬರಲು ಹವಣಿಸುವ ಅಣ್ಣು ಶೆಟ್ಟರ ಅಮೃತ ಮಹಲಿನ

ಹೋರಿಗಳ ನಡೆಯುವಿಕೆಗೂ, ಚೆಲುವಿಗೂ ಮಾರು ಹೋಗಿ, ನಮ್ಮ ಎತ್ತುಗಳನ್ನೂ ಹಿಂದಿನವುಗಳನ್ನೂ ಕುತೂಹಲದಿಂದ ನೋಡುತ್ತಿದ್ದೆ. ಸುಂಕದ ಕಟ್ಟೆಯ ರಾಜಮಾರ್ಗವನ್ನು ಬಿಟ್ಟು ಗಾಡಿಯು ಬಂಗಲೆಯತ್ತ ಸಾಗುವ ಒಳರೋಟಿಗೆ ತಿರುಗುವಾಗಲೇ ನನಗೆ ಆ ಸ್ಥಿತಿಯಿಂದ ಎಚ್ಚರವಾದುದು.

ದೊರೆಗಳೂ, ಅವರ ಜತೆಯಲ್ಲಿದ್ದ ಅತಿಥಿಗಳೂ ತಮ್ಮ ರೈಫಲ್, ಕೋವಿಗಳನ್ನು ತಿಕ್ಕಿ ಬಾಗಿಲು, ಕಿಟಕಿಗಳಿಗೆ ಒರಗಿಸಿ ಒಪ್ಪವಾಗಿರಿಸಿದ್ದರು. ಒರಗು ಕುರ್ಚಿಯಲ್ಲಿ ಆಸೀನರಾಗಿದ್ದ ಅವರೆಲ್ಲರಿಗೆ ಗಾಡಿಯಿಂದ ಇಳಿಯುತ್ತಲೇ ನಮ್ಮ ಹಿರಿಯರು ವಂದನೆಗಳನ್ನರ್ಪಿಸಿದರು. ನಾನೂ, ಹಿಂದಿನ ದಿನದಂತೆ, ಸೆಲ್ಯೂಟ್ ಮಾಡಿದುದನ್ನು ಕಂಡ ದೊರೆಗಳು ನನಗೆ ಮರುವಂದಿಸಿ ಮುಗುಳ್ನಕ್ಕು ಬಳಿಯಲ್ಲಿದ್ದ ಕಾಲ್ಮಣೆಯಲ್ಲಿ ನನ್ನನ್ನು ಕುಳಿತುಕೊಳ್ಳುವಂತೆ ಆದೇಶಿಸಿದರು. ಆಮೇಲೆ ಅಜ್ಜನವರನ್ನು ಅವರು ಹಿಡಿದಿದ್ದ ಕೋವಿಯನ್ನು ಇಸಕೊಂಡು, ಅದರ ಹದಿನಾರು ಬೆಳ್ಳಿಯ ಕಟ್ಟನ್ನು ಕಂಡು, ಲಕಲಕಿಸುವ ಹಿತ್ತಾಳೆಯ ಗಜಕೋಲನ್ನು ಮೆಚ್ಚಿ, ''ಪಟೇಲರೇ, ನೀವು ಈ (ಜಡಿಯ ತುಂಬಿಸುವಂತೆ ಕೈಸನ್ನೆ ಮಾಡುತ್ತ) ಹೀಗೆ- ಹೀಗೆ, ಮಾಡಿ ಹೊಡೆಯುವ ಈಡಿನಿಂದ ಮೃಗಗಳು ಸಾಯುವವೆ? ಹೇಗೆ ಹೊಡೆಯುತ್ತೀರಿ''? ಎಂದು ವ್ಯಂಗ್ಯದೊಡನೆ ಕನ್ನಡ ಇಂಗ್ಲಿಷ್ ಮಿಶ್ರ ಭಾಷೆಯಲ್ಲಿ ಅಣಕಿಸುವಂತೆ ಪ್ರಶ್ನಿಸಿದರು. ಅಜ್ಜಯ್ಯನವರು 'ಹೊಡೆಯುವುದು ಹೇಗೆಂಬುದನ್ನು' ಕೃತಿಯಲ್ಲಿ ತೋರಿಸುವೆನೆಂಬ ದೃಢ ಮುಖಮುದ್ರೆಯ ಮುಗುಳ್ನಗುವಿನ ಮೌನ ಉತ್ತರವನ್ನಷ್ಟೇ ನೀಡಿದರು. ಕಲೆಕ್ಟರರು ತಮ್ಮಲ್ಲೆ ''ಕಷ್ಟ, ಕಷ್ಟ'' ಎಂದು ಗೊಣಗಿಕೊಂಡರು.

ಸುತ್ತಲಿನ ಮೂರು - ನಾಲ್ಕು ಗ್ರಾಮಗಳಿಂದ ಬಂದು ನೆರೆದಿದ್ದ ಬೇಟೆಗಾರರು, ಸೋವತರ, ನಾಯಿಗಳ, ಬೊಬ್ಬೆ, ಕಣ್ಣಿ ಹರಿದುಕೊಂಡ ನಾಯಿಗಳ ಗುರುಗುಟ್ಟುವಿಕೆ, ಬೊಗಳಾಟ, ಕಚ್ಚಾಟ; ಇವುಗಳನ್ನು ಬಿಡಿಸಲು ನಾಯಿಗಳ ಒಡೆಯರು ಮಾಡುವ ಗದ್ದಲ- ಎಲ್ಲ ಒಟ್ಟಾಗಿ ಜೀರುಂಡೆ, ಕಾಡುಹಕ್ಕಿಗಳ ಸದ್ದಿಗೆ ಮೀಸಲಾಗಿದ್ದ ತಾಮದಲ್ಲಿ ಅದು ಆ ಮುನ್ನವೇ ಮರೆಯಾಗಿ ಈ ಹೊಸ ಗದ್ದಲವೇ ತುಂಬಿತ್ತು. ನಮಗಿಂತ ಮುಂದಾಗಿ ಒಳದಾರಿಯಲ್ಲಿ ಬಂದಿದ್ದ ಮೇರ ಬೆಳ್ತನು ಬಂಗಲೆಯ ಎದುರಿದ್ದ ಮರದ ಬುಡಕ್ಕೆ ತನ್ನ ಬಿಲ್ಲನ್ನು ಒರಗಿಸಿಟ್ಟಿದ್ದ. ಅವನು ತನ್ನ ಮೇರ್ತಿ ಚೋಮುವು ಸಂಚಿಯಿಂದ ತೆಗೆದುಕೊಡುತ್ತಿದ್ದ ಎಲೆಗೆ ಸುಣ್ಣವನ್ನು ತೀಡಿ, ಮೊದಲೇ ಬಾಯಿಗೆ ಹಾಕಿದ್ದ ಅಡಿಕೆಯ ಹೋಳಿನೊಂದಿಗೆ ಜಗಿಯುತ್ತಿದ್ದ. ಆ ಮೇಲೆ ಅವನು ಹೊಗೆಸೊಪ್ಪನ್ನು ತಿರುವಿ ಅಂಗೈಗೆ ಹಾಕಿ ತಿಕ್ಕಿ ಉಂಡೆಯನ್ನು ಬಾಯಿಗಿಕ್ಕಿ ಎರಡು ಸಲ ದವಡೆಯನ್ನು ಅಲುಗಾಡಿಸಿದ. ಬಾಯಲ್ಲಿ ತುಂಬಿದ ಜೊಲ್ಲು ಮಿಶ್ರಿತ ತಂಬಾಕಿನ ಎಂಜಲನ್ನು ಎಡಗೈಯ ಬೆರಳೆರಡನ್ನು ತುಟಿಗಳಿಗೆ ಒತ್ತಿ

ಉಗಿಯುವಾಗ ಅದು ಜೇಕೋರ್ಗವಿಯಿಂದ ಹೊರಡುವ ಓಕುಳಿ ನೀರಿನಂತೆ ಕಾಣುತ್ತಿತ್ತು. ಚೋಮು ಗೇಂಟಿ ಕಟ್ಟಿದ, ಉಬ್ಬಿದ ಎದೆಯ, ಅಚ್ಚುಕಟ್ಟಾದ ಮೈಕಟ್ಟಿನ ಹೆಣ್ಣು. ಆಕೆ ಕೆಂಪು, ಹಳದಿ, ನೀಲ ಮಣಿಗಳಿಂದ ಮಾಡಿದ ಬಿಗಿಯಾದ ಸರಗಳನ್ನು ಕುತ್ತಿಗೆ ಮುಚ್ಚುವಂತೆ ಕಟ್ಟಿಕೊಂಡಿದ್ದಳು. ಬಿಗಿಯಾದ ಹಿತ್ತಾಳೆಯ ಬಳೆಗಳನ್ನು ಮೊಣಕೈ ಕಾಣದಷ್ಟು ತುರುಕಿದ್ದಳು. ಕೆದರಿದ ತಲೆಯ, ಮೊಣಕಾಲು ತನಕ ಮುಂಡು ಉಟ್ಟು ಬಂದ ಚೋಮುವನ್ನು ಕಂಡ ದೊರೆಗಳಿಗೆ ಅಚ್ಚರಿಯೇ ಅಚ್ಚರಿ! ''ಈ ಹೆಂಗಸೂ ಬೇಟೆಗೆ ಬರುವಳೇ ಪಟೇಲರೇ?'' ಎಂದು ಅವರು ಕೇಳಿದಾಗ ಅಜ್ಜಯ್ಯನವರೆಂದರು-''ಹೌದು. ಆ ಜಾತಿಯವರಲ್ಲಿ ಅದೂ ಒಂದು ಸಂಪ್ರದಾಯ. ಗಂಡ ತನ್ನ ಬಿಲ್ಲಿನಿಂದ ಹೊಡೆದು ಉರುಳಿಸಿದ ಮೃಗವು ಪ್ರಾಣಾಂತಿಕ ವೇದನೆಯಿಂದ ಹೊರಳುವಾಗ ನಾಟಿದ ಅಂಬನ್ನು ಕಿತ್ತು ಅದರಿಂದ ಹೊರಬರುವ ಬಿಸಿರಕ್ತವನ್ನು ಮುಟ್ಟಾಳೆಯಲ್ಲಿ ಹಿಡಿದು ಕುಡಿಯುವುದೆಂದರೆ ಆ ಹೆಂಗಳಿಗೆ ರಸದೂಟ. ಇದು ದೇಹದಾರ್ಢ್ಯಕ್ಕೆ, ಆಯುಷ್ಯ ವೃದ್ಧಿಗೆ ಆರೋಗ್ಯ ಭಾಗ್ಯಕ್ಕೆ ದಿವ್ಯೌಷಧ. ಅಲ್ಲದೆ ಇವರು ಇದು ಸಾಹಸ ಪ್ರದರ್ಶನಕ್ಕೆ ಕ್ಷಿಪ್ರ ಬಹುಮಾನವೆಂದು ಭಾವಿಸುತ್ತಾರೆ. ಈಕೆಯಾದರೋ ಹಂದಿ, ಕಾಡುಕೋಣಗಳಿಗೆ ಹೆದರಿ ಹಿಮ್ಮೆಟ್ಟುವ ಹೆಣ್ಣಲ್ಲ. ಬೆಳ್ಳನಷ್ಟೇ ಗಡಸು ಗಾರ್ತಿ.'' ಈ ಮಾತುಗಳನ್ನು ಕೇಳಿ, ಅಂಥ ಸಾಹಸಿಗರನ್ನು ಮೆಚ್ಚಿಕೊಂಡ ದೊರೆಗಳು ಅವರಿಬ್ಬರನ್ನೂ ಬಂಗಲೆಯ ಬಾಗಿಲಿಗೆ ಬರುವಂತೆ ಆಜ್ಞಾಪಿಸಿದರು.

''ಬೆಳ್ಳಾ'' ಎಂದು ಕೂಗಿದ ಕರೆಗೆ ಒಮ್ಮೆ ಅಳುಕು ಮುಖ ಮಾಡಿದ ಬೆಳ್ಳ. ಬಂಗಲೆಯ ಬಾಗಿಲಿಗೆ ಕಾಣುವಂತೆ ತಾನು ವೀಳ್ಯ ಮೆದ್ದು ಉಗುಳಿದುದು ಅಪರಾಧವಾಯಿತೇ ಎಂದು ಭಯಗೊಂಡಿದ್ದ ಬೆಳ್ಳನನ್ನು-ಕೈ ಸನ್ನೆಯಿಂದ ಧೈರ್ಯನೀಡಿದ-ನಮ್ಮಜ್ಜನವರು ಬಿಲ್ಲುಬಾಣಗಳೊಡನೆ ದೊರೆಗಳ ಬಳಿ ಬರುವಂತೆ ಹೇಳಿದರು. ಆರು ಅಡಿ ಎತ್ತರದ, ಎಣ್ಣೆಗಪ್ಪಿನ, ದೃಢಕಾಯದ ಬೆಳ್ಳ ಯಜಮಾನರ ಆಜ್ಞೆಯನ್ನು ಪಾಲಿಸುವಂತೆ ಹತ್ತಿರ ಬರುತ್ತಿದ್ದ; ಆತ ತನ್ನ ತಲೆಯಲ್ಲಿ ಮುಟ್ಟಪ್ಪಾಳೆಯನ್ನಿಟ್ಟು ಅದರ ಮೇಲೆ ನಾಲ್ಕು ಮೊಳದ ವಸ್ತ್ರವನ್ನು ಮುಂಡಾಸಿನಂತೆ ಸುತ್ತಿದ್ದ. ಅದರ ಎಡೆಯಿಂದ ಎದುರು ಭಾಗದಲ್ಲಿ ಸಿಂಗರಿಸಿದ ಮುಟ್ಟಾಪ್ಪಾಳೆಯ ಕೋಂಟು ಇಣುಕುತ್ತಿತ್ತು. ಮೊಣಕಾಲಿನವರೆಗೆ ದಟ್ಟಿಯನ್ನು ಉಟ್ಟಿದ್ದ. ಆತನ ಕೈ, ಕಾಲು, ಎದೆಯ ಮಾಂಸ ಖಂಡಗಳು ಕಡೆಚ್ಚಿಲಿನಲ್ಲಿ ಹಿಡಿದು ರೂಪುಗೊಂಡವೋ ಎಂಬಂತೆ ಉಬ್ಬಿ ಕಾಣುತ್ತಿದ್ದವು. ತನ್ನ ಒಂದು ಕೈಯಲ್ಲಿ ಬಿಲ್ಲನ್ನೂ ಇನ್ನೊಂದರಲ್ಲಿ ಪಗರಿಗಳಿರುವ ಬಿದಿರ ಅಂಡೆಯನ್ನೂ ಹಿಡಿದುಕೊಂಡು ದೊರೆಗಳ ಹತ್ತಿರಕ್ಕೆ ಬರುತ್ತಿದ್ದ ಅವನನ್ನು ಮೆಚ್ಚುಗೆ ಅಭಿಮಾನಗಳಿಂದ ದೊರೆಗಳು ನೋಡುತ್ತಿದ್ದರು.

ಚೋಮು ಬೆಳ್ತನನ್ನೇ ಹಿಂಬಾಲಿಸಿ ಬರುತ್ತಿದ್ದಳು.

ಗೋನ್ ಸಾಹೇಬರು ಅಭಿಮಾನ ತುಂಬಿದ ದಿಟ್ಟಿಯನ್ನು ಆ ದಂಪತಿಗಳಲ್ಲಿ ನೆಟ್ಟು ಬೆಳ್ತನನ್ನು ಹತ್ತಿರ ಕರೆದರು. ಬಿಲ್ಲನ್ನು ಅವನಿಂದ ಇಸಿದುಕೊಂಡು, ಆಮೂಲಾಗ್ರವಾಗಿ ಚಿಕಿತ್ಸಕ ದೃಷ್ಟಿಯಿಂದ ನೋಡಿ ಅದರ ಹಿಡಿತದ ಭಾಗಕ್ಕೆ ಸುತ್ತಿದ ಬೆತ್ತದ ಹೆಣಿಗೆಯನ್ನು ಕಂಡು ಮೆಚ್ಚಿ ಇದೇಕೆಂದು ಕೇಳಿದರು. ಆಗ, ''ಇದು ಹೆದೆ ಏರಿಸುವಾಗ ಬಿಲ್ಲು ಬಾಗಿ ಬಾಸಿ ಎದ್ದು ಮುರಿಯದಂತೆ ಆಧಾರಕ್ಕೆ; ಇದರಲ್ಲಿ ಸಡಿಲವಾಗಿ ಉದ್ದಕ್ಕೆ ಕಟ್ಟಿರುವ ಬೆತ್ತದ ಹುರಿಯು ಬಿಲ್ಲಿಗೆ ಹೆದೆಯೇರಿಸಿ ಬಾಣವನ್ನು ಬಿಡಲು'' ಎಂದು ಅಜ್ಜನವರೆಂದರು. ಇದನ್ನು ಕೇಳಿ 'ಸೈ' ಯೆಂದು ದೊರೆಗಳು ಇದರಿಂದ ಎಷ್ಟು ದೂರಕ್ಕೆ, ಯಾವೆಲ್ಲ ಮೃಗಗಳನ್ನು ಹೊಡೆಯಬಹುದೆಂದು ಪ್ರಶ್ನಿಸಿದರು. ಸುಮಾರು ಮೂವತ್ತು ಮಾರು ದೂರದಿಂದ ಏಳು ಜನ ಹೊರಬೇಕಾದಂಥ, ಹಲವು ಹಂದಿಗಳನ್ನು ಹೊಡೆದಿರುವೆನೆಂದು, ಹಾಯಲು ಬಂದ ಕಾಡುಕೋಣಕ್ಕೆ ಇಪ್ಪತ್ತು ಗಜ ದೂರದಿಂದ ಹೊಡೆದುರುಳಿಸಿರುವೆನೆಂದು ನುಡಿದ ಬೆಳ್ತ, ತನ್ನ ಜೀವವುಳಿಸಿದ ಬಿಲ್ಲನ್ನು ಎದೆಗವಚಿಕೊಂಡುದನ್ನು ಕಂಡು ದೊರೆಗಳು ಅವನ ಬೆನ್ನು ತಟ್ಟಿ, ''ನನಗೆ ನಿನ್ನ ಗುರಿಯ ಗತ್ತನ್ನು ತೋರಿಸು'' ಎಂದರು. ಇದನ್ನು ಕೇಳಿ ತಬ್ಬಿಬ್ಬಾದ ಬೆಳ್ತ ಧನಿಯ ಮುಖವನ್ನು ನೋಡಿದ. ಧನಿಯ ಕಣ್‌ಸನ್ನೆಯ ಪ್ರೋತ್ಸಾಹವನ್ನು ಕಂಡ ಬೆಳ್ತ ದೊರೆಯ ಮುಖವನ್ನು ನೋಡಿ ಸಮ್ಮತಿ ಸೂಚಕವಾಗಿ ತಲೆಯಾಡಿಸುತ್ತ 'ಸೈ'ಯೆಂದನು, ಬಳಿಯಲ್ಲಿದ್ದ ಉಗ್ರಾಣಿಯನ್ನು ಕರೆದು ಕಲೆಕ್ಟರರು ಎದುರಿನ ಬೈನಿ ಮರಕ್ಕೆ ಅಂಗೈ ಅಗಲ ಸುಣ್ಣ ಲೇಪಿಸುವಂತೆ ಹೇಳಿದರು. ಬೆಳ್ತ ನಿಂತಿದ್ದ ಸ್ಥಳದಿಂದ ೩೦ ಮಾರುಗಳಷ್ಟು ದೂರವಿತ್ತು ಆ ಗುರಿ. ''ಬಿಲ್ಲಿಗೆ ಬಾಣಹೂಡಿ ಸಿದ್ಧನಾಗಿ ಗುರಿ ತಪ್ಪದಂತೆ ಹೊಡೆ'' ಎಂದು ದೊರೆಗಳು ಅಪ್ಪಣೆ ಮಾಡಿದರು. ಅಲ್ಲದೆ, ''ನೀನೆಂದಂತೆ ಗುರಿಗೆ ಹೊಡೆದರೆ ನಿನಗೆ ಹತ್ತು ರೂಪಾಯಿ ಬಹುಮಾನ; ಗುರಿಯು ತೀಕ್ಷ್ಣವಾಗಿದ್ದರೆ ಮತ್ತೂ ಮೆಚ್ಚುಗೆ ಇದೆ'ಪ ಎಂದುದನ್ನು ಕೇಳಿದ ಬೆಳ್ತ 'ಇದಾವ ಗಹನ' ಎಂಬಂತೆ ಒಮ್ಮೆ ದಾರ್ಷ್ಟ್ಯದ ಮುಗುಳ್ನಗು ಬೀರಿದ. ಎಡಕೈಯಲ್ಲಿದ್ದ ಬಿಲ್ಲನ್ನು ಬಲ ಕೈಗೆ ಬದಲಾಯಿಸಿ, ನೆಲಕ್ಕೂರಿ ಮೊಣಕಾಲು ಮಧ್ಯಕ್ಕೆ ಕೊಟ್ಟು ಬಾಗಿಸಿ, ಬೆತ್ತದ ಹುರಿಯನ್ನು ಬಿಲ್ಲಕೊಪ್ಪಿಗೆ ಸಿಕ್ಕಿಸಿದ. ಒಮ್ಮೆ ಅದರ ಬಿಗಿತವನ್ನು ಪರಿಶೀಲಿಸಿದ. ಅದರ ನಾದವನ್ನು ಕೇಳಿ ಮೆಚ್ಚುಗೆಯ ಮುಖಮಾಡಿದ ವೀಣಾವಾದಕನಂತೆ ಹರ್ಷಿತನಾಗಿ, ಹಿಡಿದ ಬಿಲ್ಲನ್ನು ಹಣೆಗೊತ್ತಿ, ಮಡದಿಯತ್ತ ದೃಷ್ಟಿ ಹಾಯಿಸಿ, ''ಅಂಡೆಯಿಂದ ಐದನೇ ಪಗರಿಯನ್ನು ಕೆಡು'' ಎಂದನು. ಆಗ ಚೋಮು ಚೂಪಾದ ತುದಿಯ ಎಂಟಂಗುಲ ಉದ್ದದ ಮಧ್ಯಭಾಗವು ಒಂದಂಗುಲ ಅಗಲವಿರುವ ಇಬ್ಬಾಯಿಯ ಬಿದಿರ ಕೈಯುದ್ದದ

ಗಿಡುಗನ ಗರಿ ಸಿಕ್ಕಿಸಿದ ಬಾಣವನ್ನು ಕೊಟ್ಟಳು. ಬಾಣವನ್ನು ಬತ್ತಳಿಕೆಯಿಂದ ತೆಗೆದುಕೊಡುವಾಗ ಆ ಎಂಟು ಅಂಗುಲದ ಅಲಗು ಲಕಲಕಿಸುತ್ತಿತ್ತು. ಬಲಗೈಯನ್ನು ಹಿಂದೆ ನೀಡಿ, ಅದನ್ನು ಸರ್ರೆಂದು ಆಕೆಯಿಂದ ಎಳೆದುಕೊಂಡವನೇ ಬೈನಿ ಮರದತ್ತ ಮುಖಮಾಡಿ, ವೀರ ಮಂಡಿಯೂರಿ, ಬಾಣವನ್ನು ಬಿಲ್ಲ ಹಗ್ಗಕ್ಕೆ ಸಿಕ್ಕಿಸಿ, ಸುಣ್ಣದ ಗುರುತನ್ನೇ ಗುರಿಯಾಗಿರಿಸಿ ಕಿವಿಯ ತನಕ ಶಕ್ತಿಯಿಂದ ಎಳೆದು ಇಹವನ್ನೇ ಮರೆತವನಂತೆ ಗುರಿಯನ್ನೇ ದಿಟ್ಟಿಸುತ್ತಿದ್ದ. ಆತನ ಉಬ್ಬಿದ ಕಂಠ, ತ್ವರಿತಗತಿಯ ರಕ್ತಸಂಚಾರವಾಗುತ್ತಿದ್ದ ಮುಖದಲ್ಲಿ ಒಗ್ಗೂಡಿದ್ದ ರಕ್ತವೆಲ್ಲ ಕಣ್ಣಿನಿಂದಲೇ ಹೊರಡಲು ಹವಣಿಸುತ್ತಿರುವಂತೆ ಕಾಣಿಸುತ್ತಿತ್ತು. ಶಕ್ತಿ ಸಂಚಯ ದಿಂದ ಬೆಳ್ತನು ಅಂಬನ್ನು ಕಿವಿಯ ಹತ್ತಿರ ಸೆಳೆದು ಸಡಿಲಿಸಿದುದೇ ತಡ, ಅದು ಸುಯ್ಯೆಂದು ಕಣ್ಣು ಕೋರೈಸುವ ಉಲ್ಕೆಯಂತೆ ಹರಿದು ರೆಪ್ಪೆ ಮುಚ್ಚುವುದರೊಳಗೆ ಸುಣ್ಣದ ಗುರುತಿನ ಮಧ್ಯಭಾಗದಲ್ಲಿ ನಾಲ್ಕಂಗುಲ ಹೂತು ಅತ್ತಿತ್ತ ತೊನೆಯುವುದನ್ನು ದೊರೆಗಳು ಕಂಡರು ! ''ಹುರ್ರಾ'' ಅಂದವರೇ ಎದ್ದು ಓಡಿ ಮರದ ತೊಗಟೆಯಲ್ಲಿ ಸಿಲುಕಿಹೋಗಿ ಅಲ್ಲಾಡುತ್ತಿದ್ದ ಬಾಣವನ್ನು ಶಕ್ತಿಹಾಕಿ ಎಳೆಯಲು ಪ್ರಯತ್ನಿಸಿದರು. ಊಹೂಂ, ಅದು ಎಳ್ಳಷ್ಟೂ ಹಿಂದಕ್ಕೆ ಸರಿಯಲಿಲ್ಲ! ಅಂಗಾಲು ದಪ್ಪದ ಕಲ್ಲಿನಂತಿರುವ ಬೈನಿಯ ಮರದ ಮಧ್ಯಭಾಗದ ತನಕ ಹೂತ ಅಂಬನ್ನು ಶಕ್ತಿಯಿಂದ ಎಳೆಯುವುದು ಅಸಾಧ್ಯ. ಅದಕ್ಕೂ ಯುಕ್ತಿಯೇ ಬೇಕು. ''ಬಿಡಿರಿ, ನಾನು ತೆಗೆಯುವೆ'' ಎಂದ ಬೆಳ್ತನ ಮುಖವನ್ನು ಮೆಚ್ಚುಗೆಯ ಮುಗುಳ್ನಗುವಿನೊಡನೆ ನೋಡಿ ಆ ಸ್ಥಲವನ್ನು ಬಿಟ್ಟರು ದೊರೆಗಳು. ಬೆಳ್ತನು ಅಂಬನ್ನು ನಿಧಾನವಾಗಿ ಮೇಲೆ ಕೆಳಗೆ ಅಲ್ಲಾಡಿಸಿ ಸಡಿಲವಾದುದನ್ನು ತಿಳಿದು, ಸರಕ್ಕೆಂದು ಹಿಂದೆ ಳೆದುದನ್ನು ಕಂಡ ದೊರೆಗಳೊಮ್ಮೆ ನಿರಾಳವಾಗಿ ಉಸಿರೆಳೆದು ತಮ್ಮ ಸ್ಥಾನದಲ್ಲಿ ಬಂದು ಕುಳಿತರು. ಬೇಟೆ ಮುಗಿಸಿ ಹಿಂತಿರುಗಿದ ಬಳಿಕ ಬೆಳ್ತನಿಗೆ ಹದಿನೈದು ರೂಪಾಯಿ ಇನಾಮು ಕೊಡುವುದಾಗಿ ದೊರೆಗಳು ಒಡನೆಯೇ ಘೋಷಿಸಿದುದನ್ನು ಕೇಳಿ ಅಲ್ಲಿ ನೆರೆದಿದ್ದ ಬೇಟೆಗಾರರು ಅಸೂಯೆಯಿಂದಲೋ, ಮೆಚ್ಚುಗೆಯಿಂದಲೋ ಬೆಳ್ತನ ಮುಖವನ್ನೆ, ತೆರೆದ ಕಣ್ಣುಗಳನ್ನು ಮುಚ್ಚದೆ ನೋಡುತ್ತಿದ್ದರು. ಬೆಳ್ತನು, ತನ್ನ ಎಲೆ ಅಡಿಕೆ ಸಂಚಿಯನ್ನು ಬಿಚ್ಚಿ ಚೋಮು ಕೊಟ್ಟ ಎಲೆಗೆ ಸುಣ್ಣವನ್ನು ತೀಡುತ್ತಿದ್ದಾನೆ. ದೊರೆಗಳು ತನ್ನ ಎರಡು ಬೆರಳು ಉದ್ದದ ಚುಟ್ಟಾಕ್ಕೆ ಕಡ್ಡಿ ಗೀರಿ ಬೆಂಕಿ ಕೊಡುತ್ತಿದ್ದಾರೆ. ಅಜ್ಜಯ್ಯ ದೊಳ್ಳಪೂಜಾರಿಯ ಮುಖವನ್ನು ನೋಡಿ ಬೆಳ್ತನ ಸಾಹಸಕ್ಕೆ ಮುಗುಳ್ನಗುತ್ತಿದ್ದಾರೆ. ಅಂದಿನ ಹದಿನೈದು ರೂಪ್ಯಾಯ ಬೆಲೆಯನ್ನು ಅರಿತಿದ್ದ ಅತಿಥಿಗಳು ದೊರೆಯ ಕೊಡುಗೈ ಗುಣವನ್ನು ಅಭಿನಂದಿಸುವಂತೆ ಅವರ ಮುಖವನ್ನೇ ನೋಡುತ್ತಿದ್ದಾರೆ. ಆಗ ಐದು ರೂಪಾಯಿಗೆ ಒಂದು ಮುಡಿ ಅಕ್ಕಿ

ಸಿಗುತ್ತಿದ್ದ ಕಾಲ.

ಅಷ್ಟರಲ್ಲಿ ಕಾಡು ಸೋವಲು ನಾಲ್ಕು ಗ್ರಾಮದ-ಪಟ್ಟದ ಮೇರರು, ಬೊಟ್ಟದ ಮಾರಿಹೊಲೆಯರು, ದಟ್ಟಿಗೆಯ ಅಜಲರು, ಕೊಟ್ಯದ ಕೊರಗರು, ಚೇರದ ಮ್ಯಾಲರು-ಮುದುಕರು, ಯುವಕರು, ಮಕ್ಕಳೆನ್ನದೆ ತಮ್ಮ ತಮ್ಮ ಬಿಲ್ಲು, ಬಡಿಗೆ, ಕತ್ತಿಗಳೊಂದಿಗೆ ಸಜ್ಜಾಗಿ ಸಂದಣಿಸಿದವರ ಸಿದ್ಧತೆಗಳನ್ನು ಕಂಡು ಅಜ್ಜಯ್ಯನವರು, ''ಬೇಟೆಗೆ ಹೊರಡೋಣವೇ?'' ಎಂದರು. ''*yes, Alright*'' ಎಂದರು ದೊರೆಗಳು. ಸಂಗಾತಿಗಳು ತಮ್ಮ ಕೋವಿಗಳನ್ನು ಹೆಗಲಿಗೇರಿಸಿ ಹೊರಡಲು ಸಿದ್ಧರಾದರು. ದೊರೆಗಳೂ ತಮ್ಮ ಕಾಲಿಗೆ ಬೂಟುಗಳನ್ನು ಸಿಕ್ಕಿಸಿ ಹೆಗಲಿಗೆ ತಮ್ಮ 'ಕಾಂಬಿನೇಶನ್ ರೈಫಲ'ನ್ನು ಏರಿಸಿದರು. ನಿರ್ದೇಶಕತ್ವವನ್ನು ಹೊತ್ತ ಅಜ್ಜಯ್ಯನವರೂ ಜೊತೆಯಲ್ಲಿ ನಾನೂ ಮುಂದಾದೆವು. ಹಿಂದಿರುಗಿ ನೋಡಿದೆ; ಕಂಬಳಕ್ಕೆ ಹೋಗುವ ಜನದಟ್ಟಣೆಯ ನೆನಪಾಗುವಂತಿದೆ. ಎಲ್ಲರಿಗೂ ಹಿಂದುಗಡೆಯಲ್ಲಿ ಊರ ಗುರಿಕಾರ, ಬೋಂಟ್ರ; ಬೇಟೆಗಾರರೊಂದಿಗೆ ತಂದೆಯವರೂ ಹೆಜ್ಜೆ ಹಾಕುತ್ತಿದ್ದಾರೆ. ವೈರಿಯಕೋಟೆಯನ್ನು ನುಚ್ಚುನುರಿಮಾಡಲು ಹೊರಟ ಸೇನೆಯ ಗಂಭೀರತೆಯನ್ನು ನೆನಪಿಗೆ ತರುವ ಈ ಬೇಟೆಯ ತಂಡವು ಮುಂದಾಳುವನ್ನು ಹಿಂಬಾಲಿಸಿ ಸುಬ್ರಹ್ಮಣ್ಯ ಮಾರ್ಗದಲ್ಲಿ ಮುಂದುವರಿಯಿತು. ಅಜ್ಜಯ್ಯನವರು ಊರ ಬೆಡಿಕಾರರನ್ನು ಗಂಡಿಯ ಹೆಸರು ಹೇಳಿ ಇಂಥವರು ಇಂತಿಂಥ ಗಂಡಿಗಳಲ್ಲಿ ನಿಲ್ಲಬೇಕೆಂದು ತಿಳಿಸಿದರು. ಅತಿಥಿಗಳನ್ನು ಅವರವರ ಯೋಗ್ಯತಾನುಸಾರ ವಿವಿಧ ತಾಣಗಳಲ್ಲಿ ನಿಲ್ಲಿಸಿ, ಕಲೆಕ್ಟರರನ್ನು ಸುಬ್ರಹ್ಮಣ್ಯ ಮಾರ್ಗದ ಬದಿಯ ಹಿರಿಯ ಚಿರುವೆ ಮರದ ಬುಡದಲ್ಲಿ ನಿಲ್ಲುವಂತೆ ಸೂಚಿಸಿದರು. ಪಳ್ಳಿಕಂಡದ ಕಾಡನ್ನು ಸೋವ ಸಮಯ. ಆಜಣದ ಕಡೆಗೆ ಓಡುವ ಮೃಗಗಳು ಈ ದಾರಿಯಿಂದಲೆ ಆ ತಾಣವನ್ನು ಸೇರುವವೆಂದೂ, ಹಂದಿ,ಕಡವೆ, ಜಿಂಕೆಯಲ್ಲದೆ ಆನೆ, ಹುಲಿಗಳು ಈ ದಾರಿಯಾಗಿ ಬರುವ ಪರಿಪಾಠವಿಲ್ಲವೆಂದೂ ಹೇಳಿದರು. ಇಲ್ಲಿ ರೈಫಲಿನ ಅಗತ್ಯವಿಲ್ಲ. ಜೋಡು ನಳಿಗೆಯ ಕೋವಿಯೇ ಸಾಕು ಎಂದು ಜಾಗ್ರತೆ ಹೇಳಿ ಅವರೊಂದಿಗೆ, ಬರ್ಚಿಯನ್ನು ಹಿಡಿದಿರುವ ಕುಂಞಿಮೋನು ಬ್ಯಾರಿಗೆ ದೊರೆಗಳ ಸಂಗಾತಿಯಾಗಿ ನಿಲ್ಲುವಂತೆ ತಿಳಿಸಿದರು. ಸೋವತರನ್ನು ಕೂಡಿಕೊಂಡು ಮುಂದುವರಿದೆವು. ದೊರೆಗಳು ರೈಫಲನ್ನು ಕುಂಞಾಮೋನು ಬ್ಯಾರಿಯ ಕೈಯಲ್ಲಿ ಕೊಟ್ಟು, ಅತ್ತಿತ್ತ ದೂರ ದೃಷ್ಟಿಯನ್ನೊಮ್ಮೆ ಹಾಯಿಸಿ, ತಮ್ಮ ಜೋಡುನಳಿಗೆಯ ತೋಟಾ ಕೋವಿಯನ್ನು ಹಿಡಿದು ನಿಂತಿದ್ದ ಪೇದೆಯ ಕೈಯಿಂದ ಇಸಿದುಕೊಂಡರು. ಆತನನ್ನು ಮಾರ್ಗದ ಆಚೆ ಬದಿಗೆ ಹೋಗಿ ಸುರಕ್ಷಿತ ಸ್ಥಳವನ್ನು ಆರಿಸಿ ಕುಳಿತುಕೊಳ್ಳಲು ಹೇಳಿದ ದೊರೆಗಳು ಕೋವಿಗೆ ತೋಟಾ ತುಂಬಿಸಿ

ಸನ್ನದ್ಧರಾದುದನ್ನು ಕಂಡು, ನಾವು ಮುಂದೊತ್ತಿದೆವು. ಅಜ್ಜಯ್ಯನವರ ಕೋವಿಮದ್ದಿನ ಚೀಲವು ನನ್ನ ಹೆಗಲಲ್ಲಿ ಜೋತಾಡುತ್ತಿತ್ತು. ಈ ಸಮಯದಲ್ಲಿ ಒಂದಕ್ಕೊಂದು ಕಚ್ಚಾಡುತ್ತಿದ್ದ ಹಲವಾರು ಮನೆಯ ನಾಯಿಗಳು ಉಸಿರು ಬಿಗಿಹಿಡಿದಂತೆ, ತಮ್ಮ ತಮ್ಮ ಯಜಮಾನರ ಹಿಂದೆ-ಪೋಕರಿ ಮಕ್ಕಳು ಬರುವಂತೆ- ಬರುತ್ತಿದ್ದವು. ಕೋವಿಯರೆಲ್ಲ ಎದುರು ಬದಿಯಿಂದ ನಿರ್ದೇಶಿತ ಗಂಡಿಯಲ್ಲಿ ನಿಲ್ಲಲು ಈ ಮೊದಲೇ ಹೋಗಿದ್ದರು. ಕಳ್ಳಕೋವಿಯವರು ಸೋವತರ ಹಿಂದಿನಲ್ಲಿರತಕ್ಕದ್ದೆಂದೂ ಅವರಲ್ಲಿ ಯಾರಾದರೂ, ಈಡು ಮಾಡಿದರೆ ಪಟೇಲರೇ ಹೊಡೆದುದೆಂದು ಹೇಳಬೇಕೆಂದೂ ಅಜ್ಜಯ್ಯನವರ ತಾಕೀತು ಆಗಿತ್ತು. ಎಷ್ಟೆಂದರೂ ಕಳ್ಳಕೋವಿಯಲ್ಲವೆ? ಕಲೆಕ್ಟರರ ಮನಸ್ಸು ಹೇಗೆಂದು ಅರಿತಿರಲಿಲ್ಲ.

ಪಟೇಲರ ಆಣತಿಯಂತೆ ಹತ್ತೈವತ್ತು ಗರ್ನಾಲುಗಳೊಂದಿಗೆ ಬಂದಿದ್ದ ಗರ್ನಾಲು ಕಾಸಿಂ ಸಾಹೇಬರು ನಮ್ಮೊಂದಿಗೆ ಇದ್ದರು. ಕಾಡು ಹೊಡೆಯಲು ಸೋವತರನ್ನು ಜನರಿಷ್ಟೇ ಎಂದು ನಿಶ್ಚಯಿಸಿ- ಇಂತಿಷ್ಟು ದೂರಕ್ಕೆ ಬಿಲ್ಲಿನವನಿಗೆ ಸಾಥಿಯಾಗಿ ಬಡಿಗೆಯವನೊಬ್ಬ, ಕತ್ತಿ ಕವಣೆಯಂತೆ ಕಾಡನ್ನು ಬಳಸಿ ನಿಲ್ಲುವ ವ್ಯವಸ್ಥೆ ಮಾಡಿದರು. ಆಯಾ ನಾಯಿಯ ಒಡೆಕ್ಕಾರನು ತನ್ನ ನಾಯನ್ನು ಹುರಿದುಂಬಿಸಬೇಕೆಂದು ತಿಳಿಸಿದರು. ಸೀಗೆ ಬಲ್ಲೆಗೆ ಗರ್ನಾಲು ಎಸೆದೇ ಅದರಲ್ಲಿದ್ದ ಮೃಗವನ್ನು ಹೊರಡಿಸಬೇಕೆಂದು ಕಾಸಿಂ ಸಾಹೇಬರಿಗೆ ಆಣತಿ ಮಾಡಿ, ಯಾರೊಬ್ಬನೂ ಗುಂಪಿನಲ್ಲಿ ಸೇರಬಾರದೆಂದೂ ಒಬ್ಬಂಟಿಯಾಗಿಯೇ ಕಾಡು ಹೊಡೆಯಬೇಕೆಂದೂ, ದಾರಿಯಲ್ಲಿ ಅಡ್ಡವಾದ ಬಲ್ಲೆ ಪೊದೆಯನ್ನು ಕಡಿದೇ ಮುಂದುವರಿಯಬೇಕೆಂದೂ ಎಚ್ಚರಿಸಿದರು. ತಾವು ಕರಿಕಲ್ಲ ಗುಡ್ಡೆಯ ಗಂಡಿಯನ್ನು ಮುಟ್ಟಿದುದನ್ನು ಅರಿತೊಡನೆಯೇ ಒಂದು ಗರ್ನಾಲು ಹೊಡೆಯಬೇಕೆಂದೂ, ಅಜಾಗರೂಕತೆಯಿಂದ ಹಂದಿಯ ಹಿಂದೆ ಬೀಳಬಾರದೆಂದೂ ಆದೇಶಿಸಿದರು. ನಾವು ಸೇರಲಿರುವ ಕರಿಕಲ್ಲಗುಂಡಿಯನ್ನು ೭,೮ ನಿಮಿಷಗಳೊಳಗೆ ತಲಪಿದೆವು. ಕರಿಕಲ್ಲಗುಂಡಿಯೆಂದರೆ 'ಆಜನ' ಎಂಬ ಸ್ಥಳದಲ್ಲಿ ಇಂದು ಕಬ್ಬಿಣದ ಅದುರು ತೆಗೆದ ಬೆಟ್ಟಕ್ಕೆ ಹೋಗುವ ದಾರಿ. ಇದು, ಸಾಧಾರಣ ಕಾಡಿನ ಮಧ್ಯಭಾಗದಲ್ಲಿರುವ ಸ್ಥಳ. ಸೋವತರ ಬೊಬ್ಬೆಗೆ ಎಚ್ಚರಗೊಂಡ ಮೃಗಗಳು ಕಾಡಿನಿಂದ ಓಡಲು ಹವಣಿಸುತ್ತ ಸಂಧಿ ಸ್ಥಳವಾದ ಇಲ್ಲಿಗೆ ಬಂದೇ ಸುಬ್ರಹ್ಮಣ್ಯದ ಕಾಡಿನತ್ತಲೋ, ಕರಿಕಲ್ಲಿನ ಗುಡ್ಡದತ್ತಲೋ, ಆಜನ-ಪಳ್ಳಿಕಂಡದತ್ತಲೋ ಹೋಗಬೇಕು. ಇದು ಅಂಥ ಮಧ್ಯ ಸ್ಥಳ; ಉಸಿರ್ದಾಣ. ಅಂತೆಯೇ ಗಂಡಿನಲ್ಲಿ ನಿಂತವರಿಗೂ ಅತಿ ಸನಿಯದ ಸ್ಥಾನ. ನನ್ನ ಹೆಗಲಲ್ಲಿದ್ದ ಚೀಲವನ್ನು ಅಜ್ಜಯ್ಯನವರು ಇಸಿದುಕೊಂಡು ನನ್ನನ್ನು ಸನಿಹದಲ್ಲಿನ ಬೊಡ್ಡೆಯಲ್ಲಿ ಕೂತುಕೊಳ್ಳುವಂತೆ ಕೈಸನ್ನೆಯಿಂದ ಸೂಚಿಸಿದರು. ತಮ್ಮ

ಕೋವಿಯನ್ನೊಮ್ಮೆ ಎದೆಗೆ ಹಾಕಿ, ಸುತ್ತು ದೃಷ್ಟಿ ಬೀರಿ ಮರವೊಂದರ ಮರೆಯಲ್ಲಿ ನಿಂತೊಡನೆಯೇ ಸೋವತರತ್ತಣಿಂದ ಕಾಸಿಂ ಸಾಹೇಬರ ಗರ್ನಾಲಿನ 'ಧಮಾಲ್' ಎಂಬ ಶಬ್ದವು ಕೇಳಿಸಿತು. ಒಡನೆ ಸ್ಕೂಲಿನಿಂದ ಹೊರಬಿದ್ದ ಮಕ್ಕಳ ಕೋಲಾಹಲದಂತೆ ಒಮ್ಮೆಲೇ 'ಕಾ, ಕೂವು, ಹಿಡಿ, ಬಡಿ, ಕಡಿ, ತುಚ್ಚಿ, ಪತ್ತಿ' ಎಂಬ ಬೊಬ್ಬೆ ಕೇಳಿಬಂತು. ಅಜ್ಜಯ್ಯನವರು ಸಜ್ಜಾಗಿ ಎದುರು ನೋಡುತ್ತಿದ್ದಾರೆ. ಕೊಡಿದನಿಗೇ ಎದ್ದ ಒಂಟಿ ಜಿಂಕೆಯೊಂದು ಎತ್ತ ಹೋಗಲಿ? ಸುಬ್ರಹ್ಮಣ್ಯದತ್ತವೇ? ಕರಿಕಲ್ಲ ಗಂಡಿಗೆ? ಆ ಜನದತ್ತವೇ? ಪಳ್ಳಿಕಂಡಕ್ಕೇ? ಎಂಬಂತೆ ತೊಳಲಾಟಕ್ಕೆ ಸಿಲುಕಿತು. ಹಿಂದೆ ಹೋಗಬಹುದೆಂದರೆ ಬೊಗಳುವ ನಾಯಿಗಳ ಭೀತಿ. ಒಮ್ಮೆ ನಿಂತು, ಒಮ್ಮೆ ಮೈನಿಗುರಿಸಿ ಎರಡು ಮಾರು ನೆಗೆದು ಕೋಡುಗಳನ್ನು ತನ್ನ ಶರೀರಕ್ಕೆ ಆನಿಸಿ ಅದರ ಕವಲುಗಳು ಎಲ್ಲಿಯೂ ಸಿಕ್ಕಿಕೊಳ್ಳದಂತೆ ಭದ್ರವಾಗಿರಿಸಿಕೊಂಡು ಬರುವ ಗಂಭೀರತೆಯ ಅಂದಕ್ಕೆ ಸೋಲದವರಿಲ್ಲ. ಎತ್ತ ಹೋಗುವುದೆಂಬ ಖಚಿತತೆಯಿಲ್ಲದೆ ಮುಂದೊತ್ತಿ ಬರುತ್ತ ಇನ್ನೇನು ಅಜ್ಜಯ್ಯನವರಿಗೆ ಬರಿಯ ಇಪ್ಪತ್ತು ಮಾರು ದೂರವಿದೆಯೆನ್ನುವಷ್ಟರಲ್ಲಿ ಗಕ್ಕನೇ ನಿಂತಿತು. 'ಢಮಾಲ್' ಎಂದ, ಅಜ್ಜಯ್ಯನವರ ಕೋವಿಯ ನಳಿಗೆಯು ಹೊಗೆಯನ್ನು ಕಾರುತ್ತಿದೆ. ಜಿಂಕೆಯು ನೀಳವಾದ ಒಂದು ನೆಗೆತವನ್ನು ನೆಗೆದು ಬಿದ್ದು ಜೀವ ತೊರೆಯಲು ಕೈ, ಕಾಲು ಜಾಡಿಸುತ್ತಿದೆ ! ಅಜ್ಜಯ್ಯನವರು ಪುನಃ ಈಡು ತುಂಬಿಸಲು ಹವಣಿಸುತ್ತಿದ್ದಾರೆ. ಎಲ್ಲಿಯಾದರೂ ಬೋಣಿಯ ಪ್ರಾಣಿ ಎದ್ದೋಡಿದರೆ ಎಂಬ ಶಂಕೆ ! ಅಜ್ಜಯ್ಯನವರಿಗೆ ಸಹಾಯ ಮಾಡಲೆಂದು, ಉಸಿರು ಬಿಗಿಹಿಡಿದು ಮರದ ಬೊಡ್ಡೆಗೆ ಆತು ಕುಳಿತಿದ್ದ ನಾನು, ನಾಲ್ಕೇ ನೆಗೆತದಲ್ಲಿ ಅಜ್ಜಯ್ಯನವರ ಬಳಿಸೇರಿದೆ. ಅವರು ಡಬ್ಬಿಯಿಂದ ಸುರಿದು ಸುರಿದು ರಂಜಕವನ್ನು ಕೋವಿಗೆ ತುಂಬಿಸಿ, ತಟ್ಟಿ ಕೆಳಗಿಳಿಸುತ್ತಿದ್ದರು. ಅವರಿಂದ ರಂಜಕದ ಡಬ್ಬಿಯನ್ನು ತೆಗೆದುಕೊಂಡು ತೆರೆದಿದ್ದ ಮುಚ್ಚಳ ಹಾಕಿದೆ. ಕೋವಿಯಿಂದ ಮದ್ದು ಸೋರಿ ಹೋಗದಂತೆ ಮಾಡಲಿರುವ ತೆಂಗಿನ ಚುಂಗನ್ನು ಆರಿಸಿ ಅಂಗೈಯಲ್ಲಿ ಉರುಟಿಸಿ ಕೊಟ್ಟೆ. ಅವರು ಗಜಕೋಲಿನಿಂದ ಅದನ್ನು ಜಡಿದು, ಜಡಿದು ಗಟ್ಟಿ ಮಾಡುತ್ತಿರುವಾಗ ನಾನು ಗುಂಡಿನ ಚೀಲವನ್ನು ತೆಗೆದೆ. ಗುಂಡುಗಳನ್ನು ಅಂಗೈಗೆ ಸುರಿದು ಅವರಿಗೆ ನೀಡಿದೆ. ಅವರು ಬೇಕಾದ ಗುಂಡುಗಳನ್ನು ಆಯ್ದು ಕೋವಿಗೆ ತುಂಬಿಸಿ ಪುನಃ ಚುಂಗನ್ನು ಹಾಕಿ ಹದವಾಗಿ ಜಡಿದು ನಾನು ಕೊಟ್ಟ ಕೇಪು ಮದ್ದಿನಿಂದ ಕೂಡಿದೆಯೇ ಎಂದು ನೋಡಿ, ಕುದುರೆಯನ್ನೆತ್ತಿ ನಿಪ್ಪಲಿಗೆ ಇಟ್ಟು ತಳದಲ್ಲಿದ್ದ ರಂಜಕವನ್ನು ಊದಿ ಕುದುರೆ ಇಳಿಸಿ ಎದುರು ನೋಡುತ್ತಿರುವಾಗ, ಕವಲು ಕವಲಾದ ಅರೆಮಾರು ಗಾತ್ರದ ಕೋಡಿನ, ಹೊಳೆಯುವ ಬಿಳಿಯ ಚುಕ್ಕೆಯ, ನಸುಕೆಂಪು, ಹಳದಿ ಬಣ್ಣದ ಜಿಂಕೆಯು

ಸತ್ತೇಹೋಗೋದೆ. ಹತ್ತಿರ ಹೋಗಿ ಒಮ್ಮೆ ನೋಡಲೆ, ಅಜ್ಜ?'' ಎಂದೆ. ''ಬೇಡ, ಎದುರಿನಿಂದ ಕಾಡು ಹೊಡೆಯುತ್ತಿದ್ದಾರೆ. ಹಂದಿ, ಕಡವೆ, ಕಾಡುಕೋಣಗಳು ಬರಲೂ ಬಹುದು'' ಎಂದರು. ನಾನು ಸುಮ್ಮನಾಗಿ ಹಿಂದಿರುಗುವೆನೆನ್ನುವಾಗ ''ಈಗ ತಾನೆ ಇಲ್ಲಿಂದ ಈಡಾದುದರಿಂದ ಇನ್ನು ಮೃಗಗಳು ಇಲ್ಲಿಗೆ ಬರುವ ಸಾಧ್ಯತೆಯಿಲ್ಲ. ಮೃಗಗಳು ಇದ್ದರೆ ಆಯಾ ಕಾಡಿನ ಗಂಡಿಯತ್ತಲೇ ಓಡುವುವು. ಆದರೂ ಈಗ ಹತ್ತಿರ ಹೋಗುವುದು ಬೇಡ. ಹಿಂದೆ ಕೂತಲ್ಲಿಗೇ ಹೋಗು'' ಎಂದರು. ನಾನು ನನ್ನ ಮೊದಲಿನ ಸ್ಥಳವನ್ನು ಸೇರಿದೆ. ಅಷ್ಟರಲ್ಲಿ ಎದುರಿನಿಂದ 'ಹೋ, ಹಂದಿಗಳು ಮುಂದೆ! ಬೊಳ್ಳು, ಕಾಳು, ಹಿಡಿ, ಹಿಡಿ, ಹಿಡಿ, ಬಡಿ, ಕಡಿ' ಎಂಬ ಬೊಬ್ಬೆಯೇ ಬೊಬ್ಬೆ. ಢಂ, ಢಂ, ಢಮ್ಮೆಂದು ನಾಲ್ಕು ಕೋವಿಯ ಈಡನ್ನು ಕೇಳಿದ ಅಜ್ಜಯ್ಯನವರು ಭೂತ ಹಿಡಿದ ಪಾತ್ರಿಯಂತೆ ಆವೇಶದಿಂದ ಅತ್ತಿತ್ತ ನೋಡುತ್ತಿದ್ದಾರೆ. ಹಂದಿಗಳೊಂದೂ ನಮ್ಮತ್ತ ಬರುವುದಿಲ್ಲ. ಕೋವಿಯನ್ನು ನೆಲಕ್ಕೂರಿ ಅಜ್ಜಯ್ಯನವರು ಎದುರ್ಗಡೆಯೇ ನೋಡುತ್ತಿದ್ದಾರೆ. ಛಟೀಲ್ ಎಂಬ ಸದ್ದನ್ನು ಕೇಳಿದ ಅಜ್ಜಯ್ಯನವರು ಕೈಯಿಂದ ಕಲೆಕ್ಟರರು ನಿಂತ ಸ್ಥಳವನ್ನು ತೋರಿಸಿ ಕಲೆಕ್ಟರರು ಈಡು ಮಾಡಿದರಲ್ಲ ಎಂಬ ಸಂತೋಷದ ಮುಖ ಮುದ್ರೆಯನ್ನಾಂತರು. ಅಷ್ಟರಲ್ಲಿ, ಅಲ್ಲಿಂದಲೇ ಅದೇ ರೀತಿಯ ಮತ್ತೊಂದು ಗುಂಡಿನ ಸದ್ದು ಕೇಳಿಸಿತು. ಸೋವತರ ಬೊಬ್ಬೆಯ ಅಬ್ಬರಕ್ಕೆ ನಿಲುಗಡೆಯಿರಲಿಲ್ಲ. ನಾಯಿಗಳು ನಾಗಾಲೋಟದಿಂದ ಮುನ್ನುಗ್ಗುತ್ತಿವೆ. ಇದ್ದ ಮೃಗಗಳೆಲ್ಲಾ ಆ ಕಾಡಿನಿಂದ ಹೊರಬಿದ್ದಾಯಿತೆಂದು ಅರಿತ ಸೋವತರು ಗಂಡಿಗಳಲ್ಲಿ ನಿಂತ ಕೋವಿಯವರನ್ನು ಕಾಣುವ ತವಕದಲ್ಲಿ ಕಾಲಿಗೆ ಚುಚ್ಚಿದ ಮುಳ್ಳು, ತೊಡಕಿದ ಬೀಳಲನ್ನೂ ಲೆಕ್ಕಿಸದೆ ಮುನ್ನುಗ್ಗುವ ಭರದಲ್ಲಿ ಇದ್ದಾರೆ. ಬಾಣ ಎಸೆದುಕೊಂದ ಮಣಭಾರದ ಬರಿಂಕವನ್ನು ಹೆಮ್ಮೆಯಿಂದ ಹೆಗಲಿಗೆ ಏರಿಸಿಕೊಂಡು ನಿದಾನವಾಗಿ ಬರುತ್ತಿರುವ ಬೆಳ್ತನನ್ನು ಕರೆದು, ತಮ್ಮ ಈಡಿನಿಂದ ಸತ್ತ ಜಿಂಕೆಯನ್ನು ಅಜ್ಜಯ್ಯ ತೋರಿಸಿದರು. ಅದನ್ನೂ ಕಾಡಿನ ಮಧ್ಯದಲ್ಲಿ ಕಾದಿರುವಂತೆ ಹೇಳಿ ಬೆಳ್ತನನ್ನೂ ಚೋಮುವನ್ನೂ ಅಲ್ಲಿಯೇ ನಿಲ್ಲಿಸಿದರು. ನಾವು ಲಗುಬಗೆಯಿಂದ ಕಲೆಕ್ಟರರಿದ್ದಲ್ಲಿಗೆ ಬಂದು ನೋಡಿದೆವು. ಹತ್ತು ಜನರು ಎಳೆದರೂ ಜಗ್ಗದ ಒಂಟಿಗ ಹಂದಿಯು ನಾಲ್ಕು ಕಾಲನ್ನೂ ನೀಡಿ, ತನ್ನ ಹಿಡಿ ಗಾತ್ರದ ಕೋರೆಯನ್ನು ತೋರಿಸುತ್ತಾ ನೀಳವಾಗಿ ನಾಲಗೆಯನ್ನು ಹೊರ ಹಾಕಿ ಸತ್ತೇ ಹೋಗಿದೆ ! ದೊರೆಗಳ ಚುರುಟಿನಿಂದ ಸುರುಳಿ ಸುರುಳಿಯಾಗಿ ಹೊಗೆ ಮೇಲೇರುತ್ತಿದೆ. ಪೇದೆಯೂ, ಬರ್ಚಿ ಸಮೇತನಾದ ಕುಂಞಿಮೋನುವೂ 'ನಾವು ಗೆದ್ದವರು; ನೀವು?' ಎಂಬ ಪ್ರಶ್ನಾರ್ಥಕ ದೃಷ್ಟಿಯನ್ನು ನಮ್ಮೆಡೆಗೆ ಬೀರುತ್ತಿದ್ದಾರೆ. ನಮ್ಮನ್ನು ಕಂಡ ದೊರೆಗಳು ''ಗ್ರೇಂಡ್, ಗ್ರೇಂಡ್'' ಎಂದರು. ಕಾಡಿನಿಂದ

ಓಡಿಬಂದ ನಾಯಿಗಳು ಸತ್ತ ಹಂದಿಯ ಮೇಲೆ ಮುಗಿಬಿದ್ದು ಮೂಗು, ಕಿವಿ, ದವಡೆ, ಬಾಲ, ಕಾಲೆನ್ನದೆ ಕಚ್ಚಿ ಎಳೆಯಲು ಸುರುಮಾಡಿದುವು. ಕಲೆಕ್ಟರರು ನಾಯಿಗಳನ್ನು ಓಡಿಸುವಂತೆ ಆಳುಗಳಿಗೆ ಹೇಳಿ, ಅಜ್ಜಯ್ಯನವರತ್ತ ತಿರುಗಿ ''ನೀವೂ ಹೊಡೆದಿರಾ?'' ಎಂದು ಕೇಳಿದರು. ಅಜ್ಜ ಉತ್ತರಿಸಿದರು-''ಹೌದು. ಜಿಂಕೆಯೊಂದು ಮೊದಲ ದನಿಗೆ ಎದ್ದುದು ನನ್ನತ್ತ ಬಂತು. ಬೋಣಿಯ ಮಿಕವಾದುದರಿಂದ ಬಿಟ್ಟರೆ ಮತ್ತೆ ದಕ್ಕದೆಂದು ಹೊಡೆದೆ''. ''ಅದು ಹೆಣ್ಣೊ?'' ಎಂದ ದೊರೆಗಳ ಸಂದೇಹ ನಿವಾರಿಸುತ್ತ ಅಜ್ಜಯ್ಯನೆಂದರು-''ಅಲ್ಲ, ಬಲಿತ ಕೋಡಿನ ಗಂಡು''. ಸಂತೃಪ್ತಿಯ ಮುಗುಳ್ನಗು ಸೂಚಿಸಿದ ದೊರೆಗಳೂ ಉಳಿದ ಶಿಕಾರಿಗಳೂ ನಮ್ಮೆಡೆಗೆ ಬರತೊಡಗಿದರು. ದೊರೆಗಳ ಈಡಿಗೆ ಮೊದಲು ಸದ್ದು ಕೇಳಿದ ನಾಲ್ಕು ಈಡು ಯಾರದೆಂದು ಅಜ್ಜ ವಿಚಾರಿಸಿದರು; ಅಷ್ಟರಲ್ಲಿ ಏದುಸಿರು ಬಿಡುತ್ತ ಬರುತ್ತಿದ್ದ ದೊಳ್ಳಜ್ಜನನ್ನು ಕಂಡು ಏನೆಂದು ಕೈ ಸನ್ನೆಯಿಂದ ಕೇಳಿದರು. ಆತನು 'ಭಾರೀ ಒಂಟಿಗನಿಗೆ ಹೊಡೆದೆನೆಂದೂ, ಅದು ಪೆಟ್ಟಾಗಿ ಓಡಿ ಕೆಲವೇ ಮಾರು ದೂರ ಹೋಗಿ ಬಿದ್ದಿರಬೇಕೆಂದೂ, ತಾನೂ ಹಿಂಬಾಲಿಸುವೆನೆಂದರೆ ತನ್ನ ಕೋವಿಯ ನಿಪ್ಪಲೇ ಈಡಿನ ಭರಕ್ಕೆ ಹಾರಿ ಹೋಗಿದೆಯೆಂದು' ಹೇಳಿದ್ದಲ್ಲದೆ ತನ್ನೊಡನೆ ಪಟೇಲರೇ ಬರಬೇಕೆಂದನು. ಅಜ್ಜಯ್ಯನವರು ತಾನೋ ಹೋಗದೆ ತಮ್ಮ ಕೋವಿಯನ್ನು ಆತನ ಕೈಗಿತ್ತು ಪೆಟ್ಟಾದ ಹಂದಿ ಬಿದ್ದಿರುವ ನೆಲೆಯನ್ನು ಜಾಗ್ರತೆಯಾಗಿ ಹುಡುಕುವಂತೆ ಅವನನ್ನು ಕಳುಹಿಸಿದರು. ಬೇರಾರು ಇತರ ಈಡುಗಳನ್ನು ಹೊಡೆದುದೆಂದು ವಿಚಾರಿಸುವಾಗ ನನ್ನ ತಂದೆಯವರ ಒಂದು ಈಡಿಗೆ ಮರ್ಮ ತಪ್ಪಿ ಪೆಟ್ಟುತಿಂದ ಹಂದಿ ಓಡಿತೆಂದೂ ಚಿಕ್ಕಪ್ಪ ಹೊಡೆದ ಒಬ್ಬನು ಹೊರುವ ಕಿರು ಹಂದಿಯೊಂದು ಬಿದ್ದಿದೆಯೆಂದೂ ಗೊತ್ತಾಯಿತು. ಮತ್ತೊಂದು ಈಡುಮಾಡಿದವರಾರೆಂದು ವಿಚಾರಿಸುವಾಗ ಉತ್ತರಿಸುವವವರೇ ಇಲ್ಲ! ಕಳ್ಳಕೋವಿಯಿಂದ ಹೊಡೆದ ಈಡು ತನ್ನದೆಂದು ಕಲೆಕ್ಟರರ ಮುಂದೆ ಹೇಳಿಕೊಳ್ಳುವವರಾರು? ಹೋ, ಅದೇನು? ''ಢಂ'' ಎಂದಿತು ಈಡಿನ ಸದ್ದು! ದೊಳ್ಳ ಪೂಜಾರಿಯದೇ ಎಂದರಿತ ಕಲೆಕ್ಟರರೂ, ಹಿರಿಯರೂ ಮತ್ತೊಂದು ಒಂಟಿಗ ಹಂದಿಯು ದೊರೆಯಿತೆಂಬ ತೃಪ್ತಿಯ ಮುಖಭಾವವನ್ನು ಪ್ರದರ್ಶಿಸಿದರು. ಸೋವತರು ಬಿದ್ದ ಮೃಗಗಳನ್ನು ಪಳ್ಳಿ ಕಂಡದೆ ಪಳ್ಕೆಯಲ್ಲಿ ಒಟ್ಟುಗೂಡಿಸಿದರು. ಮುಂದಿನ ಕಾಡನ್ನು ಸೋವಲು ಹೋಗುವುದೆಂಬ ನಿರ್ಣಯವು ಆ ಮೊದಲೇ ಆಗಿದ್ದುದರಿಂದ ಎಲ್ಲರೂ ಓಡೋಡಿ ಅಜ್ಜಯ್ಯನವರ ನಿರ್ದೇಶನದಂತೆ ಕೆಲಸಕ್ಕೆ ಅಣಿಯಾದರು. ನಾಲ್ಕು ಜನರು ನಾವು ಹೊಡೆದ ಜಿಂಕೆಯನ್ನು ತರಲು ಹೋದರು. ಹತ್ತು ಜನರು ಕಲೆಕ್ಟರರು ಹೊಡೆದ ಹಂದಿಯ ಕೈಕಾಲನ್ನು ಕಾಡಬಳ್ಳಿಯಿಂದ ಬಿಗಿಯಾಗಿ ಕಟ್ಟಿ ಅದರ ಸಂದಿಯಲ್ಲಿ ಬಗೆಯನ್ನು

ತುರುಕಿದರು. ಮುಖವನ್ನು ಅದರ ದಾಡೆಯು ಎಡೆಯಿಂದ ಪುಂಡಿನಾರ ಹಗ್ಗವನ್ನು ತುರುಕಿಸಿ ಅಲ್ಲಾಡದಂತೆ ಬಡಿಗೆಗೆ ಬಿಗಿದು ಕಟ್ಟಿ ಐದೈದು ಜನರು ಕೂಡಿ ಎತ್ತಿದರು. ಆದರೆ ಅವರಿಂದ ಹಂದಿಯನ್ನು ಮೇಲೆತ್ತಲಾಗಲಿಲ್ಲ. ಬಳಿಯಲ್ಲಿ ನಿಂತಿದ್ದ ಕಲೆಕ್ಟರರು ಪೇದೆಯ ಕೈಯಿಂದ ರೈಫಲನ್ನು ಸೆಳೆದು ನನ್ನ ಕೈಗೆ ಕೊಟ್ಟು, ಪೇದೆಯನ್ನುದ್ದೇಶಿಸಿ, ''ಹೂಂ ನೋಡುವುದೇನು? ಕೊಡು ಹೆಗಲು'' ಎಂದರು. ಹಾಗೆಂದ ಕಲೆಕ್ಟರರು ಅದೇ ಠೀವಿಯಲ್ಲಿ ಕುಂಞಿಮೋನುವಿನತ್ತ ನೋಡಿದಾಗ ಅವನ ಮುಖದ ಬಣ್ಣವೇ ಬದಲಾಗತೊಡಗಿ ಮೆಲ್ಲನೆ ಕಾಲ್ತೆಗೆಯಲು ಅನುವಾದ! ಅಚ್ಚರಿಗೊಂಡ ದೊರೆಗಳು ಕಾರಣವನ್ನು ಕೈಸನ್ನೆಯಿಂದಲೇ ವಿಚಾರಿಸಿದಾಗ ಅಜ್ಜನವರು, ''ಮುಸಲ್ಮಾನರಿಗೆ ಹಂದಿಯು ಹರಾಂ. ಅವರು ಅದನ್ನು ಮುಟ್ಟುವವರಲ್ಲ'' ಎಂದು ವಿವರಣೆ ನೀಡಿದರು. *'It is so ?'* ಎಂದು ಉದ್ಗರಿಸಿದ ದೊರೆಗಳು ಕುಂಞಿಮೋನುವನ್ನು ''ಬೇಡ, ಬೇಡ'' ಎಂದು ತಡೆದು ಅವನನ್ನು ಸಂದಿಗ್ಧತೆಯಿಂದ ಪಾರುಗೊಳಿಸಿದರು. ಅಷ್ಟರಲ್ಲಿ ಆಳುಗಳು ದೂರದಿಂದ ಜಿಂಕೆಯನ್ನು ಹೊತ್ತು ತರುವುದನ್ನು ಕಂಡ ನಮ್ಮ ದೃಷ್ಟಿಯೆಲ್ಲ ಆ ಕಡೆಗಾಯಿತು. ಗಂಡುಬೀರಿಯಂತೆ ಚೋಮುವು ಬರಿಂಕವನ್ನೂ ಬೆಳ್ತನ ಬಿಲ್ಲನ್ನೂ ಹೆಗಲಲ್ಲಿ ಹಾಕಿಕೊಂಡು ಮುಂದಾಗಿ ಬರುತ್ತಿದ್ದಳು. ಹಿಂದಿನಿಂದ ನಾಲ್ಕು ಜನರೊಂದಿಗೆ ಸಹಾಯಕನಾಗಿ ಬರುವ ಬೆಳ್ತನ ನೇತೃತ್ವದಲ್ಲಿ ಕೈಕಾಲುಗಳನ್ನು ಕಟ್ಟಿ ಜೋತಾಡಿಸಲ್ಪಟ್ಟ, ಕವಲು ಕವಲಾಗಿ ಬಾಗಿದ ನೀಳ ಕೊಂಬಿನ ಅಂದದ ಜಿಂಕೆಯನ್ನು ಕಂಡ ದೊರೆಗಳು ಅಜ್ಜಯ್ಯನವರ ಮುಖ ನೋಡಿ, 'ಚಿಂತಿಲ್ಲ; ನೀವು ಕುಶಲ ಈಡುಗಾರರಾಗಿರುವುದು ನಿಶ್ಚಯ' ಎಂಬಂಥ ಮೆಚ್ಚಿನ ಮುಖಭಾಗವನ್ನು ಪ್ರಕಟಿಸಿದರು. ಮೃಗವನ್ನು ಹೊತ್ತು ತಂದವರು ದೊರೆಗಳ ಮುಂದಿಳುಹಿದಾಗ ಆ ಮೊದಲೇ ತಂದ ಹಂದಿಯನ್ನು ಪಳ್ಳಿಗದ್ದೆಗೆ ಹೊರಲು ಆಜ್ಞಾಪಿಸಿದರು. ಪ್ರಯಾಸದಿಂದ, ಕೊರಕಲು ದಾರಿಯಲ್ಲಿ ಮುನ್ನಡೆಯಬೇಕಾಗಿದ್ದರೂ ಬೇಟೆಯ ಉತ್ಸಾಹಿಗಳು ಮಾಂಸದಾಸೆಯ ಉಲ್ಲಾಸದಿಂದ ಆ ಕಷ್ಟದ ಹೊರೆಯನ್ನೂ ಹೊತ್ತುತಂದು ಪಳ್ಳಿಗದ್ದೆಯ ಪಲ್ಕೆಯಲ್ಲಿ ಮೂಡುಪಡುವಾಗಿಟ್ಟರು. ಜಿಂಕೆಯನ್ನು ತರಲು ಪುನಃ ಹೊರಟುದಾಯಿತು. ಹಸನ್ಮುಖನಾಗಿ ಕೋವಿಯನ್ನು ಹೆಗಲಿಗೇರಿಸಿಕೊಂಡು ಬರುವ ದೊಳ್ಳ ಪೂಜಾರಿಯನ್ನು ವಿಚಾರಿಸಿದಾಗ ಆ ಹಂದಿ ಹದಿನಾರು ಜನರು ಹೊರುವ ಗಾತ್ರದ್ದೆಂದು ತಿಳಿಸಿದ. 'ಇಂದು ಅಮಾವಾಸ್ಯೆಯಾದುದರಿಂದ ಹಂದಿಯ ಮೈಮೇಲಿನ ಭೂತವು ಆಹಾರ ತೆಗೆದುಕೊಳ್ಳಲು ಗುಡಿಯಲ್ಲಿ ನಿಂತಿದ್ದರಿಂದಲೇ ಮೊದಲ ಈಡಿಗೇ ಸೋತಿತೆಂದೂ, ಬಹುಪ್ರಾಣವುಳ್ಳದ್ದಾದುದರಿಂದ ಸ್ವಲ್ಪ ದೂರ ಪೆಟ್ಟಾದ ನಂತರವೂ

ಹೋದುದೆಂದೂ' ಸಾಹಸ,ಸಂತೋಷಗಳ ಸಮ್ಮಿಳನದ ನಗುಸೂಸಿ ನುಡಿದ. ಬೇಟೆಗೆ ಬಲಿಯಾದ ಮೂರು ಹಂದಿಗಳು, ಜಿಂಕೆ, ಬರಿಂಕಗಳನ್ನು ಕುತೂಹಲದ ದೃಷ್ಟಿಯಿಂದ ಅತಿಥಿಗಳೆಲ್ಲ ಆನಂದಭರಿತರಾಗಿ ಗಮನಿಸುತ್ತಿದ್ದಾರೆ. ಆಗಿರುವ ಭರ್ಜರಿ ಬೇಟೆಯ ಕಾರಣದಿಂದ ಬೀಗಿ ಬೇಟೆಗಾರರೂ, ಸೋವತರೂ ಎಲೆಯಡಿಕೆ ಮೆಲ್ಲುವ ಸಂಭ್ರಮದಲ್ಲಿದ್ದಾರೆ. ಅತಿಥಿಗಳು ಮುಂದಿನ ಕಾಡು ಸೋವ ಸಿದ್ಧತೆ ಮಾಡುತ್ತಿದ್ದಾರೆ.

ಇದ್ದಕ್ಕಿದ್ದಂತೆ, ನಾಯಿಗಳು 'ವೌ,ವೌ ' ಎಂದು ಎದ್ದೋಡತೊಡಗಿದವು. ಬಿಲ್ಲಿನಿಂದ ಒಗೆದ ಅಂಬಿನಂತೆ ಕಾಡುಮೇಕೆಯೊಂದು ದೊರೆಗಳೂ ಅಜ್ಜಯ್ಯನವರೂ ಕುಳಿತಲ್ಲಿಗೆ ಎದುರಾಗಿ ಹತ್ತಾರು ಮಾರು ನೆಗೆತವನ್ನು ಒಮ್ಮೆಲೇ ನೆಗೆಯಿತು ! ಪುಟಿದು ಹಾರುವ ಕಾಲ್ಚೆಂಡಿನ ನೆಗೆತ ಆ ಜಿಂಕೆಯದು. ದೊಳ್ಳ ಪೂಜಾರಿಯು ತಂದುಕೊಟ್ಟ ತಮ್ಮ ಕೋವಿಯನ್ನು ಎದೆಗೇರಿಸುತ್ತಾ ಅಜ್ಜಯ್ಯನವರು ಎಡನೆ ದೊರೆಗಳನ್ನುದ್ದೇಶಿಸಿ, ''ದೊರೆಗಳೇ ಅದೋ ಕಾಡುಮೇಕೆ, ಹೊಡೆಯಿರಿ'' ಎಂದರು. ದೊರೆಗಳು ಗುರಿ ನೋಡುತ್ತಿದ್ದಾರೆ. ಅಜ್ಜಯ್ಯನವರೂ ಸೆಟೆದು ನಿಂತು ಕೋವಿಯನ್ನು ಎದೆಗಾನಿಸಿ ಶಿಸ್ತು ನೋಡುವುದರಲ್ಲಿದ್ದರು. ದೊರೆಗಳೆಂದರು, ''*Sorry. that,s out of reach !*'' ದೊರೆಗಳ ಬಾಯಿಯಿಂದ ಈ ನುಡಿಗಳು ಹೊರಡುತ್ತಿದ್ದಂತೆ ಅಜ್ಜಯ್ಯನವರ ಕೋವಿಯು ಸದ್ದುಮಾಡಿ ಹೊಗೆಯುಗುಳಿತು ! ಕಲೆಕ್ಟರರೆಂದರು-''ಒಂದು ಈಡು ಹಾಳಾಯಿತು!'' ಅಜ್ಜಯ್ಯನವರು ಹೆಮ್ಮೆಯ ದನಿಯಲ್ಲಿ''ದೊರೆಗಳೇ ನಮ್ಮ ಹೀಗೆ- ಹೀಗೆ ಮಾಡೋ ಕೋವಿಯ ಈಡು ಎಂದೂ ಹುಸಿಯಾಗಿ ಹೋಗಲಿಕ್ಕಿಲ್ಲ'' ಎಂದೇ ಬಿಟ್ಟರು. ಉತ್ತರವಾಗಿ ದೊರೆಗಳು ''*Is it so? we shall see*'' ಎಂದವರೇ ''ಹೋಗಿ ನೋಡಿರೆಂದು''ಬಳಿಯಲ್ಲಿದ್ದ ಆಳುಗಳಿಗೆ ಆಜ್ಞೆಮಾಡಿದರು. ಧನಿ, ದೊರೆಗಳೊಳಗಿನ ಪಂಥವಲ್ಲವೆ? ನೋಡಿಯೇ ಬಿಡಬೇಕೆಂಬ ಉತ್ಸುಕತೆಯಿಂದ ಓಡಿದ ಕುಂಞಿಮೋನು, ಬೆಳ್ತರಿಗೆ ಅಜ್ಜಯ್ಯನವರೆಂದರು-''ನೋಡಿ, ಆ ಬೀಟಿಯ ಮರದ ಹಿಂದು, ಮುಂದು ಅದು ಬಿದ್ದಿರಬೇಕು. ಅಲ್ಲಿ ಸಿಗಲಿಲ್ಲವಾದರೆ ಅದು ಓಡಿರಲೂ ಸಾಕು. ಹೆಚ್ಚು ಹುಡುಕಬೇಕಾಗಿಲ್ಲ''ಎಂದು.

ಓಡಿದ ಕುಂಞಿಮೋನುವಿನ ಕಿರುಚಾಟದ- ಧನೀ, ಈಡೆ ಪೆಡಕ್ಕ್ನ್ನ್, ಬಿಸ್ಮಿಕೂಟ್ನ್ನೇ' (ಧನೀ ಇಲ್ಲಿ ಹೊರಳಾಡುತ್ತಿದೆ; ಚೂರಿ ಹಾಕಲೆ?) ಎಂಬ ಧ್ವನಿಯನ್ನು ಕೇಳಿ ಅರ್ಥೈಸಿದ ದೊರೆ ಗಳು ''ಹುರ್ರಾ, ಹುರ್ರಾ'' ಎಂದು ಎದ್ದವರೇ ಅಜ್ಜಯ್ಯನವರನ್ನು ಬಿಗಿದಪ್ಪಿ ಆಲಿಂಗಿಸಿದರು! ಅಜ್ಜಯ್ಯನವರಿಗಾದ ಗಲಿಬಿಲಿ ಅವರ ಮುಖದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಕುಂಞಮೋನು ಬ್ಯಾರಿಯ ಬಿಸ್ಮಿಗೆ

ಬಲಿಯಾದ ಮೇಕೆಯ ಕತ್ತಿನಿಂದ ರಕ್ತ ಸುರಿಯುತ್ತಿದೆ; ಬೆಳ್ತನೂ ಕುಂಞಮೋನುವೂ ಅದರ ಕೈ ಕಾಲುಗಳನ್ನು ಹಿಡಿದುಕೊಂಡು ಜೋತಾಡಿಸಿಕೊಂಡು ಬರುತ್ತಿದ್ದಾರೆ. ಅದರ ಕೋರೆಯು ಗೀರಿ ಗಾಯವಾಗದಂತೆ ತಮ್ಮ ಕಾಲುಗಳನ್ನು ದೂರ ಸರಿಸಿಕೊಂಡು ನಡೆದು ಬರುತ್ತಿದ್ದ ಅವರನ್ನು ನೋಡುವುದು ಕಣ್ಣಿಗೆ ಹಬ್ಬವೆನಿಸಿತ್ತು. ಅಜ್ಜಯ್ಯನವರನ್ನು ಅಪ್ಪುಗೆಯ ಬಂಧನದಿಂದ ಮುಕ್ತಗೊಳಿಸಿದ ದೊರೆಗಳು ತಮ್ಮ ಜೋಡುನಳಿಗೆಯ ಕೋವಿಯನ್ನು ಅಜ್ಜನವರ ಕೈಗಿತ್ತು ''ನಿಮ್ಮ ಈಡುಗಾರಿಕೆಗೆ ಇದು ಮೆಚ್ಚು-ಪರವಾನಿಗೆಯೊಂದಿಗೆ ! ನಿಮ್ಮಂಥ ಈಡುಗಾರರನ್ನು ನಾನು ಕಂಡಿಲ್ಲ. *Wish you every Success* ಎಂದರು. ಅಷ್ಟಲ್ಲದೆ ಅಲ್ಲಿಸೇರಿದ್ದವರಲ್ಲಿ ಕಳವು, ಕೊಲೆಯ ಆಪಾದನೆಗೆ, ಒಳಗಾಗದವರು ಪಟೇಲರಿಂದ ಅರ್ಜಿ ಬರೆಯಿಸಿ ಕೊಟ್ಟರೆ ತೋಟಿಕೋವಿ,ತುಂಬಿಸುವ ಕೋವಿಗಳನ್ನು ಯಾರಿಗೆ ಯಾವುದು ಬೇಕೋ ಅದನ್ನು ಹೊಂದಲು ಅವಕಾಶವೀಯುವುದಾಗಿ ಘೋಷಿಸಿದರು ! ಈ ನುಡಿಗಳನ್ನು ಆಲಿಸಿದವರಿಗಾದ ಆನಂದ ಅಷ್ಟಿಷ್ಟಲ್ಲ.

ಅಜ್ಜಯ್ಯನವರೆಂದರು ''ದೊರೆಗಳ ಔದಾರ್ಯಕ್ಕೆ ನಾವು ಕೃತಜ್ಞರು. ಇನ್ನು ಇಂದಿನ ಬೇಟೆಯನ್ನು ನಿಲ್ಲಿಸಬಹುದೆಂದು ತೋರುತ್ತದೆ. ಈಗಾಗಲೇ ಭರ್ಜರಿ ಬೇಟೆಯಾಗಿದೆ. ಕಾಡಿನ ಭೂತಕ್ಕೆ ಬಡಿಸುವ ಬಹುಮುಖ್ಯ ಕೆಲಸ ಈಗ ನಡೆಯಬೇಕು. ಅದನ್ನು ನೆರವೇರಿಸಿಯೆ ಮುಂದಿನ ಕೆಲಸಗಳಿಗೆ ತೊಡಗುವುದು ನಮ್ಮ ಸಂಪ್ರದಾಯ. ಅದಕ್ಕೆ ವ್ಯತಿರಿಕ್ತವಾಗಿ ನಡೆದರೆ ಕಾಡಿನ ದೈವಗಳ ಮುನಿಸಿಗೆ ಈಡಾಗಬೇಕಾದೀತು'' ಎಂದು. ದೊರೆಗಳು ಈ ಮಾತನ್ನು ಕೇಳಿ ''ಸಿಲ್ಲೀ'' ಎಂದದ್ದು ನಮ್ಮವರಿಗೆ ಅರ್ಥವಾಗಲಿಲ್ಲ. ಬೇಟೆಗೆ ಬಂದವರ ಬಹುಮತವು ಕಾಡಿನ ಬೂತಕ್ಕೆ ಬಡಿಸುವುದೇ ಆಗಿದ್ದುದರಿಂದ ದೊರೆಗಳೂ ಸಮ್ಮತಿಸಿದರು. ಸತ್ತ ಮೃಗಗಳನ್ನು ಒತ್ತಟ್ಟಿಗೆ ತೆಂಕು ಬಡಗು ಮುಖಮಾಡಿ ನಿಯಮದಂತೆ ಇರಿಸಲಾಯಿತು. ಬೈನೆ ಮರದ ಸೊಪ್ಪನ್ನು ಹರಡಿ ಅದರ ಮೇಲೆ ವಾಸನೆ ರುಚಿ ಇಲ್ಲದ ಮರದ ದಿಮ್ಮಿಗಳನ್ನು ಮಾಂಸಅಜಕ್ಕಳ ಮಾಡಲು ಇರಿಸಿದರು. ಕಾಡಿನ ದೈವಗಳನ್ನು ಬೋಂಟ್ರ ದೊಳ್ಳಪೂಜಾರಿಯು ಪ್ರಾರ್ಥಿಸಿಕೊಂಡು, ಮೊದಲ ಆಜಕ್ಕಳಕ್ಕೆ ದೊರೆಗಳು ಹೊಡೆದ ಹಂದಿಯನ್ನು ಆಯ್ದು, ಸಜ್ಜಾಗಿರಿಸಿದ ಬೈನೆಸೊಪ್ಪನ್ನು ಹರಡಿದ ಹುಲ್ಲುಗಾವಲಿನಲ್ಲಿ ತಂದಿಟ್ಟರು. ಸಂಪ್ರದಾಯದಂತೆ, ದೊಳ್ಳ ಪೂಜಾರಿಯು ಪ್ರಾಣಿಯಕತ್ತಿನೆಡೆ ತನ್ನ ಕಿನ್ನಿ ಕತ್ತಿಯನ್ನು ಇಟ್ಟು ಒತ್ತಿ ''ಮುಂದುವರಿಯಲಿ ಅಜಕ್ಕಳ'' ಎಂದು ಹೇಳಿದೊಡನೆಯೇ ಇದಕ್ಕಾಗಿ ಸಜ್ಜಾಗಿ ನಿಂತಿದ್ದ ಬೆಳ್ತನು ತನ್ನ ನಾರೆಕತ್ತಿಯನ್ನು ನೆಗೆದು ಅದನ್ನು ಅಂಗೈಯಲ್ಲೊಮ್ಮೆ ಮಸೆದುಕೊಂಡು ಹಂದಿಯ ಹಿಂದಿನ ತೊಡೆಗಳನ್ನು ಸೀಳುವಾಗ ನುರಿತ ಶಸ್ತ್ರವೈದ್ಯನು ಕೈಯ ಚಾಕಚಕ್ಯ ನೆನಪಿಗೆ

ರುವಂತಿತ್ತು. ಆಜಕ್ಕಳದಲ್ಲಿ ನುರಿತವಾದುದರಿಂದ ಸರಸರವೆಂದು ಕೊಯ್ಯುತ್ತಾ ಹೋದ ಅವನ ಕತ್ತಿಗೆ ಎಲ್ಲಿಯೂ ಹಂದಿಯ ಎಲುಬು ತಾಗಲೇ ಇಲ್ಲ. ಇವನ ಕೈಚಳಕಕ್ಕೆ, ಪಳಗಿದ ಹಿಡಿತಕ್ಕೆ ಸಿಲುಕಿದ ಕತ್ತಿ ಹಂದಿಯ ಗಂಟು, ಗಂಟುಗಳಲ್ಲಿ ಹರಿದು ನಿಂತು, ಒಮ್ಮೆ ಅತ್ತಿತ್ತ ತಿರುಗಿದಾಗ, ತನ್ನಿಂದ ತಾನಾಗಿಯೇ ಹಂದಿಯ ಮಾಂಸ ಬಿಚ್ಚಿಕೊಳ್ಳುತ್ತಿತ್ತು. ಒಮ್ಮೊಮ್ಮೆ ಟಕ್, ಟಕ್ ಎಂಬ ಶಬ್ದ ಮಾತ್ರ ಕೇಳಿಸುತ್ತಿತ್ತು. ಬಲದ ತೊಡೆಯನ್ನು ಕಿತ್ತು ಒಂದು ಬದಿಗಿರಿಸಿದ ಬೆಳ್ತ ಎಡತೊಡೆ, ಬಲ ಹಾಗೂ ಎಡ ಕೈಕಾಲನ್ನು ಒಂದು ರಾಶಿ ಮಾಡಿದನು. ಉಳಿದ ರುಂಡದೊಂದಿಗಿನ ಮುಂಡವನ್ನು ಅಂಗಾತ ಮಲಗಿಸಿ ಹಂದಿಯ ಕಿವಿಯನ್ನೊಮ್ಮೆ ಅದರ ಕುತ್ತಿಗೆಗೆ ಎಳೆದು ಮುಟ್ಟಿಸಿ, ಗುರುತು ಸರಿಯಾಗಿದೆಯೆಂದು ನಿಶ್ಚಯಿಸಿ ಕುತ್ತಿಗೆಯನ್ನು ಒತ್ತಿ ರುಂಡ ಮುಂಡಗಳನ್ನು ಬೇರ್ಪಡಿಸಿದ. ಅವನ ಶಕ್ತಿ, ಕುಶಲತೆಗಳನ್ನು ದೊರೆಗಳೂ, ಅತಿಥಿಗಳೂ ಬಿಟ್ಟ ಕಣ್ಣನ್ನು ಮುಚ್ಚದೆ ನೋಡುತ್ತಿದ್ದರು ! ರುಂಡವನ್ನೇ ಬಲದ ತೊಡೆಯ ಪಾಲಿಗೆ ಇರಿಸಿದ ಬೆಳ್ತನು ಕುತ್ತಿಗೆಯಿಂದ ಬಾಲದ ತನಕ ಹಂದಿಯ ಬೆನ್ನೆಲುಬಿನ ಕೆಳಗೆ ಎರಡಂಗುಲ ಬಲಕ್ಕೆ ಕರಕರವೆಂದು ನೀಳಕ್ಕೆ ತನ್ನ ಸೊಂಟದಿಂದ ತೆಗೆದ ಮೇಸೆಕತ್ತಿಯಿಂದ ಎಳೆದನು. ಆಗ ಅಂಗೈ ದಪ್ಪದ ಹಂದಿಯ ಸೊಂಟಗೆಯು ಬಿಳಿದಾಗಿ ಬಿರಿದು ನಿಂತುದರ ಒಳಗಡೆ ಕೆಂಪಾದ ಮಾಂಸದ ಭಾಗವು ಕಾಣುತ್ತಿತ್ತು. ಅದೇ ರೀತಿ ಎಡಭಾಗಕ್ಕೂ ಉದ್ದಕ್ಕೆ ಕತ್ತಿ ಹಾಕಿ ಆ ನಾಲ್ಕಂಗುಲ ದಪ್ಪದ ಚರ್ಮದ ಕುತ್ತಿಗೆ ಭಾಗವನ್ನು ಬಿಡಿಸಿ ಎರಡು ಕೈಯಲ್ಲಿಯೂ ಅದರ ತುದಿಯನ್ನು ಮೇಲೆತ್ತಿ ಎಳೆದನು. ಆಗ ಅದು ಸರ್ರೆಂದು ಸಲೀಸಾಗಿ ಬರುತ್ತಿರುವುದನ್ನು ಅತಿಥಿಗಳು ನೋಡುತ್ತಲೇ ಇದ್ದಾರೆ. ಇದೇ ರೀತಿಯಲ್ಲಿ ನಾಲ್ಕಂಗುಲ ಅಗಲ, ಶರೀರದುದ್ದದ ಸೊಂಟಗೆ ಚರ್ಮವನನು ಸುಲಿದನು ! ಅನಂತರ ಹಂದಿಯ ಶರೀರವನ್ನು ಮೇಲ್ಮೊಗವಾಗಿ ಮಾಡಿ ಇಬ್ಬರು ಅತ್ತಿತ್ತ ಆಧರಿಸಿ ಹಿಡಿದರು. ಆಗ ಬೆಳ್ತನು ಹಂದಿಯ ಗಂಟಲಿಗೆಹಾಕಿದಚೂರಿಯಿಂದ, ಜವುಳಿ ಅಂಗಡಿಯಲ್ಲಿ ದಪ್ಪ ವಸ್ತ್ರವನ್ನು ಅಂಗಡಿಯವನು ಕತ್ತರಿಯಿಂದ ಕತ್ತರಿಸುವಂತೆ, ಒಂದೇ ಸೀಳಿಗೆ ಸೀಳಿ ಅದರ ಹೊಟ್ಟೆಯಲ್ಲಿನ ಕರುಳು ಕಿಂಚಿತ್ತೂ ಗಾಯಗೊಳ್ಳದಂತೆ ಕೊಯಿದ ರೀತಿಯನ್ನು ಕಂಡು ಅತಿಥಿಗಳು ಬೆಟ್ಟು ಕಚ್ಚಿದರು ! ಎಲ್ಲಿಯಾದರೂ ಕರುಳಿಗೆ ಪೆಟ್ಟಾಗಿ ಮಲ ಹೊರಗೆ ಬಂದರೆ ಮತ್ತೆ ಮಾಂಸವನ್ನು ತೊಳೆದು ಶುದ್ಧಗೊಳಿಸಲು ಒಂದು ಹಂದಿಯನ್ನು ಅಜಕ್ಕಳ ಮಾಡುವಷ್ಟೇ ಸಮಯ ಬೇಕು ! ಪಕ್ಕೆಲುಬು ಬೆನ್ನೆಲುಬುಗಳನ್ನು ಎರಡೆರಡಾಗಿ ಕೊಯಿದು ಬೇರೆಯವರಿಗೆ ಅದನ್ನು ತುಂಡುತುಂಡಾಗಿ ಪ್ರತ್ಯೇಕಿಸಲು ಕೊಡಲಾಯಿತು. ನೀಳವಾಗಿರುವ ಬೆನ್ನು ಹುರಿಯನ್ನೊಮ್ಮೆ ಸರಿಯಾಗಿ ನೋಡಿ, ಅದನ್ನು ಸರಿಯಾಗಿ ಮೂರು ಭಾಗಗಳಲ್ಲಿ

ಗುರ್ತಿಸಿದ ಬೆಳ್ತ ಬೆನ್ನೆಲುಬನ್ನು ಕಸಕ್ಕನೆ ತನ್ನ ನಾರೆಕತ್ತಿಯಿಂದ ತುಂಡು ಮಾಡಿದನು. ಬಲದ ತೊಡೆಯನ್ನು ತಲೆಯ ಪಾಲಿಗೆ ಸೇರಿಸಿ, ಕರುಳಿನಲ್ಲಿ ಅಡಗಿದ್ದ ಚರ್ಬಿಯನ್ನು ಬಿಡಿಸಿ ತೆಗೆದು ರಾಶಿಗೆ ಹಾಕಿದನು. ಒಳಗಿದ್ದ ಖಲಿಜ, ಕಲ್ಲುಗುಂಡು ಪುಪ್ಪಸವನ್ನು ಮಾಸಂದ ರಾಶಿಗೆ ಇರಿಸಿದನು. ಅಷ್ಟು ಮಾಡಿ ಕೈಯನ್ನೊಮ್ಮೆ ಜಾಡಿಸಿ ಈ ಹಂದಿಯ ಅಜಕ್ಕಳದ ತನ್ನ ಕೆಲಸವಾಯಿತೆಂದು ಸೂಚಿಸಿ ದೂರದಲ್ಲಿ ನಿಂತಿದ್ದ ಚೋಮುವನ್ನು ನೋಡಿದ. ಆಕೆ, ಬಂದವಳೇ, ಕರುಳಿನ ರಾಶಿಯ ಬದಿಯಲ್ಲಿ ಗುಡ್ಡೆಗುಡ್ಡೆಯಾಗಿ ಬಿದ್ದಿರುವ ರಕ್ತದ ಗಟ್ಟಿಯನ್ನು ವಸ್ತ್ರದಲ್ಲಿ ಗಂಟುಕಟ್ಟಿ ಬದಿಗಿಟ್ಟು, ಕರುಳನ್ನು ಎತ್ತಿಕೊಂಡು ಶುದ್ಧಮಾಡಲು ಬದಿಯ ಹೊಳೆಯತ್ತ ಹೋದಳು. ಹಾಗೆ ಕಟ್ಟಿಸಿದ ರಕ್ತದ ಗಟ್ಟಿಯೂ, ಹಂದಿಯ ಕರುಳೂ ಬೆಳ್ತನಿಗೆ ಹಂದಿ ಮಾಂಸವನ್ನು ಅಜಕ್ಕಳ ಮಾಡಿದುದಕ್ಕೆ ಪ್ರತಿಫಲ. ಬೆಳ್ತನು ಎಲೆಗೆ ಸುಣ್ಣ ಹಚ್ಚಿ ತೀಡುತ್ತಾ ಮುಂದಿನ ಅಜಕ್ಕಳಕ್ಕೆ ಸಜ್ಜಾದ.

ಅಜ್ಜಯ್ಯನವರು ಕಲೆಕ್ಟರರನ್ನು ಕುರಿತು ''ದೊರೆಗಳೇ, ನೀವು ಮೊದಲು ಹೊಡೆದ ಹಂದಿಯ ದಾಯವನ್ನು ಕೈಗೊಳ್ಳಬೇಕು'' ಎಂದರು. ಇದರ ಅರ್ಥವಾಗದ ದೊರೆಗಳು ತನ್ನವರತ್ತ ನೋಡಿದರು. ಆಗ ವಿಠಲ ಪೂಂಜರು, ''ಮೊದಲು ಹಂದಿ ಹೊಡೆದವನ ಪಾಲನ್ನು ಸಂಪ್ರದಾಯ ಪ್ರಕಾರ ತೆಗೆದುಕೊಳ್ಳಬೇಕೆಂದು ನಿಮ್ಮೊಡನೆ ಕೇಳಿಕೊಳ್ಳುವುದು'' ಎಂದು ಸ್ಪಷ್ಟೀಕರಿಸಿದಾಗ ''ಯಾವ ಪಾಲು?'' ಎಂದು ಅವರು ಕೇಳಿದರು. ''ಹಂದಿಯ ಬಲ ಭಾಗದ ಅಂಗಗಳೂ, ನಡುಬೆನ್ನ ಹುರಿಯೂ, ತಲೆಯೂ ನಿಮ್ಮ ಪಾಲಿಗೆ ಬರುತ್ತದಲ್ಲದೆ ಇನ್ನು ಇದರಲ್ಲಿ ಬೀಳುವ ಕೊಟ್ಟ ಎಂಬ ಪಾಲೂ, ಕೋವಿಯಪಾಲೂ ನಿಮಗಿದೆ'' ಎಂದು ಉತ್ತರಿಸಿದರು. ದೊರೆಗಳು ಸ್ವಲ್ಪ ಅಸಮಾಧಾನ, ಅಚ್ಚರಿಯಿಯ ಮುಖ ಮುದ್ರೆಯಿಂದ ''ಇಷ್ಟೆಲ್ಲವೂ ಹಂದಿ ಹೊಡೆದ ಒಬ್ಬನಿಗಾದರೆ ಕಾಡಿನಲ್ಲಿ ನಿರಾಯುಧರಾಗಿ ಕಲ್ಲು ಮುಳ್ಳುಗಳನ್ನು ತುಳಿದು ಬೇಟೆಯನ್ನು ಕೋವಿಯ ಬಳಿಗೆ ಓಡಿಸಿ ತಂದ ಸೋವತನಿಗೆ ಏನು ಉಳಿಯುತ್ತದೆ? ಇದು ತಪ್ಪು. ಹೀಗೆ ಮಾಡುವುದರಿಂದಲೇ ನಿಮ್ಮೊಂದಿಗೆ ಬಡವರಾರೂ ಬೇಟೆಗೆ ಬರುವುದಿಲ್ಲ. ಇದು ಹೀಗಾಗಬಾರದು. ನಾನು ನಿಮ್ಮ ಅತಿಥಿ. ನಿಮ್ಮ ಒಪ್ಪಿಗೆಯಿಂದ ಮಂಗಳೂರಿಗೆ ಕೊಂಡುಹೋಗಲು ಸಿರ್ಕಾದಲ್ಲಿ ಹಾಕಿ ಇಡಲು ಸ್ವಲ್ಪ ಮಾಂಸವನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ನಿಮ್ಮೆಲ್ಲರ ಪ್ರಯತ್ನದಿಂದ ನಾನು ಗಳಿಸಿದ ಬೇಟೆಯ ಭಾರೀ ಪಾಲನ್ನು ನಾನೇ ತೆಗೆದುಕೊಳ್ಳುವುದಿಲ್ಲ. ಇದು ಎಲ್ಲರಿಗೂ ಸೇರಬೇಕು. ಎಲ್ಲವೂ ಹೀಗೆಯೇ ಆಗಬೇಕು'' ಎಂದು ಖಚಿತವಾದ ಮಾತುಗಳನ್ನಾಡಿದರು. ಇದನ್ನು ಕೇಳಿದ ಸೋವತರು ಒಮ್ಮೆ ಸಂತೋಷದಿಂದ ಮುಖವರಳಿಸಿ, ಅಂದಿನ ತನಕ ತಮಗೆ ಮೋಸ ಮಾಡುತ್ತಿದ್ದ ಗುರಿಕಾರರತ್ತ ಗೆಲುವಿನ ನೋಟವನ್ನು

ಬೀರಿದರು.

ಬೋಂಟ್ರ ದೊಳ್ಳ ಪೂಜಾರಿಯು ಹಾಗೆಯೇ ಆಗಲೆಂದು ಸಮ್ಮತಿಸಿದರೂ, ರೀತಿಯಂತೆ ತಾವು ತಮ್ಮ ಪಾಲನ್ನು ಸ್ವೀಕರಿಸುವುದಾಗಿ ಹೇಳಬೇಕೆಂದು ವಿನಂತಿ ಮಾಡಿಕೊಂಡನು. ದೊರೆಗಳು ಎದ್ದು ಗಂಭೀರವಾಗಿ ದಾಯದ ರಾಶಿಯ ಬಳಿಗೆ ಹೋಗಿ ಅದು ತಮಗೆ ಬಂತೆಂಬಂತೆ ಹಂದಿಯ ತೊಡೆಯನ್ನು ಮುಟ್ಟಿದರು. ಈ ರೀತಿ, ಮೂರು ಹಂದಿಗಳ ಮಾಂಸದ ರಾಶಿಯ ದಾಯ ತೆಗೆಯದುದರಿಂದ ಕಿರುಗುಡ್ಡೆಯಾಗಿ ಕಾಣುತ್ತಿತ್ತು. ಜಿಂಕೆಯ ಮಾಂಸದ ರಾಶಿಯು ಇದರ ಒತ್ತಿಗಿದ್ದುದು ಕಾಣುತ್ತಲೇ ಇರಲಿಲ್ಲ. ಬರಿಂಕವು ಚೋಮುವಿನ ಕಾಲಬುಡದಲ್ಲಿ ಬಾಯಿ ತೆರೆದು ಬಿದ್ದಿತ್ತು. ನಾಯಿಗಳು ಅಲ್ಲಲ್ಲಿ, ನಾಲಗೆ ಚಾಚಿ, ನಿಂತುಕೊಂಡು ನೆಕ್ಕುವ ಆಸೆಯಿಂದ ಅಜಕ್ಕಳವು ತೆರವಾಗುವುದನ್ನೇ ಕಾಯುತ್ತಿದ್ದವು.

ಮೇಕೆಯನ್ನು ಹದಮಾಡಲು ಹೋದ ಕುಂಞಿಮೋನುವು ತಿರುಗಿ ಬಂದು ಈ ಗೋಜಲಿಗೆ ಸೇರಿದರೆ ಆ ಮಾಂಸವೂ 'ಹರಾಂ' ಆಗುವುದೋ ಎಂಬ ಭೀತಿಯಿಂದ ಅದನ್ನು ಹೊತ್ತುಕೊಂಡು ಇನ್ನು ಈ ದಿನ ಬೇರೆ ಬೇಟೆಯ ಏರ್ಪಾಡು ಇಲ್ಲವೆಂದರಿತಾಗ ನಡೆದು ಮನೆ ಸೇರಿದ. ಕಾಡುಮೇಕೆ ಆತನ ಪಾಲಿಗೆ ದಕ್ಕಿದುದಕ್ಕೆ ಯಾರೂ ಆಕ್ಷೇಪಿಸಲಾರರು. ಕೋಳಿಯಿರುವಾಗ ಕೊಕ್ಕರೆಯನ್ನು ಬಯಸುವವರಾರು? ಬೇಕಷ್ಟು ಕಾಡುಹಂದಿಯ ಮಾಂಸವಿರುವಾಗ ಆ ಚಿಕ್ಕ ಮೇಕೆ ಯಾರಿಗೆ ಬೇಕು? ಬೆಳ್ತನು ಬರಿಂಕವನ್ನು ನಮ್ಮ ಮನೆಗೆ ಮುಟ್ಟಿಸಿ ಅಜ್ಜಿ, ತಾಯಿಯವರಿಂದ ಇಲ್ಲಿ ಅವನ ಪಾಲಿಗೆ ಬಂದ ಮಾಂಸ, ಚರ್ಬಿ ಬೋಟಿಗೆ ಬೇಕಾದ ಪದಾರ್ಥದ ಸಂಬಾರವನ್ನು ಪುಸಲಾಯಿಸಿ ಪಡೆಯುವನೆಂದು ನಾನು ಅರಿತಿದ್ದೆ. ಮನೆಯಲ್ಲಿ ಹೆಂಗಸರು ಹೆಣ್ಣು ಹಂದಿಯ ಮಾಂಸವನ್ನು ತಿನ್ನುತ್ತಿರಲಿಲ್ಲ.

ಕಾಡಿನ ಭೂತಕ್ಕೆ ಅಗೆಲು ಹಾಕಲು ಮಾಡುವ, ಹಂದಿಯ ಮಾಂಸದಅಡುಗೆಗೆ ಬೇಕಾದ ಪಾತ್ರೆಯನ್ನು ನೆರೆಯ ಗೌಡರ ಮನೆಯಿಂದ ಕಾಡುಹೊಡೆಯುವವರ ಲ್ಲೊಬ್ಬ ಹೊತ್ತು ತಂದನು. ಮೂರು ಕಲ್ಲುಗಳನ್ನು ಆಯ್ದು, ಮೂಡುಪಡು ಮೊಗವಾಗಿಟ್ಟು ಒಲೆಯನ್ನು ಸಿದ್ಧಗೊಳಿಸಿದ್ದಾಯಿತು. ಅದೇ ಮನೆಯಿಂದ ತಂದ ಒಂದು ಮುಟ್ಟಾಳೆಯಷ್ಟು ಮೆಣಸಿಗೆ ಹುಳಿಯನ್ನು ಸೇರಿಸಿ, ಬಳಿಯಲ್ಲಿ ಹರಿಯುತ್ತಿದ್ದ ಹೊಳೆಯಲ್ಲಿದ್ದ ನಯವಾದ ಗುಂಡುಕಲ್ಲೊಂದನ್ನು ಆಯ್ದು ಚಪ್ಪಟೆ, ಅಗಲದ ಕಲ್ಲೊಂದರಲ್ಲಿ ನಜ್ಜುಗುಜ್ಜಾಗುವಂತೆ ಜಜ್ಜಿ ಅರೆದ ಶಾಸ್ತ್ರವನ್ನು ಮಾಡಿ ಒಲೆ ಹೊತ್ತಿಸಿದರು. ಮಡಿಕೆಗೆ ಗೋರಿಗೋರಿ ಮಾಂಸವನ್ನು ತುಂಬಿಸಿ, ಆ ಸುಲಿದ ತೆಂಗಿನಕಾಯಿ ಗಾತ್ರದ ಮೆಣಸಿನ ಉಂಡೆಯಿಂದ ಸ್ವಲ್ಪ, ಸ್ವಲ್ಪವನ್ನು ಮಾಂಸದೊಂದಿಗೆ ಬೆರೆಸಿದುದನ್ನು ಕಂಡ ಪೂಂಜರೂ, ದೊರೆಗಳೂ-''ಸರಿಯಾಗಿ

ಉಪ್ಪು, ಹುಳಿ, ಮೆಣಸು ಬೆರೆಯದ ಇದನ್ನು ತಿಂದವರು ಕಾರಲಿಕ್ಕಿಲ್ಲವೆ?'' ಎಂದಾಗ ದೊಳ್ಳ ಪೂಜಾರಿ, ''ಅಡುಗೆಯಾಗಿ ಭೂತಕ್ಕೆ ಬಡಿಸಿಯಾಗಲಿ, ಭೂತವು ಸಂತೋಷವಾಗಿ ಇದನ್ನು ಕೈಕೊಂಡಿದ್ದರೆ ಮತ್ತೆ ಇದರ ರುಚಿ ನೋಡಿ. ನೀವು ಖಂಡಿತವಾಗಿಯೂ ಯಾವಾಗಲೂ ಭೂತಕ್ಕೆ ಅಗೆಲು ಹಾಕಿಯೇ ತೀರಬೇಕೆನ್ನುತ್ತೀರಿ, ನೋಡಿ''ಎಂದ. ಅತಿಥಿಗಳು 'ಅಯ್ಯೋ ಭ್ರಾಂತೇ' ಎಂಬಂತೆ ತಲೆಯಲ್ಲಾಡಿಸಿ ಮುಗುಳ್ನಕ್ಕರು.

ಕಾಡಿನ ಭೂತದ ಪೂಜಾರಿ ಚೆನ್ನಗೌಡನು ಆ ಮಣಗಟ್ಟಲೆ ಮಾಂಸಕ್ಕೆ ಬೇಕಾದ ಉಪ್ಪನ್ನು ಗೋರಿ ಗೋರಿ ಹಾಕಿ, ಒಂದು ಕೋಲಿನಿಂದ ಚೆನ್ನಾಗಿ ತಿರುವಿದನು. ಇಬ್ಬರು ಸೇರಿ ಆ ಪಾತ್ರೆಯನ್ನು ಉರಿಯುತ್ತಿದ್ದ ಒಲೆಯ ಮೇಲೆ ಎತ್ತಿ ಇರಿಸಿದರು. ಚೆನ್ನಗೌಡ ಉರಿಯುತ್ತಿದ್ದ ಕೊಳ್ಳಿಗಳನ್ನು ಮುಂದೂಡಿ, ತನ್ನ ಕೈಯನ್ನು ಬೊಗಸೆ ಮಾಡಿ, 'ಇದು ನೀರು, ಇದು ಇದಕ್ಕೆ ಹದವಾಗುವಷ್ಟು ಕೊತ್ತಂಬರಿ, ಜೀರಿಗೆ' ಎಂದು ಹಲವು ಸಂಬಾರಗಳ ಹೆಸರುಗಳನ್ನು ಹೇಳಿ ಮೂರು ಮೂರು ಬೊಗಸೆಯಂತೆ ಇಕ್ಕಿದ ನಟನೆ ಮಾಡಿದ್ದನ್ನು ಕಂಡ ಅತಿಥಿಗಳು ಅರ್ಥವಾಗದೆ ನಗುತ್ತಿದ್ದರು. ಮಾಂಸದ ಪಾತ್ರೆಯ ತಳದಿಂದ 'ಕೊಚ ಕೊಚ' ಎಂದು ಪದಾರ್ಥವು ಕುದಿ ಬರುವ ಸದ್ದು ಕೇಳುತ್ತಿದೆ. ಚೆನ್ನಗೌಡನು ತಳಹಿಡಿಯದಂತೆ ಸೌಟಿನಂತಹ ಕೋಲಿನಿಂದ ಮಗುಚುತ್ತಲೇ ಇದ್ದಾನೆ. ಗಂಟೆ ನಾಲ್ಕಾಗಿದೆ. ಮಧ್ಯಾಹ್ನದ ಊಟ, ಕಾಫಿ ಇಲ್ಲದೆ ಎಲ್ಲರಿಗೂ ಹೊಟ್ಟೆ ಚುರುಗುಟ್ಟುತ್ತಿದೆ. ಕೂಡಿದವರಲ್ಲಿ ಕೆಲವರು ನೆರೆಯ ಸುಂಕದಕಟ್ಟೆ ಪಟೇಲರ ತೋಟದಿಂದ ಬಾಳೆಯೆಲೆ ತಂದು ಅಗೆಲು ಹಾಕಲು ತಯಾರು ಮಾಡುವಾಗ ಬೆಂದ ಪರಿಮಳದಿಂದಲೇ ಪಾತ್ರೆಯನ್ನು ಕೆಳಗಿಳಿಸಲು ಸಮಯವಾಯಿತೆಂದು ಈತೆರನಾದ ಅಡುಗೆಯಲ್ಲಿ ಪಳಗಿದ್ದ ಚೆನ್ನಗೌಡನು ಅರಿತನು. ಅವನು ಸೌಟನ್ನು ಒಮ್ಮೆ ಹಾಕಿ ತಿರುವಿ ಅದನ್ನು ಮೇಲೆತ್ತುವಾಗ ಅದರಲ್ಲಿ ಕಚಕಚನೆ ಕುದಿ ಬರುತ್ತಿದ್ದ ಸಾರನ್ನು ಕಂಡು, ಬರಿ ಮಾಂಸವನ್ನು ಒಲೆಗಿಟ್ಟು ಇಷ್ಟು ನೀರು ಸಾರು ಹೇಗಾಯಿತು ಎಂದು ದೊರೆಗಳು ಅಚ್ಚರಿಪಟ್ಟರು. ನಾವು ನಂಬಿದ ಭೂತದ ಸತ್ಯಕ್ಕೆ ಇವರೆಲ್ಲ ಶರಣಾಗುವಂತಾಯಿತೆಂದು ನಮಗೆಲ್ಲ ಸಮಾಧಾನ. ಮಾಂಸದ ನೀರು, ಉಪ್ಪು ಸೇರಿ ಹದಪಾಕವಾಗಿದ್ದುದು ಆರಿದಾಗ ಮಾಂಸವು ಕಡಿಕಡಿಯಾಗಿ ದೊರೆಯುವುದೆಂದು ಅರಿತ ಹಳ್ಳಿಗರಿಗೆ ಇದೇನು ಹೊಸ ಅನುಭವವಾಗಿರಲಿಲ್ಲ. ದೊಳ್ಳಪೂಜಾರಿ ಮಾಂಸದ ಪಾತ್ರೆಯನ್ನು ಒಲೆಯಿಂದ ಕೆಳಗಿಳಿಸಿ ಹದಿನಾರು ಎಲೆಗಳನ್ನು ಶುದ್ಧಿಗೊಳಿಸಿ ಚಕ್ರಾಕಾರವಾಗಿ ಹಾಸಿದನು. ಅವುಗಳಿಗೆ ಮೂರು ಮೂರು ಸಟ್ಟುಗದಂತೆ ಗೋರಿಗೋರಿ ಬಡಿಸಿ ಉಳಿದ ಪದಾರ್ಥಕ್ಕೆ ಮುಚ್ಚಳವಿಟ್ಟು, ನಾಲ್ಕೈದು ಬೊಗಸೆಯಷ್ಟು ಕಿಸ್ಕಾರ ಹೂವನ್ನು ಆರಿಸಿ

ತಂದ ಬೋಂಟ್ರನು ಪಟೇಲರಿಗಿತ್ತು ಎಲ್ಲರೂ ಎದ್ದು ನಿಂತು ಪ್ರಾರ್ಥನೆ ಮಾಡಬೇಕೆಂದು ಅರಿಕೆ ಮಾಡಿಕೊಂಡನು.

ಅಜ್ಜಯ್ಯನವರು ಸಜ್ಜಾಗಿ ಬಂದ ಅತಿಥಿಗಳ ಕೈಗೆ ಹೂವನ್ನು ಹಾಕಿ ದೊರೆಗಳೂ ಏಳಬೇಕೆಂದೂ ವಿನಂತಿಸಿದರು. ದೊಳ್ಳ ಪೂಜಾರಿಯು ಮಾಡುವ ಪ್ರಾರ್ಥನೆಯು ದೈವ ಒಪ್ಪುವಂಥದ್ದು. ''ಹೊಡೆದ ಹಂದಿಯು ಮೊದಲೇ ಗಾಯಗೊಂಡದ್ದಾಗಿ ಕೊಳೆತಿರಲೂಬಹುದು. ಇಲ್ಲವೆ ಕತ್ತರಿಸಿದ ಮಾಂಸದಲ್ಲಿ ಕೊಳೆ ಇರಬಹುದು. ಹಾಕಿದ ಅಗೆಲಿನಲ್ಲಿ ತಪ್ಪಿರಬಹುದು. ಆದರೆ ನಾವಿದನ್ನು ಹೃತ್ಪೂರ್ವಕ ಭಯ, ಭಕ್ತಿಯಿಂದ ಬಡಿಸಿದ್ದೇವೆ. ಇದರಲ್ಲಿ ಬಂದ ತಪ್ಪುಗಳನ್ನು ಮನ್ನಿಸಿ, ಒಪ್ಪುಗಳನ್ನು ಸ್ವೀಕರಿಸಿ ಮುಂದಕ್ಕೆ ನಿನ್ನ ದಯೆಯ ಮದಿಪ್ಪನ್ನು ನಮಗಿತ್ತು ಯಾವೊಂದು ಸಿರ್ಕ್-ಸಂಕಟವೂ ಕಾಡಿನಲ್ಲಿ ನಡೆಯದಂತೆ ನಮ್ಮನ್ನು ಕಾಪಾಡುವುದು ನಿನ್ನ ಮದಿಪ್ಪಿಗೆ ಸೇರಿದ್ದು'' ಎಂದು ಕೈಯಲ್ಲಿದ್ದ ಹೂವನ್ನು ಅಗೆಲಿನತ್ತ ಎಸೆದು ಸಾಷ್ಟಾಂಗ ಎರಗಿದನು. ಇತರರೂ ತಮ್ಮ ಕೈಯಲ್ಲಿದ್ದ ಹೂವನ್ನು ಅಗೆಲಿನತ್ತ ಬೀರಿ ಕೈ ಮುಗಿದು ಹಿಮ್ಮೊಗವಾಗಿ ನಿಂತರು. ಒಬ್ಬನು 'ಅದೋ, ನೋಡಿ ಆನೆಯೊಂದನ್ನು ನುಸಿಯು ಕಚ್ಚಿಕೊಂಡು ಹೋಗುತ್ತದೆ' ಎಂದು ಎಲ್ಲರ ಗಮನವನ್ನೂ ಬೇರೆಡೆಗೆ ಸೆಳೆದನು. ಇದು ಬಟ್ಟ ಬಯಲಿನಲ್ಲಿ ಅರಣ್ಯದ ದೈವಗಳು ಬಂದು ತಮಗಾಗಿ ಸಮರ್ಪಿಸಲಾಗಿದ್ದ ಆಹಾರವನ್ನು ನೆರೆದವರು ಕಾಣದಂತೆ ಸ್ವೀಕರಿಸಲೆಂದು ಮಾಡುವ ಉಪಾಯ! ದೊನ್ನೆಯಲ್ಲಿದ್ದ ನೀರನ್ನು ಅಗೆಲಿನತ್ತ ಚಿಮುಕಿಸಿ ಮೊದಲ ಎಲೆಯನ್ನು ಎಳೆದು ಪ್ರಥಮ ಈಡು ಹೊಡೆದ ಪಟೇಲರಿಗೆ 'ಅಗ್ರ ಸಮ್ಮಾನ'ವನ್ನು ಒಪ್ಪಿಸಲಾಯಿತು. ದೈನ್ಯದಂದ ಎರಡೂ ಕೈಗಳನ್ನು ನೀಡಿ ಅವರು ತೆಗೆದುಕೊಂಡ ನೋಟವು ಅವರೆಷ್ಟು ದೈವಭೀರು ಎಂಬುದನ್ನು ಸ್ಪಷ್ಟಗೊಳಿಸುತ್ತಿತ್ತು. ಎರಡನೆಯ ಪಾಲು ಕಲೆಕ್ಟರರಿಗೆ. ಅದನ್ನು ಅವರ ಬಳಿಯಲ್ಲಿ ಚೆನ್ನಗೌಡನು ತಂದಿರಿಸಿದನು. ಬಂದ ಅತಿಥಿಗಳಿಗೆ, ದೊಳ್ಳ ಪೂಜಾರಿಗೆ ಪಾಲು ಕೊಟ್ಟ ಬಳಿಕ ಅಲ್ಲಿ ಉಳಿದುದು ಎರಡೇ ಪಾಲು. ಇದಕ್ಕೆ ಹಾಕಿದ ಉಪ್ಪು, ಹುಳಿ, ಮೆಣಸು ಸಾಲದೆಂದೂ, ನೀರಿಲ್ಲದೆ ಸರಿಯಾಗಿ ಬೆಂದಿರಲಿಕ್ಕಿಲ್ಲವೆಂದೂ ಅಭಿಪ್ರಾಯದಲ್ಲಿದ್ದ ಅತಿಥಿಗಳು ಆ ಮಾಂಸದ ತುಂಡುಗಳನ್ನು ತಿನ್ನಲು ಹಿಂದು ಮುಂದು ನೋಡುತ್ತಿದ್ದರು. ಇದನ್ನು ಕಂಡ ಪಟೇಲರ, ''ಖಾವಂದರು ಇದರ ರುಚಿ ನೋಡಬೇಕು'' ಎಂದರು. ಕೂಡಿದವರೆಲ್ಲ ಕೈಗೆ ಸಿಕ್ಕ ತೇಗ; ಬಣ್ಪು ಮರದ ಎಲೆಗಳನ್ನು ಕಿಳ್ಳಿ ಕಟ್ಟಿ ಹಿಡಿದುಕೊಂಡು ಬಡಿಸುವ ಚೆನ್ನಗೌಡನ ಬಳಿಗೆ ತಾನು ಮುಂದು ತಾನು ಮುಂದೆಂಬಂತೆ ಮುಗಿ ಬೀಳುತ್ತಿದ್ದರು. ನಾನು ಬರಿಗೈಯಿಂದ ಬದಿಯಲ್ಲಿ ನಿಂತಿದ್ದುದನ್ನು ಗಮನಿಸಿದ ದೊರೆಗಳು ಒಂದೆಲೆಯನ್ನು ನನಗೆ ಕೊಡುವಂತೆ ನಿರ್ದೇಶಿಸಿದರು. ಅತಿಥಿಗಳು ತಿನ್ನುವುದೋ

ಭೇಡವೋ ಎಂದು ಮೀನ ಮೇಷ ಮಾಡುವುದನ್ನು ಕಂಡ ಹಿರಿಯರೂ ಅವರೆಡೆಗೇ ನೋಡುತ್ತಿದ್ದರು. ಸೋವತರು ತಮ್ಮ ಪಾಲಿಗೆ ಬಂದುದನ್ನು ಕಬಳಿಸುವುದರಲ್ಲೇ ತಲ್ಲೀನರಾಗಿದ್ದಾರೆ. ನನ್ನ ಕೈಗೆ ಎಲೆ ಬಂದುದೇ ತಡ, ನಾನೊಂದು ತುಂಡು ಬಾಯಿಗೆಸೆದೆ. ಹದ ಉಪ್ಪು, ಹುಳಿ, ಖಾರ ಕಡಿಮೆಯಾಗಿ ಸರಿಯಾಗಿ ಬೆಂದಿದೆ! ಹಸಿವೆಯ ಪ್ರಭಾವದಿಂದಲೋ ಕಾಡ ಭೂತಗಳ ಕಾರಣಿಕದಿಂದಲೋ, ಚೆನ್ನಗೌಡನ ಕೈಗುಣದಿಂದಲೋ ಅಷ್ಟು ರುಚಿಯೆನಿಸಿ ಒಂದು ತುಂಡನ್ನು ಮುಗಿಸಿದ ಅನಂತರ ಮತ್ತೊಂದು ತುಂಡಿಗೆ ಕೈ ತನ್ನಿಂತಾನೇ ಮುಂದುವರಿ ಯುತ್ತಿತ್ತು. ಸಂಶಯ ಚಿತ್ತರಾಗಿದ್ದ ದೊರೆಗಳೂ ನಮ್ಮನ್ನೆ ಅನುಸರಿಸಿ ಬಾಯಿ ಚಪ್ಪರಿಸಿ ಎಲೆ ಖಾಲಿ ಮಾಡತೊಡಗಿದರು. 'ಹಸಿವೆಯಾದರೆ ಹುರಿ ಹಗ್ಗದ ಪದಾರ್ಥ' ಎಂಬ ಗಾದೆಗೆ ಅನುಗುಣವಾಗಿ ಎಲ್ಲರ ವರ್ತನೆಯಿತ್ತು! ಎಲೆಗಳು ಬರಿದಾಗ ತೃಪ್ತಿಯ ತೇಗನ್ನು ತೇಗಿದೆವು. ದೈವ ದೇವರಿಗೆ ತೃಪ್ತಿಯಾಯಿತೆಂದು ಹಿರಿಯರು ನಿರಾಳವಾಗಿ ಉಸಿರೆಳೆದರು. ಸೋವತರು ಮಾಂಸವನ್ನು ಕೊಟ್ಟ ಕಟ್ಟಿ ಒಂದೊಂದು ಪಾಲನ್ನು ಕಟ್ಟಿ ಇಟ್ಟಿದ್ದರು. ಕೋವಿಗೆ ಒಂದು ಕೊಟ್ಟ, ನಾಯಿಗೊಂದು, ಈಡುಗಾರನಿಗೊಂದು, ಕಾಡು ಹೊಡೆಯುವವರಿಗೆ ತಲೆಗೊಂದರಂತೆ ಎಂಬ ತೆರದಲ್ಲಿ ಪಾಲು ಸಿದ್ಧಮಾಡಿ ಒಂದೆಡೆ ಒಟ್ಟಿದರು. ನಾಯಿಗಳು ಬರಿದಾದ ಅಜಕ್ಕಳವನ್ನು ನುಗ್ಗಿ ರಕ್ತವನ್ನು ನೆಕ್ಕುತ್ತಿವೆ. ಎಲುಬು ಸಿಕ್ಕಿದವುಗಳು ಕಟ ಕಟ ಎಂದು ಕಡಿಯುತ್ತಿವೆ. ಅವರವರ ಪಾಲನ್ನು ತೆಗೆದು ಕೊಳ್ಳಲು ಬಂದ ಬೇಟೆಗಾರರು ಮುಗಿ ಬೀಳುತ್ತಿದ್ದಾರೆ. ದೊರೆಗಳೂ, ಅತಿಥಿಗಳೂ ಈ ನೋಟದಿಂದ ಆನಂದದ ನಗು ಬೀರುತ್ತಿದ್ದಾರೆ.

ದೊರೆಗಳೆಂದರು-''ಕತ್ತಲಾಗುತ್ತಾ ಬರುತ್ತಿದೆ. ನಾವಿನ್ನು ಬಂಗಲೆಗೆ ಹೋಗಿ ನಾಳೆಯ ಬೇಟೆಯ ವಿಚಾರವನ್ನು ಅಲ್ಲಿ ವಿಮರ್ಶಿಸೋಣ.'' ಒಡನೆ ಹಿರಿಯರೆಲ್ಲರೂ ಹೊರಡಲು ಸಿದ್ಧರಾದರು. ಊರವರು ಮಾತ್ರ ಕೊಟ್ಟ ಹಂಚಲು ಅಲ್ಲಿ ಉಳಿದರು. ಎಲ್ಲರೂ ಅವರವರ ಕೋವಿಗಳನ್ನು ಕೈಗೆತ್ತಿಕೊಂಡರು. ಆಗ ದೊರೆಗಳು ತಮ್ಮ ಜೋಡುನಳಿಗೆಯ ಕೋವಿಯನ್ನು ಎತ್ತಿ, ''ಕೊರಗಪ್ಪ ರೈಗಳೇ ಇತ್ತ ಬನ್ನಿ. ನನ್ನ ಕಾಣಿಕೆಯನ್ನು ಸ್ವೀಕರಿಸುವುದಿಲ್ಲವೇನು? ಇದು ಇಂದಿನಿಂದಲೇ ನಿಮ್ಮದು'' ಎಂದು ತೋಟೆಯ ಬೆಲ್ಟನ್ನು ಅವರ ಕತ್ತಿಗೆ ಹಾಕಿ ಕೋವಿಯನ್ನು ಕೊಟ್ಟು ಕೈಕುಲುಕಿದ ಆ ದೃಶ್ಯವು ಇಂದಿಗೂ ನನ್ನ ಕಣ್ಣ ಮುಂದೆ ನಿಲ್ಲುತ್ತದೆ. ನಮ್ಮವರೆಲ್ಲರ ಕೈಯಲ್ಲೂ ಕೋವಿಯಿದೆ. ಅಜ್ಜಯ್ಯನವರ ಆಳುಗಾತ್ರದ ಕೋವಿಯನ್ನು ಕುಂಞಿಮೋನುವಿನ ಕೈಯಲ್ಲಿ ಕೊಡೋಣವೆಂದು ನೋಡಿದರೆ ಆತ ನಾಪತ್ತೆ! ಅತ್ತಿತ್ತ ನೋಡಿದ ಅಜ್ಜಯ್ಯನವರು ಆಗಷ್ಟೇ ಸಿಕ್ಕಿದ್ದ ಹಗುರವಾದ ಜೋಡುನಳಿಗೆಯ ಕೋವಿಯನ್ನು ನನ್ನ ಕೈಗಿತ್ತು 'ಜಾಗ್ರತೆ, ಕಲ್ಲು ತಡವಿ ಬಿದ್ದು ಬಿಟ್ಟೀಯಾ, ಜೋಕೆ'

ಎಂದು ಎಚ್ಚರಿಸಿದರು. ಆ ಮುಹೂರ್ತವು ಅದೆಂತಹದೊ! ಅಜ್ಜಯ್ಯನವರು ತನ್ನ ಬೇಟೆಗಾರಿಕೆಯ ಜಾಣ್ಮೆಯನ್ನು ನನಗೆ ಧಾರೆಯೆರೆದು ಕೊಟ್ಟರೆ ? ಆ ಕ್ಷಣದಲ್ಲೇ ನನಗೂ ಅವ ರಂತೆ ನುರಿತ ಬೇಟೆಗಾರ ಬಂಟನಾಗಬೇಕೆಂಬ ಆಸೆ ಮೂಡಿತು. ಅದು ಅಂತರಾಳದಲ್ಲಿ ಬೇರೂರಿ, ಚಿಗುರಿಟ್ಟು ಬಲಿತು ಹೆಮ್ಮರವಾದುದು ಅಚ್ಚರಿಯಲ್ಲ.

ಅಜ್ಜಯ್ಯನವರಿಗೆ ದೊರಕಿದ ಸಮ್ಮಾನ, ಬಹುಮಾನದಿಂದ ಪ್ರಭಾವಿತನಾದ ನನ್ನಲ್ಲಿ ಬೇಟೆಗಾರನಾಗಬೇಕೆಂಬ ಹಂಬಲವುದಿಸಿ ಬೆಳೆಯುತ್ತಲೇ ನಾನು ಅಜ್ಜಯ್ಯನವರನ್ನೂ ಮೀರಿಸಿದ ಬೇಟೆಗಾರನಾಗುವ ಕನಸು ಕಾಣುತ್ತ ಮರುದಿನದಿಂದಲೇ ಅಭ್ಯಾಸಕ್ಕೆ ತೊಡಗುವ ಧ್ಯಾನದಿಂದ ಇಡೀ ದಿನ ಊಟವಿಲ್ಲದ್ದೂ ಮರೆತೆ. ನನಗೆ ತಕ್ಕುದಾದ ಕೋವಿಯೆಲ್ಲಿದೆ ? ಮದ್ದು ಗುಂಡುಗಳೆಲ್ಲಿಂದ? ಈ ಪ್ರಶ್ನೆಗಳು ಭೂತಾಕಾರವಾಗಿ ಮನದೆದುರು ನಿಲ್ಲುತ್ತವೆ. ಗಾಡಿಯಲ್ಲಿ ಕುಳಿತಿದ್ದ ಹಿರಿಯರು ಗಾಡಿ ಸಾಗುತ್ತಿದ್ದಂತೆ, ದೊರೆಗಳ ಔದಾರ್ಯ, ಅಜ್ಜಯ್ಯನವರ ಬಲ್ಮೆಗಳನ್ನು ಹೊಗಳುತ್ತ ಮಾತಾಡಿಕೊಳ್ಳುತ್ತಿದ್ದರು. ನಾನು ಮಾತ್ರ ನನ್ನ ಆವಶ್ಯಕತೆಗಳನ್ನು ಪೂರೈಸುವುದು ಹೇಗೆಂಬ ಒಗಟನ್ನು ಬಿಡಿಸುವುದರಲ್ಲಿ ಮಗ್ನನಾಗಿದ್ದೆ. ದೊರೆಗಳಿಂದ ಇನಾಮಾಗಿ ದೊರೆತ ಕೋವಿಯನ್ನೂ ತಮ್ಮ ತಮ್ಮ ಕೋವಿಗಳನ್ನೂ ಒಂದಿಗಿರಿಸಿ ಹಿರಿಯರು ಪರಿಶೀಲಿಸುತ್ತಿದ್ದಾರೆ. ನನ್ನತ್ತ ಒಮ್ಮೆ ದೃಷ್ಟಿ ಬೀರಿದ ನನ್ನ ಹಿರಿಯರು ನಾನು ಆಲೋಚನಾ ಮಗ್ನನಾಗಿ ಮಂಪರುಗಣ್ಣಿನಿಂದ ಇರುವುದನ್ನು ಕಂಡು 'ಹುಡುಗನು ಹಸಿವೆಯಿಂದ ಬಳಲಿ ಕಣ್ಣು ಕೂರುತ್ತಿದ್ದಾನೆ' ಎಂದರು. ನನ್ನ ನಿಜವಾದ ಹಸಿವೆಯಗುಟ್ಟು ಅವರಿಗೇನು ಗೊತ್ತು? ಅಷ್ಟರಲ್ಲಿ ಒಂದು ಯೋಚನೆ ಹೊಳೆಯಿತು ! ನಮ್ಮ ಗಾಡಿಹೋರಿಗಳನ್ನು ಕಟ್ಟುವ ಕೊಟ್ಟಿಗೆಯಲ್ಲಿ ನಮ್ಮದೊಂದು ಎತ್ತಿಕಟ್ಟುವ ಕಿರುನಳಿಗೆಯ, ಮದ್ದು ತುಂಬಿಸುವ ಕೋವಿಯಿದೆ. ಇದನ್ನು ಯಾರಿಗೂ ಗೊತ್ತಾಗದಂತೆ ತೆಗೆದು ಕೆಲಸ ಮುಗಿಸಿ ಇದ್ದಲ್ಲಿಯೇ ಇಡುವುದೇನೂ ಮಹತ್ತರ ಕೆಲಸವಲ್ಲ. ಆದರೂ ತಂದೆಯವರು ತಿಳಿದರೆ ನನ್ನ ಬೆನ್ನು ಹುಡಿಯಾದಂತೆಯೇ ಎಂಬುದನ್ನು ನಾನು ಅರಿಯದವನೂ ಆಗಿರಲಿಲ್ಲ. ಅಜ್ಜಯ್ಯನವರ ಮದ್ದಿನ ಚೀಲವು ನನ್ನಲ್ಲಿದೆ. ಅವರು ಮಾತಿನ ಸಂಭ್ರಮದಲ್ಲಿರುವಾಗ ಸದ್ದಾಗದಂತೆ ಕೇಪಿನ ಡಬ್ಬದ ಮುಚ್ಚಳವನ್ನು ತೆಗೆದು ೧೫,೨೦ ಕೇಪುಗಳನ್ನು ಚಡ್ಡಿಯ ಕಿಸೆಗೆ ಇಳಿಬಿಟ್ಟಾಯಿತು. ಗಾಡಿ ಗಡಗಡನೆ ಮುಂದುವರಿಯುತ್ತಿದೆ. ರಂಜಕದ ಡಬ್ಬವೂ ಮೇಲಕ್ಕೆ ಬಂತು. ಕತ್ತಿನ ಸ್ಕಾರ್ಫನ್ನು ಮಗ್ಗುಲಲ್ಲಿ ಹಾಸಿ ಹತ್ತಿಪ್ಪತ್ತು ಬೂಚಿ ಮದ್ದನ್ನು ಸುರುವಿ ಮೆಲ್ಲನೆ ಮಡಚಿ ಕಿಸೆಗೆ ತೂರಿಸಿಯಾಯಿತು. ಅದೇ ರೀತಿಯಲ್ಲಿ ಚೀಲದ ಅರೆಗಳಿಗೆ ಕೈ ತುರುಕಿಸಿ ನಮೂನೆವಾರು ಚರೆ ಗುಂಡುಗಳನ್ನೂ ಲಪಟಾಯಿಸಿದೆ. ಪಿಲಿಮಜಲಿನಲ್ಲಿ ಗಾಡಿಯ

ಮೂತಿ ನೆಲ ಮುಟ್ಟಿತು. ಕೂಡಲೇ ನಾನು ಅಜ್ಜಯ್ಯನವರಿಗೆ ದೊರೆತ ಸಂಭಾವನೆಯನ್ನು ಮನೆಯಲ್ಲಿ ಉಸುರುವ ಉದ್ವೇಗದಿಂದೆಂಬಂತೆ ಗಾಡಿಯಲ್ಲಿಹಿರಿಯರನ್ನು ಹಿಂದೆ ಬಿಟ್ಟು ಕಂಬಿ ಕಿತ್ತೂ ಆಯಿತು. ನನ್ನ ಉಬ್ಬಿದ ಚಡ್ಡಿ ಕಿಸೆಯನ್ನು ಕಂಡು ವಿಚಾರಿಸುವುದಕ್ಕೆ ಮೊದಲು ಅದಕ್ಕೆ ಸೂಕ್ತ ತಾಣವನ್ನು ಕಾಣಿಸಬೇಕಲ್ಲ ? ಎರಡು ಮಾತಿನಲ್ಲಿ ಮನೆಯವರಿಗೆ ಅಂದಿನ ವರದಿಯೊಪ್ಪಿಸಿ ಬಹಿರ್ದೆಸೆಗೆ ಆತುರಾತುರವಾಗಿ ಹೋಗುವವನಂತೆ, ಮನೆಯಲ್ಲಿರುವವರನ್ನು ಗಮನಿಸದೆ ಚಡ್ಡಿ ಇಳಿಸಲು ನೋಡುವಾಗ ಅಮ್ಮ 'ಥೂ ನಾಚಿಕೆ ಕೆಟ್ಟವನೇ, ಚಡ್ಡಿ ಬಿಚ್ಚಲು ಮರೆಗೆ ಹೋಗು'' ಎಂದರು. ಮರೆಗೆ ಸರಿದು ಕಿಸೆಯಿಂದ ಮದ್ದುಗುಂಡುಗಳನ್ನು ತೆಗೆದು ನನ್ನ ಪುಸ್ತಕದ ಚೀಲಕ್ಕೆ ಸೇರಿಸಿ ಜೋಪಾನವಾಗಿಟ್ಟೆ. ಮನೆಯವರ ಹರ್ಷಚಿತ್ತದ ಮಾತುಕತೆಯನ್ನು ಆಲಿಸುತ್ತಾ ರಾತ್ರಿಯ ಊಟ ಮುಗಿಸಿ ಹಾಸಿಗೆಗೆ ತಲೆಕೊಟ್ಟದು ಮಾತ್ರ ಜ್ಞಾಪಕ; ಗಡದ್ದು ನಿದ್ರೆ. ಸೂರ್ಯಕಿರಣಗಳು ಅಂಗಳಕ್ಕೆ ಬಿದ್ದುದನ್ನು ಕಂಡ ತಾಯಿಯವರು ತಂಗಳುಣ್ಣಲು ಬಾರದ ನನ್ನನ್ನು ಎಚ್ಚರಿಸಲು ಬಂದು ಬೆನ್ನಿಗೆ ತಟ್ಟಿ 'ಸೋಮಾರಿ, ಏಳು. ಅದೋ ಬೇಟೆಗೆ ಹೋಗುವವರು ಬಂದು ಹೊತ್ತೆಷ್ಟಾಯಿತು !'' ಎನ್ನುವಾಗಲೇ ಎಚ್ಚರ.

ಮನೆಯಲ್ಲಿ ಸೇರಿದ್ದವರೆಲ್ಲ ಹಿಂದಿನ ದಿನದಂತೆ ಬೇಟೆಗೆ ಸಜ್ಜಾಗಿ ಹೊರಟರು ಉತ್ಸಾಹಹೀನನಾಗಿ ಮೂಲೆ ಹಿಡಿದಿರುವ ನನ್ನನ್ನು ಕಂಡು ಅಜ್ಜಯ್ಯನವರು 'ಮಗು, ಹೊರಡುವುದಿಲ್ಲವೆ?' ಎಂದರು. ತಂದೆಯವರು ದುರುಗುಟ್ಟಿ ನನ್ನತ್ತ ನೋಡುತ್ತಿದ್ದರು. ನಾನು ಕಾಲುನೋವೆಂದು ನೆವ ಹೇಳಿ ಅಜ್ಜಯ್ಯನವರ ಚೀಲ ಹೊರುವವನಾಗಿ ಹೋಗುವ ಕೆಲಸದಿಂದ ತಪ್ಪಿಸಿಕೊಂಡೆ. ನನ್ನ ಆಲೋಚನೆಯೇ ಬೇರೆ. ಗಾಡಿಯು ಹೊರಟ ಸದ್ದು ಮಜಲಿನತ್ತಣಿಂದ ಕೇಳಿದುದೇ ತಡ; ನಾನು ಕಾರ್ಯೋನ್ಮುಖನಾದೆ! ಮನೆಯಲ್ಲಿ ಹಿರಿಯರಾರೂ ಇಲ್ಲ. ಹೆಂಗಸರು ಹಂದಿಯ ಮಾಂಸವನ್ನು ಉಪ್ಪು ಹುಳಿ ಹಾಕಿ ಬೇಯಿಸಿ ಇಟ್ಟಿದ್ದರು. ರೊಟ್ಟಿ ಕಡುಬಿನ ಕೂಟಕ್ಕೆ ಬೇಕಾದ ಸಂಬಾರ ಹಾಕಿ ಸಜ್ಜುಗೊಳಿಸಲು ಅಡುಗೆ ಕೋಣೆಗೆ ನುಗ್ಗಿದ ಅವರಿಗೆ ಹೊರಬರಲು ಅವಕಾಶವಿಲ್ಲದಷ್ಟು ಕೆಲಸ. ನನ್ನ ಇರವನ್ನು ಅವರಾರೂ ಗಮನಿಸುವಂತಿಲ್ಲ. ಹೊಟ್ಟೆ ತುಂಬ ತಂಗಳುಂಡು ಮೆಲ್ಲನೆ ಹಿಂಬಾಗಿಲಿನಿಂದಲೇ ಗಾಡಿ ಕೊಟ್ಟಿಗೆಗೆ ಬಂದು ಹೋರಿಗಳು ಇಲ್ಲದಿದ್ದುದರಿಂದ ನಿರ್ಭೀತನಾಗಿ ಅಟ್ಟವೇರಿ ಬೈಹುಲ್ಲಿನೆಡೆಯಲ್ಲಿ ಇಟ್ಟಿದ್ದ ಕೋವಿಯನ್ನು ಹೊರಗೆಳೆದು ನೋಡಿದೆ. ಅಜ್ಜನ ಕೋವಿಯ ಅರ್ಧದಷ್ಟು ಭಾರವೂ ಇಲ್ಲ. ನಳಿಗೆಯೂ ಅದರ ಭಾಗಗಳೂ ಮನೆಯವರ ಕೋವಿಗಿಂತಲೂ ಗಟ್ಟಿಮುಟ್ಟಾಗಿದೆ. ಅದರ ಈಡಿನ ಭರವನ್ನು ಕೇಳಿ ಬಲ್ಲೆ. ಅದರ ಪೆಟ್ಟು ತಿಂದ ಮೃಗವು, ಎಷ್ಟೇ ದೊಡ್ಡದಿರಲಿ, ಇಪ್ಪತ್ತು ಮಾರು

ಓಡಿಲ್ಲವಂತೆ ! ತುಂಬು ಸಂತೋಷದಿಂದ ಕೋವಿಯನ್ನು ಹೊರತೆಗೆದು, ಯಾರಾದರೂ ಗಮನಿಸುವರೋ ಎಂದು ಒಮ್ಮೆ ಹೊರಗಿಣಿಕಿ ನೋಡಿ, ಧೈರ್ಯ ತಾಳಿ ಕೋವಿ ಹೆಗಲಿಗೇರಿಸಿ ಓಡಿದೆ. ಬಂದು ನಿಂತದ್ದೇ ಗಾಡಿ ಮಜಲಿನಲ್ಲಿ. ರಾಶಿ ಹಾಕಿದ್ದ ಹುಲ್ಲಿನಡಿಗೆ ಕೋವಿಯನ್ನು ತುರುಕಿಸಿ ಇಟ್ಟು ಏನೂ ಅರಿಯದವನಂತೆ, ಮನೆಗೆ ಬಂದು ಪುಸ್ತಕದ ಚೀಲವನ್ನು ತೆಗೆದು ಪುಸ್ತಕಗಳನ್ನು ಬದಿಗಿರಿಸಿ, ಚೀಲವನ್ನು ಹಾಗೆಯೇ ಹಿಡಕೊಂಡು ಪುನಃ ಮಜಲಿಗೆ ಓಡಿದೆ. ಬೇಟೆಯ ಘನಕಾರ್ಯದಲ್ಲಿ ತೊಡಗಲಿರುವ ನನಗೊಬ್ಬ ತೈನಾತಿ ಬೇಡವೆ? ದನ ಕಾಯುವ ಹೊಲೆಯರ ಹುಡುಗ ಮಲ್ಲು ನನ್ನ ಓರಗೆಯವ. ತನ್ನ ಕಲ್ಲ ಬಿಲ್ಲಿನಲ್ಲಿ ಸಣ್ಣ ಹಕ್ಕಿಗಳನ್ನು ಹೊಡೆದುರುಳಿಸುವುದರಲ್ಲಿ ನಿಪುಣ. ಆತನಿಗೆ ಬೇಟೆಯೆಂದರೆ ತುಂಬಾ ಇಷ್ಟ. ಬೆಳ್ತನಂತೆಯೆ ತಾನೂ ಆಗಬೇಕೆಂಬ ಚಪಲ. ನನ್ನದೂ ಅವನದೂ ಒಳ್ಳೆಯ ಜೋಡಿ; 'ಆ ಕಾಡು ಕೆಸುವಿಗೆ ಈ ಕಾರ ಅಂಬಟೆ' ಎಂಬ ಗಾದೆಯಂತೆ ! ಬೆಳಗ್ಗೆ ದನಗಳನ್ನು ಗುಡ್ಡೆಗೆ ಹೊಡೆ ಯಲು ಬಂದ ಅವನೊಡನೆ ನನ್ನ ಯೋಜನೆಯನ್ನೆಲ್ಲ ಹೇಳಿದೆ ಅವನು ಒಮ್ಮೆ ಹೆದರಿ, ''ಬೇಡ, ನಾನು ನಿಮ್ಮೊಂದಿಗೆ ಸೇರುವುದಿಲ್ಲ'' ಎಂದು ಹಿಂದೇಟುಹೊಡೆಯುವುದನ್ನು ಕಂಡು ತಂತ್ರದಿಂದ ನಾನೆಂದೆ. ''ಹ್ಞೂ, ನೀನು ಬರಬೇಕಾಗಿಲ್ಲ. ನಿನ್ನೆ ಗದ್ದೆಯ ಬಳಿಯಲ್ಲಿ ಬಿದ್ದಿದ್ದ ತೆಂಗಿನಕಾಯಿ ಯನ್ನು ನೀನು ಗೊರಬೆಯಲ್ಲಿ ಮುಚ್ಚಿಟ್ಟುಕೊಂಡು ಕಾಡಿಗೆ ಹೋಗಿ ತಿಂದದ್ದನ್ನು ಮನೆಯಲ್ಲಿ ಹೇಳುತ್ತೇನೆ ಅಷ್ಟೆ'' ! ಈ ಉಪಾಯ ಫಲಿಸಿತು. ಆತನು ವಿಧಿಯಿಲ್ಲದೆ ನನ್ನೊಡನೆ ಬರಲು ಒಪ್ಪಲೇ ಬೇಕಾಯಿತು. ಬೇಕಾದಷ್ಟು ತೆಂಗಿನ ನಾರನ್ನು ಸಂಗ್ರಹಿಸಿ ದನಗಳನ್ನು ಮೇಯಿ ಸಲು ಹೊರಟ ಮಲ್ಲುವಿನೊಂದಿಗೆ ಮನೆಯಿಂದ ಸುಮಾರು ಮುಕ್ಕಾಲು ಮೈಲು ದೂರವಿರುವ ಚಾಕೊಟೆ ಕೆರೆಗೆ ಕೋವಿಯೊಂದಿಗೆ ದನಗಳ ಹಿಂದಿನಿಂದ ಬಂದುದಾಯಿತು. ನಮ್ಮ ದನಗಳನ್ನು ಊರ ದನಗಳ ಮಧ್ಯೆ ಮೈದಾನಿನಲ್ಲಿ ಮೇಯಲು ಬಿಟ್ಟು, ಕೋವಿಯನ್ನು ಕ್ರಮವಾಗಿ ತುಂಬಿಸಿ, ಮೃಗದ ಅನ್ವೇಷಣೆ ಮಾಡುತ್ತಾ ಬಲ್ಲೆ, ಬಲ್ಲೆ ಅಲೆದೆವು. ಕಾಡು ಪಾರಿವಾಳ ಕೂಡ ಇಲ್ಲ ! ಹ್ಞಾ, ಅದೇನು, ಪೊದೆಯೆಡೆಯಿಂದ ಕಿವಿಯಾಡಿಸುತ್ತಿದೆ ? ಕತ್ತೆಮೊಲ! ಮಲ್ಲುವು ಸಂತೋಷದಿಂದ ನನ್ನನ್ನು ತಿವಿದು ಸನ್ನೆ ಮಾಡುತ್ತಿದ್ದಾನೆ. ನಾನು ಕುದುರೆಯನ್ನು ಎಳೆದು, ಬಿಟ್ಟ ಕಣ್ಣನ್ನು ಮುಚ್ಚದೆ ಮೊಲ ವನ್ನೇ ನೋಡುತ್ತಾ ನಿಂತೆ. ಕೋವಿಯ ಟ್ರಿಗರಿಗೆ ಕೈ ಹೋಯಿತು 'ಢಂ' ಎಂದಿತು ಕೋವಿ ! ಹೊಗೆಯುಗುಳಿತು ನಳಿಗೆ. ಏನಾಯಿತೆಂದು ನೋಡುತ್ತೇನೆ; ಮೊಲವು ಮಾರೆತ್ತರಕ್ಕೆ ನೆಗೆದು ಓಡಿ ಚೆಂಡೆಬಲ್ಲೆಯೊಂದಕ್ಕೆ ನುಗ್ಗಿತು. ಈಡು ಎಲ್ಲಿಗಾಗಿದೆ ಎಂದು ನೋಡಿದೆ. ನನ್ನ ಈಡು ನಮ್ಮಿಂದ ಮಾರು ಮುಂದೆ ನೆಲಕ್ಕೆ ತಾಗಿ ಮಣ್ಣಿನ ಹುಡಿಯು ಮೇಲೇಳುತ್ತಿದೆ. ನಾನು

ಎವೆಯಿಕ್ಕದೆ ನೋಡಿದುದು ಮಲಗಿದ ಮೊಲವನ್ನಲ್ಲದೆ, ಕೋವಿಯ ಶಿಸ್ತು ನೋಡಿರಲಿಲ್ಲ ! ಮಲ್ಲುವಿನ ಮನಸ್ಸಿನಲ್ಲಿ 'ಕಿನ್ನಿ ಬಾಣಾರು' ಕೂಡಾ ದೊಡ್ಡ ಬಾಣಾರುಗಳಂತೆ ಕುಶಲ ಈಡುಗಾರರೆಂದು ಭ್ರಮೆ ! ''ಏನು ಮಾಡಿದಿರಿ? ಇಸ್ಟು ಅಷ್ಟು ಸುಲಭದಲ್ಲಿ ನಮಗೆ ಮೊಲ ಸಿಗದು'' ಎಂದನು. ನನಗೆ ಅಭ್ಯಾಸದ ಹುಚ್ಚು ಹುರುಪು ! ''ನೋಡು, ನಾಳೆ ನಾಡಿದ್ದರಲ್ಲಿ ನಾನು ಮೊಲ ಹೊಡೆಯುತ್ತೇನೊ, ಇಲ್ಲವೊ'' ಎಂದವನೇ ಕೋವಿಗೆ ಈಡು ತುಂಬಿಸಿದೆ; ಮತ್ತೆ ಅನ್ವೇಷಣೆಗೆ ಪ್ರಾರಂಭ. ಚಾಕೊಟೆಕೆರೆಯ ಗೇರುಬೀಜದ ಕಾಡಿಗೆಬಂದು ಕಿವಿಗೊಟ್ಟಾಗ ಎರಡು ಕೇಂಕಣ ಹಕ್ಕಿಗಳು 'ಕುರ್ರೊ, ಕುರ್ರೊ' ಎನ್ನುವ ಶಬ್ದ ಕೇಳಿಸಿತು ಇಬ್ಬರೂ ಅಗಳಿನ ಮರೆಯಿಂದ ಮೆಲ್ಲಗೆ ಇಣಿಕಿ ನೋಡಿದೆವು. ಆ ಕೇಂಕಣಗಳೆರಡೂ ನೆಲವನ್ನು ಕಾಲುಗಳಿಂದ ಕೆದಕಿ ಗೆದ್ದಲು ಹುಡುಕಿ ತಿನ್ನುತ್ತಿದ್ದವು. ಅಗಳ ಮೇಲೆ ಕೋವಿಯನ್ನು ಇರಿಸಿ ಕೋವಿಯ ಮುಖಬಾಯಿ ಸರಿಯಾಗಿ ಹಕ್ಕಿಗಳಿಗೆ ಅಣೆಯುವಂತೆ ಮಾಡಿ ಹಕ್ಕಿಯ ಎದೆಭಾಗವನ್ನು ಕೋವಿಯ ಕಿಲೆಂಜಿಗೆ ಅಣೆಗೊಳಿಸಿ ಟ್ರಿಗರಿಗೆ ಕೈಹಾಕಿದೆ. ಕೋವಿಯು ಢಮ್ಮೆಂದಿತು. ಹಕ್ಕಿ ಬುರ್ರೆಂದು ಹಾರಿದ ಸದ್ದು ಕೇಳಿ 'ಅಯ್ಯೋ, ಇದೂ ತಪ್ಪಿದರೆ ಮಲ್ಲು ನನ್ನೊಂದಿಗೆ ಇಸ್ನು ಬರಲಾರನು' ಎಂದು ನನ್ನಲ್ಲೇ ಭಾವಿಸಿಕೊಂಡೆ. ನೋಡಿದರೆ ಒಂದು ಹಕ್ಕಿ ಹಾರಿ ತಪ್ಪಿಸಿಕೊಂಡಿದೆ; ನಾನು ಗುರಿಯಿರಿಸಿದ್ದ ಹಕ್ಕಿ ಸದ್ದಿಲ್ಲದೆ ಮಲಗಿದೆ. ಅದಕ್ಕೆ ಜೀವವಿದ್ದರೂ ಓಡಲು ಬಿಡೆನೆನ್ನುವ ಹುಮ್ಮನಸ್ಸಿನಲ್ಲಿ ಮಲ್ಲು ಒಂದೇ ನೆಗೆತಕ್ಕೆ ಓಡಿ ಅದನ್ನು ಬಿಗಿಹಿಡಿದು ಎತ್ತಿ ಗೆಲುವಿನ ದೃಷ್ಟಿಯಿಂದ ನನ್ನೆಡೆಗೆ ನೋಡಿದ. ನನ್ನ ಹೆಮ್ಮೆಗೆ ಪಾರವಿಲ್ಲ. ಕೇಂಕಣವೆಂದರೆ ಕೋಳಿಗಿಂತ ಕಿರಿದು. ಅದರ ಕಾಲಿಗೆ ಬಾಳು ಕಟ್ಟಿದಂತೆ ಎರಡೆರಡು ಮುಳ್ಳು, ಬಣ್ಣ ಕೆಂಚು ಕೋಳಿಯಜಾತಿಯ ಹಕ್ಕಿ; ಅದರ ಮಾಂಸ ಬಹಳ ರುಚಿ. ನನ್ನ ಪ್ರಥಮ ಬೇಟೆಯಂತೂ ಆಯಿತು. ಆದರೆ ಬಿದ್ದ ಹಕ್ಕಿಯನ್ನೇನು ಮಾಡುವುದು? ಮನೆಗೆ ಕೊಂಡುಹೋದರೆ ನನ್ನ ಗುಟ್ಟು ಬಯಲಾಗಿ ಪೆಟ್ಟಿನ ಸುರಿಮಳೆಯಾಗದಿರದು ! 'ಕೊಂದ ಪಾಪ ತಿಂದು ಪರಿಹಾರ' ಎಂಬಷ್ಟೇ ನನ್ನ ಅಂದಿನ ಪ್ರಜ್ಞೆ. ನನ್ನ ಮೊದಲ ಬೇಟೆಗೆ ಬಲಿಯಾದ ಅದನ್ನು ತಿಂದೇ ತೀರಬೇಕು. ಏನು ಮಾಡೋಣ? ಹೀಗೆ ಯೋಚಿಸುವಾಗ ಮಲ್ಲುವೇ ಸೂಚಿಸಿದ ಉಪಾಯ ನೆರವಿಗೆ ಬಂತು ! ಅದರಂತೆ ನಾನು ಸಮೀಪದ ಅಬ್ಬೋಕರೆ ಬ್ಯಾರಿಯ ಮನೆಗೆ ಹೋಗಿ 'ಮಲ್ಲುವಿಗೆ ಕೊದಿ ತಾಗಿ ಹೊಟ್ಟೆ ಉಬ್ಬರಿಸಿದ್ದಕ್ಕಾಗಿ ಕೊದಿಗೆ ಮಂತ್ರಿಸಲು ಅಗತ್ಯವಾಗಿ ಬೇಕೆಂದು' ಒಂದು ಹಿಡಿ ಉಪ್ಪು, ಸ್ವಲ್ಪ ಹುಳಿ, ನಾಲ್ಕು ಮೆಣಸು ಕೇಳಿದೆ. ನಿಜವೆಂದೇ ಭಾವಿಸಿದ ಅಬ್ಬೋಕರೆಯ ಹೆಂಡತಿ ಬೀಬಿ ಬ್ಯಾರ್ತಿಯು ಧನಿಗಳ ಮಗನೆಂಬ ಗೌರವದಿಂದ ಸ್ವಲ್ಪ ಹೆಚ್ಚೇ ಇರಲೆಂದು೬,೭ ಮೆಣಸು, ಉಪ್ಪು, ಹುಳಿ ಕೊಟ್ಟುದನ್ನು ತೆಗೆದುಕೊಂಡು

ಬಂದೆ. ಅಷ್ಟರಲ್ಲಿ, ಮಲ್ಲು ಕೆರೆಯ ಬಳಿಯಲ್ಲಿ ಹಕ್ಕಿಯಗರಿಗಳನ್ನು ಕಿತ್ತು ಸಮಮಾಡಿ, ಹದ ತುಂಡುಗಳನ್ನು ಏರ್ಪಡಿಸಿ ದೊಡ್ಡ ಬಂದನಾರು ಮರದ ತೊಗಟೆ ತೆಗೆದು ಅದರ ಆರೇಳು ಬೆರಳು ಅಗಲದ ಮಾರುದ್ದದ ನಾರನ್ನು ಅಣಿಗೊಳಿಸಿ, ನಾಲ್ಕೈದು ದಡ್ಡಾಲದ ಎಲೆಗಳನ್ನು ಆರಿಸಿ ಸಿದ್ಧ ಮಾಡಿದ್ದ. ನಾನು ತಂದ ಉಪ್ಪು, ಹುಳಿ, ಮೆಣಸನ್ನು ಕೆರೆಯ ಬಳಿಯಿದ್ದ, ಊರವರು ಬಟ್ಟೆ ಒಗೆಯುವ ಕಲ್ಲಿನಲ್ಲಿ ಹಾಕಿ ಅರೆದು, ಸರಿಗೊಳಿಸಿಟ್ಟ ಮಾಂಸಕ್ಕೆ ಲೇಪಿಸಿ ಎಲೆಯಲ್ಲಿ ಸುತ್ತಿ ಬಂದನಾರಿನಿಂದ ಚೆಂಡನ್ನು ಬಿಗಿಯುವಂತೆ ಬಿಗಿದು, ಕಾಲ್ಚೆಂಡ ಗಾತ್ರದ ಉಂಡೆಯನ್ನು ಮಾಡಿದ. ನೆಲವನ್ನು ದೋಣಿಯಾಕಾರದಲ್ಲಿ ಒಂದಡಿ ಅಗಲ ಆಳದ ಗುಂಡಿ ತೋಡಿದ. ಬಳಿಯಿದ್ದ ಹದನಾದ ಗಾತ್ರದ ಕಟ್ಟಿಗೆಯನ್ನು ಆಯ್ದು ಅವನ ಬಳಿಯಿದ್ದ ಬೆಂಕಿ ಪೊಟ್ಟಣವನ್ನು ಗೀರಿ ಒಲೆಗೆ ಬೆಂಕಿ ಹೊತ್ತಿಸಿದ. ಅದು ಉರಿಯಲು ಆರಂಭಿಸುವಾಗ ಒಲೆಗೆ ಅಡ್ಡ ಕಟ್ಟಿಗೆಯೊಟ್ಟಿ ಈ ಮಾಂಸದ ಚೆಂಡನ್ನು ಅದರ ಮೇಲಿಟ್ಟ. ಚೆಂಡಿನ ನಾಲ್ಕು ಬದಿಗೂ ಗೋರಿಯಂತೆ ಕಟ್ಟಿಗೆಯನ್ನು ಇಟ್ಟು ''ಇದು ಉರಿಯುತ್ತಲೇ ಇರಬೇಕು. ಎಲ್ಲಿಯಾದರೂ ಬೆಂಕಿ ನಂದಿ ಹೊಗೆವಾಸನೆ ಬಂದರೆ ಮಾಂಸವು ತಿನ್ನಲಿಕ್ಕೆ ಸಾಧ್ಯವಿಲ್ಲದಂತಾಗುತ್ತದೆ. ಜಾಗ್ರತೆಯಿಂದ ನೋಡಿಕೊಳ್ಳಿ. ನಾನು ಮೇಯಲು ಬಿಟ್ಟ ದನಗಳೆಲ್ಲಿವೆಯೆಂದು ನೋಡಿಬರುತ್ತೇನೆ ಇದು ಬೇಯುವಷ್ಟರಲ್ಲಿ ನಾನು ನೋಡಿ ಬರುತ್ತೇನೆ'' ಎಂದ. ನನ್ನ ಉತ್ತರಕ್ಕೂ ಕಾಯದೆ ಓಡಿಯೇ ಬಿಟ್ಟ. ನಾನು ಜಾಗರೂಕತೆಯಿಂದ ಬೆಂಕಿಯಿಂದ ಹೊಗೆಏಳದಂತೆ ಮಾಡಲು ಪ್ರಯತ್ನಿಸುತ್ತಿರುವಾಗ ಅಡ್ಡಲಾಗಿಟ್ಟ ಕಟ್ಟಿಗೆಯು ಉರಿದು ಮಾಂಸದ ಚೆಂಡಿನ ಭಾರಕ್ಕೆ ಕುಸಿದು ಚೆಂಡು ಒಲೆಗೆ ಬಿತ್ತು. ಏನು ಮಾಡುವುದೆಂದು ಆಲೋಚಿಸುವಾಗ ಮಲ್ಲು ದನಗಳನ್ನು ಮಂದೆಗೆ ಸೇರಿಸಿ ಓಡೋಡುತ್ತ ಬಂದವನೇ ಕೇಳಿದ. ''ಕಟ್ಟು ಒಲೆಗೆ ಬಿತ್ತೆ?'' ಎಂದು. ''ಹೌದು'' ಎಂದೆ ನಾನು. ಅವನು ಒಡನೆ ಕೋಲಿನಿಂದ ಅದನ್ನು ಒಲೆಯಿಂದ ನೂಕಿ ಮೇಲಕ್ಕೆ ತೆಗೆದು ಅತ್ತಿತ್ತ ಹೊರಳಾಡಿಸುವಂತೆ ಹೇಳಿದ. ಬೇಯತೊಡಗಿದ ಮೇಲೆ ಅದನ್ನು ಅವನು ಮುಟ್ಟಿದರೆ ಮೈಲಿಗೆಯಾಗುವುದಲ್ಲ ! ಅವನು ಹೊಲೆಯ, ಆದರೂ ನನಗಸಾಧ್ಯವಾದ ಕಷ್ಟದ ಕೆಲಸವೆಂದರೆ ನೀನೇ ಮಾಡು'' ಎನ್ನುತ್ತಿದ್ದೆ. ಅಲ್ಲದೆ ಬೆಂದ ಮೇಲೆ ಪಾಲು ಮಾಡಿಕೊಡುವ ಹಕ್ಕು ಕೂಡಾ ನನ್ನದಲ್ಲವೇ? ಹಾಗಾಗಿ ಅವನ ಸೂಚನೆಗೆ ಒಪ್ಪಿಕೊಂಡು ೧೦,೧೫ ನಿಮಿಷ ಅದನ್ನು ಆರಲು ಬಿಟ್ಟು ಹಗ್ಗವನ್ನು ಬಿಚ್ಚಿ ಒಳಗೆ ನೋಡುವಾಗ ಸುತ್ತಿದ್ದ ಎರಡು ಮೂರು ಎಲೆಗಳೂ ಕರಿದು ಹೋಗಿವೆ. ಇದನ್ನು ನೋಡಿದ ಮಲ್ಲುವು ''ಎಲ್ಲಾ ಎಲೆಗಳೂ ಹೀಗೆ ಬೆಂಕಿಗೆ ಸುಟ್ಟಿದ್ದರೆ ಒಳಗಿನ ಮಾಂಸವೂ ಸುಟ್ಟಿರಬೇಕು. ಅದು ಸುಟ್ಟಿದ್ದರೆ ತಿನ್ನಲು ಅಷ್ಟು ಸೊಗಸಾಗದು'' ಎಂದ.

ಹಬೆಯಾಡುತ್ತಿದ್ದ ಮಾಂಸದ ಚೆಂಡನ್ನು ಬಿಡಿಸಿಯಾಯಿತು. ಒಳಗಿನ ಎಲೆಯು ಸುಟ್ಟಿಲ್ಲ! ಎಲ್ಲ ಬಿಡಿಸಿದಾಗ ಮಾಂಸದಿಂದ ಏಳುವ ಹಬೆಗೆ ನಾಲಿಗೆಯಿಂದ ನೀರೊಸರಿತು. ಮಲ್ಲು ಓಡಿದವನೇ ಎಲೆಯೊಂದನ್ನು ತಂದು ನನ್ನ ಮುಂದಿಟ್ಟು ಎರಡು ತುಂಡನ್ನು ಅದರಲ್ಲಿ ಇಡುವಂತೆ ಹೇಳಿದ. ಇದನ್ನು ಕೇಳಿ ಎರಡು ತುಂಡು ಏಕೆಂದು ಪ್ರಶ್ನಾರ್ಥಕ ದೃಷ್ಟಿ ಬೀರಿದೆ. ''ಕಾಡು ಕೊಲೆಗಳಿಗೆ ತಿನ್ನುವ ತಿನಿಸನ್ನು ಇಟ್ಟು ಪ್ರಾರ್ಥಿಸದಿದ್ದರೆ ಅವುಗಳ ದೃಷ್ಟಿ ಬಿದ್ದು ಹೊಟ್ಟೆ ಉಬ್ಬರಿಸಿ ನಾಳೆ ಸತ್ತೇ ಹೋಗಬಹುದೆಂದು'' ಹೇಳಿದವನೇ ನಾನು ಇಕ್ಕಿದ ಎಲೆಯನ್ನು ಭಯ ಭಕ್ತಿಯಿಂದ ಎತ್ತಿ ಒಂದು ಕಾಸರಕನ ಮರದ ಬುಡದಲ್ಲಿ ಕಲ್ಲಿನಲ್ಲಿ ಮರೆಯಾಗಿಟ್ಟು ಬಂದ. ಅವನ ಪಾಲನ್ನು ಅವನಿಗೆ ಕೊಟ್ಟೆ; ತಿನ್ನಲು ಪ್ರಾರಂಭಿಸಿದೆವು. ಉಪ್ಪು ಸ್ವಲ್ಪ ಜಾಸ್ತಿಯೇ ಆಗಿ ಕಂಡರೂ ಹುರಿದ ಮಾಂಸದಂತೆ ಕುರು ಕುರು ಎನ್ನುತ್ತಿತ್ತು. ನನ್ನ ಮೊದಲ ಬೇಟೆಯ ರುಚಿಯನ್ನು ಮರೆಯುವುದುಂಟೇ? ನೆನೆದುಕೊಂಡರೆ ಇಂದೂ ನಾಲಗೆಯಲ್ಲಿ ನೀರೂರುತ್ತದೆ! ಕೆರೆಯಲ್ಲಿ ಕೈ ತೊಳೆದು, ಎರಡು ಬೊಗಸೆ ನೀರು ಕುಡಿದು ದಡಕ್ಕೆ ಬಂದು ವಿಶ್ರಮಿಸಿದಾಗ ನನ್ನ ಹೆಮ್ಮೆಗೆ ಪಾರವಿಲ್ಲ. ಮಲ್ಲುವನ್ನು ಹುಲ್ಲುಗಾವಲಿಗೆ ಕಳುಹಿಸಿದೆ. ಕೋವಿ, ಚೀಲಗಳನ್ನು ಹೆಗಲಿಗೇರಿಸಿ ಹೊರಗಿನಿಂದಲೇ ಬಂದು ಹಿಂದಿನಂತೆ ಗಾಡಿಯ ಕೊಟ್ಟಿಗೆಯಲ್ಲಿ ಕೋವಿಯನ್ನಿರಿಸಿ ಮನೆ ಸೇರುವಾಗ ಗೋಡೆಯ ಗಡಿಯಾರವು ಡಣ್, ಡಣ್ ಎಂದು ಎರಡು ಬಾರಿಸಿತು. ಹೊಟ್ಟೆಯು ಹಸಿವಿನಿಂದ ಚುರುಗುಟ್ಟುತ್ತಿತ್ತು. ಕಾಡಿನಲ್ಲಿ ತಿಂದದ್ದು ''ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ'' ಎಂಬಂತಾಗಿತ್ತು. ಬಂದವನೇ ಅಡುಗೆ ಕೋಣೆಗೆ ಹೋಗಿ ಮಣೆಯೆಳೆದುಕೊಂಡು ಕುಳಿತೆ. ಬಟ್ಟಲು ತೆಗೆದುಕೊಂಡು ಬಡಿಸಿ ತರಲು ಹೋದ ತಾಯಿಯವರು ಅದೇಕೆ ಬಾಗಿಲ ಮೂಲೆಗೆ ಕೈಲಿ ಹಾಕಿ ಹಿಡಿಸೂಡಿಯನ್ನು ತಡಕುತ್ತಿದ್ದಾರೆ? ಓ.... ನೆನಪಾಯಿತು! ಊಟಕ್ಕೆ ಕೂರುವ ಅವಸರದಲ್ಲಿ ಕೈಕಾಲು ತೊಳೆಯದೆ ಬಂದಿದ್ದೆ! ಎದ್ದು ಬಚ್ಚಲು ಮನೆಯ ಕಡೆ ಹೆಜ್ಜೆಯಿರಿಸಿದಾಗ ನೋಡಿ ನಗುತ್ತಾ ತಾಯಿಯವರು ''ಬೇಗ ಕೈಕಾಲು ತೊಳೆದ ಉಬಾ. ರೊಟ್ಟಿ ಪದಾರ್ಥ ಬಡಿಸಿ ಇಟ್ಟಿದ್ದೇನೆ ಬೆಕ್ಕು ತಿಂದೀತು'' ಎಂದರು. ಕೈ, ಕಾಲು, ಮುಖಗಳನ್ನು ತೊಳೆದು ತ್ವರಿತಗತಿಯಿಂದ ಬಂದು ಮಣೆಯಲ್ಲಿ ಕುಕ್ಕರಿಸಿದವನೇ ಬೇಕಾದಷ್ಟು ರೊಟ್ಟಿ, ಮಾಂಸ ಹೊಟ್ಟೆಗಿಳಿಸಿ ಮೇಲೆದ್ದು ಕೈತೊಳೆದು ಹೊರಜಗಲಿಗೆ ಬರುತ್ತಿದ್ದಾಗ ಮತ್ತೆ ತಾಯಿ ಎದುರಾದರು. ''ಸ್ವಲ್ಪ ಆ ಪುಸ್ತಕಗಳನ್ನು ಬಿಡಿಸಿ ನೋಡಬಾರದೇನೊ? ನಾಳೆಯೋ ನಾಡಿದ್ದೋ ಶಾಲೆ ಸುರುವಾಗುತ್ತದೆಂದು ಹೇಳಿದ್ದೆ. ನೀನು ಓದುವುದೇ ಕಾಣಿಸುವುದಿಲ್ಲ'' ಎಂದರು! ಬೇಟೆಯ ಹುಮ್ಮಸ್ಸಿನಲ್ಲಿದ್ದ ನನಗೆ 'ಶಾಲೆ' ಯೆಂಬ ಪದವೇ ಕಿವಿಗೆ 'ಶೂಲೆ' ಯಾಗಿ ಸುಪ್ಪತ್ತಿಗೆಯಲ್ಲಿದ್ದವನನ್ನು ತಿಪ್ಪೆಗೆ

ದೂಡಿದಂತಾಯಿತು ! ನನ್ನಷ್ಟಕ್ಕೆ ಗೊಣಗುತ್ತ ಕೋಣೆಗೆ ಬಂದು ಪುಸ್ತಕ ಬಿಡಿಸಿ ಹಿಡಿದು ಮಡಚಿಟ್ಟಿದ್ದ ಹಾಸಿಗೆಗೆ ಮೈಯೊರಗಿಸಿ ಓದಲು ಹವಣಿಸಿದೆ. ಅಲ್ಲಿಯೇ ಗಡದ್ದು ನಿದ್ರೆ ಬಂದದ್ದು ತಿಳಿಯಲೇ ಇಲ್ಲ. ಸೂರ್ಯನು ಮುಳುಗಿದನೆಂದು ತಿಳಿದ ಮಲ್ಲುವು ಮೇವಿಗೆ ಬಿಟ್ಟ ದನಗಳ ಹಿಂಡನ್ನು ಹಟ್ಟಿಗೆ ಹಿಂದಿರುಗಿಸುವಾಗ ಕೊಟ್ಟ ಉರಾಲು, ಬೀಜದ ಹೋರಿಯ ಕಿವಿಯಿರಿಯುವ ಗುಟುರುಗಳನ್ನು ಕೇಳಿ ಎಚ್ಚರಗೊಂಡೆ.

ಬೇಟೆಗೆ, ಬೆಳಗ್ಗೆಯೇ ಹೋಗಿದ್ದ ಹಿರಿಯರ ಸವಾರಿಯು ಗಾಡಿಯಲ್ಲಿ ಬಂದುದು ರಾತ್ರಿ ಸಾಧಾರಣ ಒಂಭತ್ತು ಗಂಟೆಗೆ. ಅಂದು ಕಾಡಿನಲ್ಲಿ ಇಪ್ಪತ್ತು, ಇಪ್ಪತ್ತೈದು ಈಡು ಹೊಡೆದಿದ್ದರೂ ಸಿಕ್ಕಿದ್ದು ಒಂದೇ ಹಂದಿ, ಒಂಟಿಗ ! ಅದನ್ನೂ ಕಲೆಕ್ಟರರೇ ಹೊಡೆದದ್ದು. ವಿಠಲ ಪೂಂಜರು ಹೊಡೆದ ಕಾಡುಕೋಣವು ಹತ್ತಿಪ್ಪತ್ತು ಜನರು ಹೊರುವಂಥ ಗಾತ್ರದ್ದು ! ಹೀಗೆಲ್ಲ ಬೇಟೆಯಿಂದ ಬಂದವರ ಮಾತುಕತೆಯಾಗುತ್ತಿದ್ದಾಗ ಅರಿತುಕೊಂಡೆ. ಆ ಕಾಡುಕೋಣವನ್ನು ಮಾಂಸ ಮಾಡಿ ಕೆಡದಂತೆ ಅರಿಸಿನ, ಉಪ್ಪು, ಹುಳಿ ಹಾಕಿ ಡಬ್ಬಿಯಲ್ಲಿ ತುಂಬಿಸಿ ದೊರೆಗಳಿಗೆ ಕೊಂಡುಹೋಗಲು ಕೊಟ್ಟರಂತೆ. ಹಂದಿಯನ್ನು ಹಿಂದಿನ ದಿನದಂತೆ ಪಾಲು ಮಾಡಿದುದೆಂದೂ ಗೊತ್ತಾಯಿತು. ಮರುದಿನ ಬೆಳಗ್ಗೆ ಕಾಫಿ ಮುಗಿಸಿ ದೊರೆಗಳು ಮಂಗಳೂರಿಗೆ ಹೊರಡುವರೆಂದೂ, ಮಂಗಳೂರಿನಲ್ಲಿ ಕಾಂಗ್ರೆಸಿಗರು ಗಲಾಟೆಗೆ ತೊಡಗಿದ ವರ್ತಮಾನ ಬಂದದ್ದರಿಂದ ಬೇಟೆಯ ದಿನಗಳನ್ನು ಮೊಟಕುಗೊಳಿಸಿ ಕೂಡಲೇ ಹೊರಡಬೇಕಾಯಿತೆಂದೂ ಹೇಳಿದರು. 'ಅಯ್ಯೋ, ಮತ್ತೊಮ್ಮೆ ದೊರೆಗಳನ್ನು ನೋಡುವ ಸಂದರ್ಭ ತಪ್ಪಿ ಹೋಯಿತಲ್ಲಾ'' ಎಂದು ಬೇಗುದಿಗೊಂಡೆ. ಆಗ ಅಜ್ಜಯ್ಯನವರೆಂದರು ''ಮಗೂ, ನಿನ್ನನ್ನು ಇಂದೂ ದೊರೆಗಳು ಜ್ಞಾಪಿಸಿಕೊಂಡರು. ನಾಳೆ ಅವರು ಮಂಗ ಳೂರಿಗೆ ಹೋಗುವಾಗ ಮರ್ದಾಳದಲ್ಲಿ ಅವರನ್ನು ಬೀಳ್ಕೊಡುವಲ್ಲಿ ಬಾ.'' ಇದನ್ನು ಕೇಳಿ ಮನಸ್ಸಿಗೆ ನೆಮ್ಮದಿಯಾಯಿತು. ನಾನು ಮಲಗಲೆಂದು ಕೋಣೆಗೆ ಹೋದೆ. ಮಲಗಿದ್ದಲ್ಲಿ ನಾನು ಕನಸಿನಲ್ಲೆ ಹೊಡೆದ ಜಿಂಕೆ, ಕಡವೆಗಳ ಬೇಟೆ ಭರ್ಜರಿಯದೆ ! ಅಷ್ಟರಲ್ಲಿ ಹುಲಿಯ ಆರ್ಭಟೆಯನ್ನು ಕೇಳಿ ಬೆಚ್ಚಿ ಥರಥರನೆ ನಡುಗುತ್ತಾ ನೋಡುತ್ತೇನೆ- ಬೆಳಗಾಗಿದೆ.

ಮರುದಿನ ಮುಂಜಾನೆ ಎಂಟು ಗಂಟೆಗೆ ಹಿರಿಯರೊಡನೆ ಹೊರಟು ಮರ್ದಾಳ ಶಾಲಾ ವಠಾರಕ್ಕೆ ಬಂದೆ. ಸುಂಕದಕಟ್ಟೆಯ ಕಡೆಯಿಂದ ನಮ್ಮ ಅಬ್ಬೋಕರೆ ಬ್ಯಾರಿಯ ಚಿರಪರಿಚಿತವೂ, ಸುಶ್ರಾವ್ಯವೂ ಆದ ಉರಾಲು ಕೇಳಿ ಎಲ್ಲರೂ ಗಾಡಿ ಬಂತೆಂದು ಅರಿತು ದೊರೆಗಳ ಸ್ವಾಗತಕ್ಕೆ ಲಗುಬಗೆಯಿಂದ ಸಿದ್ಧರಾದರು. ಅಜ್ಜಯ್ಯನವರೊಡನೆ ನಾನೂ ನಿಂತಿದ್ದೆ ನಮ್ಮನ್ನು ಕಂಡ ದೊರೆಗಳು ಮುಗುಳ್ನಕ್ಕರು; ಹಿರಿಯರು ನೀಡಿದ

ನಿಂಬೆ ಹಣ್ಣಿನ ಕಾಣಿಕೆಯನ್ನು ಆದರದಿಂದ ಸ್ವೀಕರಿಸಿದರು. ಗಾಡಿಯಿಂದ ಇಳಿದರೆ ತಡವಾಗುವುದೆಂದೂ ಅತಿ ತ್ವರೆಯಾಗಿ ಮಂಗಳೂರಿಗೆ ಮುಟ್ಟಬೇಕಾದುದರಿಂದ ತಾವು ಹೋಗುವುದಾಗಿಯೂ ತಿಳಿಸಿದರು. ನಮ್ಮ ಗುಂಪಿನಲ್ಲಿ ಹೊಸ ಕೋವಿಗೆ ಪರವಾನಿಗೆ ಬೇಕಾದವರು ಅಜ್ಜಯ್ಯನವರಲ್ಲಿ ಅರ್ಜಿ ಕೊಡಬೇಕೆಂದು ಹೇಳಿದರು. ಅಜ್ಜಯ್ಯನವರಿಗೆ ಪಾರಿತೋಷಕವಾಗಿ ನೀಡಿದ್ದ ಜೋಡುನಳಿಗೆಯ ಕೋವಿಗೆ ಅಲ್ಲಿಯೇ ತಾತ್ಕಾಲಿಕ ಪರವಾನಿಗೆಯನ್ನು ಕೊಟ್ಟರು. ನನ್ನನ್ನು ಕುರಿತು ಮುಂದಿನ ತಿಂಗಳು ಮಂಗಳೂರಲ್ಲಿ ನಡೆಯಲಿರುವ ಸ್ಕೌಟ್ ರ್‍ಯಾಲಿಗೆ ಬಂದಾಗ ತಮ್ಮನ್ನು ಕಾಣಬೇಕೆಂದರು. ಬಳಿಕ ಮಂಗಳೂರು ದಾರಿಯಾಗಿ ಹೊರಟರು. ಹಿರಿಯರೆಲ್ಲರೂ ಬಾಗಿ ನಮಸ್ಕರಿಸಿದರು. ನಾನು ಸೆಟೆದು ನಿಂತು ಸೆಲ್ಯೂಟ್ ಹೊಡೆದೆ. ಮೂಗುದಾರಸಡಿಲಿಸಲ್ಪಟ್ಟ ಎತ್ತುಗಳು ಓಡಲು ತೊಡಗಿದವು; ಗಾಡಿ ಚಲಿಸಿತು. ಹಿರಿಯರು ದೊರೆಗಳನ್ನು ಬೀಳ್ಕೊಡಲು ಹೊಸಮಠಕ್ಕೆಂದು ಹಿಂದಿನ ಗಾಡಿಯಲ್ಲಿ ಹೊರಟರು. ನಾನು ನನ್ನ ಬೇಟೆಯ ಅಭ್ಯಾಸಕ್ಕೆಂದು ಮಲ್ಲುವನ್ನು ಕೂಡಿಕೊಳ್ಳಲು ಆತುರಾತುರವಾಗಿ ಮನೆಯನ್ನು ಸೇರಿದೆ.

ರಜೆಯಲ್ಲಿ ಓದಲೆಂದು ಊರಿಗೆ ಬಂದಿದ್ದವನು ಓದನ್ನು ಮರೆತು ಬೇಟೆಯ ಗುಂಗಿನಲ್ಲಿಯೇ ಸಮಯ ಕಳೆದೆ. ಪ್ರಥಮ ದಿನದ ಶಿಕಾರಿ ಅಭ್ಯಾಸದಲ್ಲಿ ಗುಂಡು ಹೋದಲ್ಲಿ ಕೇಂಕಣವಿದ್ದೋ ಕೇಂಕಣವಿದ್ದಲ್ಲಿ ಗುಂಡು ಹೋಗಿಯೋ ಹೇಗೋ ನನ್ನ ಕೋವಿಗೆ ಈಡಾಗಿತ್ತು. ಅದು ನನ್ನ ಪಾಲಿಗೆ 'ಕಣ್ಣು ಕಾಣದ ಕುಕ್ಕುರನು ತಿಂಡಿಯ ಬುಟ್ಟಿಯನ್ನು ಎಡವಿತು' ಎಂಬ ಗಾದೆಯಂತಾಗಿತ್ತು. ಹಿರಿಯರು ಹೊಸಮಠದತ್ತ ದೊರೆಗಳನ್ನು ಬೀಳ್ಕೊಡಲು ಹೋದುದರಿಂದ ನನ್ನ ಉದ್ದೇಶ ಸಾಧನೆಗೆ ಯಾವ ತೊಡಕೂ ಇಲ್ಲದಂತಾಯಿತು. ಹಿಂದಿನ ದಿನದಂತೆ ಗಾಡಿ ಕೊಟ್ಟಿಗೆಯ ಅಟ್ಟದಿಂದ ಕೋವಿಯನ್ನು ತೆಗೆದುಕೊಂಡು ಮಲ್ಲುವಿನೊಡನೆ ಚಾಕೊಟೆಕೆರೆಗೆ ಬಂದೆ. ಈಡು ತುಂಬಿಸಿ, ಪಾರಿವಾಳ, ಇಣಚಿ, ಬಜಕ್ಕುರೆ ಹಕ್ಕಿ, ಕೇಂಕಣವೆನ್ನದೆ ೧೦,೧೫ ಈಡು ಹೊಡೆದರೂ ಒಂದೂ ದಕ್ಕಲಿಲ್ಲ; ಮದ್ದುಗುಂಡು ಮುಗಿದುದೇ ಬಂತು. ಆದರೆ ಕೋವಿಯೆತ್ತಿ ಗುರಿ ಹೊಡೆಯುವ ಅಭ್ಯಾಸವಾಯಿತು. ಹೀಗೆ ಮೂರು, ನಾಲ್ಕು ದಿನ ಓದಿನ ತಳ್ಳಿಯಿಲ್ಲದೆ, ಹಿರಿಯರ ಕಣ್ಣು ತಪ್ಪಿಸಿ ಬೇಟೆಯ ಅಭ್ಯಾಸದಲ್ಲಿ ತಲ್ಲೀನನಾಗಿ ಕೊಂಚ ಮಟ್ಟಿನ ಬೇಟೆಯ ಅನುಭವವನ್ನು ಪಡೆದೆನು. ರಜೆ ಮುಗಿದು ಪುತ್ತೂರಿಗೆ ಹೋಗುವ ಸಮಯ ಸನಿಹಿತವಾಯಿತು. 'ಅಯ್ಯೋ, ಏನು ಮಾಡುವುದು? ಶಾಲೆಗೆ ಹೋಗದೆ ನಿರ್ವಾಹವಿಲ್ಲ. ಹೋದರೆ ನನ್ನ ಶಿಕಾರಿಯ ಹವ್ಯಾಸಕ್ಕೆ ಗತಿಯಿಲ್ಲ.' ಹೀಗೆ ದುಃಖದಲ್ಲಿದ್ದ ನನ್ನನ್ನು ಕಂಡ ಹಿರಿಯರು ಮನೆಯವರನ್ನು ಬಿಟ್ಟುಹೋಗಬೇಕಾಗಿಬಂದುದಕ್ಕೆ ನನಗೀ ಬೇಸರವೆಂದು

ಭಾವಿಸಿದರೇ ಹೊರತು ನನ್ನ ನಿಜ ಬಣ್ಣವನ್ನು ಅರಿಯಲಿಲ್ಲ. ಇದರೆಡೆಯಲ್ಲೂ ಅಜ್ಜಯ್ಯನವರ, ತಂದೆಯವರ, ಚಿಕ್ಕತಂದೆಯವರ ಚೀಲದಿಂದ ಸಮಯ ಸಿಕ್ಕಾಗಲೆಲ್ಲ ಮದ್ದುಗುಂಡುಗಳನ್ನು ಎಗರಿಸುತ್ತಿದ್ದೆ, ಮುಂದಿನ ರಜಾ ಸಮಯದಲ್ಲಿ ಇಲ್ಲಿಗೆ ಬರುವಾಗ ಮದ್ದು-ಗುಂಡಿಲ್ಲದಿದ್ದರೆ ಹೇಗೆ?

ಇಂಥ ದಿನ ಗಾಡಿಯಲ್ಲಿ ಪುತ್ತೂರಿಗೆ ಹೋಗುವುದೆಂದು ನಿಶ್ಚಯವಾಯಿತು. ತಂದೆಯವರು ಖರ್ಚಿಗೆ ಬೇಕಾದ ಹಣವನ್ನು ಲೆಕ್ಕಮಾಡಿ ಕೊಡುವವರು. ತಾಯಿಗೆ ಕೈಗಂಟು ಮಾಡಿ ಇಡುವ ಅಭ್ಯಾಸವಿಲ್ಲ. ಕೊಟ್ಟರೆ ಒಂದು ರೂಪಾಯಿ ಕೊಟ್ಟಾರು. ನನಗೆ ಈಡುಗಾರಿಕೆಯ ಅಭ್ಯಾಸವನ್ನು ಪುತ್ತೂರಿನಲ್ಲಿಯೂ ಮುಂದುವರಿಸಬೇಕೆಂಬ ಮಹತ್ತಾದ ಆಸೆ. ಕೋವಿಯನ್ನು ನನ್ನ ತರಗತಿಯ ಮಿತ್ರ ಜೋನ್ ಬೃಗಾಂಜನ ಮನೆಯಲ್ಲಿ ನೋಡಿದ್ದೆ. ಅದು ೪೧೦ನೇ ಬೋರಿನ ತೋಟಿ ಕೋವಿ. ಆ ಕಾಲದಲ್ಲಿ ಜೋನಿಯ ತಂದೆ ಹಿರಿಯ ಬೃಂಗಾಜರು ಪುತ್ತೂರಲ್ಲೆ ಗಣ್ಯ ಕ್ರೈಸ್ತ ಧನಿಕ ; ಪ್ರಸಿದ್ಧ ತಾಮ್ರದ ವ್ಯಾಪಾರಿ. ಜೋನಿಯೂ ನಾನೂ ಸಮಾನ ಗುಣದ ಮಿತ್ರರು. ಅವನು ಮನೆಯ ಮುಂದಿನ ಮಾವಿನ ಮರಕ್ಕೆ ದಾಳಿ ಇಡುತ್ತಿದ್ದ ಬಾವಲಿಗಳನ್ನೂ ಕೆಲವೊಮ್ಮೆ ಕೊಕ್ಕರೆಗಳನ್ನೂ ತನ್ನ ಕೋವಿಯಿಂದ ಹೊಡೆಯುತ್ತಿದ್ದ. ಪರ್ಲಡ್ಕ ಬಿರುಮಲೆ ಗುಡ್ಡೆಯಲಲ್ಲಿ ಕಾಣಸಿಕ್ಕಿದ ಕೇಂಕಣ, ಪಾರಿವಾಳ, ಮುಂಗುಸಿಗಳನ್ನೂ ಹೊಡೆಯುತ್ತಿದ್ದುದುಂಟು. ನಾನು ಆತನ ಸ್ನೇಹವನ್ನು ಇನ್ನಷ್ಟು ಬೆಳೆಸಿದೆ. ಈ ತೋಟೆಯ ಕೋವಿಯಿಂದ ಅಭ್ಯಾಸ ಮಾಡಿದರೆ ಮುಂದಕ್ಕೆ ನಮ್ಮ ಮನೆಯವರಿಗೆ ಕಲೆಕ್ಟರರು ಪರವಾನಿಗೆ ಕೊಡಲಿರುವ ತೋಟೆಯ ಕೋವಿಯಲ್ಲಿ ಸರಾಗವಾಗಿ ಬೇಟೆಯಾಡಬಹುದೆಂದು ನಿಶ್ಚಯಿಸಿದೆ. ಜೋನ್ ಕೋವಿಯನ್ನೇನೋ ಕೊಟ್ಟಾನು. ಆದರೆ ನನಗೆ ಅಭ್ಯಾಸ ಮಾಡಲು ತೋಟೆಯನ್ನು ನಾನೇ ಸಂಪಾದಿಸಬೇಕಷ್ಟೇ? ಉಪಾಯವೊಂದು ಹೊಳೆಯಿತು. ಅಳೇರಿಯ ನಮ್ಮಜ್ಜಿ ಲಕ್ಷ್ಮಮ್ಮನವರು ಮಕ್ಕಳೆಂದರೆ ತುಂಬಾ ಅಕ್ಕರೆಯವರು. ಮೊಮ್ಮಕ್ಕಳು ಮುಖ ಚಿಕ್ಕದು ಮಾಡಿಕೊಂಡು ಮುಂದೆ ನಿಂತಾಗೆಲ್ಲ ಅವರ ಆವಶ್ಯಕತೆಗೆ ತಕ್ಕಂತೆ ಕೊಡುಗೈಯವರಾಗಿದ್ದರು. ಶುಭಕಾರ್ಯಕ್ಕೆ ನಮ್ಮಿಡಿಯ ಕುಟುಂಬವೇ ಇವರ ವರದ ಹಸ್ತದ ಸಹಾಯವನ್ನು ಯಾಚಿಸುತ್ತಿತ್ತು. ಲಕ್ಷ್ಮಿ ಎಂದರೆ ಇವರು ನಮ್ಮ ಕುಟುಂಬದ ಲಕ್ಷ್ಮಿ ಎಂದು ಎಲ್ಲರಿಂದಲೂ ಮನ್ನಣೆ ಪಡೆದಿದ್ದರು. ನಮ್ಮಜ್ಜಿ ಸಪುರ ಶರೀರದ, ಅರಸಿನ ಬಣ್ಣದ, ಹೊಳಪಿನ ಕಣ್ಣಿನ, ಹಸನ್ಮುಖದ ಸುಂದರಿ ಮುತ್ತೈದೆ. ಅಜ್ಜನನ್ನೂ ಇವರನ್ನೂ ನೋಡಿದಾಗ ಕೆಲವರು ''ಮಗಳೇ?'' ಎಂದು ಕೇಳಿದ್ದಿತ್ತು ! ಇವರು 'ಒಳ್ಳೆಯದಾಗು' ಎಂದು ಕೈಯೆತ್ತಿ ಕೊಟ್ಟು ಆಶೀರ್ವದಿಸಿದ ಯಾವ ವಿಷಯವೂ ವಿಫಲವಾಗಿಲ್ಲ. ಮೊಮ್ಮಕ್ಕಳಾದ ನಮಗೆ ಅವರ ಕೊಡುಗೈ ಧಾರಾಳತನ

ಆತ್ಮೀಯ ಆಸ್ತಿಯಾಗಿತ್ತು. ಅಂತೆಯೇ ಅಜ್ಜಿಯನ್ನು ಕಂಡು ಬರೆಯಲು ಪೆನ್ನನ್ನು ಕೊಂಡುಕೊಳ್ಳಬೇಕಾಗಿದೆಯೆಂದು ಹೇಳಿ ಹಣ ಗಿಟ್ಟಿಸಿಕೊಳ್ಳುವ ಹವಣಿಕೆಯಿಂದ ಅಳೇರಿಗೆ ಹೋದೆ. ಮುಖ ಮುದುಡಿಸಿ ನಿಂತ ನನ್ನನ್ನು ಕಂಡ ಅಜ್ಜಿ ಅಕ್ಕರೆಯಿಂದ ''ಎಂದು ಪುತ್ತೂರಿಗೆ ಹೋಗುವುದು?'' ಎಂದು ಕೇಳಿದರು. ''ನಾಳೆ ಹೋಗಬೇಕು. ಪರೀಕ್ಷೆ ಹತ್ತಿರವಾಯಿತು. ಬರೆಯಲು ನನ್ನಲ್ಲಿ ಪೆನ್ ಇಲ್ಲ. ಹೇಂಡಲಿನಲ್ಲಿಯೇ ಬರೆಯೆಂದು ತಾಯಿಯೂ, ತಂದೆಯವರೂ ಹೇಳುತ್ತಾರೆ. ಶಾಯಿ ಕುಪ್ಪಿಗೆ ಆ ಪೇನಾ ಮುಳುಗಿಸಿ ಬರೆಯುವಾಗ ತುಂಬಾ ಹೊತ್ತಾಗುತ್ತದೆ. ಕೈಯಲ್ಲಿನ ಶಾಯಿಯು ಕಾಗದಕ್ಕೆ ತಾಗಿ ಕೊಳೆಯಾದರೆ ಮಾರ್ಕು ಕಳೆಯುತ್ತಾರೆ. ಬರೆಯಲು ತುಂಬ ಸಮಯ ಹಿಡಿಯುವುದರಿಂದ ಎಣಿಸಿದಷ್ಟು ಬರೆಯಲು ಸಾಧ್ಯವಾಗುವುದಿಲ್ಲ'' ಎಂದು ಅವರ ಮುಂದೆ. ನಿಜವಾದ ಆಸಕ್ತಿಯುಳ್ಳ ವಿದ್ಯಾರ್ಥಿಯಂತೆ. ಗೋಗರೆದೆ. ಇದನ್ನು ಕೇಳಿದ ಅವರು ''ಒಂದು ಪೆನ್ನಿಗಾಗಿ ಚಿಂತಿಸುವುದೇ? ಸುಮ್ನೇಕೆ ಮರುಗುತ್ತಿ ? ಪೆನ್ನಿಗೆ ಎಷ್ಟು ದುಡ್ಡು ಬೇಕೋ ನಾನು ಕೊಡುತ್ತೇನೆ. ಈಗ ಬಾ, ತಿಂಡಿ ತಿನ್ನು'' ಎಂದು ಸಮಜಾಯಿಸಿದರು. ನಾನು ತಿಂಡಿ ತಿನ್ನುತ್ತಿದ್ದಾಗ ಬೆಳ್ಳಿಯ ಐದು ರೂಪಾಯಿಗಳನ್ನು ತಂದು ನನ್ನ ಕಿಸೆಗೆ ತುರುಕಿ, ''ನನ್ನ ಮೊಮ್ಮಗ ಗಟ್ಟಿಗ, ಇದರಿಂದ ಕೀರ್ತಿಯನ್ನು ತರಬೇಕು; ಎಂದು ಹೃತ್ಪೂರ್ವಕ ಹರಸಿದರು. ಆ ನುಡಿಗಳನ್ನು ಕೇಳುತ್ತ, ಹಣ ದೊರೆತದ್ದರಿಂದ ಸಂತೋಷವಾಗಿದ್ದ ನನ್ನ ಮನಸ್ಸು ಶಿಕಾರಿ ಅಭ್ಯಾಸದ ಕನಸುಕಾಣುತ್ತಿತ್ತು!

ಪುತ್ತೂರಿಗೆ ಬಂದ ಮೇಲೆ ಜೋನ್ ಬ್ರಗಾಂಜನ ಒಡನಾಟ ತೊಡಗಿತು. ಪರೀಕ್ಷೆಯ ಕಡೆಗೆ ಗೊಡವೆಯಿಲ್ಲದೆ, ಶಾಲೆಗೂ ಹೋಗದೆ ಪುತ್ತೂರಿನ ಸಂದು ಗೊಂದುಗಳಲ್ಲಿ ಕೋವಿ ಹಿಡಿದುಕೊಂಡು ನಾವಿಬ್ಬರೂ ತಿರುಗಿದ್ದೇ ತಿರುಗಿದ್ದು. ಓದದೆ ಪರೀಕ್ಷೆಗೆ ಹೋಗುವುದು ಹೇಗೆ? ಏಕೆ? ಫಲಿತಾಂಶವೇನಾದೀತೆಂಬುದು ನಿಶ್ಚಯ. ಮತ್ತೆ ಆ ಪರೀಕ್ಷೆಗೆ ಹಣ ಕಟ್ಟುವುದೇಕೆ? ಅದಕ್ಕಾಗಿ ಮನೆಯಿಂದ ತರಿಸಲಾಗಿದ್ದ ಹಣವನ್ನು ತೋಟಾಗಳಿಗೆ, ಕಾಫಿಗೆ ವಿನಿಯೋಗಿಸಿ, ಶಿಕಾರಿ ಹವ್ಯಾಸದಲ್ಲಿ ಪಳಗಿ ವಿದ್ಯಾಭ್ಯಾಸದಲ್ಲಿಗೋತಾ ಹೊಡೆದೆ. ಜೋನಿಯು ಗೋವೆಗೆ ಓಡಿದ ! ನಾನೇನು ಮಾಡುವುದು? ಅಳೇರಿಯಲ್ಲಿ ಅಜ್ಜಿಯು ರಕ್ಷಣೆ ಕೊಡಬಹುದು. ಆದರೆ ಹೆಣ್ಣು-ಹೆಂಗಸು; ಅಜ್ಜಯ್ಯನವರ ಮಾತು ಮೀರುವಂತಿಲ್ಲ. ನಾನು ಪುನಃ ಶಾಲೆಗೆ ಹೋಗ ಲೇಬೇಕೆಂದು ಹಿರಿಯರು ಹೇಳಿದರೆ ಅಜ್ಜಿ ಬೇಡವೆಂದು ತಡೆಯಲಿಕ್ಕಿಲ್ಲ. ನಾನು ಪುನಃ ಶಾಲೆಗೆ ಹೋಗುವಂತಿಲ್ಲ; ಏಕೆಂದರೆ ನಾನು ಕಲಿತಪಠ್ಯ ಪುಸ್ತಕಗಳನ್ನೂ ಮಾರಿಯಾಗಿತ್ತು. ಇದನ್ನು ತಿಳಿದರೆ ಬೆನ್ನು ಹುಡಿಯಾಗುವುದರಲ್ಲಿ ಸಂದೇಹವಿಲ್ಲ. ಈ ದುರ್ಬುದ್ಧಿಗೆ ಅಜ್ಜಿಯ ಪ್ರೋತ್ಸಾಹವೂ

ಇರಲಿಕ್ಕಿಲ್ಲ. ಇಷ್ಟೆಲ್ಲ ಎಣಿಸಿಕೊಂಡು ನಮ್ಮ ತಾಯಿಯ ತಂದೆ ಮನೆಯಿದ್ದ ಬೆಳ್ಳಾರೆಗೆ ಕಂಬಿ ಕಿತ್ತೆ ! ಅಲ್ಲಿಯೂ 'ಸೆಟ್ಟಿಯೇನು ಮಾಡುತ್ತಾನೆ? ಅಳೆಯುತ್ತಾನೆ, ಸುರಿಯುತ್ತಾನೆ' ಎಂಬಂತೆ ನನ್ನ ಮಾಮೂಲು ಕಸುಬು ಬೇಟೆ. ಚಿಕ್ಕತಂದೆ ತ್ಯಾಂಪಣ್ಣ ಶೇಕರ ಕೋವಿಯು ಉಪಯೋಗಿಸುವವರಿಲ್ಲದೆ ಮೂಲೆ ಸೇರಿತ್ತು. ಅದಕ್ಕೆ 'ತ್ರಿ ಇನ್ ವನ್' ಎಣ್ಣೆ ಹಚ್ಚಿ ಶುದ್ಧಿಗೊಳಿಸಿ ಪೆಟ್ಟಿಗೆಗಳಲ್ಲಿ ತುಂಬಿದ್ದ ತೋಟೆಯನ್ನು ಬೇಕಾದಷ್ಟು ಕಿಸೆಗೆ ತುಂಬಿಸಿ ರಜಾ ಸಮಯದಲ್ಲಿ ಬೇಟೆಯಲ್ಲಿ ಕಳೆದೆ. ಬೆಳ್ಳಾರೆಯಿಂದ ಐವರ್ನಾಡು ತನಕ ರಾತ್ರಿ ಹಗಲು ಬೇಟೆಯೇ ಕಸುಬಾಗಿ, ಹಗಲು ಶಿಕಾರಿಯೊಂದರಲ್ಲಿ ಹಂದಿಯೊಂದನ್ನು ಕೊಂದು ಮನೆಯವರಿಂದ 'ಸೈ' ಯೆನಿಸಿಕೊಂಡೆ. ಹೀಗೆ ರಜಾದಿನಗಳು ಸವೆದುವು. ತಾಯಿಯವರ ಒತ್ತಾಯದಿಂದ ನಾನು ಪಿಲಿಮಜಲಿಗೆ ಹೋಗಲೇಬೇಕಾಯಿತು. ಅಷ್ಟರಲ್ಲಿ, ನನ್ನ ಗೆಳೆಯ ಜೋನ್ ಗೋವೆಗೆ ಓಡಿದ್ದ ವಿಷಯ ಮನೆಯವರಿಗೆ ಗೊತ್ತಾಗಿತ್ತು. ನಾನೂ ಅವನ ದಾರಿಯನ್ನೇ ಹಿಡಿಯಲು ಹೇಸುವವನಲ್ಲವೆಂದು ಭಾವಿಸಿದ ಹಿರಿಯರು ನನಗೆ ಹೊಡೆದು, ಬಡಿದು ಶಿಕ್ಷೆ ಕೊಡದಿದ್ದರೂ ನನ್ನಲ್ಲಿ ಯಾರಿಗೂ ವಿಶ್ವಾಸ ಉಳಿದಿಲ್ಲವೆಂದು ತಿಳಿಯಲು ನನಗೆ ಹೆಚ್ಚು ಸಮಯ ಬೇಕಾಗಲಿಲ್ಲ! ತಂದೆಯವರು ಆಗ ನನ್ನಲ್ಲಿ ಮಾತಾಡುವುದನ್ನೇ ಬಿಟ್ಟಿದ್ದರು. ತಾಯಿಯಾದರೋ ಪ್ರಾಯಕ್ಕೆ ಬಂದ ಮಗನನ್ನು ಎದುರು ಹಾಕಿಕೊಳ್ಳುವುದೇಕೆಂದು ಬೇಕೋ ಬೇಡವೋ ಎಂಬಂತಿದ್ದರೆ ಅಳೇರಿಯಲ್ಲಿ ಅಜ್ಜಿಯೊಬ್ಬರೆ ನನ್ನನ್ನು ಮುದ್ದು ಮಾಡುವವರು ! ಅಜ್ಜಯ್ಯನವರಿಗೆ, ತಂದೆ, ತಾಯಿ-ಮನೆಯ ಹಿರಿಯರಿಗೆಲ್ಲ ನಾನು ನನ್ನ ಹಿರಿಯರಂತೆ ವಿದ್ಯಾವಂತನಾಗಿ ದೊಡ್ಡ ಹುದ್ದೆಯನ್ನು ಅಲಂಕರಿಸಬೇಕೆಂಬ ಆಸೆಯಿತ್ತು. ಅಂಥದರಲ್ಲಿ ನಾನು ಕೋವಿ ಹಿಡಿದು ತಿರುಗುವ ಅಪಾಪೋಲಿಯಾದರೆ ಅವರು ಸಹಿಸಿಯಾರೆ? ನಾನೇನೂ ಫಡಪೋಶಿ ವಿದ್ಯಾರ್ಥಿಯಾಗಿರಲಿಲ್ಲ. ಆದರೆ ಈ ಬೇಟೆಯ ಗೀಳು ನನ್ನ ಜೀವನದ ತಿರುವನ್ನೇ ಬದಲಿಸಿತು.

□□□□□

ಮೊದಲ ಹುಲಿ ಶಿಕಾರಿ

'ಮೆಟ್ರಿಕ್ಯುಲೇಶನ್' ತೇರ್ಗಡೆಯಾಗದೆಯೇ ನನ್ನ ಶಾಲಾದಿನಗಳು ಮುಗಿದುವು. ಹಿಂದೆ, ಮಲ್ಲು ಮಾತ್ರ ನನ್ನ ತೈನಾತಿಯಾಗಿದ್ದರೆ ಸ್ಕೂಲು ಬಿಟ್ಟ ಬಳಿಕ ಊರಿನ ತುಂಡು ಜವ್ವನಿಗರು ನನಗೆ ನೆರವು ನೀಡಲು ಮುಂದೆ ಬಂದರು. ಬೇಟೆಯ ಎಡೆಯಲ್ಲಿ ಊರ ಪಂಚಾಯತಿಕೆಯ ಕೆಲಸ! ಇದಕ್ಕೆ ಕುಂಞಿಮೋನುವಿನ ತುಂಬು ಸಹಕಾರ. ಪಂಚಾಯತಿಕೆಯಲ್ಲಿ ಆತ ಸೂಚಿಸಿದಂತೆ ತೀರ್ಪು! ಇದರಿಂದ ವಾದಿ ಪ್ರತಿವಾದಿಯವರಿಂದ ಕುಂಞಿಮೋನು ಏನನ್ನಾದರೂ ಗಿಟ್ಟಿಸುತ್ತಿದ್ದುದಲ್ಲದೆ ನನಗೂ ಕೈಗಡವಾಗಿ ಬೇಕಾದಾಗ ಕೊಂಚ ಹಣ ಬರುತ್ತಿತ್ತು. ಪಂಚಾಯತಿಕೆ ಮಾಡಿ ನೀಡಿದ ತೀರ್ಪಿಗೆ ಸಮ್ಮತಿಸದಿದ್ದರೆ ಇದ್ದೇ ಇರುವರಲ್ಲ ನನ್ನಕೂಟದ ತುಂಡು ಜವ್ವನಿಗರು? ಸೋಮಾರಿ ಸಂಘದ ಸರಪಂಚರು? ಒಪ್ಪದವನಿಗೆ ಕಿರುಕುಳ ನೀಡಿ ಒಪ್ಪಿಸುತ್ತಿದ್ದರು. ಕುಂಞಿಮೋನು ಹೇಳಿದ ತೀರ್ಪು ನನ್ನ ಪಾಲಿಗೆ ನ್ಯಾಯ ಸಮ್ಮತ. ನಾನು ಹೇಳಿದ್ದನ್ನು ವಾದಿ-ಪ್ರತಿವಾದಿಗಳು ಒಪ್ಪಬೇಕು! ನಾನು ಗುತ್ತಿನವರ ಮಗ, ಊರ ಪಟೇಲರ ಮೊಮ್ಮಗ. ಅಂತೂ ಮನೆಯವರಿಗೆ ಬೇಡವಾದರೂ ನನ್ನ ಸುಲ್ತಾನ ದರ್ಬಾರು ಮುಂದುವರಿಯಿತು. ಈ ಸಮಯದಲ್ಲಿ ಮನೆಯವರಿಗೆ ಹನ್ನೆರಡು ಬೋರಿನ ತೋಟೆಕೋವಿಯೂ ಕಲೆಕ್ಟರರಿಂದ ಸಿಕ್ಕಿತ್ತು. ನಾನೂ ಶಿಕಾರಿಯಲ್ಲಿ ಪಳಗಿ ಹಲವು ಜಿಂಕೆ, ಕಡವೆ, ಹಂದಿಗಳನ್ನು ರಾತ್ರಿ, ಹಗಲು ಶಿಕಾರಿಯಲ್ಲಿ ಕೊಂದಾಗಿತ್ತು. ನನ್ನ ಒಡನಾಡಿ ಮಿತ್ರರಿಗೂ ನಾನು ಒಳ್ಳೆಯಈಡುಗಾರನೆಂಬ ವಿಶ್ವಾಸವುಂಟಾಗಿತ್ತು. ಅವರಿಗೆ ಮೈಮುರಿದು ದುಡಿಯದೆ ಕೇವಲ ನನ್ನ ಹಿಂಬಾಲಕರಾಗಿ ಹೋದ ಹೋದಲ್ಲಿ ಪುಕ್ಕಟೆಯಾಗಿ ಪುಷ್ಕಳ ಊಟ, ಕಾಫಿ, ಬೀಡಿ, ಎಲೆಅಡಿಕೆ ಸಿಕ್ಕುತ್ತಿತ್ತು. ಹೀಗೆ ಊರಲ್ಲಿ ನಾನೊಬ್ಬ 'ಜನ' ಆದೆ!

ಕೊಂಬಾರಿನಲ್ಲಿ ಹುಲಿಗಳ ಉಪದ್ರವ ಜಾಸ್ತಿ. ಮನೆಯ ಬಳಿಯ ಹಟ್ಟಿಯಿಂದಲೇ ದನಕರುಗಳನ್ನು ಹುಲಿ ಹಿಡಿಯುತ್ತಿತ್ತು. ಹುಲಿ ಬೇಟೆಗಾಗಿ ಒಮ್ಮೆ ಅಗತ್ಯವಾಗಿ ಬರಬೇಕೆಂದು ಕೊಂಬಾರಿ ನಿಂದ, ನನ್ನ ಗೆಳೆಯ, ರಾಮ ಪೂಜಾರಿ ಹೇಳಿ ಕಳುಹಿಸಿದ. ನಾನು ಇದಕ್ಕೆ ಏನೆಂದು ಉತ್ತರ ಕೊಡಲಿ? ಹುಲಿಗೆ ಹೊಡೆಯುವುದೆಂದರೆ ತಮಾಷೆಯೆ? ಬಡ ಬೋರನನ್ನು ಪಂಚಾಯತಿಕೆಗೆ ಒಪ್ಪಿಸಿದಂತೆಯೇ? ಜೀವದ ಪ್ರಶ್ನೆ! ಕರೆಗೆ ಓಗೊಡದಿದ್ದರೆ ನನ್ನ ಹಿರಿಮೆಗೆ ಕುಂದು. ಓಗೊಟ್ಟು ಹೋದರೆ ದಾರಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಆಹ್ವಾನಿಸಿದಂತೆ! ಹುಲಿ ಹೊಡೆಯುವ ಮಾತಿರಲಿ, ಹುಲಿಯ ರೋಮವನ್ನೂ ಅಂದಿನ ತನಕ ಕಂಡವನು ನಾನಲ್ಲ.

ಕೊಂಬಾರಿನವರ ಕೇಳಿಕೆಗೆ ಸಮ್ಮತಿಸದಿದ್ದರೆ ನನ್ನ ದೊಡ್ಡಸ್ತಿಕೆಯನ್ನು ದಡೆಗೆ ಇಟ್ಟು ತೂಗಿದಂತೆ. ಹೋಗಲು ಮನಸ್ಸು ಹಿಂದೇಟು ಹೊಡೆಯುತ್ತಿದೆ. ಏನು ಮಾಡುವುದು? ನನ್ನ ಸಂಘದ ಸರಪಂಚರಲ್ಲಿ ಬುದ್ಧಿವಂತ, ಕೂಟದಲ್ಲಿ ಯೋಗ್ಯನೆನಿಸಿದ್ದ ರಾಮಣ್ಣನಲ್ಲಿ ಈ ಸಂಗತಿಯನ್ನು ತಿಳಿಸಿದೆ. ಅವನು ಯೋಚಿಸಿ, ''ಹೋಗೋಣ. ಹುಲಿ ಎದುರಾದರೆ ಹೊಡೆಯಲೇಬೇಕೆಂದು ಏನು ಕಟ್ಟಳೆಯಿದೆಯೆ? ಹುಲಿಯ ಕಣ್ಣು ಕಂಡೊಡನೆ ಲೈಟು ತಪ್ಪಿಸಿದರಾಯಿತು. ಹೋಗದಿದ್ದರೆ ನಮ್ಮ ಮರ್ಯಾದೆಗೆ ಕುಂದು'' ಎಂದ. ಒಟ್ಟಿನಲ್ಲಿ ಕೊಂಬಾರಿಗೆ ಹೊರಡುವ ನಿರ್ಧಾರ ಮಾಡಿದೆವು.

ರಾತ್ರಿ ಸುಂಕದಕಟ್ಟೆಗೆ ಬಂದು ಅಲ್ಲಿನ ಹೋಟೆಲಲ್ಲಿ ಚಾ ಕುಡಿದು ಲೈಟು ಕಟ್ಟಿ ಒಬ್ಬೊಬ್ಬರೇ ಮಾರ್ಗಕ್ಕೆ ಬಂದೆವು. ಹೋಟೇಲಿನವನಿಗೆ ಹಣ ಕೊಡಲು ನಮ್ಮಲ್ಲಿ ಇದ್ದರಲ್ಲವೆ? ನಮ್ಮೊಡನೆ ಕುಂಞಿಮೋನುವಿನಂತಹ ಪೋಕರಿಗಳು ಇರುವಾಗ ಕರೆದು ಹಣ ಕೇಳುವ ಧೈರ್ಯ ಹೋಟೆಲಿನ ಯಜಮಾನನಿಗೆಲ್ಲಿ ! ಮುಂದೊತ್ತಿ ದಾರಿಯಲ್ಲಿ ಪಳ್ಳಿಕಂಡದ ಪಳ್ಳಿಗೆ ಲೈಟು ಬೀರಿದಾಗ ಪಲ್ಕೆಯ ಕೊನೆಯಲ್ಲಿದ್ದ ಕಡವೆಯ ಹಿಂಡೋ ಜಿಂಕೆಯ ಹಿಂಡೋ ದಡಬಡವೆಂದು ಓಡಿದ ಸದ್ದು ಕೇಳಿತು. ''ಸಿಕ್ಕಿದ ಕಡವೆಯೂ ದಕ್ಕಲಿಲ್ಲವಲ್ಲಾ'' ಎಂದು ಕುಂಞಿಮೋನು ಕೈ ಹಿಸುಕಿಕೊಂಡ. ಪಳ್ಳಿಕಂಡ ದಾಟಿ ರಾಮ ಪೂಜಾರಿಯ ಮನೆಗೆ ಬಂದೆವು. ಆತ ನಮಗಾಗಿ ತಯಾರು ಮಾಡಿ ಇಟ್ಟಿದ್ದ ಕೋಳಿ ರೊಟ್ಟಿಯನ್ನು ಮುಗಿಸಿದೆವು. ಶಿಕಾರಿಗೆ ಹೊರಡುವಾಗ ಕುಂಞಿಮೋನು ಗೊಣಗಿದ, ''ನಿಮಗೆ ಗಡದ್ದಾಗಿ ಕೋಳಿ ಪದಾರ್ಥ ಸಿಕ್ಕಿದೆ. ನನಗೆ ಒಣಕಲು ರೊಟ್ಟಿ ! ಈಗ ಏನಾದರೂ ಹೊಡೆದೇ ತೀರಬೇಕು'' ಎಂದು. ತಿನ್ನಲಾಗುವ ಮೃಗವು ಸಿಕ್ಕಿದರೆ ಬಿಡುವಷ್ಟು ದಯಾಪರರು ಅಂದಿನ ನಮ್ಮ ಕೂಟದಲ್ಲಿ ಯಾರೂ ಇರಲಿಲ್ಲ. ನಾವು ಮುಂದೆ ಹೋಗುತ್ತ ಕೊಂಬಾರು ಹೊಳೆ ದಾಯಿ ಹಿಂದಿನ ದಿನ ಹಟ್ಟಿಗೆ ಹುಲಿನುಗ್ಗಿ ಕರುವನ್ನು ಎಳೆದುಕೊಂಡು ಹೋಗಿದ್ದ ಗೌಡನ ನೆರೆಮನೆಗೆ ಬಂದೆವು. ಆ ಹುಲಿಯ ಗಾತ್ರವನ್ನು ಅರಿತು ಅದನ್ನು ಹೊಡೆಯುವ ಬಗ್ಗೆ ನಿರ್ಧಾರಕ್ಕೆ ಬರುವುದೆಂದು ನಮ್ಮೊಳಗೆ ತೀರ್ಮಾನವಾಯಿತು. ಹುಲಿ ದೊಡ್ಡದೆಂದಾದರೆ ಅದರ ತಳ್ಳಿಯೇ ನಮಗೆ ಬೇಡ ಎಂದುಕೊಂಡೆವು. ನಮ್ಮ ಪರಿಚಯದವನಾದ ಸಾಂತ ಗೌಡನ ಮನೆಯ ತಡಿಕೆಯೆಡೆಯಿಂದ ಚಿಮಿಣಿಯ ಬೆಳಕು ಕಾಣುತ್ತಿತ್ತು. ನಾವು ಆ ಮನೆಯ ಬಾಗಿಲು ತಟ್ಟಿದೆವು. ಅವಸರದಿಂದ ಎದ್ದ ಸಾಂತ ಗೌಡ ಬಾಗಿಲನ್ನು ತೆರೆದು ಸಂಕೋಚದಿಂದ ನಮ್ಮನ್ನು ಬರಮಾಡಿಕೊಂಡ. ನಮ್ಮ ಆ ದೊಡ್ಡ ಗುಂಪಿಗೆ ಅವನ ಕಿರುಜಗಲಿಯಲ್ಲಿ ಸ್ಥಳವಿಲ್ಲದುದನ್ನು ಕಂಡು ಅಂಗಳದಲ್ಲಿ ನಿಂತೆವು. ನಾನೂ ಕುಂಞಿಮೋನುವೂ ಜಗಲಿಯೇರಿ ಸುತ್ತಲೂ ದಿಟ್ಟಿಸಿದೆವು. ನಮ್ಮ ಬರವನ್ನು ಅರಿತು ಮನೆಯಾಕೆ ಚಾಪೆಯಿಂದ ಎದ್ದು, ಅಲ್ಲೆ ಮುದುಡಿ ಕುಳಿತಿದ್ದಳು.

ಬಳಿಯಲ್ಲಿದ್ದ ಮಗು ಇನ್ನೂ ನಿದ್ರಿಸುತ್ತಿತ್ತು. ಅದರ ಪಕ್ಕದಲ್ಲಿ ಕೊಳಕು ನಾಯಿಯೂ ಆಸರೆ ಪಡೆದಿದ್ದುದನ್ನು ಕಂಡು ಕುಂಞಿಮೋನು ಹೇಸಿದವನಂತೆ ಕ್ಯಾಕರಿಸಿ ಉಗುಳಿದ! ಬ್ಯಾರಿಗೆ ಅಸಮಾಧಾನವಾದುದನ್ನು ಕಂಡು ಸಾಂತ ಗೌಡನು ಮನೆಯ ಪರಿಸ್ಥಿತಿಯನ್ನು ವಿಶದೀಕರಿಸುವವನಂತೆ ನುಡಿದ-''ಸಾಹುಕಾರರೇ, ಏನು ಮಾಡಲಿ? ನಾಯಿಯನ್ನೂ ಬಳಿಯಲ್ಲಿ ಸೇರಿಸಿಕೊಳ್ಳದಿದ್ದರೆ ಅದೂ ಹುಲಿಯ ಪಾಲಾದಂತೆ! ಬೇರೆ ಉಪಾಯವಿಲ್ಲದಕ್ಕೆ ಹೀಗೆ ಮಾಡಿದೆವು. ನೋಡಿ, ನಿನ್ನೆ ತಾನೇ ನನ್ನ ತಮ್ಮನ ಮನೆಯಿಂದ, ರಾತ್ರಿ ಹೊತ್ತಿನಲ್ಲಿ ಕರುವೊಂದನ್ನು ಕೊಟ್ಟಿಗೆಯಿಂದಲೇ ಹುಲಿ ಎತ್ತಿಕೊಂಡು ಹೋಯಿತು'' ಎಂದು. ಹಾಗೆ ಅವನು ವರ್ಣಿಸುತ್ತಾ ಮಾತಿನ ಮಧ್ಯೆ ಹುಲಿಯ ಹೆಜ್ಜೆಯು ಗೇಣು ಗಾತ್ರವಿದೆಯೆಂದದ್ದನ್ನು ಕೇಳಿ ನನಗೆ ಒಳಗೊಳಗೆ ಎದೆ ಡವಗುಟ್ಟತೊಡಗಿತು. 'ಹೆದರಿದೆನೆಂದು ತೋರಿಸಿಕೊಳ್ಳಬಹುದೆ? ನನ್ನ ಬಂಟತನಕ್ಕೆ ಬೆಲೆಕಟ್ಟಲು ಅವಕಾಶ ಕೊಡುವುದುಂಟೆ?' ಎಂದುಕೊಂಡು ಇಲ್ಲದ ನಗುವನ್ನು ಬರಿಸಿ ಮುಗುಳ್ನಗುವಿನ ಪ್ರದರ್ಶನದ ವ್ಯರ್ಥ ಸಾಹಸದಲ್ಲಿದ್ದೆ! ಅಲ್ಲಿಂದ ಒಮ್ಮೆ ಬೇಗ ಹೋದರೆ ಸಾಕೆಂಬಂತೆ ಕಾಲು ಕೀಳುವ ಆಸೆಯಿಂದ ಶಿಕಾರಿಗೆ ಹೊರಡಲು ಅಣಿಯಾದೆವು. ಒಂದಿಗೆ ಸಾಂತ ಗೌಡನನ್ನೂ ಕರೆದೆವು. ಆತನು ಪತ್ನಿಯತ್ತ ನೋಡಿ ಜಾಗ್ರತೆಯಿಂದಿರುವಂತೆ ಹೇಳಿ ಕೈಗೆ ಸಿಕ್ಕ ಬಡಿಗೆಯನ್ನು ಹಿಡಿದುಕೊಂಡು ನಮ್ಮೊಡನೆ ಹೆಜ್ಜೆ ಹಾಕಿದ. ಸಾಂತ ಗೌಡನ ಮನೆಯಿಂದ, ನಾವು ಲೈಟು ಹಾಕುತ್ತ, ಸುತ್ತಿ ಬಳಸಿ ಒಂದು ಫರ್ಲಾಂಗಿನಷ್ಟು ದೂರ ನಡೆದಿರಬಹುದು. ''ಅಯ್ಯೋ'' ಎಂಬ ಬೊಬ್ಬೆ ಕೇಳಿಸಿತು! ಅಯ್ಯಯ್ಯೋ, ಹುಲಿ ಮನೆಗೆ ನುಗ್ಗಿತು, ಬನ್ನಿ, ಬಿಡಿಸಿ, ಸತ್ತೆವೋ ಸತ್ತೆವು! ಹೋ, ಹಿಡಿ, ಹಿಡಿ'' ಎಂಬ ಕಿರುಚಾಟ ಕೇಳುವಾಗ ನಮ್ಮ ಕಾಲಿನ ಬಲವೇ ಉಡುಗಿದಂತಾಯಿತು. ಸಾಂತ ಗೌಡನ ಅಳಲುವಿಕೆಗಂತೂ ತಡೆಯೇ ಇಲ್ಲ- ''ನಿಮ್ಮೊಂದಿಗೆ ನಾನು ಬಂದು ಮನೆಯಲ್ಲಿದ್ದ ಮಗುವನ್ನೇ ಹುಲಿಯ ಬಾಯಿಗೆ ಕೊಟ್ಟಂತಾಯಿತಲ್ಲಾ! ಅಯ್ಯೋ ದುರದೃಷ್ಟವೆ, ಅಲ್ಲದಿದ್ದರೆ ಅವಳು ಹೀಗೆ ಆರ್ಭಟೆ ಕೊಡುತ್ತಿರಲಿಲ್ಲ'' ಎಂಬುದನ್ನು ಕೇಳಿ ನನ್ನ ಮೇಲೆ ತಣ್ಣೀರು ಸುರಿದಂತಾಯಿತು. ಚಲಿಸಲು ಕಾಲೇ ಬರುವುದಿಲ್ಲ. ಸಾಂತ ಗೌಡನ ಮನೆಯತ್ತಣಿಂದ ಕೂಗು ಕೇಳುತ್ತಲೇ ಇದೆ. ''ಅಯ್ಯೋ ಕೈಯಿಂದ ತುತ್ತುಕೊಟ್ಟು ಸಾಕಿದೆನಲ್ಲಾ, ಅದು ಹುಲಿಯ ಪಾಲಾಯಿತಲ್ಲ. ಓ, ನಮ್ಮ ಹಣೆಬರಹವೇ'' ಎಂದು ರೋದಿಸುತ್ತಿದ್ದ ಹೆಣ್ಣಿನ ಧ್ವನಿ ಸಾಂತ ಗೌಡನ ಸಂದೇಹವನ್ನು ನಮ್ಮಲ್ಲೂ ಬಲಪಡಿಸುವಂತಿತ್ತು. ಬೊಬ್ಬೆಯು ಸಾಂತನ ಮನೆಯಿಂದ ಇನ್ನೂ ಕೇಳಿಸುತ್ತಲೇ ಇದೆ. ತ್ವರಿತ ಗತಿಯಿಂದ ನಾವೆಲ್ಲ ಅಲ್ಲಿಗೆ ತಲಪಿದೆವು. ''ಅಯ್ಯೋ ಕುಟ್ಟಾ, ಬಾಯಿಯ ಅಗುಳನ್ನು ನಿನಗೆ ತಿನ್ನಿಸಿ ಸಾಕಿದೆನಲ್ಲಾ ನಿನ್ನನ್ನು ಹುಲಿ ಕೊಂಡುಹೋಯಿತಲ್ಲಾ'' ಎಂದು ಮನೆಯಾಕೆಯ ಅಳುವಿನ ಧ್ವನಿ ಸ್ಪಷ್ಟವಾಗಿ ಕೇಳಿ

ಸಿತು. ಆದಷ್ಟು ಧೈರ್ಯ ಮಾಡಿಕೊಂಡು ಅಂಗಳಕ್ಕೆ ಬಂದು ತಡಿಕೆಯತ್ತ ಲೈಟು ಹಾಕಿದಾಗ ಕಂಡದ್ದೇನು? ತಡಿಕೆ ಬಿಟ್ಟ ಒಂದಾಳು ಗಾತ್ರದ ಬಿರುಕು ಕಾಣುತ್ತಿದೆ. ನಾವು ಹೊರಗಿನಿಂದ ಎಷ್ಟು ಒದರಿ ಕರೆದರೂ ಭಯ ಭೀತಳಾಗಿ ಅಳುತ್ತಿದ್ದ ಗೌಡತಿ ಒಳಗಿನಿಂದ ಚಿಲಕ ತೆಗೆಯುತ್ತಿಲ್ಲ. ಹೇಗಾದರೂ ಆಕೆಗೆ ಧೈರ್ಯನೀಡಿ ಬಾಗಿಲು ತೆಗೆಯಿಸಬೇಕಾದರೆ ನಾವು ಪಟ್ಟ ಶ್ರಮ ನಮಗೇ ವೇದ್ಯ! ಅಂತೂ, ಆಕೆ ಬಾಗಿಲು ತೆರೆದಾಗ ಆತುರಾತುರವಾಗಿ ಒಳನುಗ್ಗಿದ ನಾವು ಕಂಡುದೇನು? ಬೆಪ್ಪಾಗಿ, ಗೋಡೆಗೆ ಅಂಟಿ ಕುಳಿತ ಮಗು ತೆರೆದ ಕಣ್ಣನ್ನು ಮುಚ್ಚದೇ ನಮ್ಮೆಡೆಗೇ ನೋಡುತ್ತಿದೆ! ಗೌಡತಿಯು ರಾವು ಬಡಿದವಳಂತೆ ತಲೆ ಕೆದರಿ ಹಣೆಗೆ ಬಡಿದುಕೊಂಡು ಅಳುತ್ತಿದ್ದಾಳೆ. ಇಷ್ಟು ಜನರು ಇರುವಾಗ ಇನ್ನೊಮ್ಮೆ ಹುಲಿ ಆಕ್ರಮಿಸಲಾರದೆಂದು ಧೈರ್ಯ ತಂದುಕೊಂಡು ಲೈಟಿನ ಬೆಳಕನ್ನು ಸುತ್ತ ಬೀರಿದಾಗ ಕಾಣಿಸಿದ ಬೀಭತ್ಸಕರ ದೃಶ್ಯವನ್ನು ಮರೆಯುವುದಂತೂ ಸಾಧ್ಯವಿಲ್ಲ. ಹುಲಿ ಹಾಗೂ ನಾಯಿಗಳ ಉರುಡಾಟ ನಡೆದಾಗ ನಾಯಿಯನ್ನು ಕಾಪಾಡಿಕೊಳ್ಳಬೇಕೆಂಬ ಆವೇಶದಿಂದ ನಾಯಿಯ ಹಿಂಗಾಲುಗಳನ್ನು ಹಿಡಿದು ಗೌಡತಿ ಜಗ್ಗಿರಬೇಕು. ಹಾಗೆ ಜಗ್ಗಿದ ಭರಕ್ಕೆ ಹೆದರಿದ ನಾಯಿ ವಿಸರ್ಜಿಸಿದ ಮಲಮೂತ್ರದಿಂದಾದ ರಂಪಾಟ ಇಡೀ ಜಗಲಿ ಹರಡಿ ಆ ಹೇಸಿಗೆಯಿಂದ ಬರುತ್ತಿದ್ದ ನಾತವು ಸಹಿಸಲು ಅಸಾಧ್ಯವಾಗಿತ್ತು. ಅಂತೂ, ಹುಲಿಯು ಹೊತ್ತುಕೊಂಡು ಹೋದುದು ನಾಯಿಯನ್ನೆಂದು ಖಚಿತವಾಯಿತು. ಆ ಹುಲಿಯನ್ನು ಹುಡುಕಲೆಂದು ಮನಸ್ಸಿಲ್ಲದ ಮನಸ್ಸಿನಿಂದ, ರಾತ್ರಿ ತಣ್ಣೀರಿನ ಸ್ನಾನಕ್ಕೆ ಹೋಗುವವರಂತೆ, ಹೊರಟು ಮನೆಯ ಸುತ್ತು ಮುತ್ತು ಒಂದು ಗಂಟೆ ಹೊತ್ತು ಹುಡುಕಿದೆವು. ಯಾವ ಮೃಗದ ಸುಳಿವೂ ಇಲ್ಲ. ನಮ್ಮ ಇರವನ್ನು ಅರಿತ ಹುಲಿಯು ದೂರದ ಕಾಡಿಗೆ ನಾಯಿಯನ್ನು ಎತ್ತಿಕೊಂಡು ಓಡಿತೆ? ಹಾಗೊಂದು ವೇಳೆ ಹೋಗಿದ್ದರೆ ಮಾರಿ ಹೋದಂತಾಯಿತು ಎಂದೆಣಿಸಿಕೊಂಡು ಹುಡುಕಿದ್ದು ಸಾಕಾಗಿ ಗೌಡನ ಮನೆಯತ್ತ ಬರುವಾಗ ಬಾವಿಯತ್ತಣಿಂದ ನಾಯಿಯ 'ಕುಂಯ್', ಕುಂಯ್' ಕೂಗು ಕೇಳಿಸಿತು. ಮನುಷ್ಯರ ಬೊಬ್ಬೆಗೆ ಹೆದರಿದ ಹುಲಿ ಓಡುವಾಗ ಅದರ ದವಡೆಯಿಂದ ತಪ್ಪಿಸಿದ ನಾಯಿ ಓಡಿ ಬಾವಿಗೆ ಬಿದ್ದು ಕುಂಯ್ ಗುಡುವುದೇ? ಹೀಗೆಂದು ಪರಿಶೀಲಿಸಲು ಪಾಮರದ ಬಳಿ ಬಂದು ಲೈಟಿನ ಬೆಳಕನ್ನು ಬಾವಿಯ ಒಳಗೆ ಬೀರುವಾಗ ಪಿಳಿ, ಪಿಳಿ ಕಣ್ಣುಬಿಟ್ಟು ನೋಡುತ್ತಿದ್ದ ನಾಯಿ ಕಾಣಿಸಿತು! ''ಸಾಂತಾ, ನಿನ್ನ ನಾಯಿ ಈ ಬಾವಿಯಲ್ಲಿದೆ, ಬಾ ನೋಡು '' ಎನ್ನುವಾಗ ಅದೇನು 'ಗುರ್‍ರೆಂಬ' ಸದ್ದು?! ಒಮ್ಮೆ ಬೆಚ್ಚಿ ಬಿದ್ದು, ಪುನಃ ಕಿವಿಗೊಟ್ಟು ಆಲಿಸಿದರೆ ನಾಯಿಯ ಸದ್ದಿಲ್ಲ; ಗುರ್ ಗುರ್‍ರೆಂಬ ಸದ್ದು ಮತ್ತೆ ಕೇಳುತ್ತಿದೆ. ಓಹೋ, ನಾಯಿಯೊಡನೆ ಹುಲಿಯೂ ಗಟ್ಟಣೆಯಿಲ್ಲದ ಬಾವಿಗೆ ಬಿದ್ದಿರಬೇಕೆಂದು ನಾವೆಲ್ಲ ನಿರ್ಧರಿಸಿಕೊಂಡೆವು. ಪುನಃ ಲೈಟ್ ಹಾಯಿಸಿ ನೋಡಿದಾಗ

ನಾಯಿ ಮಾತ್ರವಲ್ಲದೆ ಹುಲಿಯೂ ಬಾವಿಯ ಅಂಕಣಕ್ಕೆ ಕೈಯಿರಿಸಿ ಮುಳುಗದಂತೆ ತಡೆದುಕೊಂಡು ಮೇಲೆ ನೋಡುತ್ತಿದೆ! ನಾವೆಲ್ಲ ಅಪೂರ್ವ ದೃಶ್ಯವನ್ನು ಭಯಾಶ್ಚರ್ಯಭರಿತರಾಗಿ ನೋಡುತ್ತಿದ್ದೆವು. ಕುಂಞಿಮೋನು ಕೇಳಿದ-''ಸಾಂತಾ ಬಾವಿಯಲ್ಲಿ ಎಷ್ಟು ನೀರಿರಬಹುದು?'' ''ಸುಮಾರು ಎರಡಾಳು ಇದ್ದೀತು'' ಆತನೆಂದ. ಇದನ್ನು ಕೇಳಿ ಉತ್ಸಾಹಿತನಾದ ಕುಂಞಿಮೋನು''ಹಾಗಾದರೆ ಈಗ ಸುಮ್ಮನಿರುವುದು ತರವಲ್ಲ. ನಮ್ಮ ಮುಂದಿನ ಕೆಲಸಕ್ಕೆ ತೊಡಗುವ. ಹುಲಿಯು ಹಿಂಗಾಲನ್ನು ಊರದೆ ಮೇಲಕ್ಕೆ ನೆಗೆಯುವಂತಿಲ್ಲ; ನೆಗೆಯಲು ಯತ್ನಿಸಿದರೆ ಈ ಸ್ಥಿತಿಯಲ್ಲಿ ಮುಳುಗುವುದರಲ್ಲಿ ಸಂದೇಹವಿಲ್ಲ'' ಎಂದು ನಮ್ಮೆಲ್ಲರನ್ನೂ ಹುರಿದುಂಬಿಸಿದ. ತನ್ನ ಕಂಚು ಕಟ್ಟಿದ ದೊಣ್ಣೆಯನ್ನೊಮ್ಮೆ ಎತ್ತಿ ಹಿಡಿದು ನನ್ನ ಹಿಂದಿನಿಂದ ಮೈಗಾವಲ ಭಟನಂತೆ ನಿಂತು ''ಹುಂ, ಎಲ್ಲರೂ ಮುಂದುವರಿಯಿರಿ, ಹಿಂದಿನಿಂದ ಕತ್ತಿ, ದೊಣ್ಣೆಯವರೂ ಬನ್ನಿರಿ'' ಎಂದು ಆದೇಶಿಸಿದ. ನಾನು ಬಾವಿಯ ಒಳಗೆ ಮತ್ತೊಮ್ಮೆ ಬೆಳಕು ಬೀರಿದಾಗ ಕಂಡ ದೃಶ್ಯದಿಂದ ಮೈಯ ರೋಮಗಳೆಲ್ಲ ನಿಗುರಿ ನಿಂತವು. ಹಂಡೆ ಗಾತ್ರದ ತಲೆಯಲ್ಲಿ ಕೆಂಗಣ್ಣುಗಳು ರಕ್ತಸೂಸುವಂತೆ ಹೊಳೆಯುತ್ತಿವೆ. ಮೇಲೆಕ್ಕೆ ನೆಗೆಯಲು ಯತ್ನಿಸುವ ಹುಲಿಯ ಸಾಧನೆ ವಿಫಲವಾಗುತ್ತಿತ್ತು. ನಮ್ಮನ್ನು ಕಂಡು ಭೀತಿಗೊಂಡ ಹುಲಿಯ ಗುರುಗುಡುವಿಕೆ ತಾರಕಕ್ಕೇರಿತು. ಜೀವವುಳಿಸಿಕೊಳ್ಳುವ ಹಂಬಲದಿಂದ, ಬಾವಿಯಿಂದ ಮೇಲಕ್ಕೇರಿ ಪಾರಾಗಲು ಬಾವಿಯ ಬದಿಯನ್ನು ಒಂದು ಕೈಯಿಂದ ಬಿಗಿ ಹಿಡಿದು ಮತ್ತೊಂದು ಕೈಯಿಂದ ಮೇಲಕ್ಕೆ ಹತ್ತಲು ಯತ್ನಿಸುತ್ತಿತ್ತು. ಹುಲಿಯ ಉಗುರಿನ ಹಿಡಿತಕ್ಕೊಳಗಾದ ಹಸಿಮಣ್ಣು ಮುದ್ದೆ ಮುದ್ದೆಯಾಗಿ ಬಾವಿಗೆ ಬೀಳುತ್ತಿತ್ತಲ್ಲದೆ ಹುಲಿಗೆ ಭದ್ರವಾದ ಹಿಡಿತ ಸಿಕ್ಕುತ್ತಿರಲಿಲ್ಲ. ಆಗ ಕುಂಞಿಮೋನು ''ಧನೀ, ನೋಡುವುದೇನು? ಹೊಡೆಯಿರಿ ಗುಂಡು! ಅದು ಮೇಲೆ ಹಾರಿದರೆ ನನ್ನ ಕಂಚಿನ ಕಟ್ಟದ ದೊಣ್ಣೆಯು ಸಿದ್ಧವಾಗಿಯೇ ಇದೆ'' ಎಂದು ಹುರಿದುಂಬಿಸಿದ. ನಾನು ತುಂಬು ಧೈರ್ಯತಾಳಿ ಲೈಟಿನ ಬೆಳಕನ್ನು ಸರಿಯಾಗಿ ಎದೆಗವಚಿ ಟ್ರಿಗರನ್ನು ಒತ್ತಿದೆ. ಕೋವಿ 'ಢಮಾಲ್' ಎಂದಿತು. ಹುಲಿಯು ಕೊನೆಯ ಯತ್ನವೆಂದು ನೆಗೆದುದು ಹಿಡಿತವಿಲ್ಲದ್ದರಿಂದ ಊರೇ ನಡುಗುವಂತೆ ಒಮ್ಮೆ ಅಬ್ಬರಿಸಿ ನೆಗೆದು ಬಾವಿಯಲ್ಲಿ ಮುಳುಗಿತು! ಈಡಿನ ಸದ್ದಿಗೆ ಹೆದರಿದ ನಾಯಿಯು ಬಾವಿಗೆ ಬಿದ್ದು ಮುಳುಗಿ ಗಡಬಡಿಸಿ ಈಜಿ ಮೇಲೆದ್ದು ತನ್ನ ಮೊದಲಿನ ತಾವಿನಲ್ಲಿಯೇ ಕೈಯಿರಿಸಿ ಜೋತಾಡುವಂತೆ ನಿಂತಿತು. ಆದರೆ ಮುಳುಗಿದ ಹುಲಿಯ ಪತ್ತೆಯಿಲ್ಲ. ಬಾವಿಯ ತಳದಿಂದ ರಕ್ತಮಿಶ್ರಿತ ನೀರು ಮೇಲೆ ಬರುತ್ತಿದೆ. ಹುಲಿಯು ಸತ್ತಿತೆಂಬ ನಿರ್ಧಾರಕ್ಕೆ ಬಂದು ಉಲ್ಲಾಸತಾಳಿದ ನಾನು ಆಕಾಶಕ್ಕೆ ಹುಸಿಕುಂಡೊಂದನ್ನು ಎಸೆದು ಊರವರೆಲ್ಲರಿಗೂ ಹುಲಿ ಸತ್ತಿತೆಂಬ ಜಾಹೀರಾತನ್ನು ಮಾಡಿದೆ. ಎಲ್ಲರೂ ಬಾವಿಯ ಬಳಿಗೆ ತವಕದಿಂದ

ಬಂದು ಇಣಿಕಿ ನೋಡಿದರು; ಹುಲಿಯ ಸುಳಿವಿಲ್ಲ. ದೂರದೂರದಿಂದ ಎರಡು ಈಡನ್ನೂ, ಹುಲಿಯ ಕೊನೆಯ ಆರ್ಭಟೆಯನ್ನೂ ಕೇಳಿದ ನೆರೆಕರೆಯವರೂ ಲಾಟಾನು, ಸೂಟೆಗಳ ಬೆಳಕಿನೊಂದಿಗೆ ನಮ್ಮತ್ತ ಕಡೆಗೆ ಬರುತ್ತಿದ್ದರು. ಕುಂಞಿ ಮೋನುವು ''ಹುಲಿಯು ಬಾವಿಯ ಬುಡಕ್ಕಿಳಿದು ಪ್ರಾಣ ಬಿಡುವಾಗ ಮಣ್ಣು ಕಚ್ಚಿರ ಬೇಕು. ಹಾಗೆ ಕಚ್ಚಿದುದು ಗಟ್ಟಿ ಹಿಡಿತವಾಗಿ ಹುಲಿ ಅಲ್ಲಿ ಸಿಲುಕಿದೆ. ಈಡಾಗಿ ಐದು ನಿಮಿಷದಷ್ಟಾಯಿತು. ಜೀವವಿರುತ್ತಿದ್ದರೆ ಈಗಾಗಲೇ ಮೇಲೆ ಬರಬೇಕಾಗಿತ್ತು'' ಎಂದು ನುಡಿದ. ಬಾವಿಯೊಳಗೆ ಕುಂಯ್‌ಗುಡುತ್ತಿದ್ದ ನಾಯಿಯನ್ನು ಹಗ್ಗದ ಉರುಳು ಮಾಡಿ ಸಿಕ್ಕಿಸಿ ಸಾಂತ ಗೌಡನು ಮೇಲಕ್ಕೆಳೆದು ಹಾಕಿದ. ಮೇಲಕ್ಕೆ ಬಂದೊಡನೆ ತಪ್ಪಿಸಿಕೊಂಡು ಓಡಿದ ನಾಯಿಯು ನಿಂತುದು ಗೌಡನ ಅಡಿಗೆ ಕೋಣೆಯಲ್ಲಿ ಇಷ್ಟು ಹೊತ್ತಿಗೆ ಹುಲಿಯ ಹಿಂಗಾಲುಗಳು ಮೇಲಕ್ಕೆ ಬರುತ್ತಿರುವುದನ್ನು ಕಂಡು ಕುಂಞಿಮೋನುವಿನ ಅಭಿಪ್ರಾಯ. ಸರಿಯೆಂದು ನಾವೆಲ್ಲ ತೀರ್ಮಾನಿಸಿದೆವು.

ಮನೆಗೆ ಆಳುಗಳನ್ನು ಕಳುಹಿಸಿ, ಅಟ್ಟದಿಂದ ಮೂರು ನಾಲ್ಕು ಹಗ್ಗಗಳನ್ನು ತರಿಸಿದೆವು. ಹಗ್ಗಕ್ಕೆ ಉರುಳು ಮಾಡಿ ತಲೆ ಕೆಳಗಾಗಿ ಜೋತಾಡುತ್ತಿದ್ದ ಹುಲಿಯ ಕಾಲುಗಳಿಗೆ ಪ್ರಯಾಸದಿಂದ ಸಿಕ್ಕಿಸಿದೆವು. ಹಗ್ಗದ ಇನ್ನೊಂದು ತುದಿಯನ್ನು ಬಾವಿಯ ಪಾಮರಕ್ಕೆ ಕಟ್ಟಿ, ಹತ್ತು ಹನ್ನೆರಡು ಮಂದಿ ಎಳೆದರೂ ಹುಲಿಯ ದೇಹ ಬಾವಿಯ ಅರ್ಧ ಭಾಗದಷ್ಟೂ ಮೇಲೇರಲಿಲ್ಲ. ಉಳಿದೆಲ್ಲರೂ ಸೇರಿ ಎಳೆದರೂ ಅಷ್ಟೆ! ಕೈಯಲ್ಲಿದ್ದ ಹಗ್ಗವನ್ನು ಹತ್ತಿರದ ಮರಕ್ಕೆ ಕಟ್ಟಿ ಮುಂದೇನೆಂದು ಯೋಚಿಸಿದೆವು. ಸಾಂತ ಗೌಡನ ಮನೆಯಲ್ಲಿದ್ದ ಬಿದಿರ ಏಣಿಯನ್ನು ತರಿಸಿದೆವು. ಇಬ್ಬರು ಏಣಿಯ ಸಹಾಯದಿಂದ ಬಾವಿಗಿಳಿದು ಹುಲಿಯ ದೇಹವನ್ನು ಮೇಲೆತ್ತಿ ಕೊಟ್ಟರು. ಮೇಲಿನಿಂದ ಎಲ್ಲರೂ ಕೂಡಿ ಎಳೆದ ರಭಸಕ್ಕೆ ಪಾಮರವನ್ನು ಮಗುಚಿ ಹುಲಿಯ ದೇಹವು ಮೇಲೆ ಬಂತು!

ಹನ್ನೆರಡು ಅಡಿ ಉದ್ದದ ಪಟ್ಟೆಹುಲಿ! (ನಿಡಿದಾಗಿ ಚಾಚಿ ಮಲಗಿಸಿದಾಗ ಬಾಲದ ತುದಿಯಿಂದ, ತಲೆಯ ತನಕವೆಂದು ಹೀಗೆ, ಲೆಕ್ಕ) ರೋಮವು ಅರಸಿನ ವರ್ಣದಿಂದ ಕೆಂಬಣ್ಣಕ್ಕೆ ತಿರುಗಿದೆ. ಕರಿಬಣ್ಣದ ಪಟ್ಟೆಯ ಎಡೆಯಲ್ಲಿ ಬಿಳಿ ರೋಮಗಳು ಮೂಡಿ ನಿಂತಿವೆ. ಈ ಮೊದಲು ಅಜ್ಜಯ್ಯನವರು ಹೊಡೆದಿದ್ದ ಹಲವು ಹುಲಿಗಳನ್ನು ಕಂಡ ಕುಂಞಿಮೋನು ''ಇದು ತುಂಬಾ ಪ್ರಾಯದ ಹುಲಿ'' ಎಂದು, ಅದರ ಬಾಯಗಲಿಸಿ ನೋಡಿದ. ನೆತ್ತಿಗಾದ ಜಂಟಿ ಗುಂಡಿನ ಪೆಟ್ಟಿನಿಂದ ನಜ್ಜುಗುಜ್ಜಾದ ತಲೆಯು ಗುಜುಗುಜು ಎನ್ನುತ್ತಿತ್ತು. ಬಾಯಿ ಬಿಡಿಸಿ ನೋಡಿದ ಕುಂಞಿಮೋನು ಎದುರಿನ ಹಲ್ಲುಗಳಿಲ್ಲದ ಬೊಚ್ಚು ಬಾಯಿಯ ಆ ಹುಲಿಯನ್ನು ಕಂಡವನೇ ''ಹೊ...ಹೋ! ಪ್ರಾಯವಾಗಿರುವುದೇನು? ಇದಕ್ಕೆ ನನ್ನಂತೆ ಎದುರಿನ ಹಲ್ಲುಗಳೇ

ಇಲ್ಲ. ಆದ್ದರಿಂದಲೇ ಪ್ರತಿಭಟಿಸುವ ಯಾವ ಪ್ರಾಣಿಯ ಗೋಜಿಗೂ ಹೋಗದೆ ಈ ಹುಲಿ ಮನೆಯಲ್ಲಿನ ಕರು, ನಾಯಿಗಳನ್ನೇ ಖಾಯಸು ಮಾಡುವುದು'' ಎಂದು ತೀರ್ಮಾನವಿತ್ತ. ನಮಗೆಲ್ಲ ಅದು ನಿಜವೆಂದು ಮನದಟ್ಟಾಯಿತು.

ಹುಲಿಯನ್ನು ಅಂಗಾತ ಮಲಗಿಸಿ, ಬಡಿಗೆ ಹಗ್ಗಗಳನ್ನು ತರಲು ಕೆಲವರು ಹೋದರು. ನನ್ನ ತೈನಾತಿಗಳಾದ ಮಲ್ಲು, ಅಂಗರ ಇವರು ಈ ಸಂಭ್ರಮದ ಸುವಾರ್ತೆಯನ್ನು ಮನೆಗೆ ಮುಟ್ಟಿಸಲು ಲಾಟಾನು, ದೊಣ್ಣೆಗಳನ್ನು ಹಿಡಿದುಕೊಂಡು ತವಕದಿಂದ ಓಡಿದರು. ಸುಂಕದ ಕಟ್ಟೆಗೆ ಮರುದಿನ ಗಾಡಿ ಬರುವಂತೆ ಮಾಡಿ ಹುಲಿಯ ಮೆರವಣಿಗೆಯ ವ್ಯವಸ್ಥೆ ಆಗಬೇಕಲ್ಲ ? ನನ್ನ ಈಡುಗಾರಿಕೆಯ ಜಾಹೀರಾತು ಬೇಡವೇ? ಬಾವಿಗೆ ಬಿದ್ದ ಹುಲಿಯನ್ನು ಧನಿಗಳ ಮಗ ಹೊಡೆದುದೆಂದು ತಪ್ಪಿಯೂ ಯಾರೂ ಬಾಯಿ ಬಿಡುವಂತಿಲ್ಲ. ಹಾಗೆ ಯಾರಾದರೂ ಉಸಿರೆತ್ತಿದರೆ ಮರುದಿನ ಊಟ, ಕಾಫಿಗೆ ಖೋತಾಯೆಂದು ಸ್ಪಷ್ಟವಾಗಿ ಗೊತ್ತಿದ್ದ ನನ್ನ ಸಂಗಡಿಗರು ಬಾಯಿ ಮುಚ್ಚಿದ್ದರು.

ರಾತಾ ರಾತ್ರಿಯೇ ಹುಲಿಯನ್ನು ಬಡಿಗೆಗೆ ಸಿಕ್ಕಿಸಿ ಕೂಡಿದವರಿಂದ ಹೊರಿಸಿಕೊಂಡು ಸುಂಕದ ಕಟ್ಟೆಯ ಕಡೆಗೆ ಹೊತ್ತಾದ್ದಾಯಿತು. ದಾರಿಯಲ್ಲಿ ರಾಮ ಪೂಜಾರಿಯ ಮನೆ. ಅಲ್ಲಿ ತುಸು ತಂಗಿದಾಗ ಹುಲಿ ಹೊತ್ತು ದಣಿದವರಿಗೆ ರಾಮ ಪೂಜಾರಿಯ ಹಂಡೆಯಲ್ಲಿ ಉಳಿದಿದ್ದ ಬೈನಿ ಕಳ್ಳಿನ ಸಮಾರಾಧನೆ! ನನಗೆ ಎಳನೀರು ಸೇವನೆಯಾಯಿತು. ಹುಲಿಯನ್ನು ಹೊತ್ತವರು ಆಗಲೇ ಸುಂಕದ ಕಟ್ಟೆಯ ತನಕ ಹೊತ್ತು ಅದನ್ನು ಸಾಗಿಸಬೇಕೆಂದು ಕುಂಞಮೋನು ದಟ್ಟಿಸಿ ಹೇಳುವಾಗ ಆಗದೆನ್ನುವ ಎದೆಗಾರಿಕೆ ಯಾರಿಗಿದೆ ? ಬಹಳ ಸಾಹಸಪಟ್ಟು ಹುಲಿಯ ಹೆಣವನ್ನು ಸುಂಕದ ಕಟ್ಟೆಗೆ ಸಾಗಿಸಿದ್ದಾಯಿತು. ಅಲ್ಲಿನ ನೆರೆಕರೆಯವರಿಗೆ, ಪಟೇಲರಿಗೆ, ಅಂಗಡಿ ಹೋಟೆಲಿನವರಿಗೆ ಅಚ್ಚರಿ, ಸಂಭ್ರಮ ! ''ನನ್ನ ಮನೆಯ ಕರುವನ್ನು ಈ ಖೂಳನೇ ತಿಂದದ್ದು, ನಮ್ಮ ನಾಯಿಗಳನ್ನೆಲ್ಲ ತಿಂದು ಮುಗಿಸಿದೆ'', ಎಂದು ವಿಧ ವಿಧವಾಗಿ ಮಾತನಾಡುತ್ತ ಜನ ಸತ್ತ ಹುಲಿಯತ್ತ ಉಗುಳುತ್ತಿದ್ದರು. ಹುಲಿಬೇಟೆಯಿಂದ ಸಂತುಷ್ಟರಾದ ಹೋಟೆಲ್ ಪುಟ್ಟಣ್ಣ ಗೌಡರು ನಮ್ಮ ಬಳಗಕ್ಕೆ ಗಡದ್ದಾಗಿ ಅವಲಕ್ಕಿ, ಕಾಫಿ ಸಮಾರಾಧನೆಯನ್ನೇ ಏರ್ಪಡಿಸಿದರು. ಅಷ್ಟಲ್ಲದೆ, 'ತಮ್ಮ ದನ ಕರುಗಳು ಇನ್ನು ಅದರ ಪಾಲಾಗದಂತೆ ಕಾಪಾಡಿದ ಪುಣ್ಯವು ನನ್ನ ಪಾಲಿಗೆ ರಕ್ಷೆಯಾಗಲಿ' ಎಂದು ಹಾರ್ದಿಕವಾಗಿ ಆಶೀರ್ವದಿಸಿ ಸುಂಕದ ಕಟ್ಟೆಯಿಂದ ಕಡಬದ ತನಕ ಹುಲಿ ಮೆರವಣಿಗೆ ಅದ್ದೂರಿಯಿಂದ ನಡೆಯಬೇಕೆಂದೂ, ಅದರ ಖರ್ಚೆಲ್ಲವನ್ನೂ ತಾವೇ ವಹಿಸಿಕೊಳ್ಳುವುದಾಗಿಯೂ ಉತ್ಸಾಹದಿಂದ ನುಡಿದರು. ಕಾಸಿಂ ಸಾಹೇಬನು ನೂರು ಗರ್ನಾಲುಗಳನ್ನು ಹೊಡೆಯಬೇಕು; ಮೇರ, ಕೊರಗರ ಕೊಂಬು ಕಹಳೆ, ದುಡಿ, ಡೋಲಿನ ಗೌಡಿ ಇರಬೇಕು-

ಎಂದೆಲ್ಲ ಏರ್ಪಾಡಾಯಿತು. ಕೊರಗರ ಕೊಟ್ಯಕ್ಕೆ, ಮೇರರ ದಟ್ಟಗೆಗೆ ಜನ ಅಟ್ಟಿ ಅವರು ಬಂದು ಕಿರು ಪಳಾರ ಮಾಡಿ ಕೂತುಕೊಂಡಿದ್ದಷ್ಟೆ; ಅಬ್ಬೋಕರೆ ಬ್ಯಾರಿಯ ಉರಾಲು ಕೇಳಿಸಿ ಗಾಡಿ ಬಂತೆಂದು ಸೂಚಿಸಿತು. ಆಗ ಬೆಳಗ್ಗೆ ಗಂಟೆ ಎಂಟಾಗಿರ ಬಹುದು. ಸಮೀಪಿಸಿದ ಗಾಡಿಯ ಎತ್ತುಗಳು ಗೋಡೆಗೊರಗಿಸಿ ನಿಲ್ಲಿಸಿದ್ದ ಹುಲಿಯ ದೇಹವನ್ನು ಕಂಡು ಒಮ್ಮೆ ಪೆರ್ಚಿಕಟ್ಟಿದವು; ಆದರೂ ಅಬ್ಬೋಕರೆಯ ಚಾಕಚಕ್ಯ ದಿಂದ ಹಿಡಿತಕ್ಕೆ ಬಂದುವು. ಗಾಡಿಯಿಂದ ಅಜ್ಜಯ್ಯನವರೂ, ತಂದೆಯವರೂ ನಿಧಾ ನವಾಗಿ ಇಳಿದರು. ತಂದೆಯವರು ಹುಲಿಯನ್ನು ಒಮ್ಮೆ ಮೆಚ್ಚುಗೆಯ ನೋಟದಿಂದ ದಿಟ್ಟಿಸಿ ನನ್ನನ್ನು ನೋಡಿದಾಗ ದುರ್ದಾನ ತೆಗೆದುಕೊಂಡವರಂತೆ ಮುಖ ತಿರುಗಿಸಿ ಗಾಡಿಯೇರಿ ''ಹೂಂ, ಹುಲಿಯನ್ನು ಗಾಡಿಗೆ ಹತ್ತಿಸಿರಿ'' ಎಂದರು. ಅಜ್ಜಯ್ಯನವರು ಸಮೀಪಿಸಿ ನನ್ನ ತಲೆ ನೇವರಿಸಿ, ''ಇದು ಬಲಿಪ್ಪ; ಬಹು ಶಕ್ತಿಯುತವಾದುದು. ನಾನು ಹಲವಾರು ಹುಲಿಗಳನ್ನು ಹೊಡೆದಿದ್ದರೂ ಇಷ್ಟು ಘನ ಅಡ್ಡ ಬಲಿಪ್ಪನನ್ನು ಕಂಡಿಲ್ಲ. ಒಂದೇ ಈಡಿನಲ್ಲಿ ಸತ್ತಿತಷ್ಟೆ? ಹೆದರಲಿಲ್ಲ ತಾನೆ?'' ಎಂದು ತುಂಬು ಹರ್ಷದಿಂದ ನುಡಿದರು. 'ಮಗ ಸೋತರೂ ಚಿಂತಿಲ್ಲ; ಜೂಜಿನ ಒಳವು ಕಲಿತನು' ಎಂಬ ಗಾದೆ ಯಂತೆ ವಿದ್ಯಾವಂತನಾಗಿ ಮನೆಗೆ ಹೆಸರು ತಾರದಿದ್ದರೂ ಶಿಕಾರಿಯಲ್ಲಿ ತಂದನಲ್ಲವೆ? ಎಂಬ ಭಾವನೆಯಿಂದ ನನ್ನನ್ನು ಹೊಗಳಿದ್ದೇ ಹೊಗಳಿದ್ದು ! ಪಾಪ, ಅವರೇನು ಬಲ್ಲರು-ನಾನು ಬಾವಿಗೆ ಬಿದ್ದ ಹುಲಿಗೆ ಹೊಡೆದು ಬಂಟತನದ ಅಬ್ಬರದಿಂದ ಬೀಗುವುದೆಂದು? ತಂದೆಯವರೇನಾದರೂ ಈ ಗುಟ್ಟನ್ನು ಅರಿತಿದ್ದರೆ ಅಲ್ಲೇ ನನ್ನ ಮುಖಕ್ಕೆ ಉಗುಳುತ್ತಿದ್ದರು.

ತಂದೆಯವರು 'ಹುಲಿಯನ್ನು ಗಾಡಿಗೆ ಹಾಕಿರಿ'' ಎಂದಿದ್ದನ್ನು ಕೇಳಿ ಪುಟ್ಟಣ್ಣ ಗೌಡರು ಮುಂದೆ ಬಂದು, ''ಧನಿಗಳೇ ಮಗುವು ಹೊಡೆದ ಪ್ರಥಮ ಬಲಿಪ್ಪ. ಕಡಬದ ತನಕ ಇದರ ಮೆರವಣಿಗೆಯಾಗಲೇ ಬೇಕು. ಈ ನಮ್ಮಣ್ಣ ಊರಿಗೆ ಉಪದ್ರ ಕೊಡುತ್ತಿದ್ದ ಬಲಿಪ್ಪನನ್ನು ಒಂದೇ ಈಡಿನಿಂದ ಕೊಂದ ಪುಣ್ಯಾದಿಗನೆಂದು ಊರ ವರು ಆಶೀರ್ವಾದ ಮಾಡಬೇಕು. ಈ ಬಾಬ್ತಿನಲ್ಲಿ ಎಷ್ಟು ಖರ್ಚಾದರೂ ಇಂದು. ನನ್ನ ಲೆಕ್ಕದಲ್ಲಿ! ಗಾಡಿಯು ಮುಂದಿನಿಂದ ಹೋಗಲಿ. ಹುಲಿಯನ್ನು ಹೊತ್ತವರು ಹಿಂದಿನಿಂದ ಬರುತ್ತಾರೆ. ನಾನೂ ಸುಂಕದಕಟ್ಟೆ ಪಟೇಲರೂ ಕಡಬದ ತನಕ ಬರುವವರೇ'' ಎನ್ನುವಾಗ ತಂದೆಯವರಿಗೆ ಏನು ಮಾಡುವುದಕ್ಕೂ ಗೊತ್ತಾಗದೆ ಅಜ್ಜನವರ ಮುಖವನ್ನು ನೋಡಿದರು. ಅಜ್ಜಯ್ಯನವರ ಮೋಹದ ಮೊಮ್ಮಗನಲ್ಲವೆ ನಾನು? ಅವರು ಎಂದೂ ಬೇಡವೆನ್ನರು. ಅವರ ಸಮ್ಮತಿಯೂ ದೊರಕಿದ್ದನ್ನು ಕಂಡ ತಂದೆಯವರು 'ಇವನ ಸುಟ್ಟ ಮುಖಕ್ಕೆ ಇನ್ನು ಇದೊಂದು ಬಾಕಿ' ಎಂದು ಗೊಣಗಿಕೊಂಡು ಗಾಡಿಯಿಂದ ಇಳಿದು ಮನೆಗೆ ನಡೆದೇ ಬಿಟ್ಟರು. ಇದೇನು ಅವರು

ಸಿಟ್ಟುಗೊಂಡವರಂತೆ ಹೋದುದೆಂದು ಗೌಡರು ಅಜ್ಜಯ್ಯನವರತ್ತ ನೋಡುವಾಗ ''ಮಗನ ಜಿರ್ಸತ್ತಿಗೆಯನ್ನು ಮನೆಯಲ್ಲಿ ಹೇಳಲು ಹೋದುದೆಂದು '' ಸಮಾಧಾನಪಡಿಸಿದರು. ಸ್ಕೂಲು ಬಿಟ್ಟಿ ಅಪಾಪೋಲಿಯಾಗಿ ಮಗನು ತಿರುಗುತ್ತಿರುವುದಕ್ಕೆ ತಂದೆಗೆ ಸಿಟ್ಟು ಎಂಬ ಗುಟ್ಟನ್ನು ರಟ್ಟು ಮಾಡಿದರೆ ಮನೆತನಕ್ಕೆ ಕುಂದಲ್ಲವೆ? ಕೊನೆಗೂ ಅಜ್ಜಯ್ಯನವರ ಉಪಸ್ಥಿತಿಯಲ್ಲಿ ಮೆರವಣಿಗೆಗೆ ಸಿಂಗರಿಸಿದ ಹುಲಿಯು ಸಿದ್ಧವಾಗುತ್ತಿತ್ತು. ಬಾಯಗಲಿಸಿ ಹುಲಿಯು ಭೀಕರವಾಗಿ ತೋರುವಂತೆ ಹುಲ್ಲಿನ ಉಂಡೆಯನ್ನು ಅದರ ದವಡೆಗೆ ಬೇಕಾದ ರೀತಿಯಲ್ಲಿ ಅಣಿಗೊಳಿಸಲು ಅಜ್ಜಯ್ಯನವರು ಹೇಳಿಕೊಡುತ್ತಿದ್ದಾಗ ತೆರೆದ ಬಾಯನ್ನು ಕಂಡವರೇ ''ಹೋ, ಇದು ಮುದಿ ಜಂಬೂಸು ಹುಲಿ! ಎದುರಿನ ಹಲ್ಲೇ ಇಲ್ಲ. ಇನ್ನು ಕೆಲವು ಸಮಯದೊಳಗೆ, ಹೊಟ್ಟೆಗಿಲ್ಲದೆ ಇದು ಸತ್ತೇ ಹೋಗುತ್ತಿತ್ತು'' ಎಂದಾಗ ನನ್ನ ಈ ಬೇಟೆಯ ಪೂರ್ಣ ಕಥೆ ಬೆಳಕಿಗೆ ಬಂದರೇನು ಗತಿಯೆಂದು ನನ್ನೆದೆ ನಡುಗಿತು.

ಸತ್ತ ಹುಲಿಯನ್ನು ಬಾಯಗಲಿಸಿ ಹಾರಲು ಹವಣಿಸುವ ಭಂಗಿಗೆ ಅಳವಡಿಸಿ, ಬಿಡಿಗೆಯ ಊರನ್ನು ಕೊಟ್ಟು ಸಿದ್ಧಗೊಳಿಸಿ ವಿವಿಧ ಜಾತಿಯ ಹೂಮಾಲೆಗಳನ್ನು ಕೋದು ಕೊರಳಿಗಿಕ್ಕಿ, ಚರ್ಮ ಹಾಳಾಗದಂತೆ ಹುಲಿಯನ್ನು ಬಡಿಗೆಗೆ ನೇತಾಡಿಸಿ ಕೆಳಭಾಗವು ಮುದುಡಿ ಹುಲಿಯು ಕುಸುಕಿ ಹೋಗದಂತೆ ವ್ಯವಸ್ಥೆಗೊಳಿಸಿ ಆರಾರು ಜನ ಹಿಂದುಮುಂದಿನಿಂದ ಹೊರಲು ಅನುಗೊಳಿಸಿದ್ದಾಯಿತು. ಹೀಗೆ ಮೆರವಣಿಗೆಗೆ ಸಿದ್ಧವಾದ ಹುಲಿಯನ್ನು ಕಂಡು ನನ್ನ ಮತ್ತು ಅಜ್ಜನವರ ಆನಂದಕ್ಕೆ ಪಾರವಿಲ್ಲ. ನನ್ನ ಸಂಗಡಿಗರಂತೂ ಹೆಮ್ಮೆಯಿಂದ ಬೀಗಿದ್ದರು. ಹುಲಿ ಮೆರವಣಿಗೆಗೆ ಸಿದ್ಧವಾಯಿತೆಂಬುದನ್ನು ಸೂಚಿಸುವಂತೆ ಕಾಸಿಂ ಸಾಹೇಬರ ಗರ್ನಾಲಿನ 'ಢಂ' ಸದ್ದು ಸೂಚಿಸಿತು. ಅಜ್ಜಯ್ಯನವರೂ ನಾನೂ ಅಬ್ಬೋಕರೆ ಬ್ಯಾರಿಯೂ ಗಾಡಿಯೇರಿದೆವು. ಗಾಡಿ ಮರ್ದಾಳದತ್ತ ಹೊರಟಿತು. ಹಾರಲು ಸಿದ್ಧವಾದ ಭಂಗಿಯಲ್ಲಿರುವ ಹುಲಿಯನ್ನು ಕಂಡು, ದುಡಿ ದೋಲು ತಮ್ಮಟೆ ಕೊಂಬುಗಳ ಸದ್ದಿನಿಂದಾಗಿ ಗಲಿಬಿಲಿಗೊಂಡು, ಕಳ್ಳು ಕುಡಿದು ಕುಣಿಯುತ್ತಾ ಬೊಬ್ಬಿಡುತ್ತಿದ್ದ ಮೂಲದ ಹೊಲೆಯರ ಗದ್ದಲಕ್ಕೆ ಹೆದರಿದ ಎತ್ತುಗಳ ತುಯ್ದಾಟವನ್ನು ಕಡಿಮೆಮಾಡಿ ಮೆರವಣಿಗೆಗಾರರೊಡನೆ ಬೆರೆತು ಬರುವಂತೆ ಮಾಡಬೇಕಾದರೆ ಅಬ್ಬೋಕರೆ ಬ್ಯಾರಿ ಪಟ್ಟ ಪಾಡು ಹೇಳತೀರದು. ಗಾಡಿಯ ಪ್ರಯಾಣ ಸಾಗುತ್ತಿದ್ದಾಗ ಅಜ್ಜಯ್ಯನವರು ಹೇಳಿದರು-''ಮಗೂ, ಶಾಲೆಗಂತೂ ನೀನು ಹೋಗುವವನಲ್ಲ. ಆದರೆ ಬೇಟೆಯಲ್ಲಿ ನಿಷ್ಣಾತನಾಗು. ಅದೇನು ಸಣ್ಣ ಕೆಲಸವಲ್ಲ. ನಾನು ಕೋವಿ ಹಿಡಿಯಲು ಶುರುಮಾಡಿ ಐವತ್ತು ವರ್ಷಗಳೇ ಕಳೆದರೂ ಇಂದಿಗೂ ನಿಷ್ಣಾತ ಈಡುಗಾರನೆಂದು ಹೇಳಿಕೊಳ್ಳುವ ಧೈರ್ಯ ಬಂದಿಲ್ಲ. ಆಹಾರಕ್ಕಾಗಿಯೇ ಹೊಡೆಯುವ ಜಿಂಕೆ,

ಕಡವೆಗಳ ಮಾತು ಒತ್ತಟ್ಟಿಗಿರಲಿ; ಈಡು ತಪ್ಪಿದರೂ, ಅರೆ ಪೆಟ್ಟಾದರೂ ಅಂಥ ಅಪಾಯವಿಲ್ಲ. ಆದರೆ ಹುಲಿ, ಹಂದಿಗಲು ಹಾಗಲ್ಲ; ಬಹಳ ಅಪಾಯಕಾರಿ. ಇಂದೇನೊ ನೀನು ಧೈರ್ಯದಿಂದ ಹೊಡೆದೆ. ರೂಪು ರೂಪು ಹುಲಿಗೆ ಎಂದೂ ಹೊಡೆಯಬೇಡ. ಪೆಟ್ಟಾದಾಗ ಎದುರು ಕಂಡರೆ ಅದು ನೆಗೆಯಿತೆಂದೆ ಅರ್ಥ. ಅಡ್ಡಕ್ಕೆ ಹುಲಿಯು ಹೋಗುವುದಿದ್ದರೆ ನಿನ್ನಿಂದ ಮೂರು ನಾಲ್ಕು ಮಾರು ಅಡ್ಡದಾರಿಯನ್ನು ದಾಟಿದ ಬಳಿಕ ಹೊಡೆದರೆ ಅದು ಕಳ್ಳ ಹಾರು ಹಾರಿ ಮುಂದಕ್ಕೆ ಓಡುವುದೇ ವಿನಾ ಈಡಾದ ಜಾಗಕ್ಕೆ ಬರದು. ಹುಲಿಗೆ 'ಕಳ್ಳ'ನೆಂದೇ ಹೆಸರು. ಎದುರಾಗಿ ಹುಲಿಯು ಬರುವುದನ್ನು ನೀನು ಕಂಡು, ಅದು ನಿನ್ನನ್ನು ಕಾಣದಿದ್ದರೆ ಆದಷ್ಟು ಮರೆಗೆ ಸರಿದು ನಿಲ್ಲಬೇಕು. ನಿನ್ನನ್ನು ಅದು ದಾಟಿ ಮೂರು ನಾಲ್ಕು ಮಾರು ಹೋದ ಅನಂತರ ಮರ್ಮಕ್ಕೆ ಹೊಡೆದರೆ ಹುಲಿ ಉರುಳಿದಂತೆಯೆ. ಎಷ್ಟು ದೊಡ್ಡ ಹುಲಿಯಾದರೂ ಒಂದನೇ ನಂಬ್ರದ ಚರೆಯಿಂದ S.S.G; S:G; L.G.ಗಳ ತನಕದ ತೋಟೆಯು ಧಾರಾಳ ಸಾಕು. ಒಂಟಿ ಗುಂಡಾಗಲೀ, ಸ್ಪೆರಿಕಲ್ ಬಾಲ್ ಆಗಲೀ ಬೇಡ. ಆಯ ತಪ್ಪಿ ಹುಲಿಗೆ ಪೆಟ್ಟಾಗಿ ಅದು ಬಲ್ಲೆ ನುಗ್ಗಿದರೆ ಮತ್ತೆ ಹುಡುಕಹೋಗುವುದು ತುಂಬಾ ಅಪಾಯಕರ; ಹೋಗಲೇ ಬಾರದು. ಹಂದಿಯಾದರೋ ಹುಲಿಗಿಂತಲೂ ಶಕ್ತಿಯುತವಾದುದು. ಕಿರುಹಂದಿಗೇ ಆದರೂ L.G.ಗುಂಡು, ಸ್ಪೆರಿಕಲ್ ಬಾಲೇ ಆಗಬೇಕು. ಹಂದಿಯ ಚರ್ಮ ಗಟ್ಟಿ. ಪೆಟ್ಟಾದರೆ ಪ್ರಾಣ ಹೋಗುವ ತನಕವೂ ಹೋರಾಟ ಮಾಡುವ ಪ್ರಾಣಿಯೆಂದರೆ ಕಾಡುಹಂದಿಯೊಂದೆ; ರಕ್ಕಸ ಜಾತಿಯದು! ಆನೆಯೂ ಕೊನೆಗೆ ಪ್ರಾಣೋತ್ಕ್ರಮಣ ಕಾಲದಲ್ಲಿ ಸೊಂಡಿಲೆತ್ತಿ ಸೋತ ಭಾವದಿಂದ ನಮಿಸುತ್ತದೆ. ಹಂದಿ, ಹುಲಿಗಳು ಕೊನೆತನಕವೂ ಸೇಡಿನ ಭಾವನೆಯನ್ನು ಬಿಡುವುದಿಲ್ಲ. ಅಸುಪಾಸಿನಲ್ಲಿ ಸಿಕ್ಕಿದ ಕಲ್ಲು, ಮರಗಳನ್ನು ಕಚಕಚನೆ ಕಡಿಯುವುದನ್ನು ಕಂಡೇ ಆ ಪ್ರಾಣಿಗಳ ಸೇಡಿನ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳಬಹುದು. ಹಂದಿ ಆಹಾರ ಸೇವಿಸುವಾಗಲೂ ಸ್ನಾಯು ಸ್ಥಿರತೆಯನ್ನುಳಿಸಿಕೊಳ್ಳುವ ಪ್ರಾಣಿ. ಹುಲಿಯು ಮೃದು ಶರೀರದ ಹೆಣ್ಣಿಗ. ಗುಂಡು ಅದರ ದೇಹಕ್ಕೆ ಬಿದ್ದೊಡನೆ ಈಚೆ ಹೊಡೆಯಿಂದ ಸುಲಿದು ಹೋಗುವುದೇ ಜಾಸ್ತಿ. ಹಂದಿಗೆ ಕೆಲವೊಮ್ಮೆ, ಕೆಲವು ಕೋವಿಯ ಗುಂಡು ಚರ್ಮಕ್ಕೆ ಕೂಡಾ ನಾಟದೆ ಟೊಯ್ಯೆಂದು ಹಿಂದೆ ಹಾರಿದ ಸಂದರ್ಭವೂ ಇದೆ. ಹಂದಿಗೆ ಈಡುಗಾರನ ಇರವು ಗೊತ್ತಾದೊಡನೆ ಅದು ಮಾಂಸ ಖಂಡಗಳನ್ನು ಸೆಟೆಯಿಸಿಕೊಂಡು ನಿಂತಿದೆಯೆಂದೇ ತಿಳಿಯಬೇಕು. ಅದು ಆ ಹೊತ್ತಿನಲ್ಲಿ ರೋಮರಾಜಿಯನ್ನು ನಿಗುರಿಸಿ ನಿಲ್ಲುವುದರಿಂದ ಸೆಟೆದು ನಿಂತ ಬೆನ್ನಿನ ನಿಬಿಡ ರೋಮವು ಹಂದಿಯ ಎತ್ತರವೆಂದೇ ಭ್ರಮಿಸುವಂತೆ ಮಾಡುತ್ತದೆ. ಈಡುಗಾರನು ಕುತ್ತಿಗೆಯ ಮರ್ಮಸ್ಥಾನವನ್ನು ಗಮನಿಸಿ ಈಡುಮಾಡಿದರೆ ರೋಮ

ಸುಡಿಸಿಕೊಂಡು ಪಲಾಯನಗೈವ ಹಂದಿ ಮತ್ತೆ ಕಾಣಸಿಗದು. ಪಳಗಿದ ಶಿಕಾರಿಯು ನಾಲ್ಕು ಬೆರಳು ನಿಗುರಿಸಿ ನಿಂತ ಹೋಮದ ಅಳತೆಯನ್ನು ಉಳಿದು ಕತ್ತಿನ ಮಧ್ಯಭಾಗವು ಸಿಗಬೇಕಿದ್ದರೆ, ನಾಲ್ಕು ಬೆರಳು ತಗ್ಗಿಸಿ ಹೊಡೆದರೆ ಈಡು ಮರ್ಮಕ್ಕೆ ನಾಡುವುದು. ಹಂದಿಗಾಗಲೀ, ಹುಲಿಗಾಗಲೀ ಕೈಗಳ ಮುಂದೆ ಕತ್ತಿನ ಭಾಗಕ್ಕೆ ಹೊಡೆಯುವುದು ಈಡುಗಾರನ ಜಾಣ್ಮೆ. ಆ ಭಾಗದಲ್ಲಿ ಚರ್ಮವು ತೆಳು; ಚರ್ಬಿಯಿಲ್ಲ ಅಲ್ಲದೆ ಶ್ವಾಸನಾಳವು ಕುತ್ತಿಗೆಯಿಂದ ಮೂಗಿನೆಡೆ ಚಾಚಿರುವ ಸ್ಥಳವಾದುದರಿಂದ ಅಲ್ಲಿ ಒಡೆದು ಶೀಘ್ರ ಮರಣವನ್ನು ಹೊಂದುವುದು. ಕೈಯ ಹಿಂಬದಿಗೆ ಹೊಡೆದರೆ ಪೆಟ್ಟಾದ ಸ್ಥಳದಲ್ಲಿ ಚರ್ಬಿಯು ತುಂಬಿಕೊಂಡು, ಗಾಯ ಒಗ್ಗೂಡಿ, ಮೃಗವು ಚೇತರಿಸಿಕೊಂಡು ಮೈಲುಗಟ್ಟಲೆ ಓಡಿ, ನೀರು ಕುಡಿದು, ಸತ್ತುಹೋದ ಪ್ರಸಂಗಗಳಿವೆ ಆದುದರಿಂದಲೇ ಜೀವಾಂತಿಕ ಪೆಟ್ಟು ತಿಂದ ಮೃಗವನ್ನು ನೀರ ತೊರೆಯ ತನಕ ಹಿಂಬಾಲಿಸಬೇಕೆಂಬುದು ಬೇಟೆಯ ನಿಯಮ. ಬೇಟೆಯಲ್ಲಿ ಅವಸರ, ಅಜಾಗರೂಕತೆ ಎಂದಿಗೂ ಸಲ್ಲದು. ಬೇಟೆಗೂ ಒಂದು ನೀತಿ ಸಂಹಿತೆ ಇದ್ದೇ ಇದೆ. ಇದನ್ನು ಉಲ್ಲಂಘಿಸುವುದು ಪಾಪಕರ. ಮೃಗವಾವುದೆಂದು ತಿಳಿಯದೆ, ಅದು ತನಗೆ ಬೇಕಾದುದೋ ಬೇಡವಾದುದೋ ಎಂದು ಖಚಿತ ಮಾಡಿಕೊಳ್ಳದೆ ಕೋವಿಯೆತ್ತಬಾರದು. ಎತ್ತಿದ ಬಳಿಕ ಕೇವಲ ನಾನೂ ಹೊಡೆದೆ ಎನ್ನಿಸಿಕೊಳ್ಳಲು, ಮೃಗವನ್ನು ನೋಯಿಸುವುದಕ್ಕಾಗಿ ಮಾತ್ರ ಹೊಡೆಯಲಾಗದು. ಹೊಡೆದೆಯೋ, ಅದು ಸಾಯಲೇಬೇಕು'' ಹೀಗೆ ಮರ್ದಾಳಕ್ಕೆ ತಲಪುವ ತನಕವೂ ಅವರ ಉಪದೇಶ ಸಾಗಿಯೇ ಇತ್ತು. ಅವರ ಅಂದಿನ ಬೋಧೆ ನನ್ನ ಪಾಲಿಗೆ ಚಿರಸ್ಮರಣೀಯವಾದ ಪಳೆಯುಳಿಕೆ. ಗಾಡಿಯು ಮರ್ದಾಳಕ್ಕೆ ಬಂತು. ಮೆರವಣಿಗೆಯು ಹಿಂದಿನಿಂದಲೇ ವಿಜೃಂಭಣೆಯಿಂದ ಬರುತ್ತಿತ್ತು. ಗಾಡಿಯಿಂದ ಇಳಿದ ಅಜ್ಜಯ್ಯನವರು ಕೋವಿಯನ್ನು ಹೆಗಲಿಗೇರಿಸಿ ''ನಾನು ಮುಂದಾಗಿ ಮನೆಗೆ ಹೋಗುವೆ. ನೀವೆಲ್ಲ ಕಡಬದ ತನಕ ಮುಂದುವರಿದು ಜಾಗ್ರತೆಯಾಗಿ ಬನ್ನಿ'' ಎಂದು ಆದೇಶಿಸಿದರು. ಮನೆಯತ್ತ ಹೆಜ್ಜೆ ಹಾಕುತ್ತ ಅವರು ಸಾಗಿದಾಗ ಬಾಯಿ ಬಿಟ್ಟಿದ್ದ ಅವರ ಕಾಲಿನ ಬೇಡಿಯಿಂದಾದ ಟನ್‌ಟನ್ ಸದ್ದು ಮಾರ್ದನಿಸುತ್ತಿತ್ತು.

ಜೀವಂತ ಹುಲಿಯ ಮೀಸೆಯನ್ನು ಕಿತ್ತು ತರುವ ಮೋಂತು

ಇದು ಸುಮಾರು ೪೦, ೪೫ ವರುಷಗಳ ಹಿಂದಿನ ವಿಚಾರ, ಉಪ್ಪಿನಂಗಡಿಯಿಂದ ಏಳೆಂಟು ಮೈಲು ದೂರದಲ್ಲಿ ನಮ್ಮ ಭಾವ ನಟ್ಟಿಬೈಲು ಸಂಜೀವ ರೈಗಳ ವಾಸ. ಪಿಲಿಗೂಡಿನಲ್ಲಿ ಪಟೇಲರಾಗಿ ಅವರು ಪ್ರಸಿದ್ಧರಾಗಿದ್ದ ಸಮಯವದು. ನಾನು ಆಗ ನಾವೂರಿಗೆ ಹೋಗಿ ೨,೩ ವರ್ಷಗಳಾಗಿದ್ದವು. ಉತ್ತಮ ಶಿಕಾರಿ ಎಂಬ ಪ್ರಸಿದ್ಧಿ ಅದಾಗಲೇ ನನಗೆ ಒದಗಿತ್ತು. ಆದರೆ ಆಗಿನ್ನೂ ಹದಿನೆಂಟು ವರ್ಷ ಪ್ರಾಯವಾಗದ್ದರಿಂದ ಕೋವಿಯ ಲೈಸನ್ಸ್ ನನಗೆ ಸಿಕ್ಕಿರಲಿಲ್ಲ: ಮುಗ್ಗಕುಂಜಿರ ಪೂಜಾರಿಗಳ ಅಳಿಯ ಕಂಟ್ರಾಕ್ಟರ್ ಕೃಷ್ಣಪ್ಪ ಪೂಜಾರಿಗಳ ಮತ್ತು ಅವರ ಹೆಂಡತಿಯ ತಂದೆ ನಾರ್ಣಪ್ಪ ಪೂಜಾರಿಗಳ ಕೋವಿಗಳನ್ನು ನಾನು ಯಥೇಚ್ಛ ಬಳಸುತ್ತಿದ್ದೆ. ಪರವೂರಿನಲ್ಲಿ ನನ್ನ ಕೈಯಲ್ಲಿ ಕೋವಿಯಿದ್ದರೆ ನಾನೇ ಆಗ ಕುಂಜಿರ ಪೂಜಾರಿಗಳ ಅಳಿಯ ಕೃಷ್ಣಪ್ಪ ಪೂಜಾರಿ! ನಾನು ಆ ಕೋವಿಯನ್ನು ಹಿಡಿದು ಗಟ್ಟದ ತುದಿಯಿಂದ ಸಮುದ್ರದ ಬದಿಯ ಬಂದ್ಯಡ್ಕದ ತನಕ ಬೇಟೆಯಾಡಿ ತೊಂದರೆಗೆ ಸಿಕ್ಕದ ಸಾಹಸಿ!

ಅಂದು, ನಾನು ನಮ್ಮ ಸುಳ್ಯೋಡಿ ಮನೆಯಲ್ಲಿ- ಕಾಫಿ ಕುಡಿದು ನೆರೆಕರೆಯವರ ಪಂಚಾಯತಿಕೆಯಲ್ಲಿ ಪಾಲುಗೊಂಡು ಐದಾರು ಜನ ಗೃಹಸ್ಥರೊಂದಿಗೆ ಮಾತುಕತೆಯಾಡುತ್ತಿದ್ದೆ. ರೋಟಿನ ಬದಿಯಿಂದ ಸೈಕಲ್ ಬೆಲ್ ಕೇಳಿಸಿತು. ಮನೆಯಲ್ಲಿದ್ದ ಬೇಟೆ ನಾಯಿಗಳ ಭಯದಿಂದಾಗಿ ಯಾರಾದರೂ ದೂರದಿಂದಲೇ ಮನೆಯವರನ್ನು ಎಚ್ಚರಿಸಿಯೇ ಬರಬೇಕಿತ್ತು. ಸದ್ದಿಲ್ಲದೆ ಬಂದರೆ ಒಂದೋ ಹಾಗೆ ಬಂದವರು ಮರವೇರಬೇಕು; ಇಲ್ಲವಾದರೆ ನಮ್ಮ ನಾಯಿಗಳಿಗೆ ತಮ್ಮ ದೇಹದಿಂದ ಏನಾದರೂ ಪಾಲು ತೆರಬೇಕು! ಅಂದೂ ನಾಯಿಗಳನ್ನು ಬಿಟ್ಟಿತ್ತು. ಹಾಗಾಗಿ ಬೆಲ್ ಸದ್ದು ಕೇಳಿ ಆತುರಾತುರವಾಗಿ ಹೊರಬಂದೆ. ಸಂಜೀವ ರೈಗಳ ಅಡುಗೆಯಾಳು ರಾಮಣ್ಣ ಗೇಟಿನ ಬಳಿಯಲ್ಲಿ ಸೈಕಲ್ ಹಿಡಿದು ನಿಂತಿದ್ದುದು ಕಂಡಿತು. ನಮ್ಮ ನಾಯಿಗಳು ಬೊಬ್ಬಿಡುತ್ತಾ, ಆ ಕಡೆಗೆ ಧಾವಿಸುತ್ತಿದ್ದವು. ''ಟಾಮು, ರೂಬಿ'' ಎಂದು ಅವುಗಳನ್ನು ಕರೆದು ಮುಂದೊತ್ತದಂತೆ ತಡೆದು ಅವನನ್ನು ಬಳಿಗೆ ಕರೆದುದಾಯಿತು. ಸೈಕಲನ್ನು ಮರಕ್ಕಾನಿಸಿ, ಬೆವರನ್ನು ಒರಸಿಕೊಳ್ಳುತ್ತಾ ಒಳಗೆ ಬಂದವನೇ ಆತ ''ಅಣ್ಣಾ, ನೀವು ಕೂಡಲೇ ಪಿಲಿಗೂಡಿಗೆ ಬರಬೇಕಂತೆ. ಅಲ್ಲಿ ಕರಾವಿನ ಕಪಿಲೆ ದನವನ್ನು ಹುಲಿ ಹಿಡಿದಿದೆ. ಇಂದು ಯಜಮಾನರಿಗೂ ಸುಖವಿಲ್ಲ. ನೀವು ಕೂಡಲೇ

ಸೈಕಲಿನಲ್ಲಿ ಹೋಗಬೇಕಂತೆ ನಾನು ಬೆಳ್ತಂಗಡಿ ತನಕ ನಡೆದು ಒಂದು ರಾತ್ರಿಯಾಗುವಾಗ ಬಸ್ಸಿನಲ್ಲಿ ಬರುತ್ತೇನೆ'' ಎಂದು ಒಂದೇ ಉಸಿರಿನಲ್ಲಿ ತಿಳಿಸಿದ.

ಕಪಿಲೆ ವರ್ಣದ ದನವು ಹಟ್ಟಿಯಲ್ಲಿದ್ದರೆ ಹಟ್ಟಿಗೆ ಮಂಗಳ. ಮನೆಯವರಿಗೆ ಶುಭ. ಆ ಕಪಿಲೆ ತನವು ಮನೆಯವರ ಅತಿ ಪ್ರೀತಿಯ ದನವಾಗಿತ್ತು. ನಮ್ಮ ಅಕ್ಕ ಲಲಿತಮ್ಮನವರು ಅದರ ಹಣೆಗೆ ಕುಂಕುಮವಿಟ್ಟು ಪ್ರದಕ್ಷಿಣೆ ಬಂದು ನಮಸ್ಕರಿಸದೆ ತೊಟ್ಟು ನೀರೂ ಮುಟ್ಟುತ್ತಿರಲಿಲ್ಲ. ಅದರ ಹಾಲು ಕರೆಯುವಾಗ ನಾವಾರಾದರೂ ಬಳಿಗೆ ಹೋದರೆ, ದೃಷ್ಟಿಯಾದೀತೆಂಬ ಭೀತಿಯಿಂದ ನಮ್ಮನ್ನು ಉಪಾಯವಾಗಿ ಸಾಗಹಾಕುತ್ತಿದ್ದರು. ಅಷ್ಟು ಹಾಲು ಕೊಡುವ ದನ ಆ ಆಸುಪಾಸಿನಲ್ಲೇ ಇರಲಿಲ್ಲ. ಅದರ ಕೊಂಬಿನ ಆಕಾರ, ಬಣ್ಣ, ಶರೀರದ ಗಾತ್ರ-ಎಲ್ಲ ಅಷ್ಟೊಂದು ಒಪ್ಪ, ಓರಣ, ಆಕರ್ಷಕ. ಬುದ್ಧಿಯೂ ಅಂತಹದೇ. ನಮಗೆಲ್ಲ ಅದರ ಮೇಲೆ ಎಷ್ಟು ಮಮತೆಯೆಂದರೆ, ನಮಗೆ ಇಕ್ಕಿದ ದೋಸೆ, ಇಡ್ಡಲಿಗಳಲ್ಲಿ ನಾವು ಎಂಜಲು ಮಾಡು ವುದಕ್ಕೆ ಮೊದಲು ಕಪಿಲೆಗೆಂದು ಪ್ರತ್ಯೇಕವಾಗಿ ತೆಗೆದಿರಿಸಿ ಕೊಡುತ್ತಿದ್ದೆವು. ಎಂಜಲು ಮುಟ್ಟಿದರೆ ಕಪಿಲೆ ತಿನ್ನುತ್ತಲೂ ಇರಲಿಲ್ಲವಂತೆ. ಎಂಜಲಾದ ಕೈಯಿಂದ ಆ ದನಕ್ಕೆ ಕೊಡಹೋದರೆ ಅಕ್ಕ ನಮ್ಮನ್ನು ತರಾಟೆಗೆ ತೆಗೆದುಕೊಳ್ಳದೆ ಇರುತ್ತಿರಲಿಲ್ಲ! ಅಂಥ ದನವು ಈಗ ಹುಲಿಯ ಪಾಲಾದುದನ್ನು ಕೇಳಿ ನನಗೂ ನಮ್ಮ ಕುಟುಂಬದ ಒಂದು ಅಂಗವೇ ಕಳಚಿದಂತೆ ಭಾಸವಾಯಿತು. ಉಕ್ಕಿ ಬಂದ ಕಣ್ಣೀರನ್ನು ಅಂಗವಸ್ತ್ರದಿಂದ ಒರೆಸಿಕೊಂಡು ಪಂಚಾಯತಿಕೆಗಾಗಿ ಸೇರಿದ್ದವರನ್ನು ಮುಂದೊಂದು ದಿನ ಸೇರುವಂತೆ ತಿಳಿಸಿ ಹೊರಡುವ ಸಿದ್ಧತೆ ಮಾಡಿದೆ. ರಾಮಣ್ಣನನ್ನು ಹಿಂದಿನಿಂದ ಬರುವಂತೆ ಹೇಳಿ ನಾನು ನನ್ನ ಶಿಕಾರಿ ಕತ್ತಿಯನ್ನು ಮಾತ್ರ ತೆಗೆದುಕೊಂಡು ಸೈಕಲ್ ಹತ್ತಿ, ನಮ್ಮಲ್ಲಿಂದ ಸುಮಾರು ಹದಿನಾಲ್ಕು ಮೈಲು ದೂರದ ಪಿಲಿಗೂಡಿಗೆ ತ್ವರೆಯಿಂದ ಹೊರಟೆ. ಸಂಜೀವ ರೈಗಳು ಅಸ್ವಸ್ಥರಾಗಿದ್ದುದರಿಂದ ದನವು ಬಿದ್ದಲ್ಲಿ ಹುಲಿ ಬೇಟೆಗಾಗಿ ಹತ್ತಿರದ ಮರ ಹುಡುಕಿ ಅಟ್ಟಳಿಗೆ ಕಟ್ಟಿಸಿ ಬೇಕಾದ ಸಿದ್ಧತೆಗೆಯ್ಯುವ ಜವಾಬ್ದಾರಿಯೆಲ್ಲ ನನ್ನದೆಂದು ಆ ಬಗೆಗೆ ಯೋಚಿಸುತ್ತಲೇ ಸೈಕಲ್ ತುಳಿಯುತ್ತಿದ್ದೆ. ಇದು ಪಳಗಿದ ಶಿಕಾರಿಗಳಿಗೆ ಮಾತ್ರ ಸಾಧ್ಯ. ಸ್ವಲ್ಪ ವ್ಯತ್ಯಾಸ, ಆಭಾಸವಾದರೂ ಪಪ್ಪಿನ ಹತ್ತಿರ ಹುಲಿಯು ಸೋಂಕಲಾರದು.

ಪಿಲಿಗೂಡು ಮನೆಗೆ ತಲುಪಿದೆ. ಅಕ್ಕನ ಮುಖವು ಮಗಳನ್ನು ಕಳೆದುಕೊಂಡ ತಾಯಿಯಂತೆ ನಿಸ್ತೇಜವಾಗಿದೆ. ರೈಗಳು ಮಂಚದಲ್ಲಿ ಮಲಗಿಕೊಂಡಿದ್ದಾರೆ. ಅಂಗಳದಲ್ಲಿ ಸೇರಿದ್ದ ಏಳೆಂಟು ಜನರು ಇದೇ ವಿಚಾರವಾಗಿ ಮಾತನಾಡುತ್ತಿದ್ದಾರೆ. ನಾನು ಬಚ್ಚಲು ಮನೆಗೆ ಹೋಗಿ ಕೈಕಾಲು ತೊಳೆದು, ಬಾಯಾರಿಕೆ ಪರಿಹರಿಸಿಕೊಂಡು ''ದನವನ್ನು ಹುಲಿ ಹಿಡಿದುದೆಲ್ಲಿ?'' ಎಂದು ಕೇಳಿದೆ.

ಹುರಿಮೀಸೆಯ, ಕಪ್ಪು ಬಣ್ಣದ, ಗುಡಿದು ಕಣ್ಣು ಕೆಂಪಾದ, ಕಡಿದರೆ ನನ್ನಂಥ ಎರಡು ಜನರ ದೇಹದ ಮೋಂತು ತೊದಲುತ್ತಾ 'ಹಾದಿ ಬದಿಯ ಹಾಡಿಯಲ್ಲಿ' ಎಂದು ಉತ್ತರಿಸಿದ. ಮನೆಗೆ ಸಮೀಪವೇ; ಸಾಧಾರಣ ಅರ್ಧಮೈಲು ದೂರದಲ್ಲಿ ಈ ಹಾಡಿ ಇದೆ. ಬಳಿಯಲ್ಲೆ ರೈಗಳು ಕಡಿಸಿದ ಒಂದು ಚಿಕ್ಕ ಕೆರೆಯೂ ಇದೆ. ನೀರು ಕುಡಿಯಲೆಂದು ಅಲ್ಲಿಗೆ ಹೋದ ಕಪಿಲೆಯನ್ನು ಹುಲಿ ಹಿಡಿದದ್ದು. ಬಳಿಯಲ್ಲೆ ಸೊಪ್ಪು ಹೆರೆಯುತ್ತಿದ್ದವರ ಬೊಬ್ಬೆಗೆ ಗಲಿಬಿಲಿಗೊಂಡು, ಕೊಂದಿದ್ದ ದನವನ್ನು ಮುಟ್ಟದೆ ಹುಲಿ ಓಡಿತೆಂದು ಗೊತ್ತಾಯಿತು. 'ಅದು ಕತ್ತಲೆಯಲ್ಲಿ ಮತ್ತೆ ಬರದೆ ಇರಲಾರದೆಂದೂ, ರೈಗಳಿಗೆ ಅಸ್ವಾಸ್ಥ್ಯವಾದ್ದರಿಂದ ನನಗೆ ಕರೆ ಕಳುಹಿಸಬೇಕಾಯಿತೆಂದೂ, ಆ ಹುಲಿಯ ಹೆಣವನ್ನು ನೋಡದೆ ಅಕ್ಕನವರು ನೀರನ್ನು ಸಹ ಸೇವಿಸಲಿಕ್ಕಿಲ್ಲವೆಂದು ಆಣೆ ಹಾಕಿಕೊಂಡಿದ್ದಾರೆಂದೂ, ನಾನು ಒಂದು ವೇಳೆ ಬರದೆ ಹೋಗಿದ್ದರೆ ಮೋಂತುವೇ ಹುಲಿ ಹೊಡೆಯಲು ಹೋಗುತ್ತಿದ್ದನೆಂದೂ, ಕೂಡಿದವರಲ್ಲಿ ಒಬ್ಬರು ವರದಿಯೊಪ್ಪಿಸಿದರು. ಅಷ್ಟರಲ್ಲಿ ಅವರೆಡೆ ಯಿಂದ ಮತ್ತೊಂದು ಧ್ವನಿ- ''ಮೋಂತು ಹೊಡೆಯುವುದು ಗಡಂಗಿನಲ್ಲಿ ಕಳ್ಳು!'' ಎಂದು ಹೊರಟುದನ್ನು ಕೇಳಿದ ಮೋಂತುವು ಸಿಟ್ಟಿನಿಂದ- ''ಏನೆಂದೆ ಮಗನೆ? ನಾನು ಹೊಡೆಯುವುದು ಕಳ್ಳೆ? ಮನಸ್ಸು ಮಾಡಿದೆನೆಂದರೆ ಈಗ ಹೋಗಿ ಹುಡುಕಿ ಆ ಹುಲಿಯು ಮಲಗಿದ್ದಲ್ಲಿಂದ ಅದರ ಮೀಸೆಯನ್ನೇ ಕಿತ್ತು ತಂದೇನು !'' ಎಂದು ಅಬ್ಬರಿಸಿದ್ದೇ ಅಬ್ಬರಿಸಿದ್ದು ! ಅವನ ಧೈರ್ಯ, ಸಾಹಸದ ಮಾತಿನಿಂದ ಬೆರಗಾದ ನಾನು, 'ಈ ಜನ ಆಗಬಹುದು' ಎಂದು ಭಾವಿಸಿಕೊಂಡೆ. ನಾವು ಕೆಲವು ಜನರು ಕೂಡಿಕೊಂಡು ಕೋವಿಯೊಡನೆ ದನ ಬಿದ್ದಲ್ಲಿಗೆ ಬಂದೆವು. ಕಪಿಲೆಯು ಕೈಕಾಲು ಚಾಚಿ ಚಿರನಿದ್ರೆಯಲ್ಲಿದೆ. ಅದು ಕರುಳು ಕರಗುವ ದೃಶ್ಯ. ಬಳಿಯಲ್ಲಿಯೇ ಸುರಗಿಯ ಮರವೊಂದು ನೀಳವಾದ ಕೊಂಬೆಗಳನ್ನು ಚಾಚಿ ನಿಂತಿದೆ. ಅದಕ್ಕೆ ೨೦-೨೫ ಮಾರು ದೂರದಲ್ಲಿ ದನದ ಶವವಿದೆ. ಪೈರಿನ ಸೂಡಿಗಳನ್ನು ಹೊಡೆದು ಭತ್ತವನ್ನು ಪ್ರತ್ಯೇಕಿಸುವ ಸಾಧನವಾದ ಪಡಿಯನ್ನು ತಂದು ಮರದಲ್ಲಿ ಅಟ್ಟಳಿಗೆಯ ನಿರ್ಮಾಣಕ್ಕೆ ವ್ಯವಸ್ಥೆ ಮಾಡಿದೆವು. ನೆಲದಿಂದ ಸುಮಾರು ೨೫ ಮಾರು ಎತ್ತರದಲ್ಲಿ ಮರದ ರೆಂಬೆಗಳಲ್ಲಿ ಪಡಿಯನ್ನು ಭದ್ರವಾಗಿ ಸ್ಥಾಪಿಸಿ, ಕಾಲು ನೀಡಿ ಕುಳಿತುಕೊಳ್ಳಲು ಸಾಧ್ಯವಾಗುವಂತೆ ಅಟ್ಟಳಿಗೆ ಇರುತ್ತದೆ. ಅಟ್ಟಳಿಗೆಯಲ್ಲಿ ಈಡುಗಾರನು ಕುಳಿತುಕೊಂಡರೆ ಅವನಿಗಿಂತ ಸ್ವಲ್ಪ ಮೇಲಕ್ಕೆ ಲೈಟ್ ಬೀರುವವನು ಕೂತುಕೊಳ್ಳಲು ಸಾಧ್ಯವಾಗುವಂತೆ ಅಟ್ಟಳಿಗೆ ಇರುತ್ತದೆ. ಅಟ್ಟಳಿಗೆಯಲ್ಲಿ ಈಡುಗಾರನು ಕುಳಿತುಕೊಂಡರೆ ಅವನಿಗಿಂತ ಸ್ವಲ್ಪ ಮೇಲಕ್ಕೆ ಲೈಟ್ ಬೀರುವವನು ಕೂತುಕೊಳ್ಳಲು ಹಲಗೆಯೊಂದನ್ನು ಕಟ್ಟುವ ಕ್ರಮ. ಅಲ್ಲಿಂದ ಲೈಟ್ ಹಾಯಿಸಿದರೆ ಬಿದ್ದ ದನ

ಸರಿಯಾಗಿ ಕಾಣುವಂತೆ ಇರಬೇಕು. ಹೀಗೆ ನಿರ್ಮಾಣವಾದ ಅಟ್ಟಳಿಗೆಯನ್ನು ಎಲೆಗಳಿಂದ ಮರೆಮಾಡಿ ಹೊರಗಿನಿಂದ ಯಾವುದೇ ಪ್ರಾಣಿಗೆ ಇದರ ಸುಳಿವು ಸಿಗದಂತೆ ಮಾಡಬೇಕು. ಈ ಎಲ್ಲ ವ್ಯವಸ್ಥೆಗಳನ್ನು ಸಕ್ರಮವಾಗಿ ನೆರವೇರಿಸಿದೆವು. ದನದ ಶವ ಸ್ಪರ್ಶವಾಗದಂತೆ ಎಚ್ಚರ ವಹಿಸಿ ಹುರಿಗೆಜ್ಜೆಯ ಸಂಕೋಲೆಯೊಂದನ್ನು ಅದರ ಕಾಲಿಗೆ ಸಿಲುಕಿಸಿ ಬಳಿಯಪೊದೆಗೆ ಕಟ್ಟಿದೆವು. ಮನುಷ್ಯ ಸ್ಪರ್ಶವಾದ ಸತ್ತಪ್ರಾಣಿಯನ್ನು ಹುಲಿಯು ಮುಟ್ಟಲಾರದೆಂದು ಪ್ರತೀತಿ. ಹುರಿಗೆಜ್ಜೆಯ ಸಂಕಲೆಯನ್ನು ಕಟ್ಟುವುದೇಕೆಂದರೆ ಕತ್ತಲೆಯಲ್ಲಿ ಸದ್ದಿಲ್ಲದೆ ಬರುವ ಹುಲಿಯು ತನ್ನ ಗ್ರಾಸವನ್ನು ಮೇಯುವ ಆತುರದಲ್ಲಿರಲು ಗೆಜ್ಜೆಯ ಸದ್ದು ಬೇಟೆಗಾರರಿಗೆ ಹುಲಿಯ ಆಗಮನದ ಸೂಚನೆಯಾಗಲು ! ಹುರಿಗೆಜ್ಜೆಯ 'ಕಿಣಿಲ್' ಸದ್ದು ಕೇಳಿದೊಡನೆ ಲೈಟಿನವನು ಬೆಳಕನ್ನು ಆ ಎಡೆಗೆ ಬೀರಬೇಕು; ಈಡುಗಾರನು ಕೊಳ್ಳೆಯನ್ನು ಹೊಡೆದುರುಳಿಸಬೇಕು. ಇದಕ್ಕಾಗಿ ಅಟ್ಟಳಿಗೆ ಕಟ್ಟಿ ಬೇಟೆಯಾಡುವಾಗ ಈ ಕ್ರಮಗಳನ್ನು ಒಂದಿಷ್ಟೂ ತಪ್ಪದೆ ಪಾಲಿಸಬೇಕು. ಅಷ್ಟೆಲ್ಲಕೆಲಸಗಳನ್ನು ಪೂರೈಸಿ ಮನೆಗೆ ಬಂದೆವು. ರಾತ್ರಿ ಹತ್ತು ಗಂಟೆಯ ಹೊತ್ತಾಗಿ ಸುತ್ತುಮುತ್ತಲ ಸದ್ದು ಗದ್ದಲವು ಅಡಗದೆ ಹುಲಿಯು ತನ್ನ ಬೇಟೆಯಿದ್ದಲ್ಲಿಗೆ ಬರಲಾರದೆಂಬುದು ನಮಗೆ ಅನುಭವ ವೇದ್ಯ. ಕಿರುಫಲಾಹಾರವನ್ನು ಮುಗಿಸಿ, ಅಕ್ಕನಿಗೆ ಹುಲಿಯನ್ನು ಕೊಂದು ಬರುವೆನೆಂದು ಭರವಸೆ ನೀಡಿದೆ. ರಾಮಣ್ಣ ಇನ್ನೂ ಬಂದಿಲ್ಲವಾದ್ದರಿಂದ ಬೇಟೆಯಲ್ಲಿ ನನಗೆ ಬೇಕಾದಂತೆ ಲೈಟ್ ಬೀರಿ ಸಹಕರಿಸುವ ನಿಷ್ಣಾತರಾರಿದ್ದಾರೆಂದು ಕೇಳಿದೆ. ಮೋಂತು ಠೀವಿಯಿಂದ ಮುಂದೆ ಬಂದು ನಿಂತು ''ನಾನು ಇರುವಾಗ ಬೇರೆ ಯಾರು, ಏಕೆ? ನಾನು ಲೈಟ್ ಹಾಕಿ ನಿಮ್ಮಲ್ಲಿ ಅದನ್ನು ಕೊಡುತ್ತೇನೆ. ನೀವು ಲೈಟನ್ನು ನಂದಿಸದಿದ್ದರೆ ಹಿಂದಿನಿಂದ ಹುಲಿಯನ್ನು ದೊಣ್ಣೆಯಿಂದಲೇ ಹೊಡೆದು ಕೊಂದೇನು ! ನೀವು ಈಗ ರಾಮಣ್ಣ, ದೂಮಣ್ಣ ಎಂದು ಮೇಲೆ ಕೆಳಗೆ ನೋಡುತ್ತೀರೇಕೆ? ಇಂದು ನೀವು ಬರದಿದ್ದರೆ ನಾನೇ ಹೋಗಿ ಹೊಡೆಯುತ್ತಿದ್ದೆ'' ಎಂದು ಬೊಬ್ಬೆ ಹೊಡೆದ. ನನಗೆ ಆತನ ಬೆಂಬಲದ ಬಗ್ಗೆ ಮತ್ತೊಮ್ಮೆ ಭರವಸೆ ದೊರೆತಂತಾಯಿತು. ಮನದಲ್ಲೇ 'ಈ ಎಳೆ ಪ್ರಾಯದಲ್ಲೇ ಏಳೆಂಟು ಹುಲಿ ಕೊಂದಿದ್ದ ನನಗೆ ಈ ಕಳ್ಳು ಕುಡುಕನಿಂದ ಸವಾಲೆ? ಇದು ನನ್ನ ಆತ್ಮಪ್ರತಿಷ್ಠೆಗೆ ಈತನೆಸೆದ ಪ್ರಶ್ನೆ, ನೋಡೋಣ' ಎಂದುಕೊಂಡೆ. ರೈಗಳ B.S.A.. ಜೋಡು ನಳಿಗೆಯ ಕೋವಿಗೆ, ಎರಡು ನಳಿಗೆಗಳಿಗೂ ಮೂರೂವರೆ ಇಂಚಿನ ಅಲ್ಫಾಮೇಕ್ಸ್ L.G..ತೋಟೆಯನ್ನು ತುಂಬಿಸಿ ಶಿಸ್ತಾಗಿ ಡ್ರೆಸ್‌ಮಾಡಿ ಸೊಂಟಕ್ಕೆ ತೋಟಾ ಪಟ್ಟಿಯನ್ನು ಬಿಗಿದು, ಚಳಿಗಾಲವಾಗಿದ್ದರಿಂದ ತಲೆಗೆ ಮಫ್ಲರ್ ಸುತ್ತಿ ಯುದ್ಧಾತುರನಾಗಿ ಹೊರಡುವ ಯೋಧನಂತೆ- ಕೋವಿಯನ್ನು ಹೆಗಲಿಗೇರಿಸಿ,

ಮನೆ ದೈವವನ್ನು ಮನಸಾ ಪ್ರಾರ್ಥಿಸಿ ಹೊರಟೆ. ಮೋಂತುವಿನೊಡಗೂಡಿ ಒಂಭತ್ತೂಕಾಲು ಗಂಟೆ ಹೊತ್ತಿಗೆ, ಅಟ್ಟಳಿಗೆ ಕಟ್ಟಿದ್ದ ಮರದ ಬಳಿಗೆ ತಲಪಿದೆ. ಮೋಂತುವಿನ ಕೈಗೆ ಕೋವಿ, ಲೈಟುಗಳನ್ನು ಕೊಟ್ಟು, ಮರವೇರಲು ಹೇಳಿದೆ. ಕೋವಿಯನ್ನು ನಾನು ಕೂತುಕೊಳ್ಳಲಿರುವ ಅಟ್ಟಳಿಗೆಯಲ್ಲಿರಿಸಬೇಕೆಂದೂ, ನನ್ನ ಸೂಚನೆಯಾಗದೆ ಲೈಟ್ ಹಾಯಿಸಬಾರದೆಂದೂ ಕಿಣಿಲ್ ಶಬ್ದವು ಕೇಳಿ ಎರಡು ನಿಮಿಷಗಳಾಗುವಷ್ಟರಲ್ಲಿ ದನದ ಕುತ್ತಿಗೆಯ ಭಾಗಕ್ಕೆ ಬೆಳಕು ಬೀರಬೇಕೆಂದೂ ಹೆದರಬಾರದೆಂದೂ ಎಚ್ಚರಿಸಿದೆ. ''ನಾನು ಹೆದರುವ ಸುದ್ದಿ ಬಿಡಿ, ನೀವು ಹುಲಿಯನ್ನು ಕಂಡು ಬೊಬ್ಬೆ ಹೊಡೆಯದಿದ್ದರೆ ಸಾಕು !'' ಎಂದು ನನ್ನನ್ನೇ ಗೇಲಿಮಾಡಿ ಮರವೇರಿದ್ದ ಮೋಂತು. ಪೂರ್ವಸಿದ್ಧತೆಗಳನ್ನು ಯಥಾ ಪ್ರಕಾರ ನೆರವೇರಿಸಿ ಅಟ್ಟಳಿಗೆಯನ್ನಡರಿ ಕುಳಿತದ್ದಾಯಿತು. ಹುಲಿಯ ನಿರೀಕ್ಷಣೆಯಲ್ಲಿ ಮೈಯೆಲ್ಲ ಕಿವಿಯಾಗಿ ತದೇಕಚಿತ್ತದಿಂದ ಉಸಿರನ್ನೂ ಸರಿಯಾಗಿ ಬಿಡದೆ, ತೊಡೆಯ ಮೇಲೆ ಕೋವಿಯಿರಿಸಿ, ಆಗಾಗ್ಗೆ ತೋಟೆಯ ಬೆಲ್ಟನ್ನು ಮುಟ್ಟಿ ನೋಡಿಕೊಳ್ಳುತ್ತ ಕಾದಿದ್ದೆ. ಕಾಲದ ಕಾಲು ಕುಂಟಾದಂತೆ ನಿಧಾನವಾಗಿ ಸಮಯ ಸರಿಯುತ್ತಿದೆ. ಸ್ಮಶಾನ ಮೌನ. ಒಮ್ಮೊಮ್ಮೆ ರಾತ್ರಿಂಚರ ಹಕ್ಕಿಗಳ ಕೂಗು, ಜೀರುಂಡೆಗಳ ಸದ್ದು. ದೂರದಿಂದ ನಾಯಿಗಳ ಊಳಿಡುವಿಕೆಯೂ ಕೇಳಿ ಬರುತ್ತಿತ್ತು. ಕೈಯಲ್ಲಿ ವಾಚ್ ಇದ್ದರೂ ಲೈಟ್ ಹಾಕಿ ನೋಡಿಕೊಳ್ಳುವಂತಿಲ್ಲ. ಅಟ್ಟಳಿಕೆಯೇರಿ ಸುಮಾರು ಒಂದೂವರೆ ಗಂಟೆ ಹೊತ್ತಾಗಿರಬಹುದು. ಅತ್ತಿತ್ತ ಅಲುಗಾಡದೆ ಕುಳಿತಿದ್ದುದರಿಂದ ದೇಹವು ಜಡವಾಗುತ್ತ ಬರುತ್ತಿದೆ. ಹೊರಳಿದರೆ ಅಟ್ಟಳಿಕೆಯ ಸ್ವಲ್ಪ ಮಾತ್ರ ಸದ್ದೂ ಹುಲಿಯ ಬರುವಿಕೆಯನ್ನು ತಡೆಯಬಹುದು ! ಇಷ್ಟು ಹೊತ್ತಿಗೆ ಹುಲಿಯ ಸವಾರಿ ಬರಬೇಕಿತ್ತು. ಇನ್ನೂ ಏಕೆ ಬಂದಿಲ್ಲವೋ- ಹೀಗೆಲ್ಲ ಚಿಂತಿಸುತ್ತಿದ್ದೆ. ಕಿಣಿಲ್ ಸದ್ದಾಯಿತು. ಓಹೋ, ಹುಲಿ ಬಂತೇ ಬಂತು ಎಂದು ಭಾವಿಸಿಕೊಳ್ಳುತ್ತಿದ್ದೆ. ಅಷ್ಟರಲ್ಲಿ ಮತ್ತೊಮ್ಮೆ ಸಂಕಲೆಯ ಎಳೆತದೊಂದಿಗೆ ಗೆಜ್ಜೆಯ ಸದ್ದು ಕೇಳಿಸಿತು ಇನ್ನೇನು ಮೋಂತು ಲೈಟ್ ಬೀರುತ್ತಾನೆಂದು ನಾನು ಕೋವಿಯನ್ನು ಎದೆಗಾನಿಸಿ ಸಿದ್ಧನಾದೆ; ಕಾದೆ. ಏನು? ಮೋಂತು ನಿದ್ದೆ ಹೋಗಿರಬಹುದೆ? ಎಂದು ಆಲೋಚಿಸಿದೆ. ಲೈಟಿನ ಬೆಳಕಿಲ್ಲ; ನಿಧಾನವಾಗಿ ನಾವು ಕೂತಿದ್ದ ಮರದ ತುದಿಯು ಅಲುಗಿದಂತಾಯಿತು. ಇದೇನು? ಹುಲಿಯು ತನ್ನ ತಿನಿಸನ್ನು ಬಿಟ್ಟು ನಾವು ಕುಳಿತಿದ್ದ ಮರದೆಡೆಗೆ ಆಕ್ರಮಿಸುವುದಕ್ಕಾಗಿ ಬಂತೆ? ಹೀಗೆ ಯೋಚಿಸುತ್ತಿದ್ದಾಗ ಮೋಂತು ಕುಳಿತ ಗೆಲ್ಲು ಗಡಗಡನೆ ನಡುಗಲು ತೊಡಗಿತು. 'ಓ, ಇದು ಜೀವಂತ ಹುಲಿಯ ಮೀಸೆ ಕೀಳುವೆನೆಂಬ ಸಾಹಸಿ ಮೋಂತುವಿಗೆ ಈಗ ಹುಲಿಭೂತ ಹಿಡಿದ ದರ್ಶನ!' ಎಂದು ನನಗೆ ಅರಿವಾಗಲು ಬಹಳ ವೇಳೆ ಬೇಕಾಗಲಿಲ್ಲ. ಮೋಂತು ಕುಳಿತಿದ್ದ ಗೆಲ್ಲಿನ

ಅಲುಗಾಡ ಜಾಸ್ತಿಯಾಗುತ್ತಿತ್ತು. ಇನ್ನು ಅವನು ಲೈಟ್ ಹಾಯಿಸುವ ವಿಚಾರವಿರಲಿ, ಮರದಿಂದ ಬಿದ್ದು ಕೈಕಾಲು ಮುರಿದು ಪ್ರಾಣಾಪಾಯಕ್ಕೆ ಈಡಾಗದಿದ್ದರೆ ಸಾಕೆಂದುಕೊಂಡೆ. ಅವನಿಂದ ಲೈಟನ್ನು ನಾನೇ ತೆಗೆದುಕೊಂಡು ಬೆಳಕು ಹಾಯಿಸಬೇಕೆಂದು ಗೆಲ್ಲನ್ನು ಆಧರಿಸಿ ನಿಲ್ಲಲು ಹವಣಿಸಿದೆ. ಅಷ್ಟರಲ್ಲಿ ನನ್ನ ತಲೆಗೆ ಮೇಲಿನಿಂದ ಅದೇನು ಹನಿಹನಿಯಾಗಿ ಬೀಳುತ್ತಿದೆ? ಥೂ! ಒಂದೆಡೆಯಲ್ಲಿ ಹುಲಿ ಓಡಿ ಹೋದೀತೆಂಬ ಆತಂಕ, ಇನ್ನೊಂದೆಡೆ ಈ ಕಳ್ಳು ಕುಡುಕನ ಬೊಬ್ಬಾಟವನ್ನು ನಂಬಿ ಅವನೊಡಗೂಡಿ ಬಂದು ರಾತ್ರಿಯಲ್ಲಿ ಮಾನವ ಮೂತ್ರದಿಂದ ಸಚೇಲ ಸ್ನಾನವಾಯಿತಲ್ಲಾ ಎಂಬ ಕ್ರೋಧ, ಚಡಪಡಿಕೆ! ಕೋಪವನ್ನು ತಡೆದುಕೊಳ್ಳಲಾಗದೆ ಎದ್ದು ನಿಂತು ಮೋಂತು ಕುಳಿತೆಡೆ ತಡಕಿ ಅವನ ಕೈಯಿಂದ ಜಾರಿ ಬೀಳಲು ತಯಾರಾಗಿದ್ದ ಟಾರ್ಚ್ ಲೈಟನ್ನು ಎಳೆದುಕೊಂಡು ಕೋವಿಯ ಅಡಿಯಲ್ಲಿ ಅದನ್ನಿರಿಸಿ ಲೈಟ್ ಹಾಯಿಸಿ ಹುಲಿಗೆ ಹೊಡೆಯುವುದೆಂದು ತಿರುಗಿದೆ. ಕಿಣಿಲ್ ಸದ್ದು ಕೇಳುತ್ತಲೇ ಇದೆ, ದೇವರು ನೆನೆದಂತಾಗಲಿ ಎಂದುಕೊಂಡು ಪಪ್ಪಿನತ್ತ ಲೈಟ್ ಹಾಯಿಸಿ, ಕೋವಿಯನ್ನು ಗುರಿ ಹಿಡಿದು ನೋಡುತ್ತೇನೆ ಥೂ! ಅದೇನು ಕಣ್ಣು ಮಿಟಕಿಸುತ್ತಾ ಕುಳಿತಿರುವುದು? ಕಳ್ಳನರಿ! 'ಅಯ್ಯೋ, ನರಿ ಬಂದು ಇಂಥ ಹೇಸಿ ಪಿಕಲಾಟಕ್ಕೆ ಗುರಿಯಾಗಬೇಕಾಯಿತಲ್ಲಾ' ಎಂದು ನಾಚಿ, ಕೋಪ ತಡೆಯಲಾಗದೆ ಮೋಂತುವನ್ನೊಮ್ಮೆ ಹಿಡಿದು ಜಗ್ಗಿ 'ಇಳಿ ಕೆಳಗೆ' ಎಂದು ಗುರುಗುಟ್ಟಿದೆ. ಇಬ್ಬರೂ ಇಳಿದದ್ದಾಯಿತು. ನನ್ನ ದುರವಸ್ಥೆಯ ಕಾರಣದಿಂದಾದ ಕೋಪವೆಲ್ಲವನ್ನೂ ಒಟ್ಟೈಸಿ ಅವನ ಕೆನ್ನೆಗೆ ಒಂದೇಟು ಹೊಡೆದೆ! ಮತ್ತೊಮ್ಮೆ ಹೊಡೆಯಲು ಕೈಯೆತ್ತುವಷ್ಟರಲ್ಲಿ ಓಡಿದ ಮೋಂತುವನ್ನು ಮತ್ತೆ ನಾನು ಕಾಣಲಿಲ್ಲ!

ಬಳಿಕ ಕೆರೆಯ ಬಳಿಗೆ ಬಂದು ಬಟ್ಟೆ ಬಿಚ್ಚಿ ತೊಳೆದುಕೊಂಡು, ಆ ಚಳಿಯಲ್ಲಿ ಮೋಂತುವಿಗೆ ಬೈಗಳಿನ ಸಹಸ್ರನಾಮ ಹಾಕುತ್ತಾ ತಣ್ಣೀರಿನಲ್ಲಿ ಮುಳುಗು ಹಾಕಿ ಒದ್ದೆ ಬಟ್ಟೆಯನ್ನು ಹಿಂಡಿ ಮೈಯೊರಸಿಕೊಂಡು ಗಡಗಡನೆ ನಡುಗುತ್ತಾ ಮನೆಗೆ ಬಂದೆ. ರೈಗಳಿಗೂ, ಅಕ್ಕನಿಗೂ ನಡೆದ ಪ್ರಸಂಗವನ್ನೆಲ್ಲ ವಿವರಿಸಿದೆ. ರೈಗಳು ಆ ಜ್ವರದ ತಾಪದಲ್ಲೂ ನಗು ತಡೆಯಲಾಗದೆ ನನ್ನನ್ನು ನೋಡಿ ಯಥೇಚ್ಛವಾಗಿ ನಕ್ಕರು! ಆದರೆ ಮಗಳನ್ನು ಕಳೆದುಕೊಂಡ ತಾಯಿಯ ಮುಖವನ್ನು ಮತ್ತೆ ನೆನಪಿಗೆ ತರುವಂತಿದ್ದ ಅಕ್ಕನ ಮ್ಲಾನವದನವು ಹುಲಿಯನ್ನು ಹೊಡೆದೇ ತೀರಬೇಕೆಂದು ನಾನು ನಿರ್ಧರಿಸುವಂತೆ ಮಾಡಿತು. ಕೆಲ ಹೊತ್ತಿಗೆ ಹಿಂದೆ ಅಡುಗೆ ರಾಮಣ್ಣ ಬಂದು ತಲುಪಿದ್ದ. ಅವನೊಡನೆ ಬೇಟೆಗೆ ತೆರಳಲು ಸನ್ನದ್ಧನಾದೆ ಅಕ್ಕ ಉತ್ಸಾಹಿತರಾಗಿ 'ಗರಂ ಚಾ ಮಾಡಿಕೊಡುತ್ತೇನೆ. ನನ್ನ ಸ್ವೆಟ್ಟರನ್ನು ಹಾಕಿಕೊಂಡು ಹೋಗು' ಎಂದು ಉತ್ತೇಜನವಿತ್ತರು. ಚಹಾ ಸೇವಿಸಿ, ರಾಮಣ್ಣನೊಡನೆ ಪುನಃ ಮರದೆಡೆಗೆ ಬಂದು

ಅಟ್ಟಳಿಗೆಯೇರಿ ಕುಳಿತದ್ದಾಯಿತು.

ರಾಮಣ್ಣನಾದರೆ ಈ ಹಿಂದೆ, ಎರಡು ಮೂರು ಹುಲಿಗಳನ್ನು ಲೈಟ್ ಹಾಕಿ ನನ್ನಿಂದ ಕೊಲ್ಲಿಸಿದ ಅನುಭವಿ. ಹಾಗಾಗಿ ಭರವಸೆಯಿಂದ ಕಾದು ಕುಳಿತೆ. ಒಂದು, ಒಂದೂವರೆ ಗಂಟೆಯಾದರೂ ಹುಲಿಯ ಸುಳಿವಿಲ್ಲ. ನಮ್ಮ ಗಲಾಟೆಯ ಪ್ರಸಂಗದಿಂದಾಗಿ ಹುಲಿಗೆ ನಮ್ಮ ಇರವು ಅರಿವಿಗೆ ಬಂದು ಬಾರದೇ ಉಳಿಯುತ್ತದೋ ಎಂದು ಅನುಮಾನವಾಯಿತು. ಹಾಗೊಂದು ವೇಳೆ ಆದರೆ ವೃಥಾ ಒಂದು ರಾತ್ರಿ ಶ್ರಮಿಸಿದ್ದೂ, ಬರಬಾರದ ಹೇಸಿಗೆಯನ್ನು ಅನುಭವಿಸಿದ್ದೂ ನಿರರ್ಥಕವಾದೀತ್ತಲ್ಲಾ ಎಂದು ಚಿಂತಿಸುತ್ತಿದ್ದೆ ಅಷ್ಟರಲ್ಲಿ ಹೆಣದ ಕಡೆಯಿಂದ 'ಕಿಣಿಲ್' ಎಂಬ ಸದ್ದು ಕೇಳಿ ಆನಂದದಿಂದ ಮೈಯ ರೋಮಗಳು ನಿಗುರಿದವು. ಈ ಬಾರಿಯೂ ಹಿಂದಿನಂತೆ ನರಿಯೇ ಆಗಿದ್ದರೆ ! ರಾಮಣ್ಣನಿಗೂ ಮೋಂತುವಿನಂತೆ ಭಯದ ಭೂತ ಹಿಡಿದರೆ.... ಎಂದೆಣಿಸಿಕೊಂಡೆ. ಎರಡನೇ ಸಾರಿ ಕಿಣಿಲ್ ಸದ್ದು ಕೇಳಿಸಿದ್ದೇ ತಡ, ರಾಮಣ್ಣ ಹಾಯಿಸಿದ ಬೆಳಕು ದನದ ಕುತ್ತಿಗೆಯತ್ತ ಬಿತ್ತು. ಹೋ, ಅದೇನು ಲೈಟಿನ ಬೆಳಕಿಗೆ ಇಮ್ಮಡಿಯಾಗಿ ಉರಿಯುವ ಕೆಂಡದ ಉಂಡೆಗಳಂತೆ ಕಾಣುವುದು? ಹೌದು, ಹುಲಿಯದೇ ಕಣ್ಣುಗಳು! ಬೆಳಕನ್ನು ಕಂಡು ನಿಗುರಿ ನಿಂತ ಹುಲಿಯು ನಮ್ಮತ್ತ ಹಾರಲೋ ಓಡಲೋ ಎಂಬ ಭಾವನೆಯಿಂದಿರುವುದನ್ನು ಕಂಡ ನಾನು ಎದೆಗಾನಿಸಿದ ಕೋವಿಯ ಕುದುರೆಗೆ ಕೈಯಿಕ್ಕಿದೆ. ''ಢಾಂ'' ಎಂಬ ಸದ್ದು ಆ ಗಾಢಾಂಧಕಾರದಲ್ಲಿ ನಾಲ್ದೆಸೆಗೂ ಪಸರಿಸಿ ಮಾರ್ದನಿಗೊಡುವಾಗ ಹುಲಿಯೂ ಒಮ್ಮೆ ತನ್ನ ಕೊನೆಯ ಅಟ್ಟಹಾಸದ ಗರ್ಜನೆಯನ್ನು ಮಾಡಿ ಹಿಂಗಾಲನ್ನು ಊರಿ, ನಾವು ಕುಳಿತಿದ್ದ ಮರದ ಕಡೆಗೆ ನೆಗೆಯಿತು. ಮತ್ತೊಂದು ಈಡು ಮಾಡೋಣವೆಂದರೆ ನಾವು ಕುಳಿತಿದ್ದ ಅಟ್ಟಳಿಗೆಯು ತಡೆಯಾಗಿದೆ. ಹುಲಿಯ ಉರುಳಾಟ, ನರಳಾಟಗಳನ್ನು ಮರದ ಅಟ್ಟಳಿಗೆಯೆಡೆಯಿಂದ ನೋಡುತ್ತ, ಉಸಿರು ಬಿಗಿಹಿಡಿದು ಕುಳಿತೆವು. ಸ್ವಲ್ಪ ಹೊತ್ತಿನ ಬಳಿಕ ಮರದಡಿಗೆ ಲೈಟ್ ಹಾಯಿಸಿ ನೋಡುವಾಗ ಹುಲಿಯು ನೀಳವಾಗಿ ಮಲಗಿದ್ದು ಕಂಡು, ಅದು ಕೊನೆಯುಸಿರನ್ನು ಎಳೆದಿದೆಯೆಂದು ನಿರ್ಧರಿಸಿದೆವು. ಅಟ್ಟಳಿಗೆಯಿಂದ ಗೆಲ್ಲನ್ನು ಹಿಡಿದು ಒಂದು ಮಾರು ಕೆಳಗಿಳಿದು ಮತ್ತೊಂದು ತೋಟೆಯನ್ನು ಆ ಹುಲಿಯತ್ತ ಹೊಡೆದು ಅದು ಸತ್ತದ್ದನ್ನು ಖಚಿತಪಡಿಸಿಕೊಂಡೆ ಇಬ್ಬರೂ ಕೆಳಗಿಳಿದು ಬಂದೆವು. ಕಪಿಲೆಯ ಕತ್ತಿನ ಭಾಗದಿಂದ ಹತ್ತು ಬಾಯಿ ಮಾಂಸಮುಕ್ಕಿ ಹೊಟ್ಟೆ ತುಂಬಿಸಿಕೊಂಡಿದ್ದ ಹುಲಿ ಬಿದ್ದಿದ್ದ ಅಂದವನ್ನು ನೋಡುತ್ತಾ ನಿಂತಾಗ ಚಳಿ ಮರೆತೇ ಹೋಗಿತ್ತು. ಎರಡು ಈಡಿನ ಸದ್ದನ್ನು ಕೇಳಿದ ಮನೆಯವರು ಹುಲಿಯು ಬಿದ್ದಿರಲೇ ಬೇಕೆಂಬ ಧೈರ್ಯದಿಂದ ಸೂಟೆ, ಲಾಟಾನು, ಲೈಟುಗಳನ್ನು

ಹಿಡಿದುಕೊಂಡು ಹತ್ತಾರು ಜನರು ಗುಂಪಾಗಿ ಬರುತ್ತಿರುವುದನ್ನು ಕಂಡು ನಮ್ಮ ಹೆಮ್ಮೆಗೆ ಪಾರವಿಲ್ಲದಾಯಿತು. ಹುಲಿಯ ಮೀಸೆಯನ್ನು ಕಿತ್ತು ಸೂಡಿಕಟ್ಟಿ ಕಿಸೆಗೆ ಇಳಿಬಿಟ್ಟು ಹುಲಿ ಹೊಡೆದವನೆಂಬ ಹೆಮ್ಮೆಯಿಂದ ಮೀಸೆಯಿಲ್ಲದ ಬೋಳು ಮುಖವನ್ನೊಮ್ಮೆ ಮೀಸೆ ತೀಡುವ ಧಾಟಿಯಲ್ಲಿ ತೀಡಿದೆ! ಇಷ್ಟರಲ್ಲಿ ಹತ್ತಾರು ಜನ ಹೊಂತಕಾರಿಗಳು ಹತ್ತಿರ ಬಂದಾಯಿತು. ಅಡ್ಡಬಡಿಗೆಯೊಂದನ್ನು ಸಿದ್ಧಪಡಿಸಿ ಹುಲಿಯ ಕಾಲನ್ನು ಅದಕ್ಕೆ ಬಿಗಿದು ಹುಲಿಯನ್ನು ಮನೆಗೆ ಹೊತ್ತೇಬಿಟ್ಟರು ಎಲ್ಲರಿಗೂ ಮನೆಯ ಯಜಮಾನಿಯಿಂದ ಶಹಭಾಸ್ ಗಿರಿಯಪುರಸ್ಕಾರ ಪಡೆಯುವ ಆಸೆ. ಹುಲಿಯನ್ನು ಹೊತ್ತವರು ಅದನ್ನು ಅಂಗಳದಲ್ಲಿ ಇಳಿಸಿದರು. ನಾನು ಹೆಗಲಲ್ಲಿ ಕೋವಿಯನ್ನು ಹೊತ್ತು ಮದುವೆಯಾಗಿ ನವ ವಧುವಿನೊಂದಿಗೆ ಹಿರಿಯರ ಆಶೀರ್ವಾದವನ್ನು ಪಡೆಯಲು ಬರುವ ಮದುಮಗನಂಥ ಗಂಭೀರ ನಡಿಗೆಯಿಂದ ಮನೆಯೊಳಗೆ ಕಾಲಿರಿಸುವುದರಲ್ಲಿದ್ದೆ. ಅಷ್ಟರಲ್ಲೇ ''ಅಲ್ಲಿ ನಿಲ್ಲು'' ಎಂಬ ಕಟ್ಟಾಜ್ಞೆಯ ಧ್ವನಿ ಅಕ್ಕನಿಂದ ಕೇಳಿಬಂದು ಬೆರಗಾಗಿ ಆ ಕಡೆಗೆ ನೋಡುತ್ತೇನೆ; ಬೆಳಗಿದ ನೀಲಾಂಜನ ಹಿಡಿದ ಅಕ್ಕ ಕುರುದಿಯನ್ನು ನನ್ನೆಡೆಗೆ ಚೆಲ್ಲಿ ದೃಷ್ಟಿ ತೆಗೆದು ನನಗೆ ವೀರೋಚಿತವಾದ ಸ್ವಾಗತ ನೀಡಿದರು. ಆ ಸಂತೃಪ್ತ ಮುತ್ತೈದೆಯ ಸುಪ್ರಸನ್ನ ಮುಖ ಮುದ್ರೆಯು ಇಂದೂ ನನ್ನ ಮನೋಪಟಲದಿಂದ ಮಾಸಿ ಹೋಗಿಲ್ಲ.

□□□□□

ದೊಣ್ಣೆಯಿಂದ ಬಡಿದು ಹುಲಿಯನ್ನು ಕೊಂದ ಕುಂಞಿಮೋನು

ಕೊಲ್ಯ ಸುಬ್ರಾಯ ಗೌಡರು ಬಂಟ್ರ ಬೋರ್ಡು ಶಾಲೆಯ ಸಂಸ್ಥಾಪಕ ಉಪಾಧ್ಯಾಯರು; ನನಗೆ ಶ್ರೀಕಾರ ಕಲಿಸಿದ ಪ್ರಥಮ ಗುರುಗಳು. ಊರವರ ಪ್ರೀತಿಪಾತ್ರರು. ನಿರಕ್ಷರಿಗಳಾದ ಬಂಟ್ರ ಗ್ರಾಮದವರ ಯಾವ ರಿಕಾರ್ಡು ಇದ್ದರೂ ಅದು ಮಾಸ್ತರರು ಬರೆದುದೇ ! ಮೂಕರ್ಜಿಯೊಂದು ಬಿಟ್ಟರೆ ಊರಿನ ಪ್ರೊ-ನೋಟ ನಿಂದ ಹಿಡಿದು, ಗೇಣಿಚೀಟು, ಗೊಬ್ಬರ ಚೀಟು, ಕೈ ಕಾಗದಗಳೆಲ್ಲ ಅವರಿಂದಲೇ ಆಗಬೇಕು. ಆ ಸಮಯಕ್ಕಾಗುವಾಗ, ಅಂದರೆ ನಾನು ಹೈಸ್ಕೂಲಿಗೆ ಮಣ್ಣು ಹೊತ್ತು ವಿಫಲನಾಗಿ ನೀರ್ಚಾಲಿನ ಮಹಾಜನ ಸಂಸ್ಕೃತ ಶಾಲೆಗೆ ೨, ೩ ವರ್ಷ ಹೋಗಿ ಕಲಿತು ಸಫಲತೆಯನ್ನು ಕಾಣದೆ ನೇಗಿಲ ಹಿಡಿಯೇ ನನ್ನ ಯೋಗ್ಯತೆಗೆ ತಕ್ಕದ್ದೆಂದು ಹುಟ್ಟಿದ ಮನೆಗೆ ಬಂದು ಬೀಡು ಬಿಟ್ಟಿದ್ದೆ ಮನೆಯಲ್ಲಿ ಕೆಲಸ ಮಾಡದಿದ್ದರೆ ನನ್ನ ತಂದೆಯವರು ಕೈ ಖರ್ಚಿಗೆ ಮುಕ್ಕಾಲು ಕೊಡುವವರಲ್ಲ. ಗರ್ಜಿ ಬಿದ್ದಾಗ ತಂದೆಯವರು ಐದು ಹತ್ತು ರೂಪಾಯಿಗಳನ್ನು ಮಾಸ್ತರರ ಮನೆಯಿಂದಲೇ ತರಿಸುತ್ತಿದ್ದರು. ಮಾಸ್ತರರು ಊರಿನಲ್ಲಿ ಆ ಕಾಲದಲ್ಲಿ ಗಟ್ಟಿ ಕುಳವಾರು. ನಾನು ನನ್ನ ಹಲವಾರು ಹೊರ ಚಟುವಟಿಕೆಗಳಿಂದ ಉತ್ತೀರ್ಣನಾಗಲಿಲ್ಲ ವಿನಾ ಬಡ್ಡು ತಲೆಯವನಲ್ಲವೆಂದು ಅವರು ಬಲ್ಲವರು; ನನಗಾಗಿ ಮರುಗಿದವರು. ಕೈಯಲ್ಲಿ ಕಾಸಿಲ್ಲದಾಗ ಎರಡು, ಮೂರು ರೂಪಾಯಿಗಳನ್ನು ಜಾತ್ರೆ ಖರ್ಚಿಗೆಂದು ಕೊಟ್ಟ ನನ್ನ ಹಿತೈಷಿ ಹಿರಿಯರು. ಕೆಲವೊಮ್ಮೆ ತಂದೆಯವರು ಹೇಳಿದ್ದಾರೆಂದು ಸುಳ್ಳು ಹೇಳಿ ಮಾಸ್ತರರಿಂದ ಹಣ ಪಡೆದು ನನ್ನ ಖರ್ಚಿಗೆ ಉಪಯೋಗಿಸುತ್ತಿದ್ದುದೂ ಉಂಟು. ಮಾಸ್ತರರದೂ ತಂದೆಯವರದೂ ಲೆಕ್ಕಾಚಾರ ವರ್ಷಾವಧಿಯದು. ಮಾಸ್ತರರು ಎಂದೂ ಸುಳ್ಳು ಹೇಳುವವರಲ್ಲ ಎಂದು ತಂದೆಯವರು ಈ ನನ್ನ ಮೋಸದ ಲೆಕ್ಕವನ್ನೂ, ತಮಗೇ ಮರೆತಿರಬೇಕೆಂದುಕೊಂಡು, ಜಮಾಖಾತೆಗೆ ತೆಗೆದುಕೊಳ್ಳುತ್ತಿದ್ದರು.

ಒಂದು ದಿನ ನಾನು ಏನೋ ನಿಮಿತ್ತದಿಂದ ಮಾಸ್ತರರನ್ನು ಕಾಣಲು ಕೊಲ್ಯಕ್ಕೆ ಹೋಗಿದ್ದೆ. ಪ್ರಾಯಸ್ಥರಾದುದರಿಂದ ಆಗ ಅವರ ಕಾಲಿಗೆ ನೀರು ಬಂದು ಊದಿಕೊಂಡಿತ್ತು. ಮತ್ತೆ ಹೆಚ್ಚು ಸಮಯ ಅವರು ಬದುಕುವುದಿಲ್ಲವೆಂದು ನನಗೆ ಖಾತ್ರಿಯಾಯಿತು. ಮಾತಾಡುತ್ತಾ, ವೈದ್ಯರು ಮುಸುವಿನ ಕಲಿಜವನ್ನು ತಿನ್ನಬೇಕೆಂದು

ತಿಳಿಸಿದ್ದಾರೆಂದೂ ತಾನು ಹೇಳಿದರೆ ರುಗ್ಣಶಯ್ಯೆಯಲ್ಲಿರುವ ಈ ಮಾಸ್ತರನ ಮಾತಿಗೆ ಬೆಲೆ ಕೊಡುವವರಾರು? ಎಂದೂ, ತಮ್ಮ ಎದೆಗುದಿಯನ್ನು ನನ್ನಲ್ಲಿ ತೋಡಿಕೊಂಡರು. ನನಗೆ ತುಂಬಾ ಸಂತಾಪವಾಯಿತು. ಹುಟ್ಟಿದರೆ, ಸತ್ತರೆ, ಮದುವೆ, ಮುಂಜಿ, ಚೌಲೋಪನಯನಗಳಿಗೆ ದಿನ ನೋಡುವುದಕ್ಕೆ ನಂಬುಗೆಯ ಸಾಕ್ಷಿಗೆ- ಇಂಥ ಹಲವು ತೆರನಾದ ಉಪಕಾರಗಳಿಗೆ ಬೇಕಾಗಿದ್ದ ಮಾಸ್ತರರ ಈ ಕಿರಿಯ ಆಸೆಯೊಂದನ್ನು ನಡೆಸುವ ಸಾಮರ್ಥ್ಯದ ಬೇಟೆಗಾರರು ಬಂಟ್ರಗ್ರಾಮದಲ್ಲಿ ಇಲ್ಲದೆ ಅಲ್ಲ. 'ಸಾಯುವ ಮಾಸ್ತರ, ಇನ್ನೇಕೆ ಬೇಕು?' ಎಂಬ ಉಪೇಕ್ಷೆ! ಆದರೆ ನನಗೆ ಮಾತ್ರ ಆ ಕ್ಷಣದಲ್ಲಿ ಅವರಿಗೆ ನಾನು ಮಾಡಿದ್ದ ಹಲವು ಮೋಸ, ಇನ್ನೂ ಅವರಿಗೆ ನನ್ನಲ್ಲಿದ್ದ ಅಚಲ ವಿಶ್ವಾಸ- ಜಾಗೃತವಾಗಿ ''ನಾಳೆಯಾ ನಾಡದು ನಾನು ಒಂದಲ್ಲ, ಎರಡು ಮುಸುವಿನ ಕಲಿಜಗಳನ್ನು ಕಳುಹಿಸಿಕೊಡುತ್ತೇನೆ'' ಎಂದು ಭರವಸೆ ನೀಡಿ ತೋಟೆಗಳಿಗಾಗಿ ಅವರಿಂದಲೇ ಎರಡು ರೂಪ್ಯಾ ಪಡೆದು ಮನೆಗೆ ಬಂದೆ. ಆಗ ರೂಪಾಯಿಗೆ ಎಂಟು ತೋಟೆ ಸಿಗುತ್ತಿದ್ದ ಕಾಲ!

ಮನೆಗೆ ಬಂದ ಬಳಿಕ ತಡಮಾಡದೆ ಕುಂಞಿಮೋನು ಬ್ಯಾರಿಯನ್ನು ಕರೆದು ಮರುದಿನ ಬೇಟೆಯ ಏರ್ಪಾಡು ಮಾಡಬೇಕೆಂದು ಹೇಳಿದೆ. ಆತ ಇಂಥ ಕಾರ್ಯಕ್ಕೆ ಯಾವಾಗಲೂ ಸಿದ್ಧನೆ! ನನ್ನ ಮಾತುಗಳನ್ನು ಕೇಳಿದ್ದೇ ತಡ, ತಾಯಿಯವರಲ್ಲಿ ಕೇಳಿ ಒಂದು ಲೋಟಾ ಗರಂ ಚಾ ಕುಡಿದು, ನನ್ನ ಕಂಚು ಕಟ್ಟಿದ ದೊಣ್ಣೆಯನ್ನೊಮ್ಮೆ ಅಂಗಳದಲ್ಲಿ ಕುಕ್ಕಿ ಮೀಸೆಯನ್ನು ತಿರುವಿ ಬೇಟೆಯ ಸಂದೇಶವನ್ನೊಯ್ಯಲು ಹೊರಟೇ ಬಿಟ್ಟ.

ಮರುದಿನ ಮರ್ದಾಳದಲ್ಲಿ ಬೇಟೆಗಾರರೆಲ್ಲ ಒಟ್ಟು ಸೇರಿದೆವು. ಆಜಣದ ಕಾಡನ್ನು ಮೊದಲು ಹೊಡೆಯುವುದೆಂದು ನಿರ್ಣಯ ಮಾಡಿದೆವು. ಕುಂಞಿಮೋನುವು ನನ್ನಲ್ಲಿ ''ಧನೀ ಇಂದು ಒಂದು ಕಡವೆಯನ್ನು ಹೊಡೆಯಬೇಕು. ನಾನು ನಿಮ್ಮ ಬೆನ್ನ ಹಿಂದೆಯೇ ನಿಂತಿರುತ್ತೇನೆ. ಹೊಡೆದ ಕೂಡಲೇ ಚೂರಿ ಹಾಕದೆ ಬಿಡುವುದಿಲ್ಲ'' ಎಂದು ತನ್ನ ಆಸೆಯನ್ನು ತೋಡಿಕೊಂಡ. ಒಳ್ಳೊಳ್ಳೆಯ ಆಯಕಟ್ಟಿನ ಗಂಡಿಗಳಲ್ಲಿ ಉತ್ತಮ ಈಡುಗಾರರನ್ನು ನಿಲ್ಲಿಸಿದ್ದಾಯಿತು. ಆಜಣದಿಂದ ಕೋಕಳ ಗುಡ್ಡೆಗೆ ಮಧ್ಯೆ ನಾನೂ, ಕುಂಞಿಮೋನುವೂ ಮರವನ್ನು ಮರೆಮಾಡಿ ಮರಸು ಕೂತೆವು. ಮಾರ್ಗದತ್ತಣಿಂದ ಸೋವತರ ಕಾ, ಕೂ ಎಂಬ ಎದುರ್ದನಿಯೆದ್ದಿತು. ಬಿಲ್ಲಿನಿಂದ ಒಗೆದ ಅಂಬಿಗನಂತೆ ಕಾಡುಮೇಕೆಯೊಂದು ಓಡಿ ಬರುವುದು ಕಂಡಿತು. ಕಾಡುಮೇಕೆಗೆ ಹೊಡೆಯುವ ಈಡುಗಾರನು ನಿಷ್ಣಾತನಿರಲೇಬೇಕು. ಅದರ ವೇಗಕ್ಕೆ ಅಂಬಿನ ವೇಗವೊಂದೇ ತುಲನೆ. ಕೋವಿಯನ್ನು ನೀಡಿ ಉದ್ದೇಶಿಸಿದ ಗುರಿಗೆ ಮಿಕವು ಬರುತ್ತಲೇ

ಕುದುರೆಯನ್ನು ಮೀಟಿದೆ. ಕೋವಿಯು 'ಢಾಂ' ಎಂದಿತು. ಮೇಕೆಯು ನೀಳ ಹಾರೊಂದನ್ನು ಹಾರಿ ಸುಮಾರು ಐವತ್ತು ಮಾರು ದೂರಕ್ಕೆ ನೆಗೆದು ಬಿತ್ತು. ಇದನ್ನು ಕಂಡ ಕುಂಞಿಮೋನುವು ಸೊಂಟದಲ್ಲಿದ್ದ ಚೂರಿಯನ್ನು ಬಿಡಿಸಿ ಚೂರಿ ಹಾಕಲು ಹವಣಿಸಿದ. ನಾನೆಂದೆ ''ಚೂರಿ ಹಾಕಬೇಡ. ಅದನ್ನು ಸುಬ್ರಾಯ ಮಾಸ್ತರರಿಗೆ ಕಳುಹಿಸಬೇಕಾಗಿದೆ ಎಂದು. ''ಸಾಯುವ ಕಾಲಕ್ಕೂ ಆಸೆ ಮುಗಿದಿಲ್ಲವೆ? ಹೂಂ. ಹಾಗಾದರೆ ನಮಗೆ ಇನ್ನು ಬೇರೆ ಸಿಕ್ಕಿಯೇ ಆಗಬೇಕಷ್ಟೆ?'' ಎಂದು ತನ್ನ ಅತೃಪ್ತಿಯನ್ನು ಕುಂಞಿಮೋನು ಸೂಚಿಸಿದ. ಒಂದು ಈಡಾದ ಬಳಿಕ ಆ ಗಂಡಿಗೆ ಬೇರೆ ಮೃಗ ಬರುವ ಸಂಭವ ಕಡಿಮೆ. ಇದನ್ನು ಅರಿತ ಕುಂಞಿಮೋನು ಸಿಕ್ಕಿದುದು ಕೈತಪ್ಪಿತೆಂಬ ಅತೃಪ್ತಿಯಿಂದ ಇನ್ನಾವ ಪ್ರಾಣಿಯೂ ಸಿಗುವಂತಿಲ್ಲವೆಂದುಕೊಂಡು ತಾನು ಅಲ್ಲೇ ಹತ್ತಿಪ್ಪತ್ತು ಮಾರು ದೂರದಲ್ಲಿ ಹರಿಯುವ ಕಣಿಯತ್ತ ಹೋಗುವುದಾಗಿ ಹೇಳಿ ಬಹಿರ್ದೆಸೆಗೆ ಹೋದ.

ಒಂದು ಈಡನ್ನು ಕೇಳಿದ ಉಲ್ಲಾಸದಿಂದ ಸೋವತರ ಕಾಕೂ ಇನ್ನಷ್ಟು ಗಟ್ಟಿಯಾಗಿ ಕೇಳಿ ಬರುತ್ತಿದೆ. ಕುಂಞಿಮೋನು ನನ್ನ ಬಳಿಯಿಂದ ಹೋಗಿ ೫,೬ ನಿಮಿಷಗಳು ಕಳೆದಿರಬಹುದು. ನೀರ ಕಣಿಯತ್ತಣಿಂದ ಬಂಡೆಗೆ ಹೊಡೆದಂತಹ ಒಂದು ಶಬ್ದದೊಂದಿಗೆ ಹುಲಿಯ ಒಂದು ಆರ್ಭಟೆಯನ್ನು ಕೇಳಿ ನಾನು ದಂಗಾಗಿ ಮರಗಟ್ಟಿದವನಂತೆ ನಿಂತೆ. ಅಷ್ಟರಲ್ಲಿ 'ಯಾ, ಅಲ್ಲಾ'' ಎಂಬ ಆರ್ತನಾದವೂ ಕೇಳಿಬಂತು ! ನಾನು ಕೂಡಲೇ ಚೇತರಿಸಿಕೊಂಡು ಬೊಬ್ಬೆ ಕೇಳಿದ ಕಡೆಗೆ ಹೋಗಿ ನೋಡಿದೆ.- ಕುಂಞಿಮೋನುವಿನ ಕಂಚಿನ ಹಿಡಿಯ ದೊಣ್ಣೆಯು ಹುಲಿಯ ಬಾಯಿಯಿಂದ ಹೊಕ್ಕು ಅರ್ಧ ಅಂಶ ಒಳಗೆ ಹೋಗಿ ಹುಲಿಯು ಮರದ ಬೊಡ್ಡೆಯೊಂದಕ್ಕೆ ಒರಗಿದೆ ! ಅದು ಮೇಲೇಳದಂತೆ ಕುಂಞಿಮೋನು ತನ್ನೆಲ್ಲ ಶಕ್ತಿಯನ್ನೂ ಪ್ರಯೋಗಿಸಿ ದೊಣ್ಣೆಯಿಂದ ಅತ್ತ ದೂಡುತ್ತಿದ್ದಾನೆ. ಹುಲಿಯೂ ತನ್ನ ಶಕ್ತಿ ಸರ್ವಸ್ವದಿಂದ ಅವನನ್ನು ದೂಡಿ ಮೇಲೆ ಬೀಳಲು ಪ್ರಯತ್ನಿಸುತ್ತಿದೆ! ಅದು ಚಿಟ್ಟೆ ಹುಲಿಯಾದುದರಿಂದ ಈ ಹೋರಾಟದಲ್ಲಿ ಕುಂಞಿಮೋನುವಿನದೇ ಮೇಲುಗೈಯಾಗಿ ತೋರಿತು. ನನಗೆ ದೂರದಿಂದಲೇ, ಹುಲಿಯು ಎದೆಯ ಬಿಳಿಯ ಭಾಗ ಸ್ಪಷ್ಟವಾಗಿ ಕಾಣುತ್ತಿದೆ. ನಾನು ತಡಮಾಡದೆ ಒಂಟಿ ಗುಂಡಿನ ತೋಟೆಯೊಂದನ್ನು ಗುರಿ ನೋಡಿ ಹುಲಿಗೆ ಈಡು ಮಾಡಿದೆ. ಕುಂಞಿಮೋನಿನ ಜೀವದಾಸೆಯ ಅವುಕುವಿಕೆಯಿಂದ ಮೊದಲೇ ಕಂಗಾಲಾಗಿದ್ದ ಹುಲಿಯು ಗುಂಡಿನೇಟನ್ನು ತಿಂದು ಅತ್ತ ಹೊರಳಿದ್ದೇ ತಡ, ಕುಂಞಿಮೋನು ಇತ್ತ ಉರುಳಿದ ! ಕಣಿಯಿಂದ ಆತುರಾತುರನಾಗಿ ನೀರು ತಂದು ಆತನ ಮುಖ, ತಲೆಗೆ ಚಿಮುಕಿಸಿದೆ; ಒಂದಿಷ್ಟು ಕುಡಿಸಿದೆ. ಬಿದ್ದಿದ್ದ ಸುಸ್ಥಿತಿಗೆ ಬರುವಾಗ ಆಚೀಚೆಯಿದ್ದ ಬೇಟೆಗಾರರೂ

ಬಂದು ಅಲ್ಲಿ ಸಂದಣಿಸಿದರು. ನಡೆದ ವಿಚಾರವೇನೆಂದು ಕಾತರತೆಯಿಂದ ಎಲ್ಲರೂ ಬಗೆ ಬಗೆಯಾಗಿ ಪ್ರಶ್ನಿಸಿದರು. ಬೇಟೆಗೆ ಬಂದೂ ಆ ದಿನ ಮಾಂಸವಿಲ್ಲದ ಊಟ ಮಾಡಬೇಕಲ್ಲಾ ಎಂಬ ಬೇಸರದಿಂದ ತನ್ನಲ್ಲೇ ಯೋಚಿಸಿಕೊಂಡು ತಲೆ ಕೆಳಗೆ ಹಾಕಿ ಬಹಿರ್ದೆಸೆಗೆಂದು ಕುಳಿತಿದ್ದ ಅತ್ತಿತ್ತ ಗಮನಿಸಿರಲಿಲ್ಲ. ಹಾಗಾಗಿ ಎದುರಿನಿಂದ ಬಂದು ತಟ್ಟನೆ ಅಭಿಮುಖವಾದ ಹುಲಿಯನ್ನು ಕಂಡಾಗ ಹಿಂದಿರುಗಲು ಆತನಿಗಾಗಲೀ, ಹುಲಿಗಾಗಲೀ ಅವಕಾಶವಿರಲಿಲ್ಲ. ಹುಲಿಯು ಮೇಲೆ ನೆಗೆವ ಸಿದ್ಧತೆಯಲ್ಲಿದ್ದುದನ್ನು ಅರಿತ ಕುಂಞಿಮೋನು ಅನ್ಯಥಾ ಮಾರ್ಗವಿಲ್ಲದೆ ಕೈಯಲ್ಲಿ ಹಿಡಿದು ಊರಿದ್ದ ಕಂಚು ಕಟ್ಟಿದ ದೊಣ್ಣೆಯಿಂದಲೇ ಹುಲಿಯ ಮಂಡೆಗೆ ಬಲವಾಗಿ ಒಂದೇಟು ಹೊಡೆದೇ ಬಿಟ್ಟ! ಪ್ರಾಣದಾಸೆಯನ್ನು ತೊರೆದು ''ಆದದ್ದಾಗಲಿ'' ಎಂದುಕೊಂಡು ಹೊಡೆದ ವಜ್ರಮುಷ್ಟಿಯಂಥ ಆ ಪೆಟ್ಟು ಹುಲಿಯ ತಲೆಗೆ ಅನಿರೀಕ್ಷಿತವಾಗಿ ಬಿದ್ದಾಗ ಅದು ತತ್ತರಿಸಿತು. ನಾಲ್ಕು ಮಾರು ಹಿಂದೆ ಹೋಗಿ ಪ್ರಾಣೋತ್ಕ್ರಮಣ ಕಾಲದಲ್ಲಿ ವೈರಿಯ ಮೇಲೆ ನೆಗೆದು ಕೊನೆಯ ಬಾರಿಗೆ ಪರಾಕ್ರಮ ಪ್ರದರ್ಶಿಸುವಂತೆ ಅಬ್ಬರಿಸಿ ಬಾಯಗಲಿಸಿ ಮುನ್ನುಗ್ಗುವ ಸಿದ್ಧತೆಯಲ್ಲಿದ್ದ ಹುಲಿಯನ್ನು ಕಂಡ ಕುಂಞಿಮೋನು ತನ್ನ ಅಂತ್ಯಕಾಲ ಸಮೀಪಿಸಿತೆಂದೆಣಿಸಿ ಅಲ್ಲಾನ ಹೆಸರನ್ನು ಉಚ್ಚರಿಸುತ್ತಾ ಹುಲಿಯ ಎದುರಿಗೆ ದೊಣ್ಣೆಯನ್ನು ನೀಡಿದಾಗ 'ಕಾಕತಾಳ ನ್ಯಾಯ'ದಂತೆ ಆ ಬಡಿಗೆಯ ತುದಿ ಹುಲಿಯ ಬಾಯಿಯೊಳಗೆ ಸಿಕ್ಕಿ, ಆತ ತಳ್ಳಿದ್ದರಿಂದ ಅದು ಮುಂದೆ ಗಂಟಲಿನೊಳಗೆ ನುಗ್ಗಿತು! ಇಷ್ಟು ವಿವರಗಳನ್ನು ಕುಂಞಿಮೋನುವಿನ ಮೂಲಕ ನಾವು ಸಂಗ್ರಹಿಸಿ ಅರಿತುಕೊಂಡೆವು. ನಾನು ಆ ಸ್ಥಳಕ್ಕೆ ಹೋಗಿ ನೋಡುವಾಗ ಕುಂಞಿಮೋನು ಕೊನೆಯ ಶಕ್ತಿ ಪ್ರದರ್ಶನಕ್ಕೆ ಸಿದ್ಧವಾಗಿದ್ದ ಸಂದರ್ಭವದು. ಆತನ ದೊಣ್ಣೆಯೇ ಅವನಲ್ಲಿದ್ದ ಏಕಮಾತ್ರ ಅಸ್ತ್ರ. ಅದರಿಂದಲೇ ತಿಂದ ಪೆಟ್ಟು ಹುಲಿಗೆ ಮರಣಾಂತಿಕವೆಂಬಂತೆ ಘಾತಿಸಿದೆ. ಸಾಯುವ ಮುನ್ನ ಎದುರಾಳಿಯನ್ನು ಸೀಳುವ ಸಾಹಸ ಅದರದು. ಇಂಥ ದ್ವಂದ್ವ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲೇ ಅಲ್ಲಿಗೆ ತಲಪಿದ ನನಗೆ ಕಂಡ ಆ ದೃಶ್ಯ ಬದುಕಿನಲ್ಲೇ ಅಪೂರ್ವ, ಅಸದೃಶವೆನಿಸಿದೆ. ನಾನು ಸಮಯವನ್ನು ವ್ಯರ್ಥವಾಗಿ ಕಳೆಯದೆ ಗುಂಡು ಹಾರಿಸಿದ್ದರಿಂದ ಹುಲಿ ಒಡನೆಯೇ ಅಸುನೀಗಿತ್ತು. ಬಿದ್ದ ಹುಲಿಯನ್ನು ಸಮೀಪಿಸಿ ಗಮನಿಸಿದೆ- ಕುಂಞಿಮೋನುವಿನ ಬಡಿಗೆಯ ಹೊಡೆತದಿಂದ ಅದರ ತಲೆಯೊಡು ಒಡೆದು ಪುಡಿಯಾಗಿ ತಲೆಯ ಮೇಲೆ ಕೈಯಾಡಿಸಿದಾಗ 'ಗುಡು ಗುಡು' ಎಂದು ಸಪ್ಪಳವಾಗುತ್ತಿತ್ತು! ಹುಲಿಯನ್ನು ಇಬ್ಬರು ಕಟ್ಟಾಳುಗಳ ಮೂಲಕ ಮನೆಗೆ ಸಾಗಿಸುವ ವ್ಯವಸ್ಥೆ ಮಾಡಿದೆ. ಚರ್ಮ ಸುಲಿಸಿ ಕಾಡುಮೇಕೆಯನ್ನು ಇಡಿಯಾಗಿಯೇ ಸುಬ್ರಾಯ ಮಾಸ್ತರರ ಮನೆಗೆ ಕಳುಹಿಸಿದೆ.

ಬಸವಳಿದಿದ್ದ ಕುಂಞಿಮೋನುವನ್ನು ಮನೆಗೆ ಕಳುಹಿಸಿ ಆತನಿಗಾಗಿ ರಾತ್ರಿಗೆ ಕೋಳಿಯೊಂದನ್ನು ಚೂರಿ ಹಾಕುವ ಏರ್ಪಾಡು ಮಾಡಿ ಮುಂದಿನ ಕಾಡು ಸೋವ ಕೆಲಸ ನಡೆಸಿದೆವು. ನಾನು ಹೊಳೆವ ಬದಿಯಲ್ಲಿ ನಿಂತೆ. ನನ್ನಿಂದ ಸುಮಾರು ೫೦೦ ಮಾರು ದೂರದಲ್ಲಿ ನಿಂತ ಅಜ್ಜ ಕೊರಗಪ್ಪ ರೈಗಳು ಕಡವೆಯೊಂದನ್ನು ಹೊಡೆದ ಸದ್ದಿಗೆ ಗಾಬರಿಗೊಂಡು ಬಂದ ಮುಸುವೊಂದನ್ನು ನಾನು ಹೊಡೆದುರುಳಿಸಿ ಅದನ್ನೂ ಮಾಸ್ತರರಿಗೆ ಕಳುಹಿಸಿದೆ. ನಮಗೆ ದೊಡ್ಡ ಕಡಲವೆಯೊಂದು ದಕ್ಕಿತು. ಮಾಂಸವೆಂದರೆ ಜೀವ ಬಿಡುವಷ್ಟು ಆಶೆಯುಳ್ಳ ಕುಂಞಿಮೋನುವಿಗೆ ಮಾತ್ರ ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆಯೆಂಬಂತೆ ಕಿರಿಯ ಕೋಳಿಮರಿ! ಆದರೆ ಅಂದಿನ ಬೇಟೆಯಲ್ಲಿ ಅನಿರೀಕ್ಷಿತವಾಗಿ ಹುಲಿಯನ್ನೆದುರಿಸಬೇಕಾಗಿ ಬಂದು ಆತ ತೋರಿದ ಸಾಹಸದಿಂದಾಗಿ 'ದೊಣ್ಣೆಯಿಂದ ಹುಲಿಯನ್ನು ಹೊಡೆದ ಕುಂಞಿಮೋನು ಬ್ಯಾರಿ' ಯೆಂದು ಅವನ ಹೆಸರು ಉದ್ದವಾಯಿತು; ಪ್ರಸಿದ್ಧಿ ಬಂತು.

ನಮ್ಮ ಅಜ್ಜ ಪಟೇಲ ಕೊರಗಪ್ಪ ರೈಗಳೂ, ನನ್ನ ತಂದೆಯವರೂ ಕುಂಞಿಮೋನುವಿನ ಬಿಸ್ರಾತಿಗೆಗೆ ಮೆಚ್ಚಿ ಒಂದೊಂದು ಮುಡಿ ಅಕ್ಕಿ, ಹದಿನೈದು, ಹದಿನೈದು ತೆಂಗಿನಕಾಯಿಗಳನ್ನು ಮೆಚ್ಚು ಕೊಟ್ಟರು. ಆದರೆ ಅಂದು ರಾತ್ರಿ ಕೋಳಿ ರೊಟ್ಟಿ ತಿಂದು ಮಲಗಿದ ಕುಂಞಿಮೋನು ಹತ್ತುಗಂಟೆ ರಾತ್ರಿಗೆ ಜ್ವರ ಹಿಡಿದು ನಡುಗತೊಡಗಿದ. ಮತ್ತೆ ಅವನು ಸುಧಾರಿಸಿಕೊಂಡದ್ದು ಗುರುವ ಮೇರನ ಮಂತ್ರವಾದ, ವಿಭೂತಿ, ಕುರ್ದಿ, ಕೋಳಿ ಬಲಿಗಳ ಫಲವಾಗಿ-ಮೂರು ದಿನಗಳ ಬಳಿಕವೆ.

□□□□□

ಕತ್ತಲಲ್ಲಿ ವಿಪತ್ತು

ತಂದೆಯವರು ಮಾಳಿಗೆಯಿಂದ ಕರೆದು ಹೇಳುವುದು ನನಗೆ ಮಲಗಿದಲ್ಲಿಗೆ ಕೇಳುತ್ತಿತ್ತು. ''ಸುಂದರೀ, ನಾಳೆ ಜತ್ತು ಪುತ್ತೂರಿಗೆ ಹೋಗಿ ವಿಷುಸಂಕ್ರಮಣಕ್ಕೆ ನಾರಾಯಣನನ್ನೂ, ಸಂಜೀವಿಯನ್ನೂ, ಮಗುವನ್ನೂ ಬರುವಂತೆ ಹೇಳಿಬರಲಿ''. ನನ್ನಲ್ಲಿ ಅಸಮಾಧಾನಗೊಂಡಿದ್ದ ತಂದೆಯವರು ನನ್ನೊಂದಿಗೆ ಮಾತಾಡುತ್ತಿದ್ದುದು ಅಷ್ಟಕ್ಕಷ್ಟೆ. ನನ್ನಿಂದ ಏನಾದರೂ ಕೆಲಸ ಮಾಡಿಸಬೇಕಿದ್ದರೆ ನಮ್ಮ ಚಿಕ್ಕ ತಾಯಿಯ ಮಧ್ಯಸ್ಥಿಕೆಯ ಮುಖಾಂತರ. ಚಿಕ್ಕತಾಯಿಯವರು ತಂದೆಯವರು ಎರಡನೆ ಹೆಂಡತಿ. ನಮ್ಮ ಅಮ್ಮನ ಖಾಸಾ ತಂಗಿ. ನಮ್ಮನ್ನು ಮಾತೃವಾತ್ಸಲ್ಯದಿಂದಲೇ ಕಾಣುತ್ತಿದ್ದುದರ ಫಲವಾಗಿ ನಾವು ಅಮ್ಮನೆಂದೇ ಕರೆಯುತ್ತಿದ್ದೆವು. ನಮ್ಮಣ್ಣ ನಾರಾಯಣ ರೈಗಳು ಆ ಸಮಯ ಪುತ್ತೂರಿನಲ್ಲಿ ಪ್ರಸಿದ್ಧಿಗೆ ಬರುತ್ತಿದ್ದ ಕ್ರಿಮಿನಲ್ ವಕೀಲರಾಗಿದ್ದರು. ನನಗಂತೂ ನಾಳೆ ಪುತ್ತೂರಿಗೆ ಹೋಗಲಿದೆ ಎಂದು ತಿಳಿದು ನಿದ್ದೆಗಣ್ಣಿನವನನ್ನು ಹಾಸಿಗೆಗೆ ದೂಡಿದಂತಾಯಿತು. ಹೋಗುವಾಗ ತಂದೆಯವರು ಖರ್ಚಿನ ಹಣವನ್ನು ಕೊಟ್ಟೇ ಕೊಡುತ್ತಾರೆ ಇದು ಸಾಲದೆಂದು ತಾಯಿಯ ಎದುರಿನಲ್ಲಿ ಮುಖ ಬಾಡಿಸಿ ನಿಂತರೆ ಅವರೂ- ಅವರ ಸಾಸಿವೆ ಡಬ್ಬದ ಗೋಡ್ರೆಜ್ಜಿನಿಂದ ಒಂದೆರಡು ರೂಪ್ಯಾಗಳನ್ನಾದರೂ ಕೊಡದಿರರು. ಹೋಗುವಾಗ ಅಣ್ಣನಿಗೆ ಒಂದು ಮೊಲವನ್ನೋ, ಬರಿಂಕವನ್ನೋ ಹೊಡೆದುಕೊಂಡು ಹೋದರೆ ಅವರಿಂದಲೂ ಒಂದೆರಡು ರೂಪ್ಯಾ ಕೀಳಬಹುದು. ಅತ್ತಿಗೆಯನ್ನು ಪುಸಲಾಯಿಸಿದರೆ ಸ್ವಲ್ಪ ಕಾಸು ದಕ್ಕೀತು ಎಂಬ ಆತುರದಿಂದ ಮರುದಿನ ಹೊರಡುವ ಸಿದ್ಧತೆಯನ್ನು ಮಾಡತೊಡಗಿದೆ. ನನ್ನಲ್ಲಿ ಶಿಕಾರಿ ತೋಟೆ ಮುಗಿಯುತ್ತಾ ಬಂದಿದೆ. ಬರೇ ಮೂರು ನಾಲ್ಕು ತೋಟೆಗಳು ಮಾತ್ರ ಜಮಾಖಾತೆಯಲ್ಲಿವೆ. ವಿಷು ಸಂಕ್ರಮಣದ ಮರುದಿನ ಊರ ಕೂಡುವಿಕೆಯಿಂದ ಗಡದ್ದಿನ ಶಿಕಾರಿಯಿದೆ. ಇನ್ನು ವಿಷು ಸಂಕ್ರಮಣಕ್ಕೆ ಉಳಿದಿರುವುದು ಮೂರು ನಾಲ್ಕು ದಿನಗಳು ಮಾತ್ರ.

ತಾಯಿಯೊಡನೆ ''ನಾಳೆ ರಾತ್ರಿ ನಾನು ಎಂಜಿರಕ್ಕಾಗಿ ಪುತ್ತೂರಿಗೆ ಹೋಗುತ್ತೇನೆ. ಹೋಗುವಾಗ ಲೈಟಿಗೆ ಬರಿಂಕವೋ ಮೊಲವೋ ಸಿಕ್ಕಿದರೆ ಪುತ್ತೂರಲ್ಲಿ ಬಿಡಾರದವರು ತಿನ್ನಲಿಕ್ಕಾದೀತು' ಎಂದೆ. ಆ ದಿನಗಳಲ್ಲಿ ಹನ್ನೆರಡು ಗಂಟೆ ರಾತ್ರಿಗೆ ಘಟ್ಟದಿಂದ ಎಂಜಿರ ಉಪ್ಪಿನಗಂಡಿಗಾಗಿ ಬಾಣಾವರ ಸರ್ವಿಸ್ಸೆಂಬ ಹೆಸರಿನ ಬಸ್ಸೊಂದು ಇತ್ತು. ಇದರ ಚಾಲಕ ಸೈದಲಾಬಿಯು ನಮ್ಮೆಲ್ಲರ ದೋಸ್ತ. ಸತ್ತ ಮೃಗವನ್ನು ಬಿಡಿ, ಸಾಧಾರಣದ ಎಮ್ಮೆಯನ್ನೂ ಬಸ್ಸಿಗೆ ಹತ್ತಿಸಿದರೂ ಬೇಡವೆನ್ನುವ

ಜನವಲ್ಲ; ಕಾರಣ ಅವರದು ದೊಡ್ಡ ಕುಟುಂಬ. ಮದುವೆ ಮುಂಜಿಯ ಸಮಯ; ರಮ್ಜಾನ್ ಕಾಲದಲ್ಲಿ ಬೇಕಾದ ತೆಂಗಿನಕಾಯಿ, ಅಕ್ಕಿ ನಮ್ಮಲ್ಲಿಂದಲೂ ಆ ಡ್ರೈವರರಿಗೆ ಸರಬರಾಜು ಆಗುತ್ತಿತ್ತು. ಆ ಹನ್ನೆರಡು ಗಂಟೆ ರಾತ್ರಿಗೆ ಅನಿವಾರ್ಯವಾಗಿ ಯಾರಾದರೂ ನಾಲ್ಕೈದು ಮಂದಿ ಘಟ್ಟದ ಪ್ರಯಾಣಿಕರು ಇದ್ದರೆ ಹೆಚ್ಚು. ಆದುದರಿಂದ ಏನನ್ನು ಬಸ್ಸಿನಲ್ಲಿ ಕೊಂಡು ಹೋಗುವುದಕ್ಕೂ ಡ್ರೈವರ-ಕ್ಲೀನರರ ತಕರಾರು ಇರುತ್ತಿರಲಿಲ್ಲ. ಏನಾದರೂ ಬೇಟೆಯ ಮೃಗ ಸಿಕ್ಕಿದರೆ ಮಗನೂ ಸೊಸೆಯೂ ತಿನ್ನಲೆಂದು ತಾಯಿಯವರು ತಂದೆಯವರೊಂದಿಗೆ ವಕಾಲತ್ತು ನಡೆಸಿ ಮರುದಿನದ ಸಂಜೆ ಏಳೂವರೆ ಗಂಟೆಯ ಅನಂತರ ಪುತ್ತೂರಿಗೆ ಹೋಗಲು ನನಗೆ ಅನುಮತಿ ದೊರಕಿಸಿ ಕೊಟ್ಟರು.

ಇದ್ದ ತೋಟೆಗಳನ್ನು ಆ ರಾತ್ರಿಯೇ ಒಲೆಯ ಮೇಲಿನ ದೆಂಗದ ಮೇಲಿರಿಸಿ ಪಸೆ ಆರಿಸಿ ಡಬ್ಬಿಯಲ್ಲಿ ಲೈಟಿಗೆ ಹಾಕುವರೆ ಕಾರ್ಬ್ಯೈಡ್ ಎಷ್ಟು ಉಂಟೆಂದು ನೋಡಿ, ಎಂಜಿರದ ತನಕ ಹೋಗಿ ಬರುವ ದಾಸ್ತಾನನ್ನು ಕಂಡು ಸಂತೋಷದಿಂದ ನಿದ್ರಿಸಿದೆ.

ಮರುದಿನ ಬೆಳಿಗ್ಗೆ ತಾಯಿಯವರು ಮೂರು ಸಲ ಕರೆದು ಎಚ್ಚರಿಸುವ ಕರೆಗೆ ಬೇಸರಗೊಂಡು ಎಂಟು ಗಂಟೆಗೆ ಎದ್ದು ಮುಖ ತೊಳೆದ ಶಾಸ್ತ್ರ ಮಾಡಿ, ಒತ್ತಾಯಕ್ಕೆ ಕಾಫಿ ಕುಡಿಯುವವನಂತೆ, ಮುಖ ಸಿಂಡರಿಸಿಕೊಂಡೇ ಕಾಫಿ ಕುಡಿದೆ. ಬೈಸಾರಿಗಾಗುವಾಗ ಅವರಿಂದ ಕಾಸು ಕೀಳ ಬೇಡವೇ? ಅವರ ಕೆಲಸಕ್ಕಾಗಿಯೇ ನಾನು ಪುತ್ತೂರಿಗೆ ಹೋಗುವವನೆಂಬ ಅಭಿಪ್ರಾಯವುಂಟಾಗುವಂತೆ ವರ್ತಿಸಿದೆ! ಆದರೂ ಬೇಟೆಯ ಸಿದ್ಧತೆಯಲ್ಲಿ ಅಜಾಗರೂಕತೆ ತೋರಲಿಲ್ಲ. ಕೋವಿಗೆ ತ್ರೀ-ಇನ್-ವನ್ ಎಣ್ಣೆ ಪೂಸಿ ನಳಿಗೆಯನ್ನು ಬ್ರೆಶ್ಶಿನಿಂದ ಚೆನ್ನಾಗಿ ಉಜ್ಜಿ ಸ್ವಚ್ಛಗೊಳಿಸಿ ಸಂದುಗೊಂದುಗಳಿಗೆ ಎಣ್ಣೆ ಬಿಟ್ಟು ತಿಕ್ಕಿ ಇದ್ದ ತೋಟಾಗಳನ್ನು ಕ್ರಮದಂತೆ ಬೆಲ್ಟಿಗೆ ಸಿಕ್ಕಿಸಿ, ಕಾರ್ಬೈಡ್ ಲೈಟನ್ನೂ ಸ್ವಚ್ಛಗೊಳಿಸಿ, ಕಾರ್ಬೈಡ್ ಡಬ್ಬೆಗೆ ಕಾರ್ಬ್ಯೈಡ್ ತುಂಬಿಸಿ ಹೊರಡುವ ಸನ್ನಾಹವನ್ನು ಮಾಡಿಕೊಂಡೆ. ನನ್ನ ಸೋಮಾರಿ ಸಂಘದ ಸರಪಂಚರಲ್ಲೊಬ್ಬನಾದ ಸೋಮಪ್ಪನನ್ನು ಎಂಜಿರದ ತನಕ ನನ್ನೊಂದಿಗೆ ಒಡನಾಡಿಯಾಗಿ ಬರುವಂತೆ ನಿರ್ದೇಶನ ಕೊಟ್ಟು, ಮಧ್ಯಾಹ್ನದ ಊಟವನ್ನು ಗಡದ್ದಾಗಿ ಹೊಡೆದು, ರಾತ್ರಿ ನಿದ್ರೆ ಕೆಡಬೇಕಾದುದರಿಂದ ಒಂದು ನಿದ್ರೆಯನ್ನು ತೆಗೆಯೋಣವೆಂದು ಹಾಸಿಗೆಯಲ್ಲಿ ಅಡ್ಡಾದೆ.

ನಾಲ್ಕೂವರೆ, ಐದು ಘಂಟೆಗೆ ಎದ್ದು ನೋಡುತ್ತೇನೆ ಪ್ರಶಾಂತವಾದ ಗಾಳಿ. ತಂಪಾದ ಹವೆಯನ್ನು ಆ ಸುಡು ಸೆಖೆಯ ಕಾಲದಲ್ಲಿ ಅನುಭವಿಸಿದ ನನಗೆ ಎಲ್ಲಿಲ್ಲದ ಆಶ್ಚರ್ಯ. ನಾನು ಮಲಗಿದೊಡನೆಯೇ ಹದ ಮಳೆಯೊಂದು ಸುರಿದು ಭೂಮಿಯು ತಂಪಾದುದೇ ಇದಕ್ಕೆ ಕಾರಣ. ನನ್ನ ಉಲ್ಲಾಸಕ್ಕೆ ಎಲ್ಲೆಯಿಲ್ಲ. ಇಂದು

ಹೋಗುವಾಗ ಮೊಲ, ಬರಿಂಕವೇಕೆ? ಕಡವೆ, ಹಂದಿಯೇ ಎದುರಾಗಬಹುದು. ಪ್ರಥಮ ಮಳೆ ಬಂದ ದಿನ ಕಾಡು ಮೃಗಗಳಿಗೂ ತುಂಬಾ ಉಲ್ಲಾಸ. ಅವು ಕಾಡಿನಲ್ಲಿ ನಿಲ್ಲದೆ ಬಯಲು ಪ್ರದೇಶದ ಕಡೆಗೆ ಬಂದೇ ತೀರಬೇಕು. ಮಳೆ ಹನಿಯ ನೀರು ಎಲೆಗಳೆಡೆಯಿಂದ ತೊಟ್ಟಿಕ್ಕುತ್ತಿದ್ದರಂತೂ ಕಾಡು ಅವಕ್ಕೆ ಬೇಸರ. ಅಲ್ಲದೆ ಲೈಟಿನಲ್ಲಿ ಹುಡುಕುತ್ತಾ ಹೋಗುವಾಗ ತರಗೆಲೆಗಳು ನೆನೆದಿರುವುದರಿಂದ ಅದರ ಪರಪರ ಸದ್ದಿಗೆ ಎಚ್ಚರಗೊಂಡು ಓಡುವ ಸಂದರ್ಭವೂ ಕಡಿಮೆ. ಇದನ್ನೆಲ್ಲಾ ಊಹಿಸಿ ಕತ್ತಲೆಯಾಗುವುದನ್ನೇ ಕಾಯುತ್ತಿದ್ದೆ.

ಅಂತೂ ಸೂರ್ಯನು ಅಸ್ತಂಗತನಾದನು. ಏಳು ಏಳೂವರೆ ಗಂಟೆಗೆ ಊಟವನ್ನು ಮುಗಿಸಿ ಸ್ವಲ್ಪ ವಿಶ್ರಾಂತಿಯನ್ನು ಪಡೆದು ಎಂಟು ಗಂಟೆಗೆ ತಲೆಗೆ ಲೈಟನ್ನು ಬಿಗಿದು ಸೊಂಟದ ಬೆಲ್ಟಿಗೆ ಲೈಟಿನ ಇತರ ಪರಿಕರಗಳನ್ನು ಜೋಡಿಸಿಕೊಂಡೆ. ನೀರಿನ ಬಿರಡೆಯನ್ನು ತಿರುಗಿಸಿ ಕಾರ್ಬ್ಯಾಡಿಗೆ ನೀರು ಹನಿ ಹನಿಯಾಗಿ ಬೀಳುವ ವ್ಯವಸ್ಥೆ ಯನ್ನು ಮಾಡಿ ಲೈಟಿನ ಬರ್ನರಿಗೆ ಬೆಂಕಿಕಡ್ಡಿಯನ್ನು ಗೀರಿ ಬೆಂಕಿ ತೋರಿಸಿ ಲೈಟಿನ ಉರಿಯನ್ನು ಫೋಕಸ್ಸಿಗೆ ಅಣಿಗೊಳಿಸಿ ಹೊರಟೆ. ನಮ್ಮ ಪಿಲಿ ಮಜಲಿನ ಮಜಲು ಗದ್ದೆಯತುದಿಗೆ ಬಂದೆವು. ಅದೇನು ಕತ್ತೆತ್ತಿ ಎರಡು ಕಾಲಿನಿಂದ ನಿಗುರಿ ನಿಂತು ನೋಡುತ್ತಿರುವುದು? ಕತ್ತೆಮೊಲ ! ಪಳಗಿದ ಕೈಗೆ ಹೇಳಬೇಕೆ ಕುದುರೆಯನ್ನು ಮೀಟಿತು. 'ಭಟೀಲ್' ಎಂಬ ಕಟ್ಟಿದ ತೋಟೆಯ ಸದ್ದು ಕೇಳಿ ಮನೆಯ ನಾಯಿಗಳು ನಾಗಾಲೋಟದಿಂದ ನಮ್ಮಲ್ಲಿಗೆ ಬಂದೂ ಆಯಿತು. ಕಟ್ಟಿದ ತೋಟೆಯ ಅರೆ ಪೆಟ್ಟಿನಿಂದ ಬಿದ್ದ ಮೊಲವನ್ನು ನಾಯಿಗಳು ಕತ್ತಿನಲ್ಲಿ ಹಿಡಿದು ಪ್ರಾಣ ತೆಗೆದೂ ಆಯಿತು. ಈಡಿನ ಶಬ್ದವನ್ನು ಕೇಳಿದ ಮನೆಯ ಆಳು ಸಾಂತಣ್ಣನು ಬಂದು ಇಲ್ಲಿ ಸಿಕ್ಕಿದುದನ್ನು ಪುತ್ತೂರಿಗೆ ಕೊಂಡು ಹೋಗುವುದು ಬೇಡವೆಂದೂ, ಇನ್ನು ದಾರಿಯಲ್ಲಿ ಖಂಡಿತಾ ಶಿಕಾರಿಯಾಗುವುದೆಂದೂ, ಮನೆಯಲ್ಲಿ ಹೇಳಿದರೆಂದೂ ತಿಳಿಸಿದ. ಇದನ್ನು ಎಂಜಿರದ ತನಕ ಹೊರುವುದಾರೆಂಬ ಉದಾಸೀನತೆಯಿಂದ ಮೊಲವನ್ನು ಬಂದ ಆಳಿನೊಡನೆ ಮನೆಗೆ ಕಳುಹಿಸಿದೆ. ಪ್ರಯಾಣ ಮುಂದುವರಿಯಿತು.

ಪಿಲಿಮಜಲಿನಿಂದ ತೊಡಗಿದ ಪ್ರಯಾಣವನ್ನು ನಮ್ಮ ಹಿರಿಯರ ಮನೆ-ಮುಂಡ್ರಾಡಿ ಅಳೇರಿಯ ಸಂದಿಗೆ ಬರುವಾಗ ಸ್ವಲ್ಪ ತಡೆಹಿಡಿಯಬೇಕಾಯಿತು. ಅಳೇರಿಯ ಸ್ಮಶಾನ ಗದ್ದೆಯತ್ತ ಲೈಟಿನ ಬೆಳಕನ್ನು ಬೀರಿ ನೋಡುತ್ತೇನೆ. ದೊಡ್ಡ ಮೊಲವೊಂದು ಬಿಟ್ಟ ಕಣ್ಣನ್ನು ಮುಚ್ಚದೆ ಕಕಮಕನೆ ನನ್ನತ್ತ ನೋಡುತ್ತಿದೆ. ಆದರೆ ಅದು ಕಣ್ಣು ಕೊಡುತ್ತಿರುವುದೆಲ್ಲಿಂದ? ನನಗೆ ಪ್ರಾಯದಲ್ಲಿ ತಂಗಿ, ವಾವೆಯಲ್ಲಿ ಚಿಕ್ಕತಾಯಿ, ನಮ್ಮೆಲ್ಲರ ಮುದ್ದಿನ ಕಣೆ, ರೂಪದಲ್ಲಿ ನಿಜವಾಗಿ

ಚೆಲುವೆಯಾಗಿದ್ದ ಸುಂದರಿಯು ಅಕಾಲ ಮರಣ ಹೊಂದಿ ನಮ್ಮನ್ನು ದುಃಖ ಸಾಗರದಲ್ಲಿ ಅದ್ದಿ ಚಿರನಿದ್ರಿತಳಾದ ಗೋರಿಯ ಬದಿಯಿಂದ! ಈಡು ಮಾಡಿದೆನೇ, ಮೊಲದಿಂದ ಜಾರಿದ ಚರೆಗಳು ಆ ಗೋರಿಗೆ ಬಿದ್ದರೆ? ಅಷ್ಟು ಮುತುವರ್ಜಿಯಿಂದ ಆಕೆಯ ಸದ್ಗುಣದ ಚಿರಸ್ಮಾರಕವಾಗಿ ಕಟ್ಟಿದ ಗೋರಿಗೆ ಎರಡು ಚರೆಯು ತಾಗಿ ಅದು ಹಾಳಾದರೂ ನನ್ನ ಹೃದಯಕ್ಕೆ ತಾಗಿದಂತೆ ಎಂಬ ಭಾವನೆ. ಕುಳಿತ ಮೊಲವು- ಕಲ್ಲಿನಂತೆ- ಅಲುಗಾಡುವುದೇ ಇಲ್ಲ. ಅವಳ ಗೋರಿಗೆ ಪೆಟ್ಟಾಗಬಾರದೆಂದು ಆಯ ತಪ್ಪಿಸಿ ಹೊಡೆದರೆ ಅತ್ತಿತ್ತ ಇರುವ ಹಿರಿಯರ ಗೋರಿಗೆ ತಾಗುವ ಸಂದರ್ಭ ಹಾಗಾಗಬಹುದೆ? ಅಂತೂ ನನ್ನ ಪರಿಸ್ಥಿತಿಯು ಅಡಕ್ಕೊತ್ತಿನಲ್ಲಿ ಅಡಕೆಯಂತಾಯಿತು. 'ಇಂದು ಬದುಕಿಕೊಳ್ಳಲಿ. ನನ್ನ ನೆರೆಯಲ್ಲಿದ್ದುದು ಎಲ್ಲಿ ಹೋದೀತು? ನಾಳೆ ನಾಡಿದ್ದರಲ್ಲಿ ಧಾನ್ಯದ ಗದ್ದೆಯಲ್ಲಿ ಸಿಗಬಹುದು' ಎಂದು ಮನಸ್ಸಿಗೆ ಸಮಾಧಾನ ಮಾಡಿಕೊಂಡೆ. ಎಂಜಿರದ ಪ್ರಯಾಣವನ್ನು ಮುಂದುವರಿಸಿದೆವು. ಮೊಲವು ತಪ್ಪಿದ ಲೈಟಿನ ಬೆಳಕಿಗೆ ದಿಗಿಲುಗೊಂಡು ಎತ್ತ ಹಾರಿ ಓಡಿ ಪೊದೆಯಲ್ಲಿ ಮಾಯವಾಯಿತೋ ತಿಳಿಯದು.

ಮುಂದೆ ಅರ್ಧ, ಮುಕ್ಕಾಲು ಮೈಲು ಮಾರ್ಗ ಕ್ರಮಿಸಿದ್ದ ಅನಂತರ ಕಾಲು ಹಾದಿಯಲ್ಲಿ ಎಂಜಿರದ ಮಾರ್ಗ ಕ್ರಮಿಸಬೇಕು. ಅದು ಒಳ ಹಾದಿ. ಮಾರ್ಗದಲ್ಲಿ ಹೋದರೆ ಮೂರು ನಾಲ್ಕು ಫರ್ಲಾಂಗು ಸುತ್ತು ಗಾಡಿಯಲ್ಲಿ ಹೋಗುವುದಿದ್ದರೆ ಮಾತ್ರ ಮಾರ್ಗವನ್ನೇ ಹಿಡಿಯದೆ ಬೇರೆ ಉಪಾಯವಿಲ್ಲ. ಕಾಲುದಾರಿಯಲ್ಲಿ ಹೋದರೂ ರೆಂಜಲಾಡಿ ಪಟೇಲರ ಮನೆಯ ಎದುರಿಗೆ ಮಾರ್ಗವೂ ಕಾಲುದಾರಿಯೂ ಬಂದು ಸೇರುವ ಸ್ಥಳ. ಕಾಡು ಮಾರ್ಗವಾದುದರಿಂದ ಬರಿಂಕ, ಮೂಲವೇಕೆ? ಕಡವೆ, ಜಿಂಕೆಯೂ ಇರಬಹುದು ಎಂಬ ಆತುರದಿಂದ ಕೋವಿಯ ಎರಡು ನಳಿಗೆಗೂ ಕಂಪೆನಿಯ ಹೊಸ ತೋಟೆಗಳನ್ನೇ ಇಟ್ಟುದಾಯಿತು. ಸ್ವಲ್ಪ ಮುಂದೆ ಹೋಗುವಾಗ ಪೊದೆಯ ಎಡೆಯಿಂದ ನಸುಗೆಂಪಿನ ಕಣ್ಣನ್ನು ಮಿಟುಕಿಸುತ್ತಿರುವುದೇನು ? ಬರಿಂಕ! ಈಡು ಬಿರಿಯಿತು. ಬರಿಂಕ ಉರುಳಿತು. ಸೋಮಪ್ಪನು ಸಂತೋಷದಿಂದ ಅದನ್ನು ಎತ್ತಿಕೊಂಡು ಬಂದ. ದೊಡ್ಡ ಗಾತ್ರದ ಬರಿಂಕ. ಅಳಿಲಿನಂತಹ ಅದರ ಮೈಮೇಲಿನ ಮೂರು ಗೆರೆಯನ್ನು ನೋಡಿದರೆ ದೇವರ ಕಲಾನೈಪುಣ್ಯಕ್ಕೆ ತಲೆದೂಗಬೇಕು! ಅಂದು ಪಾಪಾ-ಪುಣ್ಯ, ದೇವರು- ದಿಂಡರ ನೆನಪಿಲ್ಲದೆ- 'ನಾಲಿಗೆಯ ರುಚಿಯೇ ಕಲೆ- ಹೊಟ್ಟೆಯೇ ದೇವರೆ'ಂದು ಭಾವಿಸಿದ್ದು ನನಗೆಲ್ಲಿಂದ ಆ ಜ್ಞಾನವು ಬರಬೇಕು? ಇಂದು 'ಆ ಅಂದದ ಬರಿಂಕದ ಸಂತಾನವೇ ನಿರ್ಮೂಲವಾಗಿರುವುದಕ್ಕೆ ನಾನೂ ಕಾರಣನಾಗಿದ್ದೆನಲ್ಲಾ ' ಎಂಬುದನ್ನು ಯೋಚಿಸುವಾಗ ಪಶ್ಚಾತ್ತಾಪವಾಗುತ್ತದೆ.

ಆವರೇನು ಮಾಡಲಿ ? ಕಾಲವು ಮಿಂಚಿದೆ. ಸೋಮಪ್ಪನು ಬರಿಂಕದ ನಾಲ್ಕು ಕಾಲನ್ನೂ ಒಗ್ಗೂಡಿಸಿ ಕಟ್ಟಿ ಜೋತಾಡಿಸಿ ಕೊಳ್ಳುವ ವ್ಯವಸ್ಥೆಯನ್ನು ಮಾಡಿದನು. ಅದನ್ನು ನೇತಾಡಿಸಿಕೊಂಡು ಬರುವಾಗ ಅದರ ಕೋರೆ ಹಲ್ಲುಗಳು ಕಾಲಿಗೆ ಗೀರಿದರೆ ಹರಿತವಾದ ಕತ್ತಿಯಿಂದ ಕಡಿದಂತಹ ಗಾಯವಾಗುವುದೆಂದು ನಾನು ಅರಿತವನು. ಅದುದರಿಂದ ಅದರ ಕೋರೆ ಹಲ್ಲನ್ನು ಬೇಟೆ ಕತ್ತಿಯಿಂದ ಬಡಿದು ಉರುಳಿಸಿ, ಪುತ್ತೂರಲ್ಲಿ ಅಣ್ಣನನ್ನು ಸಂತೋಷ ಪಡಿಸಬಹುದಲ್ಲಾ ಎಂಬ ಉತ್ಸಾಹದಿಂದ ಒಂದೆರಡು ಫರ್ಲಾಂಗು ಕ್ರಮಿಸಿರಬಹುದು. ಅದೇನು ಲೈಟಿನ ಬೆಳಕಿಗೂ ಕಣ್ಣು ಕೊಡದೆ ಜೀವದಾಸೆಯನ್ನು ತೊರೆದು ಕಾಲ ಬಳಿಗೇ ಓಡಿ ಬರುತ್ತಿದೆ ? ಮೊಲವೇ? ಅಲ್ಲ. ಮೊಲದ ಗಾತ್ರದ ಹೆಗ್ಗಣ! ''ಛೀ, ಇದರ ಮುಖಕ್ಕೆ ಬೆಂಕಿ ಹಾಕಲಿ'' ಎಂದು ಶಪಿಸಿ ಹತ್ತು ಹದಿನೈದು ಹೆಜ್ಜೆ ಮುಂದರಿಸಿರಬಹುದು.

ಕೇಪಳ ಹಣ್ಣಿನ ಗಾತ್ರದ ಕೆಂಗಣ್ಣುಗೆಳೆರಡು ಸಾಧಾರಣ ನಾಲ್ಕು ಅಂಗುಲ ಎಡ ಬಲಗಳ ಅಂತರದಲ್ಲಿ ನೂರು ಗಜ ದೂರದಲ್ಲಿ ಉರಿಯುವ ಕೆಂಡದುಂಡೆಯಂತೆ ಹೊರಳುತ್ತಿವೆ. ಮೊಲವಾಗಿದ್ದರೆ ಅಷ್ಟು ಕೆಂಪಗಾದ ಕಣ್ಣು ಹೊಳೆಯುತ್ತಿರಲಿಲ್ಲ. ಬರಿಂಕದ ಕಣ್ಣು ತುಸು ಹಳದಿ ಬೆರತೆ ಕೆಂಪು. ಹಾಗಾದರೆ ಇಷ್ಟು ಕುಳ್ಳಾದ, ನಾಲ್ಕು ಅಂಗುಲ ಅಂತರದ ದೊಡ್ಡ ತಲೆಯ ಚಿಕ್ಕ ಮೃಗವು ಯಾವುದಾಗಿರಬಹುದು? ಮಲಗಿ ಮೆಲುಕು ಹಾಕುತ್ತಿರುವ ಕಡವೆ, ಜಿಂಕೆಯಾಗಿದ್ದರೆ, ಅದರ ಕೊಂಬು ಕಿವಿಯು ಇಷ್ಟರಲ್ಲೆ ಕಾಣಬೇಕಿತ್ತು. ಜಿಂಕೆ, ಕಡವೆಗಳಾದರೋ ಬಹು ಚೂಟಿಯಾದ ಪ್ರಾಣಿಗಳು. ಈ ವೇಳೆಗಾಗಲೇ ಎದ್ದು ನಿಲ್ಲುತ್ತಿದ್ದವು. ಅದರೆ ಅದು ನಿಧಾನವಾಗಿ ಮುಂದೆ ಸರಿದು ಬರುವಂತೆ ಕಾಣುತ್ತಿದೆ. ಅಲ್ಲದೆ ಇಂದಿನ ತನಕ ಲೈಟಿನ ಬೆಳಕನ್ನು ಕಾಣದ ಪ್ರಾಣಿಯೇ ಆಗಿರಬೇಕು. ಏನಾಗಿರಬಹುದು? ಸರಿ, ಇಂತಹ ಕಣ್ಣುಳ್ಳ ಮೊದ್ದು ಜಂತುವು ಮುಳ್ಳುಹಂದಿಯಲ್ಲದೆ ಬೇರೇನು? ಎಂದು ನಿರ್ಧರಿಸಿ ಒಂದನೇ ನಂಬ್ರದ ಚರೆಯ ತೋಟೆಯನ್ನು ಇರಿಸಿದ ಎಡದ ನಳಿಗೆಯನ್ನು ಮೀಟಿದೆ. ನಾನೇನೂ ಇಂಥ ಕ್ಷುದ್ರ ಪ್ರಾಣಿಗಳನ್ನು ಕಂಡು ಭೀತಿ ಪಡುವ ಬೇಟೆಗಾರನಲ್ಲವಾದುದರಿಂದ, ಗುರಿಯು ಸರಿಯಾಗಿ ಕಣ್ಣಿನ ಮಧ್ಯಕ್ಕೆ ಬಿದ್ದಿದೆ ಎಂಬುದರಲ್ಲಿ ನನಗೆ ಸಂಶಯವೇನೂ ಉಳಿದಿರಲಿಲ್ಲ. ''ಢಿಂ' ಎಂದು ಕೋವಿಯ ದನಿಯಾಯಿತು. ಸೋಮಪ್ಪನು ಆತುರಾತುರವಾಗಿ, ಬಿದ್ದುದೇನೆಂದು ನೋಡಲು ಮುಂದುವರಿಯುತ್ತಿದ್ದಾನೆ. ಖಾಲಿಯಾದ ನಳಿಗೆಗೆ ನಾನು ಮತ್ತೊಂದು ತೋಟೆಯನ್ನು ತುಂಬಿಸಿ ಮುಂದುವರಿಯುವ ಸಿದ್ಧತೆಯಲ್ಲಿದ್ದೇನೆ.

ಅದೇನು? 'ಡನ್ ಲಪ್' ಟಯರ್ ಬಿರಿದಂತಹ ಸದ್ದಿನೊಂದಿಗೆ ಅವಿಶ್ರಾಂತವಾದ ಗಾಳಿಯ ಸುಯ್ಲು? ಲೈಟನ್ನು ಹಾಕಿ ನೋಡುತ್ತೇನೆ ಹಿಂದೆ ಕಂಡ

ಒಂದಡಿ ಎತ್ತರದಲ್ಲಿದ್ದ ಕೆಂಡದಂತಹ ಕಣ್ಣುಗಳು ಕಾಣುವುದಿಲ್ಲ. ಎರಡು ಮೂರು ಮಾರು ಎತ್ತರಕ್ಕೆ ಮೊರದಗಲದ ಬಿಳುಪಾದ ಪ್ರಾಣಿ ಯೊಂದು ಸುಯ್ಯುಗುಡುತ್ತಾ ಮೇಲು ಮೇಲಕ್ಕೆ ಏರುತ್ತಾ ಹೋಗುವುದು ಕಾಣುತ್ತಿದೆ ! ಅದು ಎತ್ತರಕ್ಕೆ ಬೆಳೆಯುತ್ತಲೇ ಹೋಗುತ್ತಿದೆ ! ಬಿರಿದ ಟಯರಿನಿಂದ ಹೊರಡುವಂತೆ ಸುಯ್ಲಿನ ಶಬ್ದವು ಕೇಳುತ್ತಲೇ ಇದೆ. ಮುಂದೊತ್ತಿ ಹೋಗಿದ್ದ ಸೋಮಪ್ಪ ಈಗ ನೋಡಿದರೆ ನನ್ನಿಂದ ಹತ್ತು ಮಾರು ಹಿಂದಿದ್ದಾನೆ. ನನ್ನಲ್ಲಿ ಬಾರು ಮಾಡಿ ಎದೆಗಾನಿಸಿದ ಕೋವಿಯು ಸಿದ್ಧವಾಗಿಯೇ ಇದೆ. ನನಗರ್ಥವಾಯಿತು. ಇದು ಮುಳ್ಳುಹಂದಿಯಲ್ಲ. ಹೆಗ್ಗಣವನ್ನು ಓಡಿಸಿಕೊಂಡು ಬಂದ ಹೆಬ್ಬಾವು ! ಇಲ್ಲವೇ ಸಂಕವಾಳ ಎಂದು ! ಹೆಬ್ಬಾವು ಮೊದ್ದು. ಸಂಕವಾಳನು ಸರ್ಪಗಳಲ್ಲಿ ಅತಿ ಕ್ರೂರಿ. ನಾನು ಅತಿ ದೊಡ್ಡ ಹೆಬ್ಬಾವನ್ನು ನಾವೂರಲ್ಲಿ ಡಾ। ಪಿ.ಎ. ಅಧ್ಯಂತಾಯರು ಹೊಡೆದುದನ್ನು ನೋಡಿದ್ದೆ. ಆ ಶಿಕಾರಿಯಲ್ಲಿ ಪಾಲ್ಗೊಂಡಿದ್ದೆ. ಹೆಬ್ಬಾವಾಗಿದ್ದರೆ ಇಷ್ಟೊಂದು ಭೀಕರವಾಗಿ ಘೂತ್ಕರಿಸುತ್ತಿರಲಿಲ್ಲ. ಇದು ಸಂಕವಾಳನೇ ಇರಬೇಕು. 'ಆದುದಾಗಲಿ' ಎಂದು ಆ ಮೊರೆದ ಗಾತ್ರದ ಬಿಡಿಸಿದ ಹೆಡೆಗೆ ಮತ್ತೊಂದು ಗುಂಡನ್ನು ಬಾರಿಸಿದೆ. ಈಗ ಅದರ ಎತ್ತರವು ಸುಮಾರು ಆರೇಳು ಆಳು ಮಿಕ್ಕಿತ್ತು ! ಸರಿ ! ಯಾದ ಜಾಗಕ್ಕೆ ಎರಡನೆಯ ಈಡು ತಗುಲಿರಲೇ ಬೇಕು. ಬುಡಕಡಿದ ಬಾಳೆಯ ದಿಂಡು ಉರುಳುವಂತೆ ದಡೀಲೆಂದು ನೆಲಕಪ್ಪಳಿಸಿದಂತಹ ಸದ್ದಿನೊಂದಿಗೆ ಪ್ರಾಣಿಯು ಮೊದಲಿನ ಸ್ಥಿತಿಗೇ ಬಂದು ಬಿತ್ತು. ಇದೆಲ್ಲಾ ಒಂದು ನಿಮಿಷದೊಳಗೆ ನಡೆದ ಸಂಗತಿ. ಬದುಕಿದೆಯಾ ಬಡಜೀವವೇ ಎಂದು ಹಿಂದಿರುಗಿಯೂ ನೋಡದೆ ಏಳುವ ಬೀಳುವ ಗೊಡವೆಯೂ ಇಲ್ಲದೆ ಓಟಕಿತ್ತ ನಾವು ನಿಂತುದು ಅಳೇರಿ ಮುಂಡ್ರಾಡಿ ಮಧ್ಯೆ ಕಟ್ಟಿರುವ ಸುಂಕದಕಟ್ಟೆಯಲ್ಲಿ ! ಸುತ್ತೊಮ್ಮೆ ಲೈಟಿನ ಪ್ರಕಾಶವನ್ನು ಬೀರಿ ನೆಮ್ಮದಿಯ ಉಸಿರೊಂದನ್ನು ಎಳೆದು ಸಿಗರೇಟು ಹಚ್ಚಿ, ಸೋಮಪ್ಪನ ಕೂಡೆ ''ಬರಿಂಕವೆಲ್ಲಿ?'' ಎಂದು ಕೇಳಿದೆ. ''ಜೀವ ಉಳಿದರೆ ಸಾಕೆಂದು ಓಡಿ ಬರುವ ಭರದಲ್ಲಿ ಆ ಹೆಣವನ್ನು ಹೊರಲಿಕ್ಕೆ ನನಗೇನು ಜೀವ ಭಾರವಾಗಿದೆಯೇ? ನಾನು ಬರಿಂಕವನ್ನು ಅಲ್ಲೇ ಪೊದೆಗೆ ಎಸೆದು ಬಂದಿದ್ದೇನೆ'' ಎಂದನು. ನನಗೂ ಓಟದೆತ್ತಿನಂತೆ ಓಡಿ ಬಂದು ಶ್ವಾಸವು ತಿದಿಯೊತ್ತಿನಿಂದ ಹೊರಡುವಂತೆ ಆಗುತ್ತಿತ್ತು. ಇನ್ನು ಪುತ್ತೂರಿಗೆ ಹೋಗದೆ ಅರ್ಧ ದಾರಿಯಿಂದ ಮನೆಗೆ ಬಂದುದಕ್ಕೆ ಕಥೆ ಕಟ್ಟಿಯೇ ಆಗಬೇಕಷ್ಟೆ ! ಹೊಡೆದುದು ಹೆಬ್ಬಾವನ್ನಾದರೆ ಚಿಂತಿಲ್ಲ. ಸಂಕವಾಳನಾದರೆ ತುಳು ನಾಡವ, ಬಂಟ, ನಾಗಾರಾಧಕರ ಕುಟುಂಬಿಕನಾದ ನಾನು ಮಾಡಿದುದು ಅಕ್ಷಮ್ಯ ಅಪರಾಧ ಇದಕ್ಕೆ ಪ್ರಾಯಶ್ಚಿತ್ತವಾಗಿಯೇ ತೀರಬೇಕು. ತಂದೆಯವರಿಗೆ ಇದು ಗೊತ್ತಾದರಂತೂ ಹೇಳುವುದೇ ಬೇಡ. ನನ್ನ ಗುಣನಾಮ ನೂರಕ್ಕೆ ಇದೊಂದು

ಎದ್ದು ಕಾಣುವ ತಲೆಬರಹವಾದೀತು. ನನ್ನ 'ಮಂಗಲ ಗುಣಗಾನ'ವನ್ನು ಬಂದು ಹೋದವರ ಕೂಡೆ ಮಾಡದಿರುವರೇ? ನಿಷ್ಕಲಂಕ ಕುಟುಂಬ ಒಂದಕ್ಕೆ ಮಾಯದ ಕಲಂಕವನ್ನು ಬಳಿದ ಸಾಹಸಿ ಎಂಬ ಬಿರುದು ದಕ್ಕಿದ್ದೇ ಎಂದುಕೊಂಡು ಸೋಮಪ್ಪನೊಡನೆ ಮೇಳದ ಹುಲಿಗಳನ್ನು ನೋಡಿ ಹಿಂದಿರುಗಿ ಬಂದೆವೆನ್ನಬೇಕೆಂದೂ, ತಪ್ಪಿಯೂ ಯಾರೊಡನಾದರೂ ಈ ವಿಚಾರವನ್ನು ಹೇಳಿದರೆ ಪರಿಣಾಮ ಒಳಿತಾಗದೆಂದೂ ಹೇಳಿ ಹೆದರಿಸಿದೆ. ಮನೆಗೆ ಬಂದು ನನ್ನ ಸುಳ್ಳಿನ ಬಂಡವಾಳಕ್ಕೆ ಮತ್ತೊಂದು ದಿವ್ಯರತ್ನವನ್ನು ಸೇರಿಸಿ ಸತ್ಯವೆಂದೇ ಮನೆಯವರಿಗೆ ಮನದಟ್ಟಾಗುವಂತೆ ಮೇಳದ ಹುಲಿಗಳನ್ನು ಕಂಡ ಪ್ರಸಂಗವನ್ನು ಉಪ್ಪು, ಖಾರ ಬಳಿದು ಹೇಳಿ ಮಲಗಿದುದಾಯಿತು. ದುಃಸ್ವಪ್ನದಿಂದ ರಾತ್ರಿ ಇಡೀ ಹಾಸಿಗೆಯಲ್ಲಿ ಹೊರಳುವುದೇ ಕೆಲಸ.

ಮಾರನೆಯ ದಿನ ಪುತ್ತೂರಿಗೆ ಉಪ್ಪಿನಂಗಡಿಯಾಗಿ ಹೋಗುವುದೆಂದು ಹೇಳಿ ಮನೆಯಲ್ಲಿಯೇ ಉಳಿದೆ. ಮಧ್ಯಾಹ್ನಕ್ಕೆ ವರ್ತಮಾನ ಬಂತು. ರೆಂಜಲಾಡಿ ಬೀಡಿನ ಬಳಿ ಕಳೆದ ರಾತ್ರಿ ಲೈಟಿಗೆ ಹೋದ ಯಾರೋ ದುರಾತ್ಮರು ಬನದಲ್ಲಿ ವಾಸಿಸುತ್ತಿದ್ದ ತೆಂಗಿನ ಮರದ ಗಾತ್ರದ ಸಂಕವಾಳವನ್ನು ಗುಂಡಿಕ್ಕಿ ಕೊಂದಿದ್ದಾರೆಂದು !

ಅದು ದೈವದೇವರ ಮೇಲಿನ ಅತಿಶ್ರದ್ಧೆಯ ಕಾಲ. ಅದೂ ರೆಂಜಲಾಡಿ ಬೀಡಿನ ಆಸ್ತಿಯಲ್ಲಾದ ಅನಾಹುತ! ಪ್ರಾಯಶ್ಚಿತ್ತ ಮಾಡದಿದ್ದರೆ ಆ ಭೂಮಿಗೆ ದೋಷವೆಂಬ ಮನೋಭಾವನೆಯ ಕಾಲ. ರೆಂಜಲಾಡಿ ಬೀಡಿನ ಯಜಮಾನರು ಆ ಕಾಲದಲ್ಲಿ ಊರಿನ ದೊಡ್ಡ ಜಮೀನುದಾರ ಜೈನರು. ಶಾಸ್ತ್ರೀಯ ರೀತಿಯಲ್ಲಿ ಗುಳಿ ತೋಡಿಸಿ ಸಂಕವಾಳನ ಹೆಣಕ್ಕೆ ಹೊಸ ವಸ್ತ್ರವನ್ನು ಹೊದಿಸಿ ದಫನ ಕಾರ್ಯವನ್ನು ಪುರೋಹಿತರ ನೇತೃತ್ವದಲ್ಲಿ ಮಾಡಿಸಿದರಂತೆ. ನಾನು ಮಾಡಿದ ಪಾಪ ಕಾರ್ಯಕ್ಕೆ ಹಾವಿನ ಸೂತಕವನ್ನು ಅವರು ಆಚರಿಸಿ ನೂರಾರು ಜನಕ್ಕೆ ಭೂರಿ ಭೋಜನವನ್ನು ಕೊಟ್ಟು ಪ್ರಾಯಶ್ಚಿತ್ತ ಮಾಡಿಸಿಕೊಂಡರೆಂದು ಊರವರಿಂದ ತಿಳಿದೆ. ಆಲಿಗೆ ಜ್ವರ ಬಂದಿತೆಂದು ಮಾಲಿನಿಗೆ ಮದ್ದು ಕುಡಿಸಿದಂತಾಯಿತು. ನಾನು ಮಾತ್ರ ನನ್ನ ದಿನಚರಿಯಲ್ಲಿ ಈ ವಿಚಾರವನ್ನು ನಮೂದಿಸದೆ ಹಾಳೆಯಲ್ಲಿ ಹರಿಯುವ ಹಾವೊಂದರ ಚಿತ್ರವನ್ನು ಬಿಡಿಸಿ ತೆಪ್ಪಗಿದ್ದೆ.

ಬ್ರಿಟಿಷ್ ಕುಟುಂಬದೊಡನೆ ಕುದುರೆಮುಖದಲ್ಲಿ

ಬಾಲ್ಯ ಕಳೆದ ತಾರುಣ್ಯವುದಿಸಿದ ಕಾಲ. ವಯಸ್ಸೇರುತ್ತ ಬಂದಂತೆ ಬೇಟೆಯ ಹುಮ್ಮಸ್ಸು ಉಕ್ಕುತ್ತಿತ್ತಲ್ಲದೆ ಬೌದ್ಧಿಕ ಬೆಳವಣಿಗೆಯಾಗಲೀ ಜ್ಞಾನಾಸಕ್ತಿಯಾಗಲೀ ನನ್ನಲ್ಲಿ ಹೆಚ್ಚಾಗಲಿಲ್ಲ. ಇದನ್ನು ಕಂಡ ಹಿರಿಯರು ಬುದ್ಧಿ ಹೇಳಿ ಫಲವಿಲ್ಲವೆಂದು ನನ್ನಷ್ಟಕ್ಕೇ ನನ್ನನ್ನು ಬಿಟ್ಟಿದ್ದರು. ನನ್ನ ಬೇಟೆಯ ಕಳ ಹಿಂದೆ ಉಪ್ಪಿನಂಗಡಿಯಿಂದ; ಸುಬ್ರಹ್ಮಣ್ಯದ ಕುಮಾರ ಪರ್ವತಕ್ಕೆ ಸೀಮಿತವಾಗಿತ್ತು. ದಿನ ಕಳೆಯುತ್ತಾ ಹೋದಂತೆ ಅದು ಪಶ್ಚಿಮ ಘಟ್ಟದ ತಪ್ಪಲು, ಬೆಳ್ತಂಗಡಿ, ಬಂಗಾಡಿ, ಎಳನೀರುಘಾಟಿಯಿಂದ ಸಂಸೆ, ಕಡ್ತಿಕಲ್ಲಘಾಟಿ, ಹಿರಿಮಾರ ಹುಪ್ಪೆ, ನಸೆ ಹಡ್ಲು, ಕುದುರೆಮುಖ; ಕಾರ್ಕಳದ ಮುನಿಯಾಲ, ವರಂಗ, ಹೆಬ್ರಿ, ಮುಡುಬಾ ಇಲ್ಲಿಯ ತನಕ ವಿಸ್ತರಿಸಿದ್ದು ದಕ್ಷಿಣ ಕನ್ನಡದ ಬೇಟೆಗಾರರ ಕೂಟಕ್ಕೆ ನಾನಿಲ್ಲದೆ ಬೇಟೆಯಾಡುವುದೇ ದುಸ್ಸಾಧ್ಯವೆಂಬ ಮಟ್ಟಕ್ಕೆ ಬಂದಾಗ, ಮನೆಯವರಿಗೆ ಈತ ಇನ್ನು ಕೈಗೆ ಬರುವುದಿಲ್ಲವೆಂಬ ನಿರ್ಧಾರ ವಾಯಿತು. ನನ್ನ ಹಿಂದಿನಿಂದ ತಂದೆಯವರು, ಹಿರಿಯರು 'ಇವನನ್ನು ಹೀಗೆಯೇ ಬಿಟ್ಟರೆ ಹೇಗೆ?' ಎಂಬ ಎದೆಗುದಿಯಲ್ಲಿ, ಆಗತಾನೆ ಇಂಗ್ಲೆಂಡಿನಿಂದ ತಮ್ಮ ವೈದ್ಯ ಕೀಯ ವೃತ್ತಿಯಲ್ಲಿ ಪರಿಣತರಾಗಿ ಬಂದು ಮದ್ರಾಸಿನಲ್ಲಿದ್ದ ನನ್ನ ಮಾವ ಡಾ|ಕೆ.ಎಂ. ರೈ ಇವರಿಗೆ ನನ್ನ ಚಟುವಟಿಕೆಯ ಕುರಿತು ಬರೆದು ತಿಳಿಸಿದರೆಂದು ಕಾಣುತ್ತದೆ. ಅವರು ಬೆಳ್ಳಾರೆಗೆ ಬಂದರು. ನನ್ನನ್ನು ಕರೆಸಿ ಅವರು ಕೆಲವು ವರ್ಷಗಳ ಹಿಂದೆ ಬೆಳ್ತಂಗ ಡಿಗೆ ಸಮೀಪದ 'ನಾವೂರ' ಸುಳ್ಯೋಡಿಯಲ್ಲಿ ಮಾಡಿದ್ದ ದೊಡ್ಡ ಆಸ್ತಿಯ ಉಸ್ತುವಾ ರಿಗೆ ನಾನು ಹೋಗಬೇಕೆಂದು ತಿಳಿಸಿದರು. ಆ ಆಸ್ತಿ ಅಲ್ಲಿ ಹಡಿಲು ಬಿದ್ದಿರುವುದರಿಂದ ಅದನ್ನು ಸಾಗುವಳಿಗೆ ಬೇಕಾದಂತೆ ಜೀರ್ಣೋದ್ಧಾರ ಮಾಡುವ ಹೊಣೆಯನ್ನು ನನ್ನ ಮೇಲೆ ಹೊರಿಸಿದರು. ಅದಕ್ಕೆ ಬೇಕಾದ ಆರ್ಥಿಕ ಸೌಲಭ್ಯದ ಹೊಣೆಯನ್ನು ತಾವೇ ಹೊತ್ತರು.

ನಾವು ಅಳಿಯಕಟ್ಟನ್ನು ಆಚರಿಸುವವರಾದುದರಿಂದ ಆ ಕಾಲದಲ್ಲಿ ಮಾವನ ಆಸ್ತಿಯು ಅಳಿಯಂದಿರಿಗೆ. ಅಲ್ಲದೆ ಮಾವನ ಘನವ್ಯಕ್ತಿತ್ವಕ್ಕೆ ಹೆದರಿ 'ಇಂತಹ ಬಹು ಭಾರವನ್ನು ಹೊರಲಾರೆ' ಎಂದು ಹೇಳುವ ಧೈರ್ಯವೂ ನನಗಿರಲಿಲ್ಲ. ಅಷ್ಟಲ್ಲದೆ ಇದು ಮಲೆನಾಡು. ಆಗಿನ ಮದ್ರಾಸು ಸಂಸ್ಥಾನದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಒಂದನೇ ಮಲೆನಾಡ ಗ್ರಾಮ. ಇದು, ನಾನು ಈ ಹಿಂದೆ ವಿವರಿಸಿದ

ಉಪ್ಪಿನಂಗಡಿ ಆಸುಪಾಸಿಗಿಂತಲೂ ವಿಪರೀತವಾಗಿ ವನ್ಯ ಮೃಗಗಳು ಇದ್ದ ಊರು. ಇಂಥಲ್ಲಿ ನೆಲೆಯೂರಬೇಕೆಂಬುದನ್ನು ಕೇಳಿ ಸಂತಸವಾಯಿತು. ಮಾವನವರು ತಂದೆಯವರಿಗೆ ಹೇಳಿ ಕಳುಹಿಸಿ ಬೆಳ್ಳಾರೆಯಿಂದಲೇ ಗಾಡಿ, ಗಾಡಿ ಸಾಮಾನಿನೊಂದಿಗೆ ನಮ್ಮ ಚಿಕ್ಕಪ್ಪ ನಾರಾಯಣಶೇಖರ ಮೇಲುಸ್ತುವಾರಿಯಲ್ಲಿ ನನ್ನನ್ನು ನಾವೂರಿಗೆ ಕಳುಹಿಸಿಯೇ ಬಿಟ್ಟರು. ನನಗೆ ಆಗ ಪ್ರಾಯ ಹದಿನೆಂಟು, ಹತ್ತೊಂಬತ್ತು ಇರಬಹುದು.

ಬೆಳ್ತಂಗಡಿಯಿಂದ ನಾವೂರಿಗೆ ಏಳು ಮೈಲು. ಬೆಳ್ತಂಗಡಿಯಲ್ಲಿ ಆಗ ಕೆಲವೇ ಅಂಗಡಿಗಳು. ಸಂಕವನ್ನು ದಾಟಿದರೆ ಬೆಳ್ತಂಗಡಿ, ಲ್ಯಾಲ, ನಡ, ನಾವೂರ. ಈ ಗ್ರಾಮಗಳನ್ನು ದಾಟಿ ನಮ್ಮ ಆಸ್ತಿಯ ನಾವೂರು ಸುಳ್ಯೋಡಿಯನ್ನು ಮುಟ್ಟಬೇಕು. ಕುದುರೆಮುಖಕ್ಕೆ ವಿಹಾರಾರ್ಥ ಹೋಗುವ ಪ್ರಯಾಣಿಕರಿಗಾಗಿ ಕೊರಕಲು ಗಾಡಿಯ ಮಾರ್ಗ. ಇಕ್ಕೆಡೆಗಳಲ್ಲಿ ಹಾಲೆ, ಮರುವ, ಮಾವು, ಧೂಪವೇ ಮೊದಲಾದ ದೈತ್ಯಾಕೃತಿಯ ಮರಗಳ ನೆರಳಿನಿಂದ ಹಗಲೋ ಕತ್ತಲೆಯೋ ಎಂಬ ಭ್ರಮೆಯಾಗುವಂಥ ವಾತಾವರಣ, ನಮ್ಮೂರು ಕಡಬದಲ್ಲಾದರೆ, ಕಣ್ಣಿಗೆ ಕಾಣುವಷ್ಟು ದೂರವಾದರೂ ಒಂದೊಂದು ಮುಳಿಹುಲ್ಲಿನ ಮನೆಗಳಿದ್ದವು. ಇಲ್ಲಿ ಮೈಲಿಗೊಂದು ಮನೆಯೂ ಮಾರ್ಗದ ಬದಿಯಲ್ಲಿ ಕಾಣಸಿಗುವುದು ಅಪೂರ್ವ. ಸೂರ್ಯನ ಬೆಳಕನ್ನು ಕಾಣದ ಕೊರಕಲು ದಾರಿಯು ಜೌಗು. ಕಾಲಿಟ್ಟಲ್ಲಿ ನೀರೊಸರುವಂತೆ ಇದ್ದುದರಿಂದ ಇಂಬಳದ ಹಾವಳಿಯು ವಿಪರೀತ. ಇದಲ್ಲದೆ ವಿವಿಧ ಜಾತಿಯ ವಿಷ ಹಾವುಗಳೂ ಬಹಳ. ಎಂತೂ ಗಾಡಿಯೊಂದಿಗೆ ಬಂದು ನಾವೂರನ್ನು ಮುಟ್ಟಿಯಾಯಿತು. ಈ ಹಿಂದೆಯೆ ನಮ್ಮ ಭಾವ ಡಾ। ಅಧ್ಯಂತಾಯರ ಉಸ್ತುವಾರಿಯಲ್ಲಿದ್ದ ಈ ಆಸ್ತಿಯಲ್ಲಿ ನಮ್ಮ ವಾಸ್ತವ್ಯಕ್ಕೆ ತಕ್ಕುದಾದ ಬಂಗಲೆಯು ಸಿದ್ಧವಾಗಿಯೇ ಇತ್ತು. ಇಲ್ಲಾದರೆ ಹಗಲು ಹೊತ್ತಿನಲ್ಲೂ ಮನೆಯಲ್ಲಿದ್ದೇ ಹಿಂಡುಹಿಂಡು ಜಿಂಕೆ, ಕಡವೆ, ಕಾಡುಕೋಣಗಳನ್ನು ಕಾಣುವುದು ಅಪೂರ್ವವಲ್ಲ. ಹಾಗಾಗಿ ನನ್ನ ಉತ್ಸಾಹಕ್ಕೆ ಎಡೆಯಿಲ್ಲ. ಆದರೆ ಇಲ್ಲಿ ಬೆಳಗ್ಗೆ ವಿಪರೀತ ಚಳಿ. ಮಧ್ಯಾಹ್ನಕ್ಕೆ ಸೂರ್ಯನ ಪ್ರಖರವಾದ ಬಿಸಿಲು, ಕತ್ತಲೆಗೆ ಸಹಿಸಲಸಾಧ್ಯವಾದ ಸೆಕೆ. ಇದು ಒಂದು ದಿನದ ಇಪ್ಪತ್ತನಾಲ್ಕು ಗಂಟೆಯಲ್ಲಿ ಅನುಭವಿಸಬೇಕಾದ ಹವಾ ಮಾನಗಳ ವೈವಿಧ್ಯವಾಗಿತ್ತು. ಕಾರಣವೆಂದರೆ ಎದುರಿಂದ ಕಾಣುವ ಕುದುರೆಮುಖ, ಹಿಂದಿನಿಂದ ಆವರಿಸಿ ನಿಂತಿರುವ ಜಮಲಾಬಾದು ಕಲ್ಲಿನ ಬಂಡೆ. ನಮ್ಮ ಈ ನಾವೂರು ಸುಳ್ಯೋಡಿ ಆಸ್ತಿಯ ವ್ಯಾಪ್ತಿಯು ನೂರು ಎಕ್ರೆಯಾಗಿದ್ದರೆ ಇಲ್ಲಿನ ಭೂತಗಳು ನೂರವೊಂದು ಎಂದು ಪ್ರತೀತಿ! ವರ್ಷಾವಧಿ ಕೋಲ, ತಂಬಿಲವಾಗಲೇಬೇಕೆಂದು ನಿಯಮ. ಆದರೆ ಭೂಮಿಯು ಹೇರಳವಾಗಿದ್ದರೂ, ಆಗ ಕೃಷಿಯ ಉತ್ಪತ್ತಿ ಬಹಳ ಕಡಿಮೆ ಸಿಗುತ್ತಿತ್ತು. ಅದಾದರೂ ಬಿದಿರ ಮೆಳೆಯಿಂದ ಆವರಿಸಿತ್ತು. ಗದ್ದೆಯನ್ನು ಸಾಗುವಳಿ ಮಾಡಬೇಕಿದ್ದರೆ ಬಿದಿರ ಮೆಳೆಯನ್ನು ಕಡಿದು ಸುಟ್ಟೇ

ಆಗಬೇಕು. ಹೀಗೆ ಕೂತಲ್ಲಿಯೇ ಬೇಟೆಗೆ ವಿಪುಲ ಅವಕಾಶ! ಜೀವನೋಪಾಯವು ಅಲ್ಲಿಂದಲೇ ಎಂಬ ಪರಿಸ್ಥಿತಿಯಲ್ಲಿ ನಾವೂರಲ್ಲಿ ಟಿಕಾಣಿ ಹೂಡಿದ್ದಾಯಿತು. ಆಸುಪಾಸಿನವರ ಗುರುತು ಪರಿಚಯವೂ ಆಯಿತು. ಮದ್ರಾಸಿನಿಂದ ಮಾವಯ್ಯನವರು ಪೆಟ್ಟಿಗೆ ಪೆಟ್ಟಿಗೆ ತೋಟಾ ಕಳುಹಿಸುತ್ತಿದ್ದರು. ಬೆಳ್ತಂಗಡಿಯಲ್ಲಿ ನನಗೆ, ಪ್ರಾರಂಭದಲ್ಲಿ ಪರಿಚಿತರಾದವರು ಮುಗ್ಗದ ಕುಂಜಿರ ಪೂಜಾರಿ, ಕೃಷ್ಣಪ್ಪ ಪೂಜಾರಿ- ಇವರ ಮಾವ ನಾರಣಪ್ಪ ಪೂಜಾರಿ. ಇವರ ಸಖ್ಯದಿಂದ ನಾನು ಬೇಕಾದಾಗ ಇವರ ತೋಟಾ ಕೋವಿಗಳಲ್ಲಿ ಪಾಲು ಪಡೆಯುವ ಒಬ್ಬ ಪಾಲುಗಾರನೇ ಆದೆ. ದಿನಗಳು ಉರುಳಿದವು. ವರುಷವು ಸಂದಿತು. ಆಸುಪಾಸಿನ ಕಳಸಾ ಸಂಸೆಯ ತನಕ ನಿಕಟ ಪರಿಚಯ ಬೆಳೆಯಿತು.

ಬೆಳ್ತಂಗಡಿಯಿಂದ ನಾವೂರನ್ನು ಮುಟ್ಟಬೇಕಿದ್ದರೆ ಹಗಲೂ ಜೀರುಂಡೆಗಳ 'ಟಿರಿ ಟಿರಿ' ರಾಗದ ಸ್ವಾಗತ ಸ್ವಾಭಾವಿಕ. ಹಳ್ಳಿಗಳಲ್ಲಿ ಕೂಡಾ ಮನೆಗಳು ವಿರಳ. ನಾವೂರು ಗ್ರಾಮದಲ್ಲಿ ಮೈಲಿಗೊಂದು ಮನೆಯಿದ್ದರೆ ನಾವೂರ ಬಂಗಲೆ ಕಾಸ್ರೋಳಿಯನ್ನು ಕಳೆದ ಅನಂತರ, ಮೂರು ಮೈಲಿಗಳಿಗೊಂದರಂತೆ ಗೊಂಡಾರಣ್ಯದಲ್ಲಿ ಕೆಲವು ಮಣ್ಣಿನ, ತಡಿಕೆಯ ಮನೆಗಳು. ಇದರ ಆಸುಪಾಸಿನಲ್ಲಿ ಅವರ ಸಾಗುವಳಿ ಗದ್ದೆಗಳು. ಒಂದೆರಡು ತೆಂಗು ಕಂಗು ಮರಗಳು. ಕೆಲವು ಮನೆಗಳ ಮುಂಭಾಗದಲ್ಲಿ ಕೇಂಕಣಗಳ 'ಕಕ್,ಕಕ್,ಕಕ್', ಕಾಡುಕೋಳಿಗಳ ಕೆಲೆತ. ಏಲಕ್ಕಿ, ಬಾಳೆ, ನಿಂಬೆಯ ಗಿಡಗಳು ಬೆಳೆದು ನಿಂತು ಕಣ್ಣಿಗೆ ಹಬ್ಬವನ್ನುಂಟು ಮಾಡುವ ನೋಟ. ಸಮತಟ್ಟು ಮಾಡಿದ ಜಾಗವನ್ನು ಬಿಟ್ಟರೆ ಬಾನೆತ್ತರಕ್ಕೆ ತಲೆಯೆತ್ತಿ ನಿಂತ ಜಾತಿಯ ಮರಗಳು. ಇದರೆಡೆಯನ್ನು ಆವರಿಸಿ ನಡೆಯಲು ಸಾಧ್ಯವಿಲ್ಲದಂತೆ ಬೆಳೆದು ನಿಂತ ಬಿದಿರ ಹಿಂಡಿಲು. ಮನೆಯ ಅಂಗಳಕ್ಕೆ ಹತ್ತಿರವಾಗಲೇ ಕಾಣಬೇಕು ಮನೆಯ ನಾಯಿಗಳನ್ನು. ನಮ್ಮಂಥ ನಾಗರಿಕರನ್ನು ಕಂಡರೆ ಬೆದರಿ ಮನೆಯ ಒಳಗೇ ನುಗ್ಗಲು ಹವಣಿಸುವ ಮಲೇರಿಯಾ ಪೀಡಿತ ಗಂಡಸರು. ಸ್ವಲ್ಪ ಧೈರ್ಯದಿಂದ ಬಂದವರನ್ನು ವಿಚಾರಿಸಬೇಕಿದ್ದರೆ ಮನೆಯ ಹೆಂಗಸರೇ ಆಗಬೇಕಿತ್ತು! ಹೆಂಗಸರಿಗೆ ಮಲೇರಿಯಾ ಜ್ವರವು ಅಷ್ಟಾಗಿ ಅಂಟುತ್ತಿರಲಿಲ್ಲ. ಕಾರಣ ಅವರ ದೇಹ ಪ್ರಕೃತಿಯ ಲಕ್ಷಣವಾಗಿರಬೇಕು. ಇವರ ವೇಷವನ್ನು ನೋಡಿದರೆ ಚರಿತ್ರೆಯಲ್ಲಿ ಕಲಿತ ಹಿಂದಿನ ತೋಡರ ನೆನಪು ಬರುತ್ತಿತ್ತು. ಮೊಣಕಾಲ ಮೇಲೆ ದಟ್ಟಿಯುಟ್ಟು ಅದರ ಮೇಲೆ ಎದೆ ಮುಚ್ಚುವಂತೆ ಸೊಂಟಕ್ಕೂ ಕುತ್ತಿಗೆಗೂ ಗೆಂಟಿಯನ್ನು ಬಿಗಿಯುತ್ತಿದ್ದರು. ಬಾಚದೆ ಕೆದರಿದ ತಲೆ, ಕಿವಿಯಲ್ಲಿ ಸುರುಳಿ ಮಾಡಿದ ತಾಳೆಗರಿಯ ಓಲೆ, ಕೈತುಂಬ ಕಂಚಿನ ಬಳೆ. ಒಂದೋ ಎರಡೋ ಹಿಂದೆ ಕೆಂಪಾಗಿದ್ದರೂ ಈಗ ಕೈಗೆ ತೊಡಿಸಿ ಕಾಲ ಕಳೆದುದರಿಂದ ಕಪ್ಪು ಬಣ್ಣಕ್ಕೆ ತಿರುಗುತ್ತಿರುವ- ದಪ್ಪನಾದ ಮಣ್ಣಿನ (ಗಾಜಿನ) ಬಳೆ. ಮುಖವು ಲಕ್ಷಣವಾಗಿದ್ದರೂ-

ಮೀಯದೆ, ಕೆದರಿದ ತಲೆಯಿಂದ- ಕಾಣಲು ಕೊಳಕಾದ ದೇಹ. ಇನ್ನು ಗಂಡಸರು? ಪುರಿಹಗ್ಗದ ನೇವಳ, ನಾಲ್ಕು ಬೆರಳು ಅಗಲ ಗೇಣುದ್ದ ಇಳಿಬಿಟ್ಟು ಲಂಗೋಟಿ ಸೊಂಟಕ್ಕೆ ಸುತ್ತಿದ ತೊಡಂಕಿಗೆ ನೇತುಬಿಟ್ಟ ನಾರೆಕತ್ತಿ. ಮಾತುಮಿತ. ಆದರೂ ಅವ ರನ್ನು ಬೇಟೆಮಾಡಲು ಹೋದವರಿಂದ ಅಪಾಯವಿಲ್ಲವೆಂದಾದರೆ ತುಂಬು ಸಹ ಕಾರ, ಸಮ್ಮಾನ ಸಿಗುತ್ತಿದ್ದುವು. ಸಮ್ಮಾನವೆಂದರೆ ಇವರೇ ಇಳಿಸಿದ ಬೈನಿ ಮರದ ಕಳ್ಳು! ನೆಂಜಿಕೊಳ್ಳಲು ಉಪ್ಪು ಹಾಕಿ ಬೇಯಿಸಿದ ನರೆ, ಈಯೆರು ಗಡ್ಡೆಗಳು. ತುಸು ಮುಂದುವರಿದ ಮಲೆಕುಡಿಯನಾದರೆ ಹೆಂಡದ ಸತ್ಕಾರ ನೀಡುತ್ತಿದ್ದ. ಇದೊಂದು ತರದ ಹುಳಿಯಲು ಒಲೆಯ ಮೇಲಿಟ್ಟ ಹಬೆಗಿಡದ ಅಮಲು ಪಾನೀಯ. ಕುಡಿ ಯಲು ಬಲು ರುಚಿಕರ. ಇದನ್ನು ಅವರು ತಯಾರಿಸುತ್ತಿದ್ದ ಬಗೆ ಹೀಗೆ- ಬತ್ತವನ್ನು ಬೆರಳುದ್ದ ಮುಂಗೆ ಬರಿಸಿ ಅದನ್ನು ಬಿಸಿಲಲ್ಲಿ ಒಣಗಹಾಕಿ ಕುಟ್ಟಿ ಹೊಟ್ಟು ತೆಗೆದು ಸೇರಿಸಿ ಬಳ್ಳನೀರು ಸೇರಿಸಿ ಒಲೆಯ ಮೇಲಿಟ್ಟು ಚೆನ್ನಾಗಿ ಬೇಯಿಸಿದ ಗಂಜಿಯ ಅಂಬಲಿಯನ್ನು ತಂಪಾದ, ಬೆಳಕು ಸೋಕದ, ಜಾಗದಲ್ಲಿ ಬಾಯಿ ಕಟ್ಟಿ ನಾಲ್ಕು ದಿನ ಇಟ್ಟರೆ ಅದು ಹುಳಿತು ಮೇಲೆ ಬರುವ ರಸವೇ ಈ ಹೆಂಡ. ಇದು ತುಂಬ ಹುಳಿ ಸಿಹಿಯೊಂದಿಗೆ ಕೂಡಿ ದ್ರಾಕ್ಷಾರಸಕ್ಕಿಂತಲೂ ರುಚಿಕರವಾದ, ಹದ ಅಮಲಿನಿಂದ ಕೂಡಿದ ಪಾನೀಯ. ಇನ್ನೂ ಏನಾದರೂ ಮಾಂಸ, ಮೀನು ಇದ್ದರೆ ಬೇರೆಯೇ ಸರಾಯಿ ಸರಬರಾಜು. ಇದನ್ನು ಯಾವ ಖರ್ಚಿಲ್ಲದೆಯೆ ಮಾಡಬಹುದು ಎಂಬುದು ಅವರ ಅಂಬೋಣ. ಎಲ್ಲಾ ವಿಷಯದಲ್ಲಿಯೂ ನಮ್ಮನ್ನು, ಅಂದರೆ ಹೋದವರನ್ನು, ಅವರ ವಿಶ್ವಾಸದ ಅಳವಿಗೆ ತೆಗೆದುಕೊಳ್ಳುತ್ತಿದ್ದರೂ ಈ ಪಾನೀಯ ಗಳನ್ನು ಮಾಡುವ ಗುಟ್ಟನ್ನು ಬಿಟ್ಟುಕೊಡುತ್ತಿರಲಿಲ್ಲ. ಖರ್ಚಿಲ್ಲದೆ ಮಾಡಲಾಗುವ ಬೆಲ್ಲ, ಬಾಳೆಹಣ್ಣು, ಅನನಾಸು ಇವೇ ಮೊದಲಾದ ಭಟ್ಟಿಗೆ ಬೇಕಾದ ಸಾಮಾನುಗಳ ಅಗತ್ಯವಿಲ್ಲದೆ ಬರೇ ನಾಲ್ಕು ಹಿಡಿ ಮರದ ಬಜ್ಜದ ತೊಗಟೆ, ಒಂದು ಸೇರು ಊರ ಬೆಲ್ಲ, ಇವಿಷ್ಟನ್ನೇ ಆರು ಕೊಡ ನೀರಿನಲ್ಲಿ ಹುಳಿಯಲು ಇರಿಸಿದರೆ ಮೂರು ಕೊಡ ಸರಾಯಿ ದೊರೆಯುತ್ತಿತ್ತು ಎನ್ನಲಾಗುತ್ತಿದ್ದ ಅಂದಿನ ಅವರ ಸರಾಯಿ ಮಾಡುವ ಕ್ರಮವನ್ನು ಅವರು ಯಾರಿಗೂ ತಿಳಿಸುವವರಲ್ಲ. ಸರಾಯಿ ತಯಾರಿಯ ಈ ರೀತಿ ಅಲ್ಲಿನ ಮಲೆಕುಡಿಯರಿಗೆ, ಅವರ ನೆರೆಕರೆಯ ಕೆಲವೇ ಮಂದಿಗೆ ಮಾತ್ರ ಗೊತ್ತಿದ್ದ ಗುಟ್ಟು. ನನಗೂ ಈ ಗುಟ್ಟನ್ನು ಹೇಳಿ ಕೊಡಿ ಎಂದರೆ ''ಕಷ್ಟಕರವೂ ಮಾನವಿಲ್ಲದ್ದೂ ಆದ ಈ ಕೆಲಸ ನಿಮಗೇಕೆ ? ನಿಮಗೆ ಬೇಕಿದ್ದರೆ ಆಳುಗಳನ್ನು ಕಳುಹಿಸಿ. ಪಾತ್ರೆ ಕಳು ಹಿಸಿ. ಬೇಕಿದ್ದಷ್ಟು ನಾವೇ ಕಳುಹಿಸುತ್ತೇವೆ'' ಎಂದು ನಮ್ಮ ಬಾಯಿ ಮುಚ್ಚಿಸುತ್ತಿ ದ್ದರು. ಅಂದಿನ ಮಲೆ ಕುಡಿಯರು ವಿಶ್ವಾಸಾರ್ಹರು. ನಾರೆಕತ್ತಿಯನ್ನು ಹಿಡಿದು ಬೆಂಗಾವಲಾಗಿ ಒಬ್ಬ ಮಲೆಕುಡಿಯ ಬರುತ್ತಿದ್ದರೆ ಮುಂದೆ ಹೋಗುವವನಿಗೆ

ಮೃಗದ ಭೀತಿಯಾಗಲೀ, ವಿಷದ ಹಾವಿನ ಭಯವಾಗಲೀ ಬೇಕಿಲ್ಲ. ಇಂತಹ ಸಂದರ್ಭದಲ್ಲಿ, ಬೆಂಗಾವಲಿನ ಮಲೆಕುಡಿಯರೇ ಮುಂದಾಗಿ ಅಪಾಯಕ್ಕೆ ಬಲಿಯಾದ ಪ್ರಸಂಗಗಳು ನನ್ನ ಅನುಭವದಲ್ಲಿ ಹಲವು. ವಿಶ್ವಾಸಘಾತಕನಿಗೆ ಇವರು ಮರಣ ಭಯವಿಲ್ಲದೆ ಪ್ರತೀಕಾರ ಮಾಡುತ್ತಿದ್ದರು. ಶೀಲದ ವಿಚಾರದಲ್ಲಿ ಹೆಂಗಸರದು ತುಸು ಸಡಿಲ ಸ್ವಭಾವ. ಇದನ್ನು ಯಾರಾದರೂ 'ಹೊರಗಿನಿಂದ ಬಂದವನು ಉಪಯೋಗಿಸಿಕೊಂಡುದನ್ನು ಮನೆಯ ಗಂಡಸು ತಿಳಿದನೆಂದಾದರೆ ಅವನ ನಾರೆಕತ್ತಿಯ ತಿವಿತಕ್ಕೆ ಬಲಿಯಾದಂತೆಯೆ ! ಹೆಣ ಬಿದ್ದರೆ ಸದ್ದಿಲ್ಲದೆ ಸಮೀಪದಲ್ಲಿ ಹರಿಯುವ ನೇತ್ರಾವತಿಯಲ್ಲಿ ಕಲ್ಲು ಕಟ್ಟಿ ಮುಳುಗಿಸಿದರೆ ಆಯಿತು. ಆ ಮಲೆನಾಡ ಕೊಂಪೆಗೆ ಯಾರು ಹುಡುಕಿಕೊಂಡು ಹೋಗುವವರು? ವಿಶ್ವಾಸ ತೋರಿದರೆ ಅವನು ತನ್ನ ಮನೆಯ ಹೆಂಗಸನ್ನೂ, ಹೋದ ಅತಿಥಿಯನ್ನೂ ಬಿಟ್ಟು ಬೈನಿಯ ಕಳ್ಳನ್ನು ತೆಗೆಯಲೋ ಅತಿಥಿಗೆ ಸಮ್ಮಾನ ಮಾಡಲು ಜೇನು ತೊಟ್ಟಿಯನ್ನು ಹುಡುಕಲೋ, ಸಾರ್ತಿಯ ಬೇಟೆಗೆ ತನ್ನ ಬಿರುಪಗರಿಯನ್ನು ಹಿಡಿದುಕೊಂಡು ಸಿಗಬಹುದಾದ ಬರಿಂಕ, ಮುಳ್ಳುಹಂದಿ, ಅಲಂಕು, ಮನುಷ್ಯ ಗಾತ್ರದ ಉಡಗಳನ್ನು ಹೊಡೆದುಕೊಂಡು ಬರಲೋ ಹೋಗುವುದು ಇತ್ತು. ಹಾಗೆ ಬೆಳಗ್ಗೆ ಹೋದರೆ ಹಸಿವಿನ ಪರಿವೆಯೂ ಇಲ್ಲದೆ ಕಾಡಿನಲ್ಲಿ ಸಿಗುವ ಎಳೆ ಬೈನಿಯ ಸಸಿಗಳನ್ನು ಕಡಿದು ಅದರ ತಿರುಳನ್ನು ತಿಂದು ಝರಿಯ ನೀರನ್ನು ಕುಡಿದು ಹೊಟ್ಟೆ ತುಂಬಿಸಿಕೊಂಡು, ಸೂರ್ಯನು ಕಂತಿದ ಮೇಲೆಯೇ ಹಿಂದಿರುಗುತ್ತಿದ್ದುದು.

ಪ್ರತಿ ಮನೆಗೂ ಕಡ್ತಿಕಲ್ಲ ಘಾಟಿಯ ನೆತ್ತಿಯಿಂದ ಸುರಿಯುವ ನೇತ್ರಾವತಿಯು ಉಟ್ಟ ಸೀರೆಯ ಸೆರಗೋ ಎಂಬಂತೆ ಕಾಣುತ್ತಿತ್ತು. ಬೈಗು ಹೊತ್ತು, ಬಿಸಿಲು ಕಾಲದಲ್ಲಿ, ಸೂರ್ಯ ಪ್ರಕಾಶ ಬಿದ್ದು ವಿವಿಧ ಝರಿಗಳಿಂದ ನಿರ್ಮಿಸಿದ, ಸೀರೆಯನ್ನು ನಾಚಿಸುವಂತಹ ನೀರಿನ ಸೆರಗಾಗಿ ಕಾಣುವ ನೇತ್ರಾವತಿಯ ವೈವಿಧ್ಯಮಯ ನೋಟ ಇದು ಕುದುರೆಮುಖ, ಹಿರಿಮಾರ ಹುಪ್ಪೆ, ಕಡ್ತಿಕಲ್ಲ ಘಾಟಿ, ಜವಳಿ ಗುಡ್ಡಗಳ ಎದೆ ಯಿಂದ ಬೇಸಿಗೆ ಕಾಲದಲ್ಲಿ ಆಗಾಗ ಕಾಣುವ ಸುಂದರ ಮನಮೋಹಕ ದೃಶ್ಯ. ಮಳೆಗಾಲದಲ್ಲಾದರೆ ಅತಿವೃಷ್ಟಿಯ ದೆಸೆಯಿಂದ ಕೇಳುವ ಕರ್ಣ ಕರ್ಕಶ 'ಧೋ ಧೋ' ಶಬ್ದ. ಇದು ಪಶ್ಚಿಮ ಘಟ್ಟದ ತಪ್ಪಲಾದ ಕುದುರೆಮುಖದ ಸುತ್ತುಮುತ್ತಲಿನ ಒಂದು ಕಿರುಪರಿಚಯ.

ಎರಡನೆಯ ಮಹಾಯುದ್ಧದ ಕೆಲವು ವರ್ಷಗಳಿಗೆ ಮೊದಲು ಕಳಸ ಸಂಸೆಯಲ್ಲಿ ಕೆಂಟ್ ಎಂಬ ಬ್ರಿಟಿಷ್ ದೊರೆಯು ದೊಡ್ಡ ಕಾಫಿ ಪ್ಲಾಂಟರರಾಗಿದ್ದರು. ಅವರ ಮಗ ವಿಲಿಯಂ ಕೆಂಟ್ ಮತ್ತು ನಾನು ಸಮ ಪ್ರಾಯಸ್ಥರು. ಅವನು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಈ ಊರಿಗೆ ಅವನು ಬಂದ ದಿನ ಒಮ್ಮೆ ಕುದುರೆಮುಖಕ್ಕೆ

ಹವಾ ಬದಲಾವಣೆಗೆಂದು ಬಂದಿದ್ದ. ಅಲ್ಲಿ ಸೈಮನ್ ಲೋಬೋರ ಮನೆಯಲ್ಲಿ ನನಗೂ ಅವನಿಗೂ ಭೆಟ್ಟಿಯಾಯಿತು. ಸೈಮನರಿಂದ ನನ್ನ ಬೇಟೆಗಾರಿಕೆಯ ಪ್ರಶಂಸೆಗೆ ಮೆಚ್ಚಿ ನನ್ನ ನೆಚ್ಚಿನ ಮಿತ್ರನಾದ. ಅನಂತರ ಅವನ ಜೀವನದ ಮೂರು ನಾಲ್ಕು ವರುಷಗಳಲ್ಲಿ ಇತ್ತ ಬಂದರೆ ನನ್ನನ್ನು ಕಾಣದೆ, ನನ್ನೊಂದಿಗೆ ಬೇಟೆಯಲ್ಲಿ ಸಹಭಾಗಿಯಾಗದೆ ಹೋದವನಲ್ಲ. ಅವನ ತಂದೆ ತಾಯಿಗಳಲ್ಲೂ ನನ್ನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವನ್ನೇ ಮೂಡಿಸಿ, ಆ ಕುಟುಂಬದ ಆಗುಹೋಗುಗಳಲ್ಲಿ ನಾನೂ ಒಬ್ಬ ಪಾಲುಗಾರನೆಂಬ ಅಭಿಪ್ರಾಯ ಉಂಟಾಗುವಂತೆ ಮಾಡಿದ್ದ. ಬಳಿಕ ಇಂಗ್ಲೆಂಡಿಗೆ ಹೋದವನು ಎರಡನೆಯ ಮಹಾಯುದ್ಧದಲ್ಲಿ ಭಾಗಿಯಾಗಿ ಮಾತೃಭೂಮಿಗಾಗಿ ಅಸುನೀಗಿದನೆಂಬ ದುರಂತ ವಾರ್ತೆಯನ್ನು ಹಿರಿಯ ಕೆಂಟ್ ದಂಪತಿಗಳು ನನಗೆ ಕಣ್ಣೀರಿಂದ ಮಸುಕಾದ ಬರೆಹದಿಂದ ತಿಳಿಸಿದರು. ಅಗಲಿದ ಮಿತ್ರನಿಗೆ ನಾನೂ ಅಶ್ರುತರ್ಪಣವನ್ನರ್ಪಿಸಿ ಸ್ವರ್ಗವಾಸಿಯಾದ ಅವನ ಆತ್ಮಕ್ಕೆ ಚಿರಶಾಂತಿಯು ದೊರೆಯಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿದ್ದೆ.

ಐದಾರು ತಿಂಗಳು ಕಳೆದಿರಬಹುದು. ವಿಲಿಯಂನ ತಂಗಿ ರೋಸ್ಲಿಯ ಒಂದು ಕಾಗದ ಬಂತು. ಆ ಕಾಗದದಲ್ಲಿ ''ಪ್ರೀತಿಯ ರೈ, ತಂದೆಯೂ ತಾಯಿಯೂ ಅಣ್ಣನ ಸಾವಿನಿಂದ ಇನ್ನೂ ಚೇತರಿಸಿಕೊಹಿಂಡಿಲ್ಲ. ಇದರಿಂದ ನನಗೆ ತುಂಬಾ ಕಳವಳ ವಾಗುತ್ತಿದೆ. ಆದುದರಿಂದ ನೀನು ಅವರನ್ನು ಕುದುರೆಮುಖಕ್ಕೆ ಹವಾಬದಲಾವಣೆಗೆ ಆಹ್ವಾನಿಸಿ ಅವರು ಕೆಲದಿನ ಬೇಟೆಯ ನೆವದಿಂದ ನಿನ್ನೊಂದಿಗಿದ್ದು ಮನಸ್ಸನ್ನು ಸ್ಥಿಮಿತಗೊಳ್ಳುವಂತೆ ಮಾಡಿದರೆ ನಿನ್ನ ಉಪಕಾರವನ್ನು ಮರೆಯಲಾರೆ. ಸದ್ಯ ನಮಗಿಲ್ಲೇನೂ ಕೆಲಸದ ತುರ್ತು ಇಲ್ಲ. ಕಾಫಿಯ ಕೆಲಸವೆಲ್ಲಾ ಮುಗಿದಿದೆ. ಆದುದರಿಂದ ಪದೇ ಪದೇ ಅಣ್ಣನನ್ನೇ ಜ್ಞಾಪಿಸುತ್ತಾರೆ. ದಯವಿಟ್ಟು ಆ ದುಃಖವನ್ನು ಅವರು ಮರೆಯಲು ಸಹಕರಿಸು'' ಹೀಗೆ ಬರೆದಿದ್ದಳು. ಸೆಕೆಯ ಸಮಯ. ಕುದುರೆಮುಖದ ಆಹ್ಲಾದಕರ ಹವೆ. ವಿದ್ಯಾವಂತ ಬ್ರಿಟಿಷ್ ಕುಟುಂಬದ ಸಹವಾಸ ಬೇಡವೆನ್ನುವ ಮನೋವೃತ್ತಿ ನನ್ನದೂ ಅಲ್ಲ. ರೋಸ್ಲಿಯು ಒಳ್ಳೆಯ ಚೂಟಿಯಾದ ಹುಡುಗಿ. ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ತಂದೆತಾಯಂದಿರೊಂದಿಗೆ ಕಳಸದ ಬಂಗಲೆಯಲ್ಲಿಯೇ ಇದ್ದಳು. ಬೇಟೆಗೆ ಹೊರಟರೆ ಗಂಡು ಮಕ್ಕಳಂತೆಯೇ ಅರ್ಧ ಚಡ್ಡಿ ಹಾಕಿ ಫೆಲ್ಟ್ ಹೇಟ್ ತಲೆಗಿಟ್ಟು ಕೋವಿ ರೈಫಲನ್ನು ಹೆಗಲಿಗೇರಿಸಿ ನಿಂತ ಠೀವಿಯ ಚಿತ್ರವು ಇಂದೂ ನನ್ನ ಮನಸ್ಸಿನಿಂದ ಮಾಸಿ ಹೋಗಿಲ್ಲ. ನಿಸ್ಸಂಕೋಚ ಪ್ರಕೃತಿ. ತಂದೆ ತಾಯಿಯವರೂ ನನ್ನೊಂದಿಗೆ ಸಲಿಗೆಯಿಂದ ಇರುವುದನ್ನು ಎಂದೂ ಆಕ್ಷೇಪಿಸಿದವರಲ್ಲ.

ಅವಳ ಕಳಕಳಿಯ ಪತ್ರವನ್ನು ಕಂಡವನೇ ಶ್ರೀ ಕೆಂಟರಿಗೊಂದು ಪತ್ರ ಬರೆದೆ- 'ನಿಮಗೆ ಕಾಫಿ ಸಂಗ್ರಹದ ಕೆಲಸವು ಮುಗಿದಿರಬೇಕು ಘಟ್ಟದ ಕೆಳಗೆ ಈಗ ಸೆಖೆಯು

ವಿಪರೀತ. ಕುದುರೆಮುಖದಲ್ಲಿ ಈಗ ಸೊಗಸಾದ ಹವೆ. ಅಲ್ಲದೆ ಮಲೆಗೆ ಬೆಂಕಿ ಬಿದ್ದು ಒಣಗಲು ಹುಲ್ಲು ಸುಟ್ಟು ಸೊಗಸಾದ ಚಿಗುರು ಹುಲ್ಲು ಮೊಳೆಯುವ ಸಮಯ. ಕಡವೆ-ಕಾಡುಕೋಣಗಳು ಧಾರಾಳ ಕಾಣಸಿಗುತ್ತವೆ. ಬೇಟೆಯಿಂದ ನಿಮ್ಮ ಮನಸ್ಸಿಗೆ ನೆಮ್ಮದಿಯೂ ಸಿಗಬಹುದು. ಬರುವಿರಾ' ಎಂದು ಈ ಸಂಗತಿಗೆ ಅವರನ್ನು ಮೊದಲೇ ಪಳಗಿಸಿದ್ದ ರೋಸ್ಲಿಯಿಂದ ಕೂಡಲೇ ಮಾರೋಲೆ ಬಂತು. ''ರೈ-ನಿನ್ನ ಉಪಕಾರಕ್ಕೆ ಕೃತಜ್ಞಳು. ತಂದೆಯವರೂ ತಾಯಿಯೂ ಬರುತ್ತಾರೆ. ಎಂಟು ದಿನ ಕುದುರೆಮುಖ ಬಂಗಲೆಯಲ್ಲಿರುವುದಾಗಿ ನಿರ್ಣಯಿಸಿದ್ದಾರೆ. ಅದಕ್ಕೆ ಬೇಕಾಗುವ ಏರ್ಪಾಡು ಮಾಡು. ತಾಯಿಗೆ ಹನ್ನೆರಡು ಮೈಲು ಕುದುರೆಮುಖವನ್ನು ಏರಲು ಸಾಧ್ಯವಿಲ್ಲ. ಆದುದರಿಂದ ಒಂದು ಮೇನೆಯ ಏರ್ಪಾಡು ಮಾಡು. ನಾನು ಬರದಿದ್ದರೆ ನಿನಗೆ ತೃಪ್ತಿಯಾಗದು. ಆದುದರಿಂದ ನಾನೂ ಬರುತ್ತೇನೆ. ನಮಗೆ ಬೇಕಾದ ವಸ್ತುಗಳನ್ನು ನಾನು ತರುತ್ತೇನೆ. ಬಾಕಿ ಅಲ್ಲಿಂದ ದೊರೆಯುವ ವಸ್ತುಗಳನ್ನು ನೀನು ಸಂಗ್ರಹಿಸಿ ಇಡು. ನಾವು ಮೂವರೂ ಕಾಲ್ನಡಿಗೆಯಿಂದಲೇ ಕುದುರೆಮುಖವನ್ನು ಏರೋಣ. ತಾಯಿಯವರು ಮಾತ್ರ ಮೇನೆಯಲ್ಲಿ ಬರಲಿ ಆಗದೇ'' ಎಂದು ಬರೆದಿದ್ದಳು.

ಆ ಸಮಯದಲ್ಲಿ ಕುದುರೆಮುಖ ಬಂಗಲೆಯು ಸಾಧಾರಣ ಸುವ್ಯವಸ್ಥಿತ ಸ್ಥಿತಿಯಲ್ಲಿತ್ತು. ಆಗಾಗ್ಗೆ ಮಂಗಳೂರಿನ ಇಂಗ್ಲೀಷ್ ಅಧಿಕಾರಿಗಳೂ ಹೊರದೇಶದಿಂದ ಬಂದ ಅವರ ನೆಂಟರಿಷ್ಟರೂ ಶಿಕಾರಿಗೆ-ಹವಾ ಬದಲಾವಣೆಗೆ ಕುದುರೆ ಮುಖಕ್ಕೆ ಹೋಗುವ ವಾಡಿಕೆ ಇತ್ತು. ಅದಕ್ಕಾಗಿ ಹನ್ನೆರಡು ಮೈಲು ನಿಡಿದಾದ ಬೆಟ್ಟವನ್ನು ಏರಲು ಅಶಕ್ತರಾದವರಿಗಾಗಿ, ನಾವೂರ ಬಂಗಲೆಯಲ್ಲಿ ಮೇನೆಯ ವ್ಯವಸ್ಥೆ ಇತ್ತು. ಬಂಗಲೆಯ ಮಾಲಿಯು ನನ್ನ ಹಂಗಿಕನಾಗಿದ್ದುದರಿಂದ ನನಗೆ ಮೇನೆಯನ್ನು ಉಪಯೋಗಿಸುವರೆ ತತ್ಕಾಲಕ್ಕೆ ಮೇಲಧಿಕಾರಿಗಳ ಒಪ್ಪಿಗೆಯನ್ನು ಪಡಕೊಳ್ಳುವ ಅವಶ್ಯಕತೆಯೂ ಇರಲಿಲ್ಲ. ಮೇನೆಯನ್ನು ಹೊರುವ ನೆರೆಕರೆಯ ಮಲೆಕುಡಿಯರೂ ನಾನು ಕರೆದರೆ ಬಾರೆನೆನ್ನುವವರಲ್ಲ. ಆದುದರಿಂದ ಶ್ರೀ ಕೆಂಟ್ ಸಕುಟುಂಬಿಕರಾಗಿ ಬರುವ ದಿನವನ್ನು ನಿಶ್ಚಯಿಸಿ, ಬೇಕಾದ ಸಾಮಾನನ್ನು ಆಳುಗಳ ಮೂಲಕ ಕುದುರೆ ಮುಖಕ್ಕೆ ಸೈಮನ್ ಲೋಬೋರ ಮನೆಗೆ ಕಳುಹಿಸಿದೆ. ಅವರ ತಮ್ಮ ದುಮಿಂಗ ಲೋಬೋರವರು ಒಳ್ಳೆಯ ಶಿಕಾರಿ ಮತ್ತು ಕುದುರೆಮುಖದಲ್ಲಿ ಮೃಗಗಳು ಮೇಯುವ ತಾವನ್ನು ಖಚಿತವಾಗಿ ಅರಿತು ಪಳಗಿದವರು. ನಮ್ಮ ಬರವನ್ನು ಕಾದು ಇರುವಂತೆ ದುಮಿಂಗರಿಗೆ ಹೇಳಿ ಕಳುಹಿಸಿ, ಇಂಗ್ಲೀಷ್ ಅತಿಥಿಗಳಿಗೆ ಬೇಕಾದ ಸರಾಯಿ, ಊರಹೆಂಡ, ಬೈನಿಕಳ್ಳನ್ನು ಒದಗಿಸುವ ಏರ್ಪಾಡನ್ನು ಮಾಡಿ ಅತಿಥಿಗಳ ಆಗಮನವನ್ನು ಕಾಯುತ್ತಾ ನಾವೂರ ಬಂಗಲೆಯಲ್ಲೇ ನಿಂತೆ.

ಸಂಸ್ಥೆಯಿಂದ ಮೋಟಾರಿನಲ್ಲಿ ಬಂದ ಅತಿಥಿಗಳು ಬೆಳ್ತಂಗಡಿಯಿಂದ ಎತ್ತಿನ

ಬಂಡಿಯಲ್ಲಿ ಬಂದು ಇಳಿದರು. ಆ ರಾತ್ರಿ ನಾವೂರು ಬಂಗ್ಲೆಯಲ್ಲಿಯೇ ವಿಶ್ರಾಂತಿಯನ್ನು ಪಡೆದು ಮರುದಿನದ ಟೀ ಮುಗಿಸಿ ಪರ್ವತಾರೋಹಣ ಮಾಡುವುದೆಂದು ನಿರ್ಣಯಿಸಿದೆವು. ನಾನು ನೀಡಿದ ಬಂಟರ ಪದ್ಧತಿಯ ಊಟವನ್ನು ಮನಸೇಚ್ಛೆ ಹೊಗಳಿದ ಅತಿಥಿಗಳು ಸುಖ ನಿದ್ರೆಯನ್ನು ಮಾಡಿದರು. ಮರುದಿನ ಏಳೂ ಮುಕ್ಕಾಲು ಗಂಟೆಗೆ ಮೇನೆ ಹೊರುವ ಕೂಲಿಗಳಿಗೂ ಚಾ ತಿಂಡಿ ಕೊಟ್ಟು ಹೊರಡಲು ಅನುವಾದೆವು. ಶ್ರೀ ಕೆಂಟರ 'ರ್‍ಯಾಫಲ್', ಕೋವಿಗಳನ್ನೂ ಶ್ರೀಮತಿ ಕೆಂಟರು ಮೇನೆಯಲ್ಲಿ ತರಬೇಕೆಂದು ನಿರ್ಧಾರವಾಯಿತು. ನಾನೂ ರೋಸ್ಲಿಯೂ ದಾರಿಯಲ್ಲಿ ಏನಾದರೂ ಬೇಟೆ ಸಿಕ್ಕಿದರೆ ಹೊಡೆಯುವ ಉದ್ದೇಶದಿಂದ ನನ್ನ B.S.A.. ಕೋವಿಯನ್ನೂ ಅವಳ ರೈಫಲನ್ನೂ ಹೆಗಲಿಗೇರಿಸಿ ಸಾಮಾನು ಸರಂಜಾಮುಗಳೊಂದಿಗೆ ಹೊರಡಲು ಸಿದ್ಧರಾದೆವು. ಶ್ರೀಮತಿ ಕೆಂಟ್ ಎರಡು ಮಕ್ಕಳ ತಾಯಿ. ಲಂಗ ಹಾಕಿಕೊಂಡಿದ್ದರಿಂದಲೂ ಅಚ್ಚಬಿಳಿಯ ವರ್ಣವಾದುದರಿಂದಲೂ ಚಿಕ್ಕ ಪ್ರಾಯದ ಹೆಂಗಸರಂತೆ ತೋರುತ್ತಿದ್ದರು. ಆಕರ್ಷಕವಾದ ಮೈಕಟ್ಟಿನವರಾಗಿದ್ದ ಆಕೆ ಯಾರಾದರೂ ನೋಡಿ ಮೆಚ್ಚುವಂತಹ ಸ್ಫುರದ್ರೂಪದ ನಗುಮೊಗದ ಸುಂದರಿ. ರೋಸ್ಲಿಯೂ ನಿಷ್ಕಲ್ಮಶ ಹೃದಯದ ಚೆಲ್ಲು ಸ್ವಭಾವದ ಹುಡುಗಿ. ಶ್ರೀ ಕೆಂಟರು ಗಂಭೀರವದನದ ದರ್ಪಯುಕ್ತ ಮುಖದ ಸದೃಹಸ್ಥ. ಇವರು ನನ್ನೊಂದಿಗೆ ವ್ಯವಹರಿಸುವ ರೀತಿಯನ್ನು ಕಂಡು ಮೇನೆಯನ್ನು ಹೊರಲು ಬಂದವರು ಆ ಹೆಂಗಸರ ವಿಚಾರದಲ್ಲಿ ತುಸು ಹಗುರ ಭಾವನೆಯನ್ನು ತಳೆದಿದ್ದರೆಂದು ಅವರ ಅಣಕದ ಮುಖ ಚರ್ಯೆಯಿಂದಲೇ ನನಗೆ ವೇಧ್ಯವಾಗಿತ್ತು. ನನ್ನ ಮೇಲೆ ಆ ಕೆಲಸದಾಳುಗಳಿಗೆ ಸ್ವಲ್ಪ ಗುಮಾನಿಯಿತ್ತೆಂದೂ ಇದರಿಂದ ನಾನು ತಿಳಿದಿದ್ದೆ. ಆದರೆ ಈ ವಿಚಾರ ಸಾನಾಗಿ ಅವರಿಗೆ ವಿವರಣೆ ಕೊಡುವುದೆಂದರೆ ನನ್ನ ಘನಸ್ಥಿಕೆಗೆ ಕುಂದೆಂದು ನಾನೂ ಅರಿತೂ ಅರಿಯದವನಂತಿದ್ದೆ.

ಮೇನೆಯು ಸುತ್ತು ಸುತ್ತಾಗಿ ಕಾಡು ಮಾರ್ಗವಾಗಿಯೇ ಬರಬೇಕು. ಸರದಿಯಂತೆ ನಾಲ್ಕು ಜನರು ಹೊತ್ತೇ ಸಾಗಬೇಕು. ದಾರಿಯಲ್ಲಿ ಮೃಗಗಳ ಹೆದರಿಕೆಯಿಲ್ಲ. ಶ್ರೀಮತಿ ಕೆಂಟರೂ ಕುಶಲ ಈಡುಗಾರ್ತಿ. ಬಾರು ಮಾಡಿದ ರೈಫಲ್ ಬಳಿಯೇ ಇದೆ. ಎಂಟು ಮಂದಿ ಹೊಂತಕಾರಿಗಳೂ ಪಳಗಿದವರೂ ಆದ ಯುವಕರು ಮೇನೆಯೊಂದಿಗಿದ್ದಾರೆ. ಮತ್ತೆಲ್ಲಿಯ ಹೆದರಿಕೆ? ಅವರನ್ನು ಮೇನೆಗೆ ಹತ್ತಿಸಿ ನಾನೂ ಶ್ರೀ ಕೆಂಟರೂ ರೋಸ್ಲಿಯೊಂದಿಗೆ ಪರ್ವತಾರೋಹಣಕ್ಕೆ ಅಣಿಯಾದೆವು. ಮೇನೆಯಲ್ಲಿ ಆಸೀನರಾಗಿ ಅದರಲ್ಲಿ ಜೋತು ಹಾಕಿದ ಆಧಾರವನ್ನು ಹಿಡಿದ ಶ್ರೀಮತಿಯವರ ಪ್ರಯಾಣ ತೊಡಗಿತು. ಮೇನೆ ಹೊರುವ ಜನರ ಜಾನಪದ ಹಾಡೂ ಸುಮಧುರವಾಗಿ ಆರಂಭವಾಯಿತು. ನಾವೂ ನಡೆಯಲು ತೊಡಗಿದೆವು. ಸ್ವಲ್ಪ ಪ್ರಾಯಸ್ಥರಾದ

ಶ್ರೀ ಕೆಂಟರು ಕುದುರೆಮುಖದ ಏಳನೇ ಸುತ್ತಿಗಾಗುವಾಗ ತುಸು ಹಿಂದೆ ಉಳಿದರು. ನಾನೂ ರೋಸ್ಲಿಯೂ ಹಿಂದೆ ನೋಡದೆ ಸೀದಾ ಬಂದವರು ಏಳನೇ ಸುತ್ತಿಗೆ ತಲುಪಿದೆವು. ಅದು ಆರೋಹಿಗಳಿಗೆ ಮೊದಲನೆಯ ವಿಶ್ರಾಂತಿ ಸ್ಥಾನವಾದುದರಿಂದ ಶ್ರೀ ಕೆಂಟರೂ ಬರಲೆಂದು ಬಳಿಯಲ್ಲೇ ಇರುವ ಕಲ್ಲಿನಲ್ಲಿ ಕುಳಿತೆವು. ನಾನು ಸಿಗರೇಟು ಹಚ್ಚಿ ಸೇದುವಾಗ ಆಯಾಸಗೊಂಡ ರೋಸ್ಲಿಯು ನನ್ನ ಹೆಗಲ ಮೇಲೆ ಕೈ ಹಾಕಿ ಕುಳಿತುದನ್ನು ಕಂಡ ಮೇನೆ ಹೊರುವ ಆಳುಗಳು ಮನದಲ್ಲೇ ಮುಗುಳು ನಗುವುದನ್ನು ಗಮನಿಸಿ ನನಗೆ ಸ್ವಲ್ಪ ಬೇಸರವಾದರೂ ಇಂಥದು ರೂಢಿಯೇ ಆಗಿದ್ದ ರೋಸ್ಲಿಯು ಆ ಕಡೆ ಗಮನ ಕೊಟ್ಟಂತೆಯೇ ಕಾಣಲಿಲ್ಲ. ದೂರದಿಂದ ಶ್ರೀ ಕೆಂಟರು ಬರುವುದು ಕಾಣುತ್ತಿತ್ತು. ಈ ಸಂದರ್ಭದಲ್ಲಿ ಅತಿಥಿಗಳ ಮತ್ತು ನನ್ನ ಸಂವಾದವು ಹೆಚ್ಚಾಗಿ ಇಂಗ್ಲಿಷಿನಲ್ಲಿಯೇ ನಡೆಯುತ್ತಿದ್ದುದರಿಂದ ಹಳ್ಳಿಗರಾದ ಮೇನೆ ಹೊರುವ ಕೂಲಿಗಳು ಆ ಇಂಗ್ಲಿಷ್ ಕುಟುಂಬದವರಿಗೆ ತುಳು, ಕನ್ನಡ ಬರುವುದಿಲ್ಲವೆಂಬ ನಿರ್ಧಾರಕ್ಕೆ ತಮ್ಮಲ್ಲೇ ಬಂದಿರಬೇಕು. ! ಹಾಗಾಗಿ ಮೇನೆ ಹೊರುವಾಗ ಅಶ್ಲೀಲವಾಗಿ ತಮಾಷೆಯ ಮಾತುಗಳನ್ನು ತಮ್ಮ ಭಾಷೆಯಲ್ಲಿ ಧಾರಾಳ ಬಳಸುತ್ತಿದ್ದರೆಂದು ನನಗೆ ಅನಂತರ ತಿಳಿಯಿತು. ನೂರಾರು ಮಂದಿ ಗಟ್ಟದ ಕೆಳಗಿನ ಆಳುಗಳನ್ನು ದುಡಿಸುತ್ತಿದ್ದ ದೊರೆ ದಂಪತಿಗಳಿಗೆ ಕನ್ನಡ, ತುಳು ಚೆನ್ನಾಗಿ ಬರುತ್ತಿತ್ತು. ಆದರೆ ಮಾತಿನ ಧಾಟಿಯು ಮಾತ್ರ ಇಂಗ್ಲಿಷಿನಂತೆಯೇ ಇದ್ದು ಕೇಳಲು ವಿಚಿತ್ರವೆನಿಸುತ್ತಿತ್ತು. ಮೇನೆಯನ್ನು ಹೊತ್ತ ಕೂಲಿಗಳು ಸುಮಾರು ಅರ್ಧಗಂಟೆ ವಿಶ್ರಾಂತಿಯನ್ನು ಹೊಂದಿ, ಎಲೆಯಡಕೆ ತಿಂದು ಅಲ್ಲಿಂದ ಹೊರಡಬೇಕೆಂದೂ, ನಾವು ಒಳದಾರಿಯಿಂದ ಮುಂದೆ ಹೋಗಿ ಸೈಮನ್ ಲೋಬೋರ ಮನೆಯಲ್ಲಿರುವಾದಾಗಿಯೂ ಅವರಿಗೆ ಹೇಳಿ, ಕಾಲಿಗೆ ಕಚ್ಚಿದ ಇಂಬಳಗಳನ್ನು ಕಿತ್ತೊಗೆದು ಮೂವರೂ ಮತ್ತೆ ಮುನ್ನಡೆದೆವು.

ಮೇನೆ ಪ್ರಯಾಣದ ಶ್ರೀಮತಿ ಕೆಂಟರು ಪುನಃ ಹಿಂದಾದರು. ದಣಿವಾರಿಸಿ ಚೇತರಿಸಿದ ಕೂಲಿಗಳಿಗೆ ಮೋಜು ಮಾಡಬೇಕೆಂಬ ಇಚ್ಛೆ ಉದಿಸಿತೆಂದು ಕಾಣುತ್ತದೆ. ಮೇನೆ ಹೊತ್ತವರಲ್ಲೊಬ್ಬ ಇತರರೊಡನೆ ತುಳುವಿನಲ್ಲಿ ಮಾತಾಡುತ್ತ ಶ್ರೀಮತಿ ಕೆಂಟರ ಸೊಬಗನ್ನು ಮೆಚ್ಚಿಕೊಂಡು 'ಮೇನೆಯನ್ನು ಕಾಡಿಗೆ ಹೊತ್ತರೆ ಹೇಗೆ? ಎಂದ. ಈ ಮಾತು ಅರ್ಥವಾದ ಶ್ರೀಮತಿ ಕೆಂಟರು ರೈಫಲನ್ನು ಬಳಿಗೆ ಎಳಕೊಂಡರಲ್ಲದೆ ತನಗೆ ಎಳ್ಳಷ್ಟೂ ಅರ್ಥವಾಗಿದೆ ಎಂಬ ಭಾವನೆಯನ್ನು ತೋರ್ಪಡಿಸಲಿಲ್ಲ ''ಹುಂ ಸ್ಟಾರ್ಟ್'' ಎಂದರು ಎಂದಿನ ಗಾಂಭೀರ್ಯದಿಂದ ! ಮೇನೆಯು ಸೈಮನ್ ಲೋಬೋರ ಮನೆಗೆ ಬಂತು. ಎರಡನೇ ಮಜಲಿನ ವಿಶ್ರಾಂತಿಯನ್ನು ಅಲ್ಲಿ ಅನುಭವಿಸಿ, ಅವರ ಟೀ ಸತ್ಕಾರವನ್ನು ಪಡೆದು ಮತ್ತೆ ಬಂಗ್ಲೆಗಿರುವ ಮೂರು ಮೈಲು ದಾರಿಯನ್ನು ಶ್ರೀಮತಿಯವರೂ ನಡೆದೇ ಹೋಗುವುದೆಂದು ತೀರ್ಮಾನಿಸಿದೆವು. ಕೆಲಸದ

ವರ ಸಂಬಳ ಬಟವಾಡೆಯನ್ನು ಮಾಡಿ ನಾನೂ ಶ್ರೀಮತಿ ಕೆಂಟರೂ ಒಟ್ಟಿಗೆ ಬರುವುದಾಗಿಯೂ ಶ್ರೀ ಕೆಂಟರೂ ರೋಸ್ಲಿಯೂ ದುಮಿಂಗ ಲೋಬೋರೊಂದಿಗೆ ನಿಧಾನವಾಗಿ ಬಂಗಲೆಗೆ ನಮ್ಮಿಂದ ಮೊದಲೇ ಹೋಗುವುದೆಂದೂ ಅಭಿಪ್ರಾಯವಾಗಿ ಅವರನ್ನು ಮುಂದೆ ಕಳುಹಿಸಿಯಾಯಿತು.

ಇಷ್ಟರವರೆಗೆ ಇಂಗ್ಲಿಷಿನಲ್ಲೇ ಮಾತಾಡುತ್ತಿದ್ದ ಶ್ರೀಮತಿ ಕೆಂಟರು ಫಕ್ಕನೆ ನನ್ನಲ್ಲಿ ತುಳುವಿನಲ್ಲಿ ಸಂಭಾಷಣೆಗೆ ತೊಡಗಿ ಮೇನೆ ಹೊತ್ತಿದ್ದ ಆಳುಗಳು ದಾರಿಯಲ್ಲಿ ನುಡಿದ ಕುಚೇಷ್ಟೆಯನ್ನು ಬಯಲಿಗೆಳೆದರು ! ಕೆಲಸದಾಳುಗಳ ಮುಖ ಕಪ್ಪಿಟ್ಟಿತು. ಕೈಕಾಲುಗಳು ನಡುಗತೊಡಗಿದವು. ಅವರು ತಗ್ಗಿಸಿದ ತಲೆಯನ್ನು ಮೇಲೆತ್ತಲಿಲ್ಲ. ಆಳುಗಳನ್ನು ಆ ಬಗೆಗೆ ಒಂದಿಷ್ಟೂ ಶಿಕ್ಷಿಸದೆ ಬರಿಯ ಮಾತಿನ ಮೊನೆಯಿಂದಷ್ಟೇ ಚುಚ್ಚಿ ಶುದ್ಧಗೊಳಿಸುತ್ತ ನಗುಸೂಸಿ ಮಾತಾಡಿದ ಆಕೆಯ ವ್ಯಕ್ತಿತ್ವ ಮರೆಯುವಂಥದಲ್ಲ. ಕೂಲಿಯಾಳುಗಳನ್ನು ಕೆಳಗಡೆಗೆ ಕಳುಹಿಸಿ, ನಾವು ಕರೆ ಕಳುಹಿಸಿದಂದು ಮೇನೆ ಹೊರಲು ಪುನಃ ಬರಬೇಕೆಂದು ಹೇಳಿ ಬೀಳ್ಕೊಟ್ಟೆವು. ನಾನೂ ಶ್ರೀಮತಿ ಕೆಂಟರೂ ಸೈಮನ್ ಲೋಬೋರವರ ಮುಂದಾಳುತ್ವದಲ್ಲಿ ಕುದುರೆಮುಖದತ್ತ ನಡೆಯತೊಡಗಿದೆವು.

ಕುದುರೆಮುಖದ ಬಂಗ್ಲೆಯನ್ನು ನಾವು ತಲುಪುವಾಗ ಸಂಜೆ ಗಂಟೆ ಆರಾಗಿತ್ತು. ಆ ಮೊದಲೇ ಅಲ್ಲಿಗೆ ತಲಪಿದ್ದ ರೋಸ್ಲಿಯೂ ಧೊರೆಗಳೂ ವಿಶ್ರಾಂತಿಯನ್ನು ಪಡೆಯಲು ಬಂಗಲೆಯ ಪ್ರಾಂಗಣದಲ್ಲಿದ್ದ ಪಶ್ಚಿಮಾಭಿಮುಖ ಆಸನದಲ್ಲಿ ಸುಖಾಸೀನರಾಗಿ ಅಸ್ತಂಗತ ಸೂರ್ಯನ ಸೊಬಗನ್ನು ಸವಿಯುತ್ತಿದ್ದರು. ನಾವೂ ಅವರ ಬಳಿಯಲ್ಲೆ ಕುಳಿತೆವು. ಆಗ ತಾನೇ ಮುಳುಗುತ್ತಿದ್ದ ಸೂರ್ಯ ಬಿಂಬದ ಸೊಗಸಿಗೂ, ಪಶ್ಚಿಮಾಕಾಶದ ವರ್ಣ ಸಂಗಮದ ಮೋಡಿಗೂ ಮಾರು ಹೋದೆವು. ನಮ್ಮ ಅಸ್ತಿತ್ವವನ್ನೇ ಮರೆಯಿಸುವ ತಾದಾತ್ಮ್ಯವನ್ನು ಆ ಚೆಲುವಿನ ನೋಟ ಒದಗಿಸಿತ್ತು. ಅಂದು ಹುಣ್ಣಿಮೆ. ಸೂರ್ಯಾಸ್ತಮಾನವಾಗುತ್ತಲೆ ಪೂರ್ವ ದಿಗಂತದಲ್ಲಿ ಚಂದ್ರೋದಯದ ಚೆಲ್ವಿಕೆಯ ದರ್ಶನ ! ಆ ಕಡೆಗೆ ಮುಖ ಮಾಡಿ ಕುಳಿತ ನಮಗೆ ಮತ್ತೆ ಅಖಂಡ ಸೌಂದರ್ಯಾಸ್ವಾದನೆ ! ಮಂಜು ಸುರಿಯತೊಡಗಿ ಚಳಿಯ ಬಾಧೆಯ ಅರಿವಾದಾಗ ನಾವು ಅಲ್ಲಿಂದ ಎದ್ದು ಬಂಗಲೆಯೊಳಗೆ ನಡೆಯಲೇ ಬೇಕಾಯಿತು.

ಆ ಇಂಗ್ಲಿಷ್ ಕುಟುಂಬಕ್ಕೆ ಬೇಕಾದ ತುರ್ತಿನ ಊಟವು- ಪೆಟ್ಟಿಗೆಯಲ್ಲಿಯೇ ಸಿದ್ಧವಿತ್ತು. ಗಾಳಿಸೇರದಂತೆ ಮುಚ್ಚಿದ್ದ ಪಾತ್ರೆಗಳಲ್ಲಿ ಕೆಡದಂತೆ ಕಾಪಿಟ್ಟ ಬೆಂದ ಮಾಂಸ, ಮೀನು, ಕೊಂಚ ಶಾಖಕ್ಕೆ ಇರಿಸಿ ಉಪ್ಪು ಮೆಣಸು ಸಾಂಬಾರ ಹುಡಿಯನ್ನು ಅದಕ್ಕೆ ಉದುರಿಸಿಕೊಂಡರೆ ಅವರಿಗೆ ಬೇಕು ಬೇಕಾದ ಖಾದ್ಯವು ಸಿದ್ಧವಾದಂತೆ. ಇನ್ನು ದೇವದಾರು ಪೆಟ್ಟಿಗೆಯಲ್ಲಿದ್ದ ಬ್ರೆಡ್ಡಿನ ಕಟ್ಟನ್ನು ತೆಗೆದು ಹರಿತ ಕತ್ತಿಯಿಂದ ಕ್ಕೊಯ್ದು, ಆ

ತುಂಡುಗಳನ್ನು ಕಾವಲಿಯಲ್ಲಿಟ್ಟು ಹುರಿದರೆ ಗಮಗಮಿಸುವ ಹೊಸ ರೊಟ್ಟಿ ಸಿದ್ಧ. ಅದಕ್ಕೆ ಬೆಣ್ಣೆ ಸವರಿ ತಿಂದು ಒಂದು ಲೋಟ ಚಾ ಕುಡಿದರೆ ಅವರ ಊಟವಾದಂತೆ.

ನನಗಾದರೊ ರಾತ್ರಿ ಒಂದು ಹಿಡಿ ಅನ್ನ ಇಲ್ಲವಾದರೆ ಏನು ತಿಂದರೂ ಉಪವಾಸವಿದ್ದಂತೆ! ಅವರ ಕರಂಡದ ಮಾಂಸವನ್ನು ನಾನು ತಿನ್ನುವವನಲ್ಲ. ಅವರು ತಿನ್ನೆಂದು ಹೇಳಲಿಕ್ಕೂ ಇಲ್ಲ. ಕಾರಣ ಅದು ಹೊರದೇಶದಿಂದ ಬಂದ ಯಾವ ಪ್ರಾಣಿಯ ಮಾಂಸವೊ? ಏನೋ? ಆದರೆ ಮೀನು ತಿನ್ನಬಹುದಲ್ಲವೇ? ಅದರ ತುಂಡುಗಳನ್ನು ನೋಡುತ್ತೇನೆ. ನೀರಿನಲ್ಲಿ ತೊಳೆದು ಪದಾರ್ಥಕ್ಕೆ ಸಿದ್ಧಪಡಿಸಿದ ತುಂಡಿನಂತಿದೆ. ಇದನ್ನು ತಿಂದರೆ ಖಂಡಿತಾ ವಾಂತಿಯಾದೀತು ಎಂದುಕೊಂಡು ನಯವಾದ ಮಾತಿನಲ್ಲಿ ಅವರೊಂದಿಗೆ ಊಟ ಮಾಡುವುದನ್ನು ನಿರಾಕರಿಸಿ, ದುಮಿಂಗರೊಡನೆ ಎರಡು ಪಾವು ಅಕ್ಕಿ ಒಲೆಗಿಡುವಂತೆ ಹೇಳಿದೆ. ಬಂಗಲೆಯ ಬಳಿಯಿರುವ ಪುದಿನಾ ಸೊಪ್ಪನ್ನು ಆರಿಸಿ ಅದರಿಂದ ನನಗೆ ತಕ್ಕಂತೆ ಖಾರವಾದ ಚಟ್ನಿಯನ್ನು ಮಾಡಲೂ ಹೇಳಿದೆ. ನಾವು ಹೀಗೆ ಮಾತಾಡುತ್ತಿರುವಾಗ ಶ್ರೀಮತಿ ಕೆಂಟರಿಗೆ ಕಣ್ಣು ಸನ್ನೆ ಮಾಡಿ ಒಳಗೆ ಹೋದ ಹಿರಿಯ ಕೆಂಟರನ್ನೂ ಹಿಂಬಾಲಿಸಿದ ತಾಯಿಯನ್ನೂ ನೋಡಿ ರೋಸ್ಲಿ ಮುಗುಳ್ನಗೆ ನಕ್ಕಳು. ಅವರು ತುಸು ಮಧ್ಯ ಸೇವನೆಗಾಗಿ ಒಳಹೋದುದೆಂದು ಕಣ್ಣುಸನ್ನೆಯಲ್ಲಿ ನನಗೆ ಸೂಚಿಸಿ ಮತ್ತೆ ನಕ್ಕಳು. ನಾವು ಇಬ್ಬರೇ ಹೊರಕೋಣೆಯಲ್ಲಿ ಕುಳಿತು ಹತ್ತು ಹದಿನೈದು ನಿಮಿಷಗಳಷ್ಟು ಕಾಲ ಮರುದಿನದ ನಮ್ಮ ಬೇಟೆಯ ಕಾರ್ಯಕ್ರಮವನ್ನು ಕುರಿತು ಮಾತಾಡುತ್ತಿದ್ದೆವು. ಆಗ ಆ ಇಂಗ್ಲಿಷ್ ದಂಪತಿಗಳು ಹೆಗಲಿಗೆ ಕೈಹಾಕಿ ತಬ್ಬಿಕೊಂಡು ತೂರಾಡುತ್ತಾ ಹೊರಗೆ ಬಂದರು. ಎಡಗೈಯಲ್ಲಿ ಶ್ರೀ ಕೆಂಟರು ಭದ್ರವಾಗಿ ದ್ರಾಕ್ಷಾರಸದ ಕುಪ್ಪಿ ಹಿಡಿದಿದ್ದರು. ಊಟಕ್ಕೆ ಮೊದಲು ಇದನ್ನು ಜೀರ್ಣರಸವೆಂಬಂತೆ ಮಕ್ಕಳೂ ತೆಗೆದುಕೊಳ್ಳಲು ಇಂಗ್ಲಿಷ್ ಜನರಲ್ಲಿ ನಿಷೇಧವಿಲ್ಲವೆಂದು ರೋಸ್ಲಿಯು ನನಗೆ ತಿಳಿಸಿದಳು.

ರುಚಿಯಾದ ವೈನನ್ನು ಎಲ್ಲರಿಗೂ ಅರ್ಧ ಲೋಟದಷ್ಟು ಹಿರಿಯರೇ ನಮಗೆ ಕೊಟ್ಟು ಅವರೂ ತಮ್ಮ ಗ್ಲಾಸುಗಳಿಗೆ ಹೊಯ್ದುಕೊಂಡರು. ಒಬ್ಬರ ಲೋಟಕ್ಕೆ ಮತ್ತೊಬ್ಬರ ಲೋಟವು ಮುತ್ತಿಕ್ಕುವಂತೆ ಮೆಲ್ಲನೆ ತಾಗಿಸಿ ಹಿರಿಯರು ''ಕಿರಿಯರ ಆರೋಗ್ಯ ಭಾಗ್ಯವನ್ನು ಆಶಿಸಿ'' ಎಂದು ಕುಡಿಯಲು ಆರಂಭಿಸಿದರು. ಈ ತನಕ ಹಿರಿಯರೆದುರಿಗೆ ಯಾವೊಂದು ಮಾದಕ ಪೇಯವನ್ನೂ ಮುಟ್ಟಿ ನೋಡಿಯೂ ನನಗೆ ಅಭ್ಯಾಸವಿಲ್ಲ. ನಾನು ಸಂಕೋಚಪಡುತ್ತಿರುವುದನ್ನು ಕಂಡ ರೋಸ್ಲಿಯು ಅವಳ ಗ್ಲಾಸನ್ನು ನನ್ನ ಗ್ಲಾಸಿಗೆ ಸೋಕಿಸಿ ದ್ರಾಕ್ಷಾರಸವನ್ನು ಹೀರಲು ಆರಂಭಿಸಿದಳು. ದ್ರಾಕ್ಷಾರಸವನ್ನು ನಿಧಾನವಾಗಿ ಸೀಪಿದರೆ ಅದರ ರುಚಿಯೇ ಬೇರೆ ಎಂದು ಅದರಲ್ಲಿ ಅಮಲಿನ ಅಂಶ ಅತಿ ಕಡಿಮೆಯೆಂದೂ ನನಗೆ ತಿಳಿಸಿದಳು. ಹೆತ್ತವರು ಹೊರಗೆ

ಹೋಗಿದ್ದ ಸಮಯ ಸಾಧಿಸಿ ನನಗರಿಯದಂತೆ ನಮ್ಮಿಬ್ಬರ ಲೋಟಾಗಳನ್ನು ಬದಲಿಸಿ ಇರಿಸಿದ್ದು ಆ ಗಳಿಗೆಯಲ್ಲಿ ಅವಳು ಮಾಡಿದ ಚಮತ್ಕಾರವಾಗಿತ್ತು. ನಾನು ಅವಳ ಎಂಜಲು ಕುಡಿದೆನೆಂದು ಒಮ್ಮೆ ನಕ್ಕರೂ ಅವರ ಸಂಪ್ರದಾಯದಲ್ಲಿ ಮೇಲು ಕೀಳೆಂಬ ಭಾವನೆಯನ್ನು ತೊಡೆದ ದ್ಯೋತಕವು ಅದೆಂದು ಸ್ಪಷ್ಟೀಕರಿಸಿದಳು. ನಾನು ಸಿಡುಕದೆ ಅವಳ ಸಂತೋಷದಲ್ಲಿ ಭಾಗಿಯಾದೆ. ಅಷ್ಟರಲ್ಲಿ ನನಗಾಗಿ ಗಂಜಿಯೂ ಚಟ್ನಿಯೂ ಸಿದ್ಧವಾಯಿತು. ರೋಸ್ಲಿಯು ಪ್ಲೇಟುಗಳನ್ನು ತಿಕ್ಕಿ ನಮ್ಮೆಲ್ಲರ ಮುಂದಿಟ್ಟು ತಂದೆ ತಾಯಿಗಳೊಂದಿಗೆ ''ನಾನೂ ರೈಯ ಊಟವನ್ನೇ ಉಣ್ಣುತ್ತೇನೆ'' ಎಂದು ನನಗೆ Company ಕೊಟ್ಟಳು. ಹಿರಿಯರು ತಮಗೆ ಬೇಕಾದುದನ್ನು ತೆಗೆದುಕೊಂಡು ಊಟಕ್ಕೆ ಆರಂಭಿಸಿದರು. ನಾನೂ ರೋಸ್ಲಿಯೂ ಗಂಜಿ ಬಳಸಿಕೊಂಡು ಚಟ್ನಿಯನ್ನು ನೆಂಜಿಕೊಳ್ಳುತ್ತಾ ಉಣ್ಣತೊಡಗಿದೆವು. ನಾನು ಬದಿಯಲ್ಲಿದ್ದ ಮೀನಿನ ಪಾತ್ರೆಯಿಂದ ಒಂದು ಮೀನಿನ ತುಂಡನ್ನು ಮುಳ್ಳು ಚಮಚೆಯಿಂದ ತೆಗೆದು ಚಟ್ನಿಯಲ್ಲಿ ಅದ್ದಿ ತಿಂದು ನೋಡುತ್ತೇನೆ; ನಮ್ಮ ಮಸಾಲೆಯ ಸೇರುವಿಕೆಯಿಂದ ಮೀನು ತುಂಬಾ ರುಚಿಯಾಗಿದೆ ! ರೋಸ್ಲಿಗೆ ತಿಂದು ನೋಡೆಂದು ಹೇಳಿದೆ. ಅವಳೂ ನನ್ನನ್ನು ಅನುಸರಿಸಿ ಬಾಯಿ ಚಪ್ಪರಿಸುವುದನ್ನು ಕಂಡು ಹಿರಿಯರೂ ನಮ್ಮ ಸಾಲಿಗೇ ಬಂದು ನನ್ನ ಈ ಆಯ್ಕೆಯನ್ನು ಬಾಯಿ ತುಂಬಾ ಹೊಗಳಿದರು.

ನಾವು ಊಟ ಮುಗಿಸಿ ವೆರಾಂಡಕ್ಕೆ ಬರುವಾಗ ಗಂಟೆ ಸುಮಾರು ಒಂಬತ್ತು ಒಂಬತ್ತೂವರೆಗೆ ಬಂದಿತ್ತು. ಕೆಳಗೆ ದೂರದಿಂದ ಸೈಮನ್ ಲೋಬೋರ ಮನೆಯ ಹತ್ತಿರವಿಟ್ಟ ಸುಡುಮಣ್ಣು ಉರಿದು ಮನೆಯ ಮಾಡು ಹಟ್ಟಿಕೊಟ್ಟಿಗೆಗಳು ಹಾಲಿನಂತೆ ಸುರಿಯುತ್ತಿರುವ ಬೆಳದಿಂಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದವು. ಕುದುರೆಮುಖದ ಪೂರ್ವಕ್ಕಿರುವ ಹಿರಿಮಾರ ಹುಪ್ಪೆಯ ತಲೆ ಎತ್ತಿ ಆಕಾಶವನ್ನು ಚುಂಬಿಸಲು ಹವಣಿಸುವಂತೆ ಕಾಣುತ್ತದೆ. ಅದರ ಆಚೆಗಿರುವ ಜವಳಿಗುಡ್ಡೆ, ಕಡ್ತಿಕಲ್ಲಘಾಟಿಯು ದಿಗಂತದತ್ತ ಬಾಗಿದಂತೆ ಗೋಚರಿಸುತ್ತಿವೆ. ಹಿರಿಯರು ಆಗಾಗ್ಗೆ ಒಂದೊಂದು ಪ್ರಶ್ನೆಯನ್ನು ಕೇಳುತ್ತಿದ್ದರು. ನಾನು ತಡವರಿಸಿ ಉತ್ತರಿಸುವುದನ್ನು ಕಂಡ ರೋಸ್ಲಿಯು ಅಭ್ಯಾಸವಿಲ್ಲದ ನಾನು ದ್ರಾಕ್ಷಾರಸದ ಅಮಲಿನಿಂದ ತಬ್ಬಿಬ್ಬಾಗಿ ಉತ್ತರಿಸುವುದು ಎಂಬ ಭಾವನೆಯಿಂದ ನಗುತ್ತಿದ್ದಳು. ಆ ಮುಗ್ಧ ಹೆಣ್ಣಿಗೇನು ಗೊತ್ತು ? ನಾನು ಸೈಮನ್ ಲೋಬೋರವರ ಮನೆಯಲ್ಲಿ ಮೊಗೆ ಗಟ್ಟಲೆ ಹೆಂಡ ಕುಡಿದು ಕುಣಿದವನೆಂದು? ಬಂಗಲೆಯ ತೋಟದ ಮಲ್ಲಿಗೆ, ಜಾಜಿ, ಬಿರಿದ ಗುಲಾಬಿಯ ಕಂಪೂ, ಸುತ್ತಲ ಪರಿಸರದ ನೋಟವೂ ನನ್ನ ಮನ ಸೆಳೆದಿದ್ದವೆಂದು ಅರಿಯುವ ಪ್ರಬುದ್ಧೆ ಅವಳಾಗಿರಲಿಲ್ಲ. ಆದರೆ ಆ ಹಿರಿಯರು ನನ್ನ ತಲ್ಲೀನತೆಯನ್ನು ಕಂಡು ಮೆಚ್ಚಿ 'ರೈ ನಿನ್ನ ವೈವಿಧ್ಯಮಯ ಅಭಿರುಚಿಗೆ ನಮ್ಮ ವಂದನೆಗಳು. ಇನ್ನು ಹಾಲು ಕುಡಿದು ಮಲ

ಗೋಣವೇ?' ಎನ್ನುವಾಗ ದೂರದಿಂದ ಹುಲಿಯ ಮೊರೆಯುವಿಕೆ ಕೇಳಿಬಂತು. ನನ್ನಿಂದ ದೂರ ಕುಳಿತಿದ್ದ ರೋಸ್ಲಿ ಒಡನೆ ಕಂಪಿಸಿ ಮೆಲ್ಲಗೆ ನನ್ನನ್ನು ಒತ್ತಿ ಕುಳಿತುದನ್ನು ಕಂಡು ನಾನು ಅವಳ ಭೀರುತನಕ್ಕೆ ನನ್ನಲ್ಲೆ ನಕ್ಕೆ. ನಾನು ಒಮ್ಮೆ ನಿಧಾನವಾಗಿ ಆಕಳಿಸಿ ನಿದ್ರಿಸಲು ಸಿದ್ಧನೆಂದು ಸೂಚಿಸಿದೆ. ಎಲ್ಲರೂ ಎದ್ದು ರಾತ್ರಿಯ ನಮಸ್ಕಾರ ವಿನಿಮಯ ಗೈದು ಮಲಗಲು ತಮತಮಗೆ ಸಿದ್ಧವಾಗಿದ್ದ ಕೋಣೆಗಳಿಗೆ ತೆರಳಿದೆವು. ಉಣ್ಣೆಯಿಂದಲೇ ಸಿದ್ಧವಾದ ಹಾಸಿಗೆ, ದಿಂಬು, ಚಳಿಯು ಸೋಕದಂಥ ನಯವಾದ ಕಾಶ್ಮೀರಿ ಉಣ್ಣೆಯ ಶಾಲನ್ನು ಹೊದ್ದು ತಲೆದಿಂಬಿಗೆ ತಲೆಯನ್ನು ಕೊಟ್ಟುದು ಮಾತ್ರ ನೆನಪು. ದ್ರಾಕ್ಷಾರಸದ ಪ್ರಭಾವವೋ? ಸುಂದರ ದೃಶ್ಯಾವಳಿಯನ್ನು ಸವಿದ ಸಂತುಷ್ಟಿಯೊ? ನಡೆದು ಬಂದ ಆಯಾಸವೋ? ಅಂತೂ ಗಡದ್ದು ನಿದ್ದೆ. ಮರುದಿನ ಏಳೂವರೆ ಗಂಟೆಗೆ ಇಂಗ್ಲಿಷ್ ಕುಟುಂಬವು ಆ ವೇಳೆಗಾಗಲೇ ಎದ್ದು ಮುಖಮಾರ್ಜನವನ್ನು ತೀರಿಸಿ ವಿಶಾಲ ಪ್ರಾಂಗಣದಲ್ಲಿ ಏಸುದೇವನ ಕಾಲ ಬಳಿ ಮಂಡಿಯೂರಿ ಸುಶ್ರಾವ್ಯವಾಗಿ ಹಾಡುವ ಪ್ರಾರ್ಥನೆಯು ನಾನು ಮಲಗಿದ್ದಲ್ಲಿಗೆ ಕೇಳಿಸಿತು.

ನಾನೂ ಲಗುಬಗೆಯಿಂದ ಎದ್ದು ಬಹಿರ್ದೆಸೆಗೆ ಹೋಗಿ ಮುಖ ತೊಳೆದು ಬಂದು ಉದಿಸಿದ ಸೂರ್ಯದೇವನಿಗೆ ನಮಸ್ಕಾರ ಮಾಡಿ ಇಂಗ್ಲಿಷ್ ಕುಟುಂಬದೊಂದಿಗೆ ಕಾಫಿ ಫಳಾರಕ್ಕೆ ಸಿದ್ಧನಾದೆ. ಫಳಾರ ಮುಗಿದೊಡನೆಯೆ ರೋಸ್ಲಿ "ರೈ, ಒಂಭತ್ತು ಗಂಟೆಗೆ ಮೊದಲು ಮೃಗಗಳನ್ನು ಕಂಡೇ ತೀರಬೇಕೆಂದು ನೀನು ನಿನ್ನೆ ಹೇಳಿದೆಯಲ್ಲ. ಹುಂ, ಹೊರಡೋಣ" ಎಂದು, ಒಳಗೆ ಹೋದವಳು ಬೇಟೆಯ ವೇಷವನ್ನು ಧರಿಸಿ ತೋಟೆಯ ಬೆಲ್ಟನ್ನು ಎದೆಗೆ ತೂಗ ಹಾಕಿ ದೂರ ದರ್ಶಕವನ್ನೂ ಹೆಗಲಿಗೆ ಇಳಿಬಿಟ್ಟು ನಮ್ಮ ಮುಂದೆ ಅವಳು ೩೦೩ ರೈಫಲನ್ನು ಹಿಡಿದು ಬಂದ ಠೀವಿ ಮರೆಯುವಂತಿಲ್ಲ. ನಾನೂ ಸಿದ್ಧನಾಗಿ ಬರಲು ಕೋಣೆಗೆ ತೆರಳಿದೆ. ಗಂಡು ಮಕ್ಕಳಿಲ್ಲದ ದಂಪತಿಗಳು, ಮಗಳು ನಿಂತ ನಿಲುವನ್ನು ಮೆಚ್ಚುಗೆಯ ನೋಟದಿಂದ ಸವಿಯುತ್ತಿದ್ದರು.

ಹಿಂದಿನ ರಾತ್ರಿ ಮಾತಾಡುವಾಗ ವಿಲಾಯತಿಯ ಜನರು ಬೇಟೆಯ ಸಂದರ್ಭದಲ್ಲಿ ಸಂತಾನ ರಕ್ಷೆಯ ಕಾರಣಕ್ಕಾಗಿ ಹೆಣ್ಣು ಮೃಗಗಳಿಗೆ ಎಂದೂ ಹೊಡೆಯಬಾರದೆಂಬ ನಿಯಮವಿದೆಯೆಂದು ನನಗೆ ಗೊತ್ತಾಗಿತ್ತು. ಈ ನಿಯಮದಲ್ಲಿ ಹಂದಿಯನ್ನು ಮಾತ್ರ ಹೊರತು ಪಡಿಸಿದರಂತೆ. ಹಾಗೆ ಯಾರಾದರೂ ತಪ್ಪಿ ಹೊಡೆದಲ್ಲಿ ಮೃಗದ ಜಾತಿಗೆ ಅನುಸಾರವಾಗಿ ಬೇಟೆಗಾರರ ಸಂಘದಲ್ಲಿ ನಿರ್ಣಯವಾದ ತಪ್ಪನ್ನು ಸಂಘಕ್ಕೆ ತೆತ್ತೇ ತೀರಬೇಕಾಗಿತ್ತು. ಅಂದು ಕಾಡುಕೋಣ, ಕಡವೆ ಶಿಕಾರಿಗೆ ನಾವು ಹೋಗುವವರಾದುದರಿಂದ ಎಲ್ಲಿಯಾದರೂ ಅವಸರದಿಂದ ಹೆಣ್ಣು ಮೃಗವನ್ನು ಹೊಡೆದರೆ ಸಾವಿರಾರೂ ರೂಪ್ಯಾಗಳ ದಂಡ

ತೆರಬೇಕಾಗಬಹುದು. ಹಾಗಾಗಿ ಬೇಟೆಯಾಗದಿದ್ದರೂ ಚಿಂತಿಲ್ಲ. ಹೆಣ್ಣು ಗಂಡೆಂಬ ನಿಶ್ಚಯವಾಗದೆ ಬೇಟೆಗೆ ಸಿದ್ಧರಾಗಿ ಬಂದ ನನ್ನನ್ನೂ ರೋಸ್ಲಿಯನ್ನು ಜಯಶಾಲಿಗಳಾಗಿ ಬನ್ನಿರೆಂದು ಕೆಂಟ್ ದಂಪತಿಗಳು ಬೀಳ್ಕೊಟ್ಟರು.

ಈ ಹೊತ್ತಿಗೆ ದುಮಿಂಗರೂ ಬಂದು ತಲುಪಿದ್ದರು. ಆತನೂ ನಿಪುಣ ಶಿಕಾರಿ. ಆ ಊರಿನಲ್ಲಿ ಎಲ್ಲಾ ಜಾಡನ್ನೂ ಅರಿತು ನುರಿತವನು. ಅವನೂ ತನ್ನ ೧೨ ಬೋರಿನ ಒತ್ತೆ ನಳಿಗೆಯ ಕೋವಿಯನ್ನು ಹಿಡಿದು ಸಿದ್ಧನಾಗಿಯೇ ಬಂದು- ದೊರೆಗಳೊಡನೆ ತನ್ನಲ್ಲಿ ಗುಂಡಿನ ತೋಟೆ ಕಡಿಮೆಯಾಗಿದೆ ಎಂದೂ, ಎರಡು ತೋಟಾಗಳನ್ನು ದಯಪಾಲಿಸಬೇಕೆಂದೂ ಕೇಳಿದ. ಕೆಂಟರು ನಾಲ್ಕು ತೋಟೆಗಳನ್ನು ಅವನಿಗೆ ಕೊಟ್ಟು ನಮಗೆ ಮಗುದೊಮ್ಮೆ ಎಚ್ಚರಿಕೆಯಿಂದ ಇರುವಂತೆ ಹೇಳಿ ಬೀಳ್ಕೊಟ್ಟರು.

ಹಿಂದಿನ ದಿನ ತೆಂಕು ಭಾಗದಿಂದ ಹುಲಿಯ ಗರ್ಜನೆಯನ್ನು ಕೇಳಿದ್ದು, ದುಮಿಂಗನು ಆ ಆಸುಪಾಸಿನಲ್ಲಿ ಯಾವ ಮೃಗವೂ ಇಂದು ಇರದೆಂದೂ, ಬಂಗಲೆಯ ಮೂಡುದಿಕ್ಕಿನ ಸುಮಾರು ಒಂದೂವರೆ ಮೈಲು ದೂರದ ಕಾಟಿಕಾನದಲ್ಲಿ ಕಾಟಿಗಳಾಗಲೀ ಕಡವೆ ಹಿಂಡಾಗಲೀ ಇರುತ್ತವೆಂದೂ ಹೇಳಿದನು. ಆದರೆ ಅಲ್ಲಿಗೆ ಹೋಗುವ ದಾರಿಯು ಮಾತ್ರ ಬಹಳ ಕಡಿದು ಮತ್ತು ಕೊರಕಲು. ದಾರಿಗೆ ಹೆದರಿ ಖಂಡಿತಾ ಮೃಗವಿರುವ ತಾವನ್ನು ಬಿಟ್ಟರೆ ನಮ್ಮ ಜವ್ವನದ ಅಭಿಮಾನಕ್ಕೆ ಕುಂದಲ್ಲವೇ? ಅಲ್ಲಿಗೆ ಹೋಗೋಣವೆಂದು ಒಂದರ್ಧಮೈಲು ಮುಂದುವರಿದಿರಬಹುದು. ಬಳಿಯಿದ್ದ ಮರದಡಿಯಿಂದ ಕಾಡುಮೇಕೆಯೊಂದು ಮಿಂಚಿನಂತೆ ನೆಗೆಯಿತು."Shoot". ಎಂದೆ ರೋಸ್ಲಿಗೆ. ಆಕೆಯು ಓಡುವ ಮೇಕೆಯನ್ನು ನೋಡುತ್ತಾ ರೈಫಲನ್ನು ಎದೆಗಾಣಿಸಿ ನಿಂತಳಲ್ಲದೆ ಕುದುರೆಯನ್ನು ಮೀಟಲೇ ಇಲ್ಲ. ನಾನು ಪ್ರಥಮ ಶಿಕಾರಿಯನ್ನು ಅತಿಥಿಯೇ ಮಾಡಲಿ ಎಂದು ತೆಪ್ಪಗಿದ್ದೆ. ಮಿಕವು ನಮ್ಮ ಗುರಿಯನ್ನು ಕಳೆದು ಓಡಿತು. ರೋಸ್ಲಿಯು ಎದೆಗಾನಿಸಿದ ರೈಫಲನ್ನು ಕೆಳಮುಖವಾಗಿ ಹಿಡಿದು ''ಏನು ಮಾಡಲಿ. ಹೆಣ್ಣೋ ಗಂಡೋ ನಿಶ್ಚಯವಾಗದೆ ಹೊಡೆಯುವುದು ಹೇಗೆಂದು ನೋಡುತ್ತಾ ನಿಂತಿದ್ದೆ. ಅದು ಓಡಿ ಹೋಯಿತು.'' ಎಂದು ಬೊಂಬೆಯನ್ನು ಕಳಕೊಂಡ ಮಗುವಿನಂತೆ ಮುಖ ಮಾಡಿದಳು. ಇನ್ನು ಇವಳು ಬೇಟೆಯಾಡಿದಂತೆಯೆ ಎಂದು ನಾನು ಯೋಚಿಸಿಕೊಂಡೆ.

ನಮ್ಮ ಪಯಣವು ಮುಂದುವರಿಯಿತು. ಕಾಟಿಪಳ್ಳದ ಹತ್ತಿರ ಬಂದೆವೆಂದು ದುಮಿಂಗರೆಂದರು. ಎದುರಿಗೆ ಕಾಣುವ ನಿಡಿದಾದ ಕಲ್ಲಿನ ಬುಡಕ್ಕೆ ಹೋಗಿ ಅಲ್ಲಿಂದ ಪಳ್ಳದತ್ತ ಇಣುಕಬೇಕು. ಮೃಗಗಳ ಘ್ರಾಣೇಂದ್ರಿಯವು ಬಲು ಸೂಕ್ಷ್ಮ. ಸ್ವಲ್ಪ ಸೋವು ಸಿಕ್ಕಿದರೂ ಓಡಿದವೆಂದೇ ಅರ್ಥ. ಅದಕ್ಕಾಗಿ ಬೇಟೆಗಾರರೊಂದಿಗೆ ರೋಸ್

ಪೌಡರ್ ಇದ್ದೇ ತೀರಬೇಕು. ಗುಲಾಬಿಯ ಕಂಪು ಮೃಗಗಳಿಗೆ ಅಭ್ಯಾಸವಿರುವುದರಿಂದ ಈ ಪರಿಮಳವನ್ನು ಅವು ಗಮನಿಸುವುದಿಲ್ಲವೆಂದು ನನ್ನ ಅನುಭವ. ರೋಸ್ಲಿಯೊಂದಿಗಿದ್ದ ಪೌಡರನ್ನು ಮೈತುಂಬಾ ನಾವಿಬ್ಬರೂ ಚೆಲ್ಲಿಕೊಂಡು ಬೆವರು ವಾಸನೆ ಬರುತ್ತಿದ್ದ ದದಿಂಗರಿಗೂ ಕೊಟ್ಟು ಕಲ್ಲಿನೆಡೆಗೆ ಮುಂದೆ ನಡೆದೆವು. ಬಂಡೆಯೆಡೆಯಿಂದ ಇಣಿಕಿದ ದುಮಿಂಗರ ಕೈಸನ್ನೆಯಿಂದ ಉಲ್ಲಾಸಗೊಂಡು ಏಳುವುದು ಬೀಳುವುದನ್ನೂ ಗಮನಿಸದೆ ಜೂಜಿನ ಕುದುರೆಗಳಂತೆ ಓಡಿ ಅಲ್ಲಿಂದ ನಾವೂ ಇಣಿಕಿದೆವು ನೋಡುವುದೇನು?

ಒಂದಲ್ಲ, ಎರಡಲ್ಲ, ನಾಲ್ಕಲ್ಲ, ಹನ್ನೆರಡು ದೊಡ್ಡ, ಸಣ್ಣ ಕಾಟಿಗಳು ಸುತ್ತುಗಟ್ಟಿ ಮಲಗಿವೆ. ಮೆಲುಕು ಹಾಕುತ್ತಾ ಮೇಲೆರಗುವ ನೊಣಗಳನ್ನು ತಮ್ಮ ಬಾಲದ ಚವರಿಯಿಂದ ಬೀಸಿ ಓಡಿಸುತ್ತಾ ನಿರ್ಭೀತವಾಗಿದೆ. 'ಹೋ, ಅಪೂರ್ವ' ಎಂಬ ಉದ್ಗಾರವು ರೋಸ್ಲಿಯ ಬಾಯಿಯಿಂದ ಬಂತು. ''ಹುಂ, ಹೊಡೆ'' ಎಂದು ಪಿಸುಗುಟ್ಟಿದೆ. ''ಅದರಲ್ಲಿ ಗಂಡಾವುದು?'' ಎಂದು ಪ್ರಶ್ನಿಸಿದಳು. ಅದು ಗಂಡು ಹೆಣ್ಣಿನ ಚಹರೆಯನ್ನು ವಿವರಿಸುತ್ತಾ ಕುಳಿತುಕೊಳ್ಳುವ ಸಮಯವಾಗಿರಲಿಲ್ಲ. ಒಂದು ನಿಮಿಷ ಕಳೆದರೆ ನಮ್ಮ ಸೋವು ಸೂಕ್ಷ್ಮಗ್ರಾಹಿಗಳಾದ ಮೃಗಗಳಿಗೆ ಗೊತ್ತಾಗದಿರದು. ''ಅದೋ ಹಿಂಡಿನಿಂದ ಕೊಂಚ ಮುಂದಾಗಿ ಬಂಗಲೆಯತ್ತ ಮುಖ ಮಾಡಿ ಮಲಗಿರುವುದೇ ಗಂಡು, ಹೊಡೆ'' ಎಂದೆ. ''ಅದು ಹೇಗೆ ನಿನಗೆ ಗೊತ್ತು? ಅದೇಕೆ ಹೆಣ್ಣಾಗಿರಬಾರದು?'' ಎಂದು ಮರುಪ್ರಶ್ನಿಸಿದಳು. ಹೇಗಪ್ಪಾ ಇವಳನ್ನು ಒಪ್ಪಿಸುವ ರೀತಿ? 'ಓ ಕಾಟಿ, ಒಮ್ಮೆ ಎದ್ದು ನಿಲ್ಲು . ನಮ್ಮ ದೊರೆಸಾನಿಗೆ ನಿನ್ನನ್ನು ಹೊಡೆಯಬೇಕಂತೆ ಕಾಲೆತ್ತು. ನೀನು ಗಂಡೋ ಹೆಣ್ಣೋ ಎಂದು ತಿಳಿಯದೆ ಆಕೆಯು ನಿನ್ನತ್ತ ಕೋವಿ ಎತ್ತುವುದಿಲ್ಲವಂತೆ. ಆಕೆಯನ್ನು ಕರೆದುಕೊಂಡು ಬಂದುದಕ್ಕೆ ನನಗೆ ಇಷ್ಟು ಉಪಕಾರ ಮಾಡು ಎಂದು ಹೇಳಿದರೆ ವಿಧೇಯತೆಯಿಂದ ವರ್ತಿಸಲು ಅದೇನು ಮನೆಯಲ್ಲಿ ಸಾಕಿ ಪಳಗಿಸಿದ ನಾಯಿಯೇ? ಮೃಗಗಳು ನಮ್ಮ ಇರವನ್ನು ಅರಿತಂತೆ, ಮೆಲುಕಾಡುವುದನ್ನು ಬಿಟ್ಟು ಕಿವಿ ನಿಗುರಿಸಿ ಅತ್ತಿತ್ತ ನೋಡತೊಡಗಿದವು ! ಓಹೋ ! ಅಷ್ಟರಲ್ಲೆ ನಾನು ತೋರಿದ್ದ ಆ ಕಾಡುಕೋಣವು ಏಳಲು ಹವಣಿಸಿ ಮುಂಗಾಲನ್ನು ಮಡಚಲು ನೋಡುತ್ತಿದೆ. ಎದ್ದಿತು ಎನ್ನುವಷ್ಟರಲ್ಲಿ ನೀಡಿನಿಂತ ನನ್ನ ಕೋವಿಯಕುದುರೆಗೆ ಕೈಬೆರಳು ಹೋಗಿ ಕುದುರೆಯನ್ನು ಮೀಟಿತು! 'ಢಂ' ಎಂದಿತು ಕೋವಿ. ಏಳಲು ಹವಣಿಸುತ್ತಿರುವ ಕೋಣನ ನೆತ್ತಿಗಾದ ಅಡಿಕೆ ಗಾತ್ರದ ಗುಂಡಿನ ಏಟಿನಿಂದ ಜಿಲ್ಲೆಂದು ಜೀರ್ಕೋವಿಯಿಂದ ಹೊರಡುವ ಕುಂಕುಮದ ನೀರಿನಂತೆ ರಕ್ತವು ಹಾರಿತು. ಅರಚುತ್ತಾ ಕೋಣವು ಎದ್ದ ರಭಸಕ್ಕೆ ಈಡಿನ ಸದ್ದನ್ನು ಕೇಳಿದ ಅದರ ಸಂಗಾತಿಗಳು ಸುತ್ತಲೂ ಓಡುವ ಗೌಜಿಗೆ ಕಾಡೇ ಅಡಿಮೇಲಾಗುವ ಸದ್ದು.

ಕೋಣವು ಎದ್ದು ನಾಲ್ಕು ಮಾರು ಮುಗ್ಗರಿಸುತ್ತಾ ಬಂದು ಧೊಪ್ಪೆಂದು ಬಿದ್ದು ಕೈಕಾಲನ್ನು ಜಾಡಿಸಿ ಹೊರಳಾಡತೊಡಗಿತು. ನಾನು ಹೆಮ್ಮೆಯಿಂದ ಬೀಗಿದ ಮುಖದಿಂದ ರೋಸ್ಲಿಯ ಮೆಚ್ಚುಗೆಯ ಮಾತನ್ನು ಆಶಿಸಿ ಆಕೆಯತ್ತ ನೋಡುತ್ತೇನೆ. ಬಿಳಿಯ ಮುಖಕ್ಕೆ ಶರೀರದ ರಕ್ತವೆಲ್ಲಾ ಏರಿ ರಕ್ತೇಶ್ವರಿಯಂತೆ ಕೆಂಗಣ್ಣು ಮಾಡಿ ನನ್ನೆಡೆ ನೋಡಿತ್ತಾ "You nonsense stupid. ಅಂದಳು. ನೂರಾರು ನುರಿತ ಬೇಟೆಗಾರರಿಂದ ''ಗನ್ ಬೋಟ್'' ಎಂದು ಹೆಸರು ಗಳಿಸಿದ. ನುರಿತ ಶಿಕಾರಿಯೆಂದು ಖ್ಯಾತನಾಗಿದ್ದ ನನಗೆ, ನನ್ನ ಬೇಟೆಯ ಬಲ್ಮೆಗೆ, ಕೇವಲ ಹುಡುಗಿಯೊಬ್ಬಳಿಂದ ಬೈಗಳ ಪುರಸ್ಕಾರವೇ? ಬೂಟುಗಾಲಿನಿಂದ ಒದೆಯಬೇಕೆನ್ನುವಷ್ಟು ಆವೇಶವುಂಟಾಗಿತ್ತು. ಆದರೆ ಅವಳು ಹುಡುಗಿ, ನನ್ನ ಅತಿಥಿ ! ಕಾಟಿಯು ಕೆಳಗೆ ಕೈಕಾಲು ಹೊಡೆದುಕೊಂಡು ಹೊರಳಾಡಿ ಪ್ರಾಣೋತ್ಕ್ರಮಣ ಕಾಲದ ಆರ್ತನಾದವನ್ನು ಮಾಡಿತು. ಅಸುನೀಗಿದ ಸೂಚನೆಯನ್ನು ನಮಗೆ ಕೊಟ್ಟಿತು. ದುಮಿಂಗರು ಇದನ್ನು ತದೇಕಚಿತ್ತದಿಂದ ನೋಡುತ್ತಿದ್ದಾರೆ. ನಮ್ಮ ಈ ಪೈಪೋಟಿ ಅವರ ಗಮನಕ್ಕೇ ಬಂದಿಲ್ಲ.

ಕ್ರುದ್ಧಕಂಠದಲ್ಲಿ ರೋಸ್ಲಿಯೆಂದಳು-''ರೈ, ನೀನು ಇಷ್ಟು ಕ್ಷುಲ್ಲಕ ಹೃದಯದವನೆಂದು ನಾನು ತಿಳಿದಿರಲಿಲ್ಲ. ಹೆಣ್ಣು ಗಂಡೆಂಬ ನಿರ್ಧಾರಕ್ಕೆ ಬರದೆ ನೀನು ಹೊಡೆದುದು ಅಕ್ಷಮ್ಯ ಅಪರಾಧ. ಇದು ಹೆಣ್ಣಾದರೆ ತಂದೆಯವರು ತಪ್ಪು ಕೊಡಬೇಕಾಗಿ ಬರುತ್ತದೆ. ಹಾಗಾದರೆ ಜೀವವಿದ್ದೂ ಸತ್ತಂತೆ. ಇಂಥ ಅಲ್ಪನೆಂದು ನಿನ್ನನ್ನು ನಾನು ಮೊದಲೇ ಅರಿತಿದ್ದರೆ ನಿನ್ನ ಮಿತ್ರತ್ವಕ್ಕೆ ಕೈ ಚಾಚುತ್ತಿರಲಿಲ್ಲ'' ಎಂದು ಬಿಗಿದ ಮೋರೆಯಿಂದ ಹೇಳಿ ಕಲ್ಲಿಗೊರಗಿ ಕೂತಳು.

ಇದು ನನ್ನ ಬೇಟೆಗಾರಿಕೆಯ ಬಲ್ಮೆಗೆ ಅವಳು ಹಾಕಿದ ಸವಾಲು ! ಇದಕ್ಕೆ ಸೂಕ್ತ ಉತ್ತರ, ಪಂಥಾಹ್ವಾನವನ್ನು ನೀಡದಿದ್ದರೆ ನನ್ನ ಬೇಟೆಗಾರಿಕೆಯ ಅನುಭವ ಸಾಧನೆಗಳಿಗೆ ಮಸಿ ಮೆತ್ತಿದಂತೆ ಎಂದು ಭಾವಿಸಿ ನಾನೆಂದೆ ''ಅದು ಗಂಡು. ನಾನು ಸರಿಯಾಗಿಯೇ ವರ್ತಿಸಿದ್ದೇನೆ. ನೋಡಲ್ಲಿ, ಮುನ್ನೂರು ಗಜ ದೂರದಲ್ಲಿ ಮೃಗವು ಬಿದ್ದಿದೆ. ಗಂಡೋ ಹೆಣ್ಣೋ ಎಂದು ನೋಡುವುದಕ್ಕೆ ಬರಿಯ ಹದಿನೈದು ನಿಮಿಷಗಳ ಕಾಲಾವಕಾಶ. ನೀನು ಅದನ್ನು ಗಮನಿಸದೆ ಹುಚ್ಚರಂತೆ ವರ್ತಿಸುವುದೇಕೆ?'' ''ಅದು ಹೇಗೆ ನೀನು ಗಂಡೆಂಬ ನಿರ್ಧಾರಕ್ಕೆ ಬಂದೆ? ಅದು ಹೆಣ್ಣು. ಹೊರಳುವಾಗ ನಾನು ಅದರ ಕೆಚ್ಚಲನ್ನು ನೋಡಿದೆ'' ಅಂದಳು. ನನಗೂ ಸಿಟ್ಟು ಏರುತ್ತಿತ್ತು. ''ನೀನು ನೋಡಿದ್ದು ಕೆಚ್ಚಲಲ್ಲ. ಅದರ ಬೀಜ'' ಎಂದು ತಟ್ಟನೆ ನುಡಿದೆ. ''ಅಲ್ಲ, ಕೆಚ್ಚಲು'' ಎಂದಳು, ಅವಳು ಹಟವಾದಿಯಾಗಿ ! ನಾನೆಂದೆ ''ನೀನು ಎಷ್ಟಾದರೂ ಹುಡುಗಿ, ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ ಎಂಬ ಗಾದೆಗೆ

ಅನುಗುಣವಾಗಿ ನುಡಿಯುತ್ತಿರುವಿ. ಹುಟ್ಟುಗುಣ ಗಟ್ಟ ಹತ್ತಿದರೂ ಹೋಗದು. ನೀನು ಏನು ಬೇಕಾದರೂ ಹೇಳು. ನಾನು ಹೊಡೆದುರುಳಿಸಿದ ಕಾಟಿ ಮಾತ್ರ ಗಂಡು.'' ಹೀಗೆ ನಾನು ಅಚಲ ನಿರ್ಧಾರದಿಂದ ಹೇಳಿದಾಗ ''ಅದು ಗಂಡಾದರೆ ನೀನು ಹೇಳಿದಂತೆ ಕೇಳಲು ನಾನು ಸಿದ್ಧಳು. ನಿನ್ನ ಕ್ಷಮೆಯಾಚಿಸಿ ನಿನ್ನ ದಾಸಿಯಾಗುತ್ತೇನೆ'' ಎಂದು ಆಕೆ ನಿರ್ಧಾರದಿಂದ ನುಡಿದಳು. ''ಇದು ಸತ್ಯವೋ? ನಾನು ಹೇಳಿದಂತೆ ಕೇಳುವೆಯಲ್ಲವೆ? ನನ್ನ ದಾಸಿಯಾಗುವೆಯಲ್ಲವೇ? ಎಂದು ನಾನೂ ಕ್ರುದ್ಧನಾಗಿ ಕೇಳುವಾಗ ಎಲ್ಲಿಯಾದರೂ ನಾನು ಅವರ ಘನಸ್ಥಿಕೆಗೆ ಕುಂದು ಬರುವಂತೆ ನನ್ನೊಡನೆ ವರ್ತಿಸೆಂದು ಕೇಳುವನೇ? ಎಂಬ ಶಂಕೆಯಿಂದ ನನ್ನೆಡೆಗೆ ದೃಷ್ಟಿಬೀರಿ ನನ್ನ ಮುಖದಲ್ಲಿ ಯಾವ ಕುರುಹನ್ನೂ ಅರಿಯಲಾರದ ಆ ಮುಗ್ಧೆಯು ''ನಾನು ಇಂಗ್ಲಿಷ್ ತರುಣಿ. ನೀನು ಏನೇ ಬೇಕಾದರೂ ಕೇಳು. ಇದೋ ನಾನು ಹೇಳಿದ ಮಾತಿಗೆ ಈ ಜೋತಾಡುವ ಕ್ರೂಜೆಯೇ ಸಾಕ್ಷಿ'' ಎಂದಳು. ಆಗ ನಾನು ''ಅದು ಎಲ್ಲಿಯಾದರೂ ಹೆಣ್ಣು ಕಾಟಿಯಾಗಿದ್ದರೆ ಆ ತಪ್ಪನ್ನು ನನ್ನ ಹೆಸರಲ್ಲಿ ನಿಮ್ಮ ಶಿಕಾರಿ ಸಂಘದ ಮೆಂಬರನಾಗಿ ನಾನು ತುಂಬಲು ಬದ್ಧ. ವಿಲಾಯತಿಯಲ್ಲಿ ನನ್ನ ಮಾವ ಡಾ|ಕೆ.ಎಂ.ರೈಗಳು F.R.C.S..ಮಾಡುತ್ತಿದ್ದಾರೆ. ಅವರಿಗೆ ಬರೆದು ನಿಮಗೆ ಈ ಅಪರಾದವು ತಗಲದಂತೆ ಮಾಡುತ್ತೇನೆ. ಇದಕ್ಕೆ ತಪ್ಪಿದೆನಾದರೆ, ಇದು ನನ್ನ ತಪ್ಪು ಗುರಿಯಾಗಿದ್ದರೆ ಇದೇ ನನ್ನ ಕೊನೆಯ ಬೇಟೆ ಮುಂದಕ್ಕೆ ಕೋವಿ ಮುಟ್ಟಿದರೆ ನಿನ್ನಾಣೆ'' ಎಂದವನೇ ದುಮಿಂಗರಿಗೆ ದುಮುಗುಟ್ಟುವ ಮುಖದಲ್ಲೇ ಆಜ್ಞಾಪಿಸಿದೆ. ''ಕೆಳಗೆ ಹೋಗಿ ಅದರ ಬೀಜವನ್ನು ಚರ್ಮ ಸಮೇತ ಎಳೆದು ಹಿಡಿದು ಕ್ೊಯ್ದುಕೊಂಡು ಬಾ. ಇವಳು ಹೇಳಿದಂತೆ ಅದು ಕೆಚ್ಚಲಾಗದ್ದರೆ ಒಂದು ಮೊಲೆಯನ್ನು ಕ್ೊಯ್ದು ತಾ'' ಎಂದು!

ನಾವು ನಿಂತಲ್ಲಿಂದ ಕಾಡುಕೋಣ ಬಿದ್ದಲ್ಲಿಗೆ ದೂರವು ಸುಮಾರು ಮುನ್ನೂರು ಮಾರಾದರೂ ಅದರ ಬಳಿಗೆ ಹೋಗಬೇಕಿದ್ದರೆ, ಆ ಕಡಿದಾದ ಬೆಟ್ಟದ ಕಿಬ್ಬಿಯಲ್ಲಿ ದಾರಿ ಹುಡುಕುತ್ತಾ ಹೋಗಿ ಬರಲು ಅರ್ಧಘಂಟೆ ಬೇಕು. ನಮ್ಮ ಈ ವಾಗ್ದಾನವನ್ನು ಕೇಳಿದ ದುಮಿಂಗರು ಮುಸಿಮುಸಿ ನಗುತ್ತಾ ನನ್ನ ಬೇಟೆಯ ಕತ್ತಿಯನ್ನು ತೆಗೆದುಕೊಂಡು ಕೋವಿಯನ್ನು ಹೆಗಲಿಗೇರಿಸಿ ಕೆಳಗಿಳಿಯಲು ಅನುವಾದರು. ನಾನು ಸಿಗರೇಟು ಹೊತ್ತಿಸಿ ಮೇಲೆ ನೋಡುತ್ತಾ ಸುರುಳಿ ಸುರುಳಿಯಾಗಿ ಹೊಗೆ ಬಿಡಲು ಆರಂಭಿಸಿದೆ. ಆಪ್ತ ಬಂಧುವನ್ನು ಕಳಕೊಂಡಂತೆ ರೋಸ್ಲಿಯು ಆಕಾಶದತ್ತ ನೋಡುತ್ತಾ ಸಿಟ್ಟಿಳಿಯದೆ ಪುಸ್ ಪುಸ್ಸೆಂದು ಶ್ವಾಸೋಚ್ಛ್ವಾಸ ಮಾಡುತ್ತಾ ಕಾಲು ಚಾಚಿ ಕುಳಿತಿದ್ದಳು. ಇದು ನನ್ನ ಹಾಗೂ ಅವಳ ಕೆಲ ವರುಷಗಳ ನಿಷ್ಕಲ್ಮಶ ಮಿತ್ರತ್ವದ ಕೊನೆಯ ಗಳಿಗೆಯಲ್ಲವೇ? ನಾನು ಗೆದ್ದರೆ ಸೇಡಿನಿಂದ ಅಸಂಬದ್ಧವಾಗಿ ಏನಾದರೂ

ಬೇಡಿದರೆ ಅದನ್ನು ಪೂರ್ತಿಮಾಡಿ ಮತ್ತೆ ಜೀವಹಿಡಿದು ಬಾಳುವ ಹುಡುಗಿ ಆಕೆಯಲ್ಲ. ನಾನು ಸೋತರೆ ಮುಂದಕ್ಕೆ ಅವರ ಸಂಬಂಧವನ್ನು ಕಳಚಿ ಕೊಂಡಂತೆಯೇ ಎಂಬ ಭಾವನೆಯಿಂದ ಮುಸುಕಿದ ಅಳು ಅಡಕೊತ್ತಿನಲ್ಲಿ ಸಿಕ್ಕ ಅಡಕೆಯಂತೆ ಒದ್ದಾಡುತ್ತಿದ್ದಳು. ನಾನು ಗಂಭೀರವಾಗಿ ಒಂದಾದ ನಂತರ ಒಂದು ಸಿಗರೇಟನ್ನು ಸೇದುತ್ತಲೇ ಇದ್ದೆ. ಕಾಲವು ಹೆಳವನಂತೆ ಕುಂಟುತ್ತಾ ನಿಧಾನವಾಗಿ ಸರಿಯುವಂತೆ ಕಾಣುತ್ತದೆ. ಸೋಲು ಗೆಲುವಿನ ಪಂದ್ಯವಿಟ್ಟ ನಮಗೆ ಕಾಲವು ಕ್ಷಿಪ್ರಗತಿಯಿಂದ ಸಾಗಿದರೆ ತಾನೇ ತೃಪ್ತಿ? ಇಬ್ಬರೂ ದುಮಿಂಗರ ಆಗಮನವನ್ನು ನಿರೀಕ್ಷಿಸುತ್ತಾ ಪರಿಯವಿಲ್ಲದ ದಾರಿಕಾರರಂತೆ ಕುಳಿತಲ್ಲಿಯೇ ಇದ್ದೆವು. ಮರಕಟ್ಟಿದ ಕೈಕಾಲನ್ನು ಸರಿಗೊಳಿಸಲು ಎದ್ದು ನಿಂತ ರೋಸ್ಲಿಯು ಒಮ್ಮೆ ತನ್ನ ದೃಷ್ಟಿಯನ್ನು ಹಣೆಗೆ ಕೈಯಿಟ್ಟು, ಬಹುದೂರ ಬೀರಿ ಮತ್ತೂ ಸಂದೇಹದಿಂದ ತನ್ನ ಕಂಕುಳಲ್ಲಿ ಜೋತಾಡುವ ದೂರದರ್ಶಕವನ್ನು ತೆಗೆದು ನೋಡಿದಳು. ನನ್ನಿಂದ ನಾಲ್ಕೈದು ಮಾರು ದೂರಾದ ಆಕೆ ಒಡನೆಯೇ ಭೂತ ಹಿಡಿದವಳಂತೆ- ಓಡಿ ಬಂದು ನನ್ನ ಕತ್ತಿಗೆ ತನ್ನೆರಡೂ ಕೈಗಳನ್ನು ಸುತ್ತಿ ತೆಕ್ಕೆ ಬಿದ್ದು ''ಕ್ಷಮಿಸು ರೈ-ಕ್ಷಮಿಸು. ನಾನು ತಪ್ಪುಗಾರಳು. ನೀನಂದಂತೆ ನಡೆಯುತ್ತೇನೆ. ನೀನು ಗೆದ್ದೆ. ನಾನು ಸೋತೆ. ಸೋಲನ್ನು ಒಪ್ಪಿದ್ದೇನೆ. ನಾನು ನಿನ್ನ ದಾಸಿ'' ಎಂದು ಹೇಳುವುದನ್ನು ಕೇಳಿದ ನಾನು ದಿಗ್ಭ್ರಾಂತನಾಗಿ ಎದುರು ನೋಡುತ್ತೇನೆ. ಚೀಲದಲ್ಲಿ ತುಂಬಿಸಿದ ಸಿಪ್ಪೆ ಸುಲಿಯದ ಜೋಡು ತೆಂಗಿನ ಕಾಯಿಗಳಂತಹ, ಕಾಡುಕೋಣದ ಬೀಜವನ್ನು ಜೋತಾಡಿಸಿಕೊಂಡು ಬರುವ ದುಮಿಂಗರು ಕಾಣಿಸಿದರು ! ನಿರಾಳವಾಗಿ ಉಸಿರೆಳೆದು ಮತ್ತೊಂದು ಸಿಗರೇಟನ್ನು ಹಚ್ಚಿ ಹೆಮ್ಮೆಯಿಂದ 'ಸೋತ ಹೆಣ್ಣೆ?' ಎಂದು ಮೂದಲಿಸುವ ದೃಷ್ಟಿಯಿಂದ ಒಮ್ಮೆ ಅವಳೆಡೆ ನೋಡಿದೆ. ಏನು ತನ್ನ ಕುಲಕ್ಕೆ ಕಲಂಕ ಬರುವ ಪಣವನ್ನು ಇನ್ನು ಈ ಹಿಂದು ಕೇಳಲಿರುವನೋ ಎಂಬ ಭೀತಿಯಿಂದ ಕಂಪಿಸುವ ಆ ಮುಗ್ಧ ಮುಖವನ್ನು ಕಂಡು :''ಅಯ್ಯೋ, ನನ್ನ ತಂಗಿಗೆ ಈ ಪರಿಸ್ಥಿತಿ ಬರುತ್ತಿದ್ದರೆ?'' ಎಂಬ ಮರುಕದ ಭಾವನೆಯಿಂದ ಅವಳತ್ತ ನೋಡಿದೆ. ''ಹುಂ, ನೋಡುವುದೇನು ನಾನು ಸೋತವಳು. ಏನು ಬೇಕಾದರೂ ಕೇಳು. ಮಾತಿಗೆ ತಪ್ಪುವವಳು ಈ ಇಂಗ್ಲಿಷ್ ಹುಡುಗಿಯಲ್ಲ. ಕೇಳು- ಅದೇಕೆ? ಹಿಂಜರಿಯುವಿರಿ?'' ಎಂದು ತನ್ನ ಕೊನೆಯ ನಿರ್ಧಾರಕ್ಕೆ ಬಂದವಳಂತೆ ನುಡಿದಳು.

ನಾನೆಂದೆ ''ಗೆದ್ದೆ ನಾನು. ನನ್ನ ಗೆಲುವಿನ ಕಾಣಿಕೆಯನ್ನು ಪಡೆಯಲು ಹಿಂಜರಿಯುವ ಹಿಂದುವಲ್ಲ ನಾನು. ಸೇಡಿಗೆ ಸೇಡು, ಅಪಮಾನಕ್ಕೆ ಪ್ರತ್ಯಪಮಾನವನ್ನು ಈ ಪ್ರಾಯದಲ್ಲಿ ಮಾಡಲು ಹಿಂಜರಿದರೆ ಮುಂದಕ್ಕೆ ನಾವು ನಿಮ್ಮೊಂದಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಲು ತಕ್ಕವರಾಗುವೆವೆ? ನನ್ನ ಗೆಲುವಿನ

ಕಾಣಿಕೆಯನ್ನು ಹೊಂದಿಯೇ ಹೊಂದುವೆನು'' ಎಂದು ಅವಳ ಮುಖದತ್ತ ನಿರ್ಧಾರದ ದೃಷ್ಟಿಯನ್ನು ಬೀರಿದೆ.

''ಹುಂ ಒದರು'' ಎಂದಳು ನಿಸ್ಸಹಾಯಕ ಪರಿಸ್ಥಿತಿಯ ಮುಖ ಮುದ್ರೆಯಿಂದ. ಆಕೆಯನ್ನು ನೋಡುತ್ತ, ದುಮಿಂಗರ ಕಡೆಗು ದೃಷ್ಟಿ ಬೀರಿ ನಾನೆಂದೆ ''ದುಮಿಂಗರೇ ನೀವು ಕ್ಕೊದು ತಂದ ಈ ಕೋಮದ ಬೀಜಗಳನ್ನು ಬಂಗ್ಲೆಯ ತನಕ ಇವಳೇ ಹೊರಬೇಕು ಮತ್ತು ಇದರ ಪದಾರ್ಥವನ್ನು ನಮ್ಮೆದುರಿನಲ್ಲಿ ಎರಡು ಮೂರು ದಿನವಾದರೂ, ಇವಳೇ ತಿಂದು ಮುಗಿಸಬೇಕು. ಇದು ನನ್ನನ್ನು ಅರಿಯದೆ ಇವಳು ನಿಂದಿಸಿದ ಬಾಲಿಶತನಕ್ಕೆ ಕೊಟ್ಟ ಶಿಕ್ಷೆ'' ! ಈ ಮಾತನ್ನು ಕೇಳಿ ''ಬದುಕಿದೆಯಾ ಬಡ ಜೀವವೇ, ನನ್ನ ಮಾನ, ಪ್ರಾಣ ಉಳಿಯಿತು'' ಎಂದು ದಿಗ್ಗನೆದ್ದವಳೇ ''ಅಣ್ಣಾ'' ಎಂದು ಮತ್ತೊಮ್ಮೆ ಬಿಗಿದಪ್ಪಿ ನನ್ನ ನೆತ್ತಿಗೆ ಒತ್ತಿದ ಮುತ್ತು ಇಷ್ಟೇ ಬೆಲೆಯದೆಂದು ಹೇಳುವಂತಿಲ್ಲ. ಜೀವಮಾನದಲ್ಲೆಂದೂ ಅದನ್ನು ನಾನು ಮರೆಯುವಂತಿಲ್ಲ.

ಕಾಲು ಮಣದ ಭಾರವನ್ನು, ಕೋವಿಯೊಂದಿಗೆ ಹೊತ್ತಕೊಂಡು ಬರುವ ಮಗಳನ್ನೂ ಹಿಂದಿನಿಂದ ಕೋವಿ ಹೆಗಲಿಗೇರಿಸಿ ಗೆಲವಿನ ಠೀವಿಯಿಂದ ಬರುತ್ತಿದ್ದ ನನ್ನನ್ನೂ ಕಂಡ ಕೆಂಟ್ ದಂಪತಿಗಳು ಸ್ವಲ್ಪ ಅಸಮಾಧಾನದ ದೃಷ್ಟಿಯಿಂದ ಇದೇನು ಇವಳು ಇದನ್ನು ಹೊತ್ತು ಬರುವುದು? ಎಂಬ ಪ್ರಶ್ನಾರ್ಥಕ ದೃಷ್ಟಿಯನ್ನು ನಮ್ಮೆಡೆಗೆ ಬೀರಿದರು. ಆಯಾಸ ಹೊಂದಿದ ಹುಡುಗಿಯು ಆ ಕೋಣದ ಬೀಜದ ಗಂಟನ್ನು ಜಗಲಿಯಲ್ಲಿ ಕುಕ್ಕಿ ತನ್ನ ರೈಫಲ್, ದೂರದರ್ಶಕ, ಚೀಲ, ತೋಟೆಯ ಬೆಲ್ಟನ್ನು ಬದಿಗಿರಿಸಿ ಒಮ್ಮೆ ನಿರಾಳವಾಗಿ ಉಸಿರೆಳೆದು 'ಪಪ್ಪಾ, ನಾನಿಂದು ರೈಯೊಂದಿಗೆ ಪಂಥ ಹಾಕಿ ಸೋತೆ. ಅದರ ಪ್ರಾಯಶ್ಚಿತ್ತವಾದ ಶಿಕ್ಷೆಯೆಂದು ಈ ಹೊರೆಯನ್ನು ನಾನೇ ಹೊತ್ತುತಂದೆ. ಇದು ಇವರ ತಪ್ಪಲ್ಲ. ನನ್ನ ದುಡುಕಿನ ನುಡಿಯ ಫಲ'' ಎಂದು ನಡೆದ ಕಥೆಯನ್ನು ಯಥಾವತ್ತಾಗಿ ಬಣ್ಣಿಸಿದಳು. ಪೂರ್ಣವಾಗಿ ಕೇಳಿದ ದಂಪತಿಗಳು ಮನಸ್ಸೇಚ್ಛೆನಕ್ಕು ಭರ್ಜರಿ ಬೇಟೆಗೆ ಸಂತೋಷಗೊಂಡರು. ದುಮಿಂಗರನ್ನು ಕೋಣ ಬಿದ್ದಲ್ಲಿಗೆ ಆಳುಗಳೊಂದಿಗೆ ಹೋಗಿ ಅದರ ತೊಡೆ ಕೈಗಳ ಭಾಗವನ್ನು ಬಂಗ್ಲೆಗೆ ತರುವಂತೆಯೂ ಉಳಿದುದನ್ನು ಅವರು ಹಂಚಿಕೊಳ್ಳುವಂತೆಯೂ, ಸಿರ್ಕದಲ್ಲಿ ಹಾಕಿ ಬಂದು ಮಾಡಿಟ್ಟರೆ ತಮಗೆ ಎರಡು ತಿಂಗಳಿಗೆ ಬೇಕಾದ ಮಾಂಸವಾಯಿತೆಂದೂ ತೃಪ್ತಿಪಟ್ಟರು. ದುಮಿಂಗರನ್ನು ಕಳುಹಿಸಿ ''ರೈ, ಅಷ್ಟು ನಿರ್ಧಾರದಿಂದ ಅದು ಗಂಡೆಂದು ಹೇಗೆ ಹೊಡೆದೆ? ಮತ್ತೆ ಇಂಥ ಘನವಾದ ಪಣಕ್ಕೆ ಸಿದ್ಧವಾದೆ?'' ಎಂದು ಪ್ರಶ್ನಿಸಿದರು.

ನಾನಂದೆ ''ಕಾಡಿನ ಹಿಂಡು ಮೃಗಗಳಿಗೆ ಒಂದು ಹಿರಿಯ ಮೃಗವು ಯಜಮಾನ. ವಿಶ್ರಾಂತಿಯ ಸಮಯದಲ್ಲಿ ಕಿರಿಯ ಮರಿಗಳನ್ನು ಮಧ್ಯದಲ್ಲಿ ಮಲಗಿಸಿ ಹಿಂಡಿನ

ಹಿರಿಯವುಗಳು ನಾಲ್ದೆಸೆಗೂ ಮುಖ ಮಾಡಿ ಯಾವ ದಿಕ್ಕಿನಿಂದ ಅಪಾಯ ಒದಗುವುದೆಂದು ನಿರೀಕ್ಷಣಾ ದೃಷ್ಟಿಯಲ್ಲಿ ಮಲಗುವುದು ಸ್ವಾಭಾವಿಕ. ಅದರಲ್ಲಿ ಯಜಮಾನನು ಆ ಗುಂಪಿನಿಂದ ಮೂರು ನಾಲ್ಕಡಿ ದೂರ ಹೆಚ್ಚಾಗಿ ಅಪಾಯ ಬರುತ್ತಲೇ ಮುಖ ಮಾಡಿ ಮಲಗುವುದು ರೂಢಿ. ಇದನ್ನು ಪಳಗಿದ ಬೇಟೆಗಾರನು ತಿಳಿದಿರುತ್ತಾನೆ. ಆ ಸಮಯಕ್ಕೆ ಬಂಗಲೆಯತ್ತಣಿಂದಲೇ ಬೇಟೆಗಾರರ ಅಪಾಯವು ಜಾಸ್ತಿ. ಅಲ್ಲದೆ ಹಿಂದಿನ ರಾತ್ರಿ ಹುಲಿಯ ಆರ್ಭಟೆಯೂ ತೆಂಕು ದಿಕ್ಕಿನಿಂದಲೇ ಕೇಳಿದ್ದುದರಿಂದ ಆ ಗುಂಪಿನ ಯಜಮಾನನೇ ಆ ರೂಪದಲ್ಲಿ ಮಲಗಿದ್ದುದು. ನನ್ನ ಊಹೆಯಲ್ಲಿ ಏನೂ ಆಶ್ಚರ್ಯವಿಲ್ಲ. ನಾನದನ್ನು ಗ್ರಹಿಸಿದುದು ಜಾಣ್ಮೆಯೂ ಅಲ್ಲ. ಅಲ್ಲದೆ ಗಂಡು ಕೋಣದ ಹಣೆಯಲ್ಲಿರುವ ಬಿಳಿ ಮಚ್ಚೆಯು ಬಟ್ಟಲ ಗಾತ್ರ ದಲ್ಲಿರುತ್ತದೆ. ಹೆಣ್ಣಾಗಿದ್ದರೆ ಅದು ಒಂದು ನಾಮದಂತೆ ಉದ್ದಕ್ಕೂ ಇಲ್ಲವೇ ಚಿಕ್ಕದಾಗಿಯೂ ಇರುತ್ತದೆ. ಗಂಡಿನ ಕೊರಳ ರೋಮರಾಜಿಯು ನೀಳವಾಗಿ ನಿಬಿಡವಾಗಿರುತ್ತದೆ. ಇದನ್ನು ಕಂಡ ಕೂಡಲೇ ಗುರ್ತಿಸುವಷ್ಟು ನಾನು ಪಳಗಿದ್ದೇನೆ. ಕಡವೆ ಜಿಂಕೆಯಾದರೆ ಕವಲು ಕವಲಾದ ನೀಳ ಕೊಂಬು ಇರುವುದು'' ಹೀಗೆ ವಿವರಣೆ ನೀಡುತ್ತಿದ್ದಾಗ ಎವೆಮುಚ್ಚದೆ ನನ್ನನ್ನೇ ನೋಡುವ ರೋಸ್ಲಿಯ ಮುಖವು ಅಚ್ಚರಿ, ಕುತೂಹಲಗಳಿಂದ ಕೂಡಿ ನನ್ನ ಮಾತುಗಳನ್ನು ಕೇಳುತ್ತಿದ್ದಂತೆಯೇ, ಶ್ರೀಮತಿ ಕೆಂಟರು ಬೆಣ್ಣೆ ಸವರಿದ ಬಿಸಿಬಿಸಿಯಾದ ಬ್ರೆಡ್ಡು, ಚಾವನ್ನು ತಮ್ಮ ಮುಂದಿಟ್ಟರು. ಅದನ್ನು ತಿನ್ನುವಾಗ ನನಗೆ ಪುನಃ ನಮ್ಮ ಪಣದ ನೆನಪಾಯಿತು. ನಾನೆಂದೆ ''ಮದರ್, ಈಗ ಇವಳು ಹೊತ್ತು ತಂದ ಬೀಜವನ್ನು ಇವಳೊಬ್ಬಳೇ ತಿಂದು ಮುಗಿಸಬೇಕು. ಮೂರು ದಿನವಾದರೂ ಚಿಂತಿಲ್ಲ. ಆ ಪಂಥಕ್ಕೆ ಅವಳು ಒಪ್ಪಿದ್ದಾಳೆ'' ಎಂದಾಗ ಅವರು ತುಸು ನಗುತ್ತಾ ''ಇದು ಹಿರಿಯರಾದ ನಮಗೆ ನೀನು ಮಾಡಿದ ವಂಚನೆ. ಕಾಡುಮೃಗದ ಮಾಂಸದಲ್ಲಿ ಗಂಡಿನ ಬೀಜ, ಕಲಿಜ, ಹೃದಯಗಳಷ್ಟು ರುಚಿಯಾದ ಭಾಗಗಳು ಬೇರೆಯಿಲ್ಲ. ನೀನು ನಿನ್ನ ತಂಗಿಯ ಪರವಾಗಿ ಶಿಕ್ಷೆಯೆಂದು ನಮ್ಮನ್ನು ಈ ಸುಖಭೋಜನದಿಂದ ಹೊರತು ಪಡಿಸಿದುದನ್ನು ನಾವು ಸರ್ವಥಾ ಒಪ್ಪಿಕೊಳ್ಳುವುದಿಲ್ಲ ! ನೀನು ಏಕ ಪಕ್ಷೀಯವಾಗಿ ಕೊಟ್ಟ ಈ ತೀರ್ಪಿಗೆ ನಿನಗೆ ಶಿಕ್ಷೆಯಾಗಿ ಮಧ್ಯಾಹ್ನದೂಟವೂ ನಿನ್ನೆಯಂಥದೇ'' ಎಂದು ಹೇಳಿ ಮೆಚ್ಚುನೋಟವನ್ನು ನನ್ನೆಡೆಗೆ ಬೀರಿ ಅಡುಗೆ ತಯಾರಾಗಿದೆಯೇ ಎಂದು ತಿಳಿಯಲು ಒಳಕೋಣೆಗೆ ನಡೆದರು.

ನೋಡಬೇಕು-ಹುಲಿ ಹಂದಿಯ ಹೋರಾಟ

ನುರಿತ ಬೇಟೆಗಾರರನ್ನು ಕಲೆ ಹಾಕಿ ಬೇಟೆ ಮಾಡಿಸುವುದೆಂದರೆ ಆ ಕಾಲದಲ್ಲಿ ಗುತ್ತಿನವರ ಪ್ರತಿಷ್ಠೆ ಎಂದು ಪ್ರತೀತಿಯಿತ್ತು. ಡಾ। ಕೆ.ಬಿ. ಶೆಟ್ಟರ ಅಣ್ಣ ರಾಮಯ್ಯ ಶೆಟ್ಟರ ಬೇಟೆಯ ಕರೆಯೋಲೆಯು ಬಂದು ನಮ್ಮನ್ನು ಎಚ್ಚರಿಸಿತು. ನಾವೆಲ್ಲರೂ ಇಂಥ ದಿನ ಆಲಂಗಾರು ಬಂಗ್ಲೆಯಲ್ಲಿ ಸೇರುವುದೆಂದೂ, ಶ್ರೀ ಎ. ವಿ. ಪೂಂಜರು ತನ್ನ ಬೇಟೆಯ ಕೂಟದೊಂದಿಗೆ ಬರುವರೆಂದೂ ಬೇಟೆಯು ಹಿರಿಯ ಶಿಕಾರಿ ಎ.ವಿ. ಪೂಂಜರ ಘನಸ್ಥಿಕೆಗೆ ತಕ್ಕಂತೆ ನಡೆಯಬೇಕೆಂದೂ ಆದೇಶಿಸಿದ್ದರು.

ಆ ಸಮಯದಲ್ಲಿ ಎ.ವಿ. ಪೂಂಜರು ಎಂದರೆ ಅತ್ತಾವರದ ಘನ ಮನೆತನದಲ್ಲಿ ಹುಟ್ಟಿ ಮರಕಡ ಮನೆಯ ಯಜಮಾನರಾಗಿ ನಮ್ಮ ಬಂಟ ಸಮಾಜದಲ್ಲಿ ಮೊತ್ತಮೊದಲ. B.Sc. (Ag) .ಪದವಿಯನ್ನು ಪಡೆದು ಸ್ವಾತಂತ್ರ್ಯಪ್ರಿಯತೆ ಯಿಂದಾಗಿ ಸರಕಾರಿ ಹುದ್ದೆಯನ್ನು ಆಶಿಸದೆ ಹಲವಾರು ಸಂಘ ಸಂಸ್ಥೆಗಳಲ್ಲಿ ಗ ರವಯುತ ಕಾರ್ಯವೆಸಗಿದವರು. ಈಗಲೂ ಮಂಗಳೂರಲ್ಲಿ ನಡೆಯುತ್ತಿರುವ ಎಸ್.ಆರ್.ಎಸ್.ಹೋಮ್, ಜ್ಯೋತಿ ಸಿನಿಮಾ ಮಂದಿರಗಳ ಸ್ಥಾಪನೆಯಲ್ಲಿ ಹಿರಿತನದಿಂದ ದುಡಿದು, ಮನೆತನದ ಆಸ್ತಿ ಬದುಕಿನಲ್ಲಿ ತನ್ನ ವಿದ್ಯೆಯ ಜಾಣ್ಮೆಯನ್ನು ಪ್ರದರ್ಶಿಸಿ ನಮಗೆಲ್ಲಾ ಆದರ್ಶಪ್ರಾಯರಾದ ಕೀರ್ತಿ ಶರೀರಿ.

ಇವರ ಮೆಚ್ಚಿನ ಹವ್ಯಾಸ-ಸಮಾಜ ಸೇವೆ. ಕೃಷಿ ಕರ್ಮಗಳೊಂದಿಗೆ ಬೇಟೆಯೂ ಹಾಸುಹೊಕ್ಕಾಗಿತ್ತು. ಇವರ ಕೂಟದಲ್ಲಿ ಸಿರಿಲ್ ಅಲ್ಬುಕರ್ಕ್, ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್ ಭಂಡಾರಿಗಳಲ್ಲದೆ ಮಂಗಳೂರಿನ ಆ ಕಾಲದ ಅನೇಕ ಗಣ್ಯರೂ ಸೇರ್ಪಡೆಯಾಗಿದ್ದರು. ಇವರೊಂದಿಗೆ ಬೇಟೆಯ ನೆವದಲ್ಲಿ ದಿನ ಕಳೆಯುವುದೆಂದರೆ ನಮ್ಮ ಪಾಲಿಗೆ ಹಬ್ಬ. ಬೇಕಾದಷ್ಟು ಸಿಗರೇಟು, ಖಾಲಿ ಮಾಡಬೇಕೆಂಬಷ್ಟು ಪೆಟ್ಟಿಗೆಯಲ್ಲಿ ತುಂಬಿದ ತೋಟಾ, ರಾತ್ರಿ ಕಣ್ಣು ತಪ್ಪಿಸಿ ಕುಡಿಯಬೇಕಾದರೆ ಬೇಕಾದ ಪಾನೀಯ ! ಇವುಗಳಿಗೆ ಕೊರತೆಯೆಂಬುದೇ ಇಲ್ಲ. ಆ ಸಮಯ ಮಂಗಳೂರಿನ ಸಿರಿಲ್ ಅಲ್ಬುಕರ್ಕ್‌ರ ಹಿರಿಯರು ಸರಕಾರಿ ಪರವಾನಿಗೆ ಹೊಂದಿದ್ದು ದಕ್ಷಿಣ ಕನ್ನಡಕ್ಕೆ ಸರಾಯಿ ಸರಬರಾಜು ಮಾಡುವ ಏಕೈಕ ಡಿಸ್ಟಿಲರ್. ಇಂಗ್ಲಿಷ್ ಆಡಳಿತದ ಕಾಲ; ಎ.ವಿ. ಪೂಂಜರು ಬೇಟೆಯ ನಿಯಮವನ್ನು ಎಳ್ಳಷ್ಟೂ ಉಲ್ಲಂಘಿಸದ ಶಿಕಾರಿ. ''ಮೃಗವನ್ನು ನೋಯಿಸಲು ಹೊಡೆಯಬೇಡ. ಹೊಡೆದರೆ ಅದು

ಸಾಯಲೇಬೇಕು'' ಎಂಬ ಬೇಟೆಯ ಧ್ಯೇಯ ವಾಕ್ಯದಂತೆ ನಡೆಯುವವರು. ನಾವೆಲ್ಲಿಯಾದರೂ ಪ್ರಾಯದ ಹುಮ್ಮಸ್ಸಿನಿಂದ ಹೊಡೆದ ಬೇಟೆಯು ಅರೆ ಪೆಟ್ಟಾಗಿ ಹೋಯಿತೆಂದರೆ ನಮ್ಮನ್ನು ತರಾಟೆಗೆ ತೆಗೆದುಕೊಳ್ಳದೆ ಬಿಡುತ್ತಿರಲಿಲ್ಲ. ಇವರೊಂದಿಗೆ ಇವರ ಭಾವ ಸಾಣೂರು ಮುದ್ದಣ್ಣ ಶೆಟ್ಟರೂ ಇದ್ದರೆಂದ ಮೇಲೆ ನಮಗೆ ಇಚ್ಛೆ ಬಂದಂತೆ ಶಿಕಾರಿಯಲ್ಲಿ ವರ್ತಿಸುವ ಅಧಿಕಾರವೇ ಇರಲಿಲ್ಲ. ಅವರದು ಅಂಥ ಘನಗತ್ತುಗಾರಿಕೆ, ಗಾಂಭೀರ್ಯ.

ಘನ ಶಿಕಾರಿಗಳೊಂದಿಗೆ ಬೆರೆಯುವ ಸದವಕಾಶವನ್ನು ಕಳೆದುಕೊಳ್ಳಬಾರದೆಂಬ ಆತುರದ ನಾನು ಬೈಗು ಹೊತ್ತಿಗೆ ಆಲಂಗಾರು ಬಂಗ್ಲೆಯಲ್ಲಿ ನನ್ನ ಸೋಮಾರಿ ಸಂಘದ ಎರಡು ಮೂರು ಮಂದಿ ಗೆಳೆಯರೊಂದಿಗೆ ಹಾಜರಾದೆ.

ನನ್ನನ್ನು ಕಂಡ ಪೂಂಜರೂ, ಸಂಜೀವ ರೈಗಳೂ 'ನಮ್ಮ ಗನ್ ಬೋಟ್ ಬಂದ' ಎಂದು ನನ್ನನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಬಂದ ಗೆಳೆಯರು. ನೆಂಟರಿಗೆ ಶ್ರೀ ರಾಮಯ್ಯ ಶೆಟ್ಟರ ಅದ್ದೂರಿಯ ಔತಣವು ಸಿದ್ಧವಾಗುತ್ತಿತ್ತು. ಸೂರ್ಯಾಸ್ತಮಾನವಾಯಿತು. ನಾನೂ ಸಿರಿಲ್ ಅಲ್ಬುಕರ್ಕ್‌ರೂ ಒಂದೆಡೆಯಲ್ಲಿ ನಮ್ಮ ಹಿಂದಿನ ಬೇಟೆಯ ದಿನಗಳನ್ನು ನೆನೆಯುತ್ತಾ ಸರಸವಾಡುತ್ತಾ ಕುಳಿತಿದ್ದೆವು. ಹಿರಿಯರು ಬೇರೆ ಎಡೆಯಲ್ಲಿ ಕುಳಿತಿದ್ದರು. ರಾತ್ರಿ ಸರ್ಚ್‌ಲೈಟ್ ಶಿಕಾರಿಗೆ ಹೋಗೋಣವೆಂದರೆ ಹಾಲು ಚೆಲ್ಲಿದಂತೆ ಬೆಳದಿಂಗಳು. ಬೆಳದಿಂಗಳ ದಿನದಲ್ಲಿ ಲೈಟ್ ಶಿಕಾರಿ ಸಾಧ್ಯವೇ ಇಲ್ಲ. ಆದುದರಿಂದ ನಾವು ರಾತ್ರಿ ಗಡದ್ದಾಗಿ ಕೋಳಿ ರೊಟ್ಟಿಯ ಭೋಜನವನ್ನು ತೀರಿಸಿ ಸ್ವಸ್ಥಚಿತ್ತದಿಂದ ನಮ್ಮ ಹಾಸಿನಲ್ಲಿ ಮಲಗಿ ಸುಖನಿದ್ರೆಯನ್ನು ಮಾಡಿದೆವು.

ಮರುದಿನ ಬೆಳಗ್ಗೆ ಏಳೂವರೆ ಘಂಟೆಗೆ ಎದ್ದವರು ಪ್ರಾತರ್ವಿಧಿಗಳನ್ನು ಪೂರೈಸಿ ಬೆಳಗ್ಗಿನ ಉಪಾಹಾರವನ್ನು ತೀರಿಸಿದೆವು. ಬೇಟೆಯ ವೇಷ ಭೂಷಣಗಳನ್ನು ಧರಿಸಿ ಒಬ್ಬೊಬ್ಬರಾಗಿ ಹೊರಬಂದೆವು. ಅದಾಗಲೇ ಬಂದು ನೆರೆದಿದ್ದ ಊರವರು ನಮ್ಮತ್ತ ಕಡೆ ಕವಾಯತಿಗೆ ಸಜ್ಜುಗೊಂಡು ಬಂದ ವೀರ ಯೋಧರನ್ನು ನೋಡುವಂತೆ ನೋಡುತ್ತಿದ್ದರು. ನಾನೂ ಪೂಂಜರ ಪೆಟ್ಟಿಗೆಯಿಂದ ಬೇಕು ಬೇಕಾದ ಉತ್ತಮ ದರ್ಜೆಯ ತೋಟೆಗಳನ್ನು ಆರಿಸಿ ನನ್ನ ಬೆಲ್ಟನ್ನು ಭರ್ತಿಮಾಡಿ ಅಂಗಿ ಚಡ್ಡಿಗಳ ಕಿಸೆಗೂ ಹಾಕಿಕೊಂಡು ಹೊರಬಂದುದನ್ನು ಕಂಡ ಊರಿನ ಗೆಳೆಯರು ಇಂದು ಮೃಗವೆದ್ದರೆ ಬೇಟೆಯಾಗುವುದು ಖಂಡಿತವೆಂಬ ತೃಪ್ತಿಯ ಮುಖದಿಂದ ನೋಡಿದವರೇ ''ಹೊರಡೋಣ''ವೆಂದರು. ಎಲ್ಲರೂ ಬಂಗಲೆಯ ಬಡಗು ದಿಕ್ಕಿನ ಕಾಡಿನತ್ತ ತೆರಳಿದೆವು.

ಆ ಊರಿನ ಬೋಂಟ್ರನು ನಮ್ಮನ್ನು ಒಳ್ಳೊಳ್ಳೆಯ ಗಂಡಿಗಳಲ್ಲಿ ನಿಲ್ಲಿಸಿ ತಾನು

ಮುಂದೊತ್ತಿದನು. ನಾನು ನಿಂತ ಗಂಡಿಯಿಂದ ಸುಮಾರು ನಾನ್ನೂರು, ಐನ್ನೂರು ಗಜ ದೂರದಲ್ಲಿ ನಟ್ಟಿಬೈಲು ಸಂಜೀವ ರೈಗಳು ತನ್ನ ಜೋಡು ನಳಿಗೆಯ ಬಂದೂಕವನ್ನು ನೆಲಕ್ಕೂರಿ ನಿಂತು ಸಿಗರೇಟು ಸೇದುತ್ತಿದ್ದಾರೆ. ಕಾಡು ಸೋವಲು ಆರಂಭಿಸುವುದಕ್ಕೆ ಮೊದಲೇ ಈ ಕರ್ಮಗಳನ್ನೆಲ್ಲಾ ತೀರಿಸಬೇಕು. ಮಧ್ಯೆ ಆಗಾಗ ಹೊಗೆಬತ್ತಿ ಸೇದಿದರೆ ಕಾಡಿನಲ್ಲಿರುವ ಮೃಗಗಳಿಗೆ ನಮ್ಮ ಸೋವು ತಿಳಿದು ಮೃಗಗಳು ಆ ಗಂಡಿಗೆ ಬರಲಾರವು. ಸೋವತರ ಸದ್ದು ಕೇಳುವುದಿಲ್ಲವೆಂದು ನಾನೂ ಒಮ್ಮೆ ಕಿರಿದಾಗಿಸಿ ಕೆಮ್ಮಿ ಸಿಗಾರ್‌ಲೈಟ್ ತೆಗೆಯಲೆಂದು ಕೋವಿಯನ್ನು ಎಡಕೈಯಲ್ಲಿ ಹಿಡಿದು ಬಲಕೈಯನ್ನು ಕಿಸೆಗೆ ಹಾಕುತ್ತೇನೆನ್ನುವಾಗ ಬಡಬಡವೆಂದು ದೊಡ್ಡಿಯಿಂದ ಎದ್ದು ಓಡುವ ಕೋಣಗಳ ಹಿಂಡಿನಂತೆ, ನನ್ನ ಬಳಿಯಲ್ಲೆ ಇದ್ದ ಸೀಗೆ ಬಲ್ಲೆಯಿಂದ ಹಂದಿಗಳ ಹಿಂಡೇ ಎದ್ದು ಓಡಿದುದನ್ನು ಕಂಡೆ. ಇನ್ನೇನು ಸಂಜೀವ ರೈಗಳಿದ್ದ ಗಂಡಿಗೆ ಧಾವಿಸಿಯೂ ಆಗಿತ್ತು! ನಾನು 'ಕ್ಲೀನ್ ಬೌಲ್ಡ್ ಆದ ಬ್ಯಾಟುಗಾರ'ನಂತೆ ಮುಖ ಮಾಡಿದೆ. ಇನ್ನು ಸಂಜೀವ ರೈಗಳು ಏನು ಮಾಡುತ್ತಾರೆಂದು ಆ ಕಡೆಗೆ ದಿಟ್ಟಿಸಿದೆ. ಸದ್ದು ಕೇಳಿ ಗುರಿ ನೋಡಿ ಎದೆ ಏರಿದ ಕೋವಿಯ ಕುದುರೆಯನ್ನು ತೋರ್ಬೆರಳಿನಿಂದ ಮೀಟಿದರು. 'ಢಂ' ಎಂದಿತು ಕೋವಿ; 'ಕಿರ್‍ರ್‍ರೀsss....' ಎಂದಿತು ಹಂದಿ, ಸೈರನ್ನಿನ ಕೂಗಿನಂತೆ! ನಾನೂ ರೈಗಳತ್ತ ಧಾವಿಸಿದೆ. ಅಷ್ಟರಲ್ಲಿ ಅವರ ಕೋವಿ ಮತ್ತೊಂದು ಗುಂಡನ್ನು ಉಗುಳಿತು. ಕೋವಿಯ ನಳಿಗೆಯು ಹೊಗೆ ಕಾರುತ್ತಿದೆ. ರೈಗಳು ಪುನಃ ಕೋವಿಗೆ ತೋಟೆ ತುಂಬಿಸುವ ಹವಣಿಕೆಯಲ್ಲಿದ್ದಾರೆ. ನಾನು ಸುತ್ತಲೂ ದೃಷ್ಟಿ ಬೀರಿದೆ. ಎರಡು ಹಂದಿಗಳು ಜೀವ ತೊರೆಯಲು ಹೊರಳಾಡುತ್ತಿವೆ. ವೇದನೆಯಿಂದ ಅರಚುವ ಅವುಗಳ ಕೂಗು ಕಿವಿ ಕಿವುಡಾಗಿಸುವಂಥದು. ನೆತ್ತರ ಚಿಮ್ಮುವಿಕೆಯನ್ನು ಕಂಡ ನಾನು ಎರಡು ಹಂದಿಗಳಿಗೂ ಮರ್ಮಕ್ಕೆ ಗುಂಡು ತಗಲಿದೆ ಎಂಬ ನಿರ್ಧಾರಕ್ಕೆ ಬಂದಿದ್ದೆ. ರೈಗಳು ನನ್ನನ್ನು ಕುರಿತು-''ಹೊಡೆಯುವ ಆಸೆಯಿದ್ದರೆ ಇನ್ನೂ ಜೀವ ಹೋಗದೆ ಹೊರಳುತ್ತಿರುವ ಆ ದೊಡ್ಡ ಹಂದಿಗೆ ಹೊಡೆ'' ಎಂದರು. ನನ್ನಂಥ ಸ್ವಾಭಿಮಾನಿ ಶಿಕಾರಿಯು ಬೇರೆಯವರು ಹೊಡೆದು ಸಾಯಬಿದ್ದ ಪ್ರಾಣಿಗೆ ಮತ್ತೆ ಈಡು ಹೊಡೆದು 'ನಾಗಪ್ಪನೊಂದಿಗೆ ನಾನೂ ಕಚ್ಚಿದೆ' ಎಂಬ ನಾಣ್ಣುಡಿಗೆ ಪಕ್ಕಾಗುವಂಥವನಲ್ಲ. ''ಬೇಗನೆ ಜೀವ ಹೋಗಬೇಕೆಂದಿದ್ದರೆ ನೀವೇ ಇನ್ನೊಂದು ಈಡು ಹಾರಿಸಿ. ಇನ್ನು ಅದು ಏಳಲಾರದು'' ಎಂದೆ. ಈಡಾದ ಕಾಲುಗಂಟೆಯಲ್ಲಿ ನಿಲುಗಡೆಯಿಲ್ಲದೆ ಬೊಬ್ಬೆಯೊಡನೆ ಸೋವತರು ಓಡಿ ಬಂದರು. ಅವರ ಜತೆಯಲ್ಲಿದ್ದ ನಾಯಿಗಳು ಹಂದಿಗಳ ಮೇಲೆ ಮುಗಿಬಿದ್ದು ಕಿವಿ,ಕೈ, ಬಾಯಿ, ಮೂಗೆನ್ನದೆ ಕಚ್ಚಿ ಎಳೆಯಲು ಆರಂಭಿಸಿದವು. ಆ ನಾಯಿಗಳನ್ನು ದೂರಕ್ಕೆ ಓಡಿಸಬೇಕಾದರೆ ಸಾಕೋ ಸಾಕಾಯಿತು.

ಶಿಕಾರಿಗಳೆಲ್ಲ ಬಂದು ಸೇರಿದಾಗ ಅಂದಿನ ಶಿಕಾರಿಯು ಭರ್ಜರಿಯಾಗಿಯೇ ಆಯಿತೆಂಬ ಭಾವನೆಯಿಂದ ಒಂದು ಗಂಟೆಯ ವಿಶ್ರಾಂತಿಯನ್ನು ಪಡೆದು ಏಳಲು ಹವಣಿಸುವಾಗ ಹನ್ನೆರಡು ಗಂಟೆಯಾಗಿತ್ತು. ಅದಾಗಲೇ ಸೋವತರಲ್ಲಿ ಕೆಲವರು ಸತ್ತ ಹಂದಿಗಳನ್ನು ನಾವು ತಂಗಿದ್ದ ಬಂಗಲೆಗೆ ಕೊಂಡುಹೋಗುವ ವ್ಯವಸ್ಥೆಯನ್ನು ಮಾಡಿದ್ದರು.

ನನ್ನ ಕಿಂಚಿತ್ ಅಜಾಗರೂಕತೆಯಿಂದ ಕೈಗೆ ಬಂದ ತುತ್ತು ಕಳಚಿ ಬಿತ್ತಲ್ಲಾ ಎಂಬ ಎದೆಗುದಿಯಿಂದ ಮನಸ್ಸಿಗೆ ಒಂದು ರೀತಿಯ ಮುಜುಗರ ಹಿಡಿದಂತಾಗಿತ್ತು. ನನ್ನ ಬೇಟೆಯು ರೈಗಳ ಪಾಲಿಗೆ ದಕ್ಕಿ ನಾನು ಈಡು ಹೊಡೆದ ಹೆಮ್ಮೆಯಿಂದ ವಂಚಿತನಾಗಬೇಕಾಯಿತಲ್ಲಾ ಎಂಬ ಚಿಂತೆಕಾಡುತ್ತಿದ್ದಂತೆ ಸಂಜೀವ ರೈಗಳ ಬಗ್ಗೆ ಅಸೂಯೆಯಿಂದ ನನ್ನ ಮನಸ್ಸು ಅಸ್ತವ್ಯಸ್ತವಾಯಿತು. ಹೇಗೂ ಮುಂದಿನ ಗಂಡಿಗೆ ಹೋದುದಾಯಿತು. ನನ್ನ ಎಡಕ್ಕೆ ಐನೂರು ಮಾರು ದೂರದಲ್ಲಿ ಸಂಜೀವ ರೈಗಳೂ, ಬಲಕ್ಕೆ ಅಷ್ಟೇ ದೂರದಲ್ಲಿ ಎ.ವಿ. ಪೂಂಜರೂ ಸಜ್ಜಾಗಿ ಸೋವತರತ್ತ ದಿಟ್ಟ ನೆಟ್ಟು ನಿಂತುದು ಕಾಣುತ್ತಿತ್ತು. ಸೋಲೆಂಬ ಭಾವನೆಯಿಂದ ಆವೃತವಾದ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲದೆ ಕಣ್ಣ ಕೂರಿಕೆಯನ್ನು ತಡೆಯಲಾರದೆ ಮರವೊಂದನ್ನು ಮರೆಮಾಡಿ, ಮರದ ಬೊಡ್ಡೆಗೆ ತಲೆಯಿಟ್ಟು ಒರಗಿ ಕುಳಿತವನಿಗೆ ಮಂಪರು ನಿದ್ರೆ ! ಬಹು ದೂರದಿಂದ ಸೋವತರ ಬೊಬ್ಬೆ, ಆರ್ಭಟೆಯೂ, ನಾಯಿಗಳ ಬೊಗಳಾಟವೂ ಹೌದೋ, ಅಲ್ಲವೋ ಎಂಬಂತೆ ಕೇಳುತ್ತಿದೆ. ನಾನು ಮರಕ್ಕೆ ತಲೆಯಾನಿಸಿ ಕೂತು ಒಂದು ಗಂಟೆಯಾಗಿರಬಹುದು. ಎದುರಿಗೆ ನಾಲ್ಕಾರು ಮಾರು ಬಲ್ಲೆಪೊದೆಯಿಂದ ಕೂಡಿದ ಕಾಡು. ಅನಂತರ ಯಾರೋ ರಾಗಿ ಬೆಳೆಸಲೆಂದು ಮಾಡಿದ್ದ ಒಂದು, ಒಂದೂವರೆ ಎಕ್ರೆಯ ಮೈದಾನು ಪ್ರದೇಶ. ಕಾಡಿನಿಂದ ಓಡಿ ಬಂದ ಮೃಗಗಳು ನನ್ನೆಡೆಗೆ ಬರುವಾಗ ನನಗೆ ಸುಲಭದಲ್ಲೆ ಎರಡು, ಮೂರು ಈಡು ಬಾರಿಸುವ ಅವಕಾಶ ದೊರೆವಂಥ ಪ್ರಶಸ್ತವಾದ ಸ್ಥಳ. ಆದರೆ ಅಂತಹ ಸ್ಥಿತಿಯಲ್ಲಿ ನನಗೆ ಮಂಪರು ! ದೂರದಿಂದ 'ಕೂ,ಕೂ' ಎಂದು ನನ್ನನ್ನು ಎಚ್ಚರಿಸುವಂಥ ಬಿಗಿಲಿನ ಧ್ವನಿ ಕೇಳಿಬಂತು. ಏಳುವುದೋ, ಬೇಡವೋ ಎಂಬ ಉದಾಸೀನದ ದೃಷ್ಟಿಯಿಂದ ಬಿಗಿಲು ಊದಿ ಸಂಜ್ಞೆ ಕೊಡುತ್ತಿರುವ ಪೂಂಜರತ್ತ ನೋಡಿದೆ. ಸಿಟ್ಟಿನ ಮುಖದಿಂದ ನನ್ನನ್ನು ಹೊಡೆಯಲು ಬರುವ ರೀತಿಯಿಂದ ನೋಡಿ, ಎದುರ್ಗಡೆ ನೋಡುವಂತೆ ಕಣ್‌ಸನ್ನೆ, ಬೆರಳು ಸನ್ನೆಗಳಿಂದ ನಿರ್ದೇಶಿಸುತ್ತಿದ್ದಾರೆ.

ಎದುರಿಗೆ ನೋಡುತ್ತಲೇ ನನಗೆ ಕವಿದಿದ್ದ ಮಂಪರು ನನ್ನನ್ನು ಒದ್ದು ಜಾಡಿಸಿ ತಾನು ಪಲಾಯನ ಮಾಡಿದೆ ! ಎದುರಿಗೆ ಕಾಣುತ್ತಿರುವುದೇನು? ನನ್ನ ಪಾಲಿನ ಯಮನೆಂದೇ ಭಾಸವಾಗುವ ಹುಲಿ! ಸಾವರಿಸಿಕೊಂಡು, ಕೋವಿಯನ್ನು ಭದ್ರವಾಗಿ

ಹಿಡಿದು ಮತ್ತೆ ಹುಲಿಯೆಡೆಗೆ ನೋಡಿದೆ. ಅರೇ ! ಅದೇಕೆ ನನ್ನತ್ತ ಬೆನ್ನು ಮಾಡಿ ಕುಳಿತಿದೆಯೆಂದು ಅಚ್ಚರಿಯಾಯಿತು. ನೆಗೆಯುವ ಹವಣಿಕೆಯಿಂದ ಹಿಂಗಾಲನ್ನು ಅವುಕಿ, ಮುಂಗಾಲನ್ನು ನೀಡಿ ಹಾರುವ ಭಂಗಿಯಲ್ಲಿ ಕಾಣಿಸಿತು. ಹೋ! ಎದುರು ಭಾಗದಲ್ಲಿ ಒಂಟಿಗ ಹಂದಿಯು ಕುಸ್ತಿ ಹಿಡಿಯಲು ಸಿದ್ಧನಾಗಿ ನಿಂತ ಜಗಜಟ್ಟಿಯಂತೆ ಕಾಣಿಸುತ್ತದೆ. ಗುರುಗುಟ್ಟುತ್ತಿರುವ ಹುಲಿಯತ್ತ, ತನ್ನ ರೋಮರಾಜಿಯನ್ನು ನಿಗುರಿಸಿ ' ಆ'ಯೆಂದು ಬಾಯಗಲಿಸಿ ತನ್ನ ಹಿಡಿಗಾತ್ರದ ಕೋರೆ ಹಲ್ಲುಗಳನ್ನು ತೋರಿಸುತ್ತಾ, 'ಎಲ್ಲಿಯಾದರೂ ನನ್ನ ಉಸಾಬರಿಗೆ ಬಂದೆಯೆಂದರೆ ಸೀಳಿ ಹಾಕುವೆ. ಬರುವುದಿದ್ದರೆ ಬಾ' ಎಂದು ಹೂಂಕರಿಸುತ್ತಾ ಎದುರಾಳಿಯನ್ನು ಹೋರಾಟಕ್ಕೆ ಆಹ್ವಾನಿಸುವ ಜಟ್ಟಿಯಂತೆ, ಮಾಂಸಖಂಡಗಳನ್ನು ಗಟ್ಟಿಗೊಳಿಸಿ ನಿಂತಿದ್ದ ಹಂದಿಯ ಠೀವಿ ಮರೆಯುವಂಥದಲ್ಲ. ನಾನು ಮನದಲ್ಲೇ 'ಅಯ್ಯೋ, ಗ್ರಹಚಾರವೇ ! ಇವುಗಳಲ್ಲಿ ಯಾವುದಕ್ಕೆ ಹೊಡೆದರೂ ಕ್ರೋಧಾವೇಶದಿಂದ ಉಳಿಯುವ ಮೃಗಕ್ಕೆ ನಾನು ಆಹುತಿಯಾದಂತೆಯೇ! ಏನು ಮಾಡಲಿ ?' ಎಂದುಕೊಂಡು ಅಸಹಾಯಕ ದೃಷ್ಟಿಯಿಂದ ಪೂಂಜರತ್ತ ನೋಡಿದೆ. ಅವರು ಸಂಜ್ಞೆಯ ಮೂಲಕ ಮರಹತ್ತಲು ತಿಳಿಸಿದ್ದನ್ನು ಕಂಡೊಡನೆ ಮುಳುಗುವಾತನಿಗೆ ಹುಲ್ಲುಕಡ್ಡಿಯೂ ಆಧಾರವೆಂಬಂತೆ ಹತ್ತಿರವೇ ಇದ್ದ ಕವಲು ಕವಲಾಗಿದ್ದ ಮರವೊಂದನ್ನು ಬಾಚಿತಬ್ಬಿ ಕೋವಿಯೊಂದಿಗೆ ಏರಿದೆ. ''ಬದುಕಿದೆಯಾ ಬಡಜೀವವೇ?' ಎಂದುಕೊಂಡು ಆ ಮರದಲ್ಲಿ ಕುಳಿತು ಕೋವಿಯನ್ನು ಎದೆಗಾನಿಸಿ 'ಯಾವುದಕ್ಕೆ ಮೊದಲು ಹೊಡೆಯೋಣ? ಇನ್ನು ಅವೆರಡರಿಂದಲೂ ನನಗೆ ಅಷ್ಟೊಂದು ಭಯವಿಲ್ಲ' ಎಂದು ಆಲೋಚಿಸುತ್ತಿರುವಾಗ ಕಿಸೆಯಲ್ಲಿದ್ದ ತೋಟೆಯೊಂದು ಕೆಳಗಿನ ಕಲ್ಲಿಗೆ ಬಿದ್ದು ಟಪ್ಪೆಂದು ಸದ್ದು ಮಾಡಿತು.

ಸದ್ದನ್ನು ಆಲಿಸಿದ ಹುಲಿಯು ತನ್ನ ಹಿಂದಿನಿಂದ ಓನೋ ಬಂದಿತೆಂದು ಗಾಬರಿಯಾಯಿತು. ಮೊದಲೇ ಹಂದಿಯ ಮೇಲೆ ನೆಗೆಯಲು ಸಿದ್ಧವಾಗಿದ್ದ ಅದು ಒಡನೆ ಕಾಡೇ ಬಿರಿಯುವಂಥ ಒಂದು ಆರ್ಭಟೆಯನ್ನು ಕೊಟ್ಟು, ಸೆಣಸಿ ನಿಂತ ಹಂದಿಯ ಮೇಲೆ ನೆಗೆದೇ ಬಿಟ್ಟಿತು ! ಪಂಥಾಹ್ವಾನಕ್ಕೆ ಸನ್ನದ್ಧವಾಗಿದ್ದ ಹಂದಿಯು ಬಾಯಗಲಿಸಿ-ತನ್ನ ಮೇಲೆರಗಿ ಕುತ್ತಿಗೆಯನ್ನು ಕಚ್ಚಿ ಹಿಡಿದ -ಹುಲಿಯನ್ನು ತನ್ನ ಕೋರೆಯಿಂದ ಒತ್ತಿ ಭೂಮಿಗೆ ಅವುಕಿ ಬಾಯಿಗೆ ಸಿಕ್ಕಿದ ಹುಲಿಯ ಕೈಯನ್ನು ಕಚಕಚನೆ ಕಡಿದಾಗ ಆ ನೋವನ್ನು ತಾಳಲಾರದೆ ಹುಲಿಯು ಹಂದಿಯನ್ನು ಬಿಟ್ಟು ಓಡಲು ಹವಣಿಸಿತು. ಎರಡು ಕೈಗಳೂ ನಜ್ಜುಗುಜ್ಜಾಗಿ ಹುಲಿಗೆ ಚಲನೆಯೇ ಕಷ್ಟವಾಯಿತು. ಅದು ಹಿಂಗಾಲಿನಿಂದ ತೆವಳತೊಡಗಿದ್ದನ್ನು ನೋಡಿದ ಹಂದಿಯು ಇನ್ನು ಬದುಕಿದೆಯೆಂಬ ಭಾವನೆಯಿಂದ ಓಡಲು ಹವಣಿಸುತ್ತಿದೆ ! ಎವೆಯಿಕ್ಕದೆ ಈ ಕಾದಾಟವನ್ನು ಗಮನಿಸುತ್ತಿದ್ದ ನಾನು ಕೂಡಲೇ ಹಂದಿಯ ನೆತ್ತಿಗೆ ಒಂದು ಈಡು

ಹಾರಿಸಿದೆ. ಗುರಿಯು ಸರಿಯಾಗಿತ್ತು. ಪೆಟ್ಟು ತಿಂದು, ರೋಷಗೊಂಡ ಹಂದಿಯು ಅದು ತನಗೆ ಹುಲಿಯೇ ನೀಡಿದ ಹೊಡೆತವೆಂಬ ಕ್ರೋಧಾವೇಶದಿಂದ, ತೆವಳುತ್ತಿದ್ದ ಹುಲಿಯ ಮೇಲೆ ಎರಗಿತು, ಮತ್ತೆ ತೊಡಗಿತು- ಜೀವದ ಹಂಗು ತೊರೆದ ಅವುಗಳ ಭೀಕರ ಹೋರಾಟ! ಎರಡೂ ಕೈಗಳನ್ನು ಅಷ್ಟರಲ್ಲೇ ಕಳೆದುಕೊಂಡಿದ್ದ ಹುಲಿಯು ತನ್ನ ಹಿಂಗಾಲು ಮತ್ತು ಬಾಯಿಯಿಂದಲೇ ಸ್ಪರ್ಧಿಯನ್ನು ಎದುರಿಸುತ್ತಿದೆ. ಹಂದಿಯು ಹುಲಿಯ ಕಡಿತ, ಪಂಜಿನ ಹೊಡೆತಗಳಿಂದ ಗಾಸಿಗೊಂಡು ಕ್ರುದ್ಧವಾಗಿತ್ತಲ್ಲದೆ ನನ್ನ ಒಂಟಿಗುಂಡಿನ ಆಘಾತದಿಂದ ಜರ್ಜರಿತವಾಗಿ ಅಂತ್ಯಕಾಲದ ಹೋರಾಟವನ್ನು ಕೊಡುವ ಕಡುಗಲಿಯಂತೆ ಮುಸುಡನ್ನು ಹುಲಿಯ ಎದೆಗೆ ಒತ್ತಿ ಏಳಲು ಬಿಡೆನೆಂಬ ಹಟದಲ್ಲಿದೆ. ಹುಲಿಗೆ ಬಿದ್ದಲ್ಲಿಂದ ಏಳಲಾಗುತ್ತಿಲ್ಲವಾದರೂ ಕೊನೆಗಾಲದ ತನ್ನ ಬದುಕಿನ ಪ್ರಶ್ನೆಗೆ ಉತ್ತರವೆಂಬಂತೆ ಕಿವಿ, ಮೂಗು, ಬಾಯಿ, ಎದೆಯೆನ್ನದೆ ಹಂದಿಯನ್ನು ಕಚ್ಚಿ ಮಾಂಸದ ಮುದ್ದೆಗಳನ್ನೇ ಹೊರಗೆಳೆಯುತ್ತಿದೆ ! ಹುಲಿಯೊಂದಿಗಿನ ಕಾದಾಟವೂ, ನನ್ನ ಕೋವಿಯ ಹೊಡೆತವೂ ಸೇರಿ ಹಂದಿಯು ನಿತ್ರಾಣ ಹೊಂದಿ ಬಸವಳಿದು ಬೀಳುವ ಮಟ್ಟಕ್ಕೆ ಬಂತು. ಹಂದಿ ಹುಲಿಗಳ ವೀರೋಚಿತ ಹೋರಾಟದ ಈ ಅಪೂರ್ವ ದೃಶ್ಯವನ್ನು ದಿಗ್ಭ್ರಾಂತನಾಗಿ, ರೆಪ್ಪೆ ಮುಚ್ಚದೆ ನೋಡುತ್ತಿದ್ದ ನಾನು ಹಂದಿಯು ಬಿದ್ದರೆ ಹುಲಿಯು ಎದ್ದು ಹೋಗಬಹುದೆಂದು, ಹಾಗಲು ಬಿಡಬಾರದೆಂದು ಅದಾಗಲೇ ಸಾಕಷ್ಟು ದಣಿದಿದ್ದ ಹುಲಿಗೆ ಒಂದು ಗುಂಡನ್ನು ಹೊಡೆದೆ. ನನ್ನ ಈಡಿನ ಶಬ್ದವಾಗುತ್ತಲೇ ಹಂದಿಯು ಧಡೀಲೆಂದು ಸ್ಮೃತಿಹೀನವಾಗಿ ಒಂದೆಡೆ ಬಿದ್ದು ಅಸುನೀಗಿತು. ಪ್ರಾಣಾಂತಿಕ ಪೆಟ್ಟಾಗಿದ್ದ ಹುಲಿಯು ಒಮ್ಮೆ ಜೋರಾಗಿ ಗರ್ಜಿಸಿ ತನ್ನ ಕೊನೆಗಾಲವು ಆಯಿತೆಂಬುದನ್ನು ನನಗೆ ತಿಳಿಸುವಂತೆ ಹಿಂಗಾಲಾಗಿ ನೆಗೆದುರುಳಿತು.

ಸೋವತರ ಸದ್ದಿರಲಿಲ್ಲ. ನಾಯಿಗಳು ಯಾವಾಗಲೋ ಮನೆಯತ್ತ ಓಟ ಕಿತ್ತಿದ್ದವು. ಕೋವಿ ಹಿಡಿದವರೆಲ್ಲ ಆ ಮೊದಲೇ ಮರವೇರಿದ್ದರು. ಹುಲಿ ಹಂದಿಗಳು ಸತ್ತವೆಂದು ದೃಢವಾಗಿ ಅರಿತ ನಾನು ನಿಧಾನವಾಗಿ ಮರದಿಂದ ಇಳಿದು ಕೆಳಗೆ ಬಿದ್ದ ತೋಟೆಯನ್ನು ಹೆಕ್ಕಿ ಕಿಸೆಗೆ ಸೇರಿಸಿದೆ. ಮರವೇರಿ ಕುಳಿತು ನನ್ನತ್ತಲೇ ನೋಡುತ್ತಿದ್ದ ರೈಗಳನ್ನೂ, ಪೂಂಜರನ್ನೂ ಬಳಿಗೆ ಕರೆದೆ. ಒಟ್ಟಾದ ನಾವು ಮೂವರೂ ಬಾರು ಮಾಡಿದ ಕೋವಿಯೊಂದಿಗೆ ಬಂದು ನೋಡುವುದೇನು? ಹಂದಿಯ ಇರಿತಕ್ಕೆ ಚಿಂದಿ, ಚಿಂದಿಯಾದ ಹುಲಿಯ ದೇಹ; ಹುಲಿಯ ಹೊಡೆತ, ಕಚ್ಚಾಟ, ಪರಚಾಟಗಳಿಗೆ ಸಿಲುಕಿ ನಜ್ಜುಗುಜ್ಜಾದ ಹಂದಿಯ ಶರೀರ ಎರಡೂ ವಿಕಾರವಾಗಿ ಬಿದ್ದಿವೆ !

ಹಂದಿ, ಹುಲಿಗಳನ್ನು ಏಕಕಾಲದಲ್ಲಿ ಹೊಡೆದ ಖ್ಯಾತಿ ನನಗೆ ಎಷ್ಟು ಮಟ್ಟಿಗೆ

ಹೊಂದುವುದೋ ತಿಳಿಯೆ. ನಾನಲ್ಲದಿದ್ದರೆ ಹೋರಾಟದ ಹುಲಿ, ಹಂದಿಗಳು ಕಾಡು ಪಾಲಾಗುತ್ತಿದ್ದವೇ ವಿನಾ ನಮಗೆ ದಕ್ಕುತ್ತಿರಲಿಲ್ಲ-ಎಂಬುದಿಷ್ಟು ಮಾತ್ರ ನನಗೆ ಸ್ವೀಕಾರಾರ್ಹ. ಅಂತೂ, ನೆನೆದುಕೊಂಡರೆ ಇಂದೂ ಮೈ ಜುಮ್ಮೆನ್ನಿಸುವ ಆ ಪ್ರಸಂಗದ ಪ್ರತ್ಯಕ್ಷದರ್ಶಿಯಾದ ನನ್ನ ಪಾಲಿಗೆ ಅದು ಗತಕಾಲದ ಬದುಕಿನ ಶಿಕಾರಿ ಸಾಹಸದ ಒಂದು ರೋಮಾಂಚಕ ಅನುಭವವಾಗಿ ಉಳಿದಿದೆ.

□□□□□

ಗಾರ್ಡ್‌ರ ಬಲಿಪ ಶಿಕಾರಿ

ಫಾರೆಸ್ಟ್ ಗಾರ್ಡ್ ಚೆನ್ನಪ್ಪನವರು ಆ ಕಾಲದಲ್ಲಿ ನಾವೂರು ಬೀಟಿನ ಗಾರ್ಡ್‌ರು ; ತುಂಬು ಸಂಸಾರಿ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಾಲವದು. ಹದನಾದ ತಿಂಗಳ ಸಂಬಳದೊಂದಿಗೆ ಸಾಕಷ್ಟು ಗಿಂಬಳವನ್ನೂ ಬಡರೈತರಿಂದ ಗಿಟ್ಟಿಸಿಕೊಳ್ಳುವುದಕ್ಕೆ ಆತಂಕವಿರಲಿಲ್ಲ. ಮಾಮೂಲಾಗಿ ಗಾರ್ಡ್‌ರಿಗೆ-ಕಾಡಿನ ಸರಹದ್ದಿನಲ್ಲಿರುವ ಮನೆಯವರಿಂದ ಕೋಳಿ, ತೆಂಗಿನಕಾಯಿ, ಅಕ್ಕಿ, ತರಕಾರಿ, ತಲೆಹೊರೆ, ಬಿಟ್ಟಿ ಬೇಗಾರಿ ಕಡ್ಡಾಯವೆಂಬಂತೆ ಸಲ್ಲುತ್ತಿದ್ದವು. ಇದನ್ನು ಕೊಡಲು ತಪ್ಪಿದವನ ಜಾನುವಾರುಗಳ, ಕಾಡಿನ ಬದಿಗೆ ಸೊಪ್ಪು ಕಟ್ಟಿಗೆ ತರಲು ಹೋದವನ ಪಾಡು ಮತ್ತೆ ಹೇಳಬೇಕೆಂದಿಲ್ಲ. ಆದರೆ ಚೆನ್ನಪ್ಪನವರು ಈ ವಿಷಯಗಳಲ್ಲಿ ಹಿಂದಿನ ಗಾರ್ಡ್‌ರುಗಳೆಲ್ಲರಿಗಿಂತ ಕಠಿಣರಾಗಿದ್ದೂ ನಯವಾದ ಮಾತುಗಾರಿಕೆಯಿಂದ ಊರವರ ಪ್ರೀತಿ ವಿಶ್ವಾಸಗಳಿಗೂ ಪಾತ್ರರಾಗಿದ್ದರು.

ಇವರಿಗೆ ಈ ಅಭ್ಯಾಸದೊಂದಿಗೆ ಕುಡಿತದ ಚಟವೂ ಬಲವಾಗಿಯೇ ಇತ್ತು. ಕುಡಿಯುತ್ತಾರೆಂದ ಮೇಲೆ ಧಾರಾಳ ಮಾಂಸ ತಿನ್ನಲೇ ಬೇಕಷ್ಟೆ? ಫೋರೆಸ್ಟ್ ಗಾರ್ಡ್‌ರೆಂದ ಮೇಲೆ ಇದಕ್ಕೂ ಆ ಕಾಲದಲ್ಲಿ ಅಭಾವವಿಲ್ಲ. ಯಾರಾದರೂ ಇವರ ಕಾವಲಿನ ಕಾಡಿನಲ್ಲಿ ಶಿಕಾರಿ ಮಾಡಿದರೆ ಇವರಿಗೆ ಒಂದು ದಾಯ ಸಂದಾಯವು ಮಾಮೂಲು ! ಯಾವನಾದರೂ ಪೀನಾರಿ ಬೇಟೆಗಾರನು ಇದನ್ನು ಇವರಿಗೆ ಕೊಡಲು ತಪ್ಪಿದನೆಂದಾದರೆ, ಮರುದಿನ ಗಾರ್ಡ್‌ರು ಇವನ ಮನೆಯ ಮುಂದೆ ತನ್ನ ಜೋಡು ನಳಿಗೆಯ ಬಾರು ಮಾಡಿದ ಕೋವಿಯೊಂದಿಗೆ ಹಾಜರಾಗುತ್ತಿದ್ದರು. ಗಾರ್ಡ್‌ರ ವೇಷ, ಬಾರು ಮಾಡಿದ ಕೋವಿ, ಕೊಬ್ಬಿದ ಆಕೃತಿಯ ಆವೇಶ ಇವುಗಳನ್ನು ಕಂಡರೆ ಮನೆಯ ಹೆಂಗಸರು ಮಕ್ಕಳ ಅವಸ್ಥೆ ಹೇಳಬೇಕೆಂದಿಲ್ಲ. ಹಿಂದಿನ ದಿನದ ಶೇಷ, ಮಾಂಸದ ಪದಾರ್ಥವನ್ನೂ ರೊಟ್ಟಿ, ಕಳ್ಳಿನೊಂದಿಗೆ ತಂದು ಇವರ ಮನಸ್ಸು ಸಮಾಧಾನ ಪಡಿಸಿ, ಸ್ವಲ್ಪ ಕೈ ಬೆಚ್ಚಗೂ ಮಾಡಿ ತಾವು ಹಿಂದಿನ ದಿನ ಮಾಡಿದ ತಪ್ಪನ್ನು ಒಪ್ಪಿಕೊಂಡು ಕ್ಷಮೆಯಾಚಿಸಿ ಮುಂದೆ ಇಂತಹ ಅಪರಾಧವು ಘಟಿಸದಂತೆ ಎಚ್ಚರವಿರುವ ಆಶ್ವಾಸನೆಯನ್ನು ಕೊಟ್ಟು ಅವರನ್ನು ಕಳುಹಿಸಬೇಕಾದರೆ ಚೊಚ್ಚಲು ಪ್ರಸವ ವೇದನೆಯನ್ನು ಮುಗಿಸಿ ಮಿಂದು ಬಂದಷ್ಟೇ ಪ್ರಯಾಸ !

ಆದರೆ ಇವರು ನನಗೆ ತುಂಬಾ ಗೌರವ, ಮರ್ಯಾದೆಯನ್ನು ಕೊಡುತ್ತಿದ್ದರು. ನಾನು ಆ ಕಾಲದ ಘನ ವಿದ್ಯಾವಂತರ ಕುಟುಂಬಿಕನೆಂದೋ; ಒಳ್ಳೆಯ ಶಿಕಾರಿಯೆಂದೋ? ಆ ಗೌರವ ಸಲ್ಲುತ್ತಿದ್ದಿರಬೇಕು. ಆದರೆ ನಾನೂ ಶಿಕಾರಿ

ಮಾಡಿದ ದಿನ ಇವರನ್ನು ಊಟಕ್ಕೆ ಕರೆಯದಿದ್ದರೆ ಮಾತ್ರ ಮರುದಿನ ಕಾಣ ಸಿಗುವಾಗ ಪ್ರಥಮದಲ್ಲಿ ಕೊಂಚ ಮುನಿಸಿನ ತಿಳಿ ನಗುವಿನಿಂದಲೇ ನನ್ನನ್ನು ಸ್ವಾಗತಿಸುತ್ತಿದ್ದರು. ಆಗ ನಾನೂ ನಾವೂರಲ್ಲಿ ಒಬ್ಬಂಟಿಗ. ಬೇಟೆಯ ಊಟವನ್ನು, ಅದರ ಸ್ವಾರಸ್ಯವನ್ನು ಬಣ್ಣಿಸುತ್ತಾ ಉಂಡರೆ, ಅದರ ಸೊಗಸೇ ಬೇರೆ. ಆದುದರಿಂದ ನಾನೂ ಅವರಿಗೆ ಊಟಕ್ಕೆ ಕರೆ ಕಳುಹಿಸಲು ಮರೆಯುತ್ತಿರಲಿಲ್ಲ. ಹಾಗೆ ನಮ್ಮಿಬ್ಬರ ಪರಿಚಯ ಬೆಳೆದು ಸ್ನೇಹವು ನಿಕಟವಾಗಿತ್ತು. ಅಂತೆಯೇ ಪದೇ ಪದೇ ಇವರು ಊರವರಿಗೆ ಕೊಡುತ್ತಿದ್ದ ಉಪಟಳದ ವಿಚಾರವೂ ನನ್ನ ತಿಳುವಳಿಕೆಗೆ ಬಂದು ಇವರ ಉಪದ್ರವದ ನಿವಾರಣೋಪಾಯವನ್ನು ಯೋಚಿಸುತ್ತಾ ಇದ್ದೆ.

ಆರಂಭದ ಬೇಸಾಯದ ಗಲಾಟೆಯಿಂದಾಗಿ ಎರಡು ಮೂರು ವಾರಗಳು ನಾವೂರಲ್ಲಿ ಯಾರೂ ಬೇಟೆಯ ಗೊಡವೆಗೇ ಹೋಗಿರಲಿಲ್ಲ. ನನಗಾದರೋ-ರಾತ್ರಿ ಸರ್ಚ್‌ಲೈಟ್ ಶಿಕಾರಿಯಿಂದಾಗಿ ಬರಿಂಕ, ಮೊಲ, ಮುಳ್ಳುಹಂದಿಯ ಮಾಂಸವು ಪದೇ ಪದೇ ದೊರಕುತ್ತಿತ್ತು. ಇವು ಚಿಕ್ಕ ಪ್ರಾಣಿಗಳು; ಅಲ್ಲದೆ ಸುಲಭದ ಬೇಟೆ. ಇದರಿಂದ ಒಳ್ಳೆಯ ಊಟ ಮಾಡಿ ಜಿಹ್ವಾ ಚಾಪಲ್ಯವನ್ನು ನೀಗಿ ಮರುದಿನದ ಬೇಸಾಯದ ಕಾರ್ಯಕ್ರಮವನ್ನು ಯೋಚಿಸಿದರಾಯಿತು. ಆದರೆ ಗಾರ್ಡರ ನಾಲಿಗೆಯ ರುಚಿಯೂ ಕೆಟ್ಟಿತು; ಹೊಟ್ಟೆಯೂ ಖಾರವಿಲ್ಲದೆ ಹಾಳಾಯಿತು. ಮನಸ್ಸಿನ ನೆಮ್ಮದಿಯು ಇದರಿಂದ ಕುಂಠಿತವಾಯಿತೆಂದು ಬೇರೆ ಹೇಳಬೇಕಿಲ್ಲವಷ್ಟೆ? ಇದರಿಂದ ನೊಂದ ಗಾರ್ಡರು ಬಂದೇ ಬಂದರು ನನ್ನ ಮನೆಗೆ; ದೂರಿಕೊಂಡರು ತುಂಬಾ ಹೊತ್ತು ಅವರಿಗಾದ ಸಂಕಟವನ್ನು. ಅಂತೂ ಮಧ್ಯಾಹ್ನದ ಊಟವೊಂದು ನಮ್ಮ ಮನೆಯಲ್ಲಿ ಸ್ವಲ್ಪ ಗಡದ್ದಾಗಿಯೇ ದೊರಕಿತು. ಹಿಂದಿನ ರಾತ್ರಿ ಲೈಟು ಶಿಕಾರಿಯಲ್ಲಿ ದೊರೆತ ಚಿಕ್ಕ ಬರಿಂಕದ ನಾಲ್ಕು ತುಂಡುಗಳು ಅವರಿಗೆ ದಕ್ಕಿದವು. ಕಾಡು ಹಂದಿಯ ತೊಡೆಯ ಮಾಂಸವನ್ನೆಲ್ಲ ಕಬಳಿಸಿ ಜೀರ್ಣಿಸಿದ್ದ ಈ ಜೀವಿಗೆ, ಇದು ಯಾವ ಮೂಲೆಗೆ ಈಡು? ಅಂತೂ, ಉಪವಾಸ ಬೀಳುವುದಕ್ಕಿಂತ ಅರ್ಧ ಊಟವೇ ಲೇಸೆಂಬ ಗಾದೆಯ ಮಾತಿಗೆ ಗಾರ್ಡರು ಶರಣು ಬರಲೇಬೇಕಾಯಿತು.

ಊಟದ ಅನಂತರ ಕಿರು ನಿದ್ರೆಯಿಂದ ಎಚ್ಚೆತ್ತು ಚಾ ಕುಡಿದ ಅನಂತರ ಗಾರ್ಡರು ಹೇಳಿದರು-ರೈಗಳೇ ನಾಳೆ ನಾಡಿದ್ದರಲ್ಲಿ ಬೇಟೆಯೊಂದಾಗದೆ ನಿರ್ವಾಹವೇ ಇಲ್ಲ. ಡಿ.ಎಫ್.ಓ. ಬರುವುದಾಗಿ ಹೇಳಿದ್ದಾರೆ. ಅವರಿಗೆ ಸೊಗಸಾದ ಸಮ್ಮಾನ ಮಾಡದಿದ್ದರೆ ನನಗೆ ಉಳಿಗಾಲವಿಲ್ಲ. ನನಗೂ ಕೆಲವು ದಿನದಿಂದ ಕಾಡುಮೃಗದ ಮಾಂಸವಿಲ್ಲದೆ ನಾಲಿಗೆಯೇ ಮುರುಟುಕಟ್ಟಿದಂತಾಗಿದೆ. ಶರೀರದ ಚುರುಕೇ ಕುಂದಿದೆ. ನೀವು ಹೊರಡದಿದ್ದರೆ ಯಾರೂ ಬೇಟೆಗೆ ಬರುವುದಿಲ್ಲ. ಬೇಟೆಯ ಏರ್ಪಾಡು ನಾಳೆನಾಡದಿನಲ್ಲಿ ಮಾಡಲೇ ಬೇಕು.'' ಹೀಗೆ ಬಲವಾದ

ಒತ್ತಾಯವನ್ನೇ ಮಾಡಿದರು. ನನಗೂ ಬೇಟೆಯಲ್ಲಿ ತೊಡಗುವ ಲವಲವಿಕೆ, ಉತ್ಸುಕತೆಯು ಧಾರಾಳವಿತ್ತು. ಬೇಸಾಯವೂ ಮುಗಿಯುತ್ತಾ ಬಂದಿತ್ತು. ಒಳ್ಳೆಯ ಬೇಟೆಯಾದರೆ ಕೆಲಸದಾಳುಗಳಿಗೂ ಒಂದು ಮಧ್ಯಾಹ್ನದ ಮಾಂಸದೂಟ ಕೊಡಬಹುದು. ಹಾಗೆ ಅವರನ್ನು ಸತ್ಕರಿಸಿದರೆ ಮುಂದಿನ ಕೆಲಸಕ್ಕೆ ಕರೆಯದೆಯೇ ಕೆಲಸದಾಳುಗಳು ನಾನು ತಾನೆಂದು ನನ್ನ ಕೆಲಸಕ್ಕೆ ಬರುವುದು ಖಂಡಿತ. ಬೇಟೆಯ ಈ ಸೂಚನೆಗೆ ಅಲ್ಲಿದ್ದ ಕೆಲವು ಕೆಲಸದಾಳುಗಳು ಪ್ರೋತ್ಸಾಹ ಕೊಟ್ಟುದರಿಂದ ಮರುದಿನ ಬಂಗಾಡಿಯಲ್ಲಿಬೇಟೆಯಾರಂಭಿಸಿ ನಾವೂರಲ್ಲಿ ನಿಲ್ಲಿಸುವುದೆಂದು ನಿರ್ಣಯ ಮಾಡಿದೆವು. ಆ ಕಾಲದಲ್ಲಿ ಸಾಮರ್ಥ್ಯವಂತನಿಗೆ ಒಂದು ಪರವಾನಿಗೆಯ ಕೋವಿಯಿದ್ದರೆ ಹತ್ತು ಪಾರ್ ಲೈಸನ್ಸಿನ ಕೋವಿಯಿಟ್ಟುಕೊಳ್ಳಲೂ ಎಡೆಯಿತ್ತು. ಅಂತೆಯೇ ನಾನೂ ಇದಕ್ಕೆ ಹೊರತಾಗಿರಲಿಲ್ಲ. ೭-೮ ಲೈಸನ್ಸ್ ಇಲ್ಲದ ಕೋವಿಗಳ ಒಡೆಯನು ನಾನೂ ಆಗಿದ್ದೆ. ನೆರೆಯ ಪೋಲೀಸರಿಗೆ ಆ ಕಾಲದಲ್ಲಿ ಬೇಕಾದಾಗ ಕಾಡು ಮಾಂಸ ಸರಬರಾಜು ಮಾಡುವುದರಲ್ಲಿ ನಾನೇ ಮೊದಲಿಗ. ಮರದ ತೂಬಿನಲ್ಲಿ ಮರೆಸಿಟ್ಟಿದ್ದ ಕೋವಿಗಳನ್ನು ತರಿಸಿ ತೊಳೆದು ಸಂದುಗೊಂದುಗಳಿಗೆ ಎಣ್ಣೆ ಕೊಟ್ಟು ಮದ್ದು ತುಂಬಿಸಿ ಸಿದ್ಧತೆ ನಡೆಸಿದೆ. ಆ ಊರ ಬೋಂಟ್ರ ಜಿನ್ನಪ್ಪ ಪೂಜಾರಿಯಲ್ಲಿ ಹೇಳಿ ಕಳುಹಿಸಿ ಮರುದಿನ ಬಂಗಾಡಿಯಲ್ಲಿ ಬೇಟೆಗಾರರು ಸೇರುವ ವಿಷಯವನ್ನು ತಿಳಿಸಿಯಾಯಿತು.

ಮರುದಿನ ಗಂಜಿಯೂಟ, ಚಾ ಮುಗಿಸಿ ಬುತ್ತಿ ಕಟ್ಟಿಸಿಕೊಂಡು, ಕಾಡು ಹೊಡೆಯುವವರನ್ನೂ ಬೇಟೆಯ ನಾಯಿಗಳನ್ನೂ ಜಮಾಯಿಸಿ ನಾವೂರು ಬೇಟೆಗಾರರೊಂದಿಗೆ ಬಂಗಾಡಿ ಪೇಟೆಯ ಇಂದಬೆಟ್ಟಿನ ತಳಕ್ಕೆ ಹೋಗಿ ಸೇರುವಾಗ ಬೇಟೆಗೆ ನಮ್ಮಿಂದ ಮೊದಲೇ ಸಜ್ಜಾಗಿ ಬಂದ ಆವೂರ ಬೇಟೆಗಾರರೊಂದಿಗೆ ನಮಸ್ಕಾರ ಪ್ರತಿನಮಸ್ಕಾರಗಳಾದವು. ಈಂದೊಟ್ಟು ಕಾಡನ್ನು ಮೊದಲಲ್ಲಿ ಸೋವುವುದೆಂದು ನಿರ್ಣಯಿಸಿದೆವು. ಆವೂರ ಬೋಂಟ್ರ, ತುಕ್ರ ಪೂಜಾರಿ ಮಾಡಿದ ವ್ಯವಸ್ಥೆಯಂತೆ ಗಂಡಿಗಳಲ್ಲಿ ಯೋಗ್ಯ ಈಡುಗಾರರನ್ನು ನಿಲ್ಲಿಸಿದ್ದಾಯಿತು. ಕಾಡು ಸೋವ ಜನರು ಬಿಲ್ಲು, ಬಾಣ, ದೊಣ್ಣೆ, ಕತ್ತಿಗಳನ್ನು ಹಿಡಿದು ನಾಯಿಗಳೊಂದಿಗೆ ಬರವಿನಲ್ಲಿ ನಿಂತವರ ಎದುರುಗಡೆಯಿಂದ ಹೋಗಿ ಕಾಡುಸೋವ ಧ್ವನಿ ಕೇಳಿದೊಡನೆಯೇ ನೂರಾರು ಕಂಠಗಳಿಂದ ಒಮ್ಮೆಲೇ ''ಕೂ, ಕೂ, ಹಿಡಿ, ಕಡಿ, ಬಡಿ, ಹೊಡಿ'' ಎಂಬ ಶಬ್ದ ಹೊಮ್ಮಿತು. ಎದುರು ನಿಂತ ನಮ್ಮ ಮೈಯೆಲ್ಲ ಕಣ್ಣಾಗಿ ಸರ್ವಾಂಗವೂ ಕಿವಿಯಾಗಿ ಆಲಿಸಿದೆವು. ತದೇಕಚಿತ್ತದಿಂದ ಇಹದ ಪರಿಜ್ಞಾನವೇ ಇಲ್ಲದೆ ಎದುರು ನೋಡುವ ಮೌನಿಯಂತೆ ಮೂಗುವಟ್ಟು ಮರದ ಮರೆಯನ್ನು ಆಶ್ರಯಿಸಿ ನಿಂತು ಮುಂದಕ್ಕೆ ಗಮನವಿರಿಸಿದೆ. ''ಓ, ಹಂದಿ ಓಡಿತು ಮುಂದೆ.

ಹಿಂದಿರುಗ ಬಿಡಬೇಡಿ. ಬೊಳ್ಳು, ಕಾಳು, ಪತ್ತಿ, ತುಚ್ಚಿ'' ಎಂಬ ಶಬ್ದಗಳೊಂದಿಗೆ ಹತ್ತಾರು ನಾಯಿಗಳ ಕರ್ಣಕರ್ಕಶವಾದ ಬೊಗಳಾಟದ ಸದ್ದಿನ ಎಡೆಯಿಂದ ಹಂದಿಯ ಹುಂಕಾರವು, ಬೊಬ್ಬೆಯೂ ಕರ್ಣಪಟಲವನ್ನು ಇರಿಯುವಂತೆ ಕೇಳಿ ಬಂತು. ಇನ್ನೇನು, ತಮ್ಮ ಬರವಿಗೇ ಹಂದಿ ಬರುತ್ತದೆ ಎಂಬ ನಿರೀಕ್ಷಣೆಯಿಂದ ಈಡುದಾರರು ತಂತಮ್ಮ ಕೋವಿಯನ್ನು ಎದೆಗಾನಿಸಿ ಸಜ್ಜಾಗಿ ಯುದ್ಧ ಸನ್ನದ್ಧಯೋಧರಂತೆ ನಿಂತಿರುವುದು ಆಚೀಚೆಯಿಂದ ಕಾಣುತ್ತಿತ್ತು. ನನಗೆ, ನೂರು ಮಾರು ದೂರದಲ್ಲಿ ನಿಂತಿದ್ದ ಗಾರ್ಡರು ಅವರ ಜೋಡು ನಳಿಗೆಯ ಕೋವಿಯನ್ನು ಎದೆಗಾನಿಸಿ ಶಿಸ್ತು ನೋಡುತ್ತಿದ್ದುದು ಕಂಡಿತು. ಓ ಅದೇನು ನನ್ನ ಮುಂದಿನಿಂದ ಬರಬರವೆಂದು ಪೊದರನ್ನು ಸೀಳಿಕೊಂಡು ಬರುತ್ತಿರುವುದು? ಒಟ್ಟಿಗೆ ನಾಯಿಗಳ ಬೊಬ್ಬೆಯೂ ಕೇಳುತ್ತಿದೆ. ಓ, ಹತ್ತಿರವೇ ಪೊದೆಯು ಸೀಳುವ ದೃಶ್ಯದೊಂದಿಗೆ ಹದಿನ್ನೈದು ಇಪ್ಪತ್ತು ಮಾರು ದೂರ ನನಗೆದುರಾಗಿ ಹಂದಿಯ ಹುಂಕಾರವು ಕೇಳುತ್ತಿದೆ. ಇನ್ನೇನು ಕಂಡಿತು ಹಂದಿಯ ತಲೆ ! ಗುರಿ ಹಿಡಿದು ಸಿದ್ದವಾಗಿದ್ದ ಕೋವಿಯ ಕುದುರೆಯು ಸ್ವಾಭಾವಿಕವಾಗಿಯೇ ಮೀಟಲ್ಪಟ್ಟು 'ಢಾಂ' ಎಂದಿತು ಕೋವಿ. ಭೂಮಿ ಬಿರಿಯುವಂತಹ ಒಂದು ಕಿರುಚನ್ನು ಕಿರುಚಿ, ಹಂದಿ ಹಾರಿತು. ಅನುಭವಿಯಾದುದರಿಂದ ನಾನು ನಾಲ್ಕು ಮಾರು ಬಲಗಡೆ ಹಾರಿದೆ. ಹಂದಿಯು ನಾನು ಹಿಂದೆ ನಿಂತಿದ್ದ ಮರದಡಿಗೇ ಬಂದು ಒಮ್ಮೆ ಕುಕ್ಕರಿಸಿ ಬಿದ್ದು ನಾಲ್ಕು ಕಾಲನ್ನೂ ಜಾಡಿಸಿ ಕಿವಿಯ ಡಮರು ಒಡೆಯುವಂತೆ ಘೀಳಿಟ್ಟಿತು. ಕೂಡಲೇ ಇನ್ನೊಂದು ಒಂಟಿ ಗುಂಡಿನ ತೋಟೆಯನ್ನಿಟ್ಟು ಹಂದಿಯ ತಲೆಗೆ ಮತ್ತೊಂದು ಗುಂಡನ್ನು ಗುರಿಯಿಟ್ಟು ಹೊಡೆದಾಯಿತು. ಹಂದಿಯ ಅಬ್ಬರಕ್ಕೆ ಬೇಟೆನಾಯಿಗಳ ದಂಡೇ ಬಂದು ಮೇಲೆ ಬಿದ್ದವು. ಹಂದಿಯು ಹೊರಳಾಡುತ್ತಿದೆ; ಇನ್ನೊಂದು ಗುಂಡು ಹೊಡೆಯೋಣವೆಂದರೆ ಬಿದ್ದ ಹಂದಿಯನ್ನು ನಾಯಿಗಳು ಮುತ್ತಿ ಕಚ್ಚಿ ಎಳೆಯುತ್ತಿವೆ. ಗುಂಡು ಹಾರಿಸಿದೆನೋ, ಹರಳುವ ಹಂದಿಗೆ ತಪ್ಪಿ ನಾಯಿಗೆ ಸಿಕ್ಕಿದರೆ ನಗೆಗೀಡು. ಹಂದಿಯ ಬಾಯ ಕೋರೆಗೆ ಸಿಕ್ಕಿ ನುಜ್ಜಾದ ನಾಯಿಯೊಂದು ಆರ್ತನಾದ ಮಾಡಿ ಆಚೆಗೆ ನೆಗೆದು ವಿಲಿವಿಲಿ ಒದ್ದಾಡಿ ಪ್ರಾಣಬಿಟ್ಟಿತು. ಇಷ್ಟಾಗುವಾಗ ಹಂದಿಯ ಆಟೋಪವೂ ಕುಗ್ಗಿ ಕೈಕಾಲ ಬಡಿತವೂ ಶಾಂತವಾಯಿತು. ಸೋವತರು ಬೊಬ್ಬೆಯಾರ್ಭಟೆಯಿಂದ ಕೂಡಿ ಹತ್ತಿರ ಬಂದರು. ನನ್ನ ಹೊಗಳು ಭಟರು ನನ್ನ ಮೇಲೆ ಹೊಗಳಿಕೆಯ ಮಳೆ ಕರೆದರು.

'ಇಂದು ಮಾಂಸದೌತಣವೆಂದು' ಗಾರ್ಡರ ಮೊಗವು ಮಂದಹಾಸದಿಂದ ಮಿನುಗಿತು. ಹೊತ್ತು ಸುಮಾರು ಹನ್ನೆರಡೂವರೆ ಘಂಟೆ. ಹಂದಿಯು ಎಂಟು ಹತ್ತು ಜನ ಧಾಂಡಿಗರು ಹೊರುವಷ್ಟು ದೊಡ್ಡ ಒಂಟಿಗ. ಸೋವತರಿಗೂ,

ಬೇಟೆಗಾರರಿಗೂ ಆದ ಸಂತೋಷವು ಅಳತೆಗೆ ಮೀರಿದ್ದು. ಮೂರು ನಾಲ್ಕು ವಾರಗಳು ಬಾಡಡ ರುಚಿಯನ್ನು ಮರೆತ ಮಾಂಸಾಹಾರಿಗಳಿಗೇ ಇಂತಹ ಆನಂದವನ್ನು ಅನುಭವಿಸಲು ಸಾಧ್ಯ. ಸೋವತರೆಲ್ಲಾ ಹಂದಿ ಬಿದ್ದಲ್ಲಿ ಬಂದು ಅದರ ಪ್ರಾಯ, ಹಿಂದೆ ಅದಕ್ಕೆ ಬಿದ್ದಗುಂಡುಗಳ ಗಾಯಗಳನ್ನೆಲ್ಲಾ ಪರಿಶೀಲಿಸಿ ಅದರಬೆನ್ನಿನ ರೋಮವನ್ನು ಕಿತ್ತು ಸೂಡಿಕಟ್ಟಿ ನನಗೆ ಅರ್ಪಿಸಿ ಅದು ನನ್ನ ಸಾಹಸದ ಫಲವೆಂದು ನನಗೆ ಅದರ ಮೇಲಿನ ಒಡೆತನವನ್ನು ಒಪ್ಪಿಕೊಂಡು ಬೋಂಟ್ರನ ಹೆಗಲಿನ ಎಲವಸ್ತ್ರವನ್ನು ಅದಕ್ಕೆ ಹೊದಿಸಿ ಬಲ್ಲೆಯ ಎಡೆಯಲ್ಲಿ ಅದನ್ನು ಮರೆಯಾಗಿರಿಸಿ ಮುಂದಿನ ಕೆಲಸದ ವ್ಯವಸ್ಥೆಯನ್ನು ನಿರ್ಧರಿಸಲು ಕುಳಿತರು. ಹೀಗಾಗುವಾಗ ಗಂಟೆ ಒಂದಕ್ಕೆ ಹತ್ತಿರವಾಗಿತ್ತು. ನೆರೆಯಲ್ಲಿಯೇ ನೀರಿರುವುದರಿಂದ ಬುತ್ತಿಯೂಟವನ್ನು ಮುಗಿಸಿಯೇ ಮುಂದಿನ ವಿಚಾರವೆಂಬ ತೀರ್ಮಾನವಾಗಿ ಬುತ್ತಿಯನ್ನು ಬಿಚ್ಚಲು ಎಲ್ಲರೂ ತಯಾರಾದರು. ಬೇಟೆಯ ಕಾಲದಲ್ಲಿ ಬುತ್ತಿಯೂಟವೆಂದರೆ ಆ ರುಚಿಯನ್ನು ಬಲ್ಲವನೇ ಬಲ್ಲ. ಅದರಲ್ಲಿ ಇರುವ ಖಾದ್ಯಗಳೋ, ಉಳಿದ ದಿನಗಳಲ್ಲಿ ಲೆಕ್ಕಕ್ಕೇ ಹಿಡಿಯುವುದಲ್ಲ. ನಾಲ್ಕು ಹಿಡಿ ಮೊಸರೋ, ಮಜ್ಜಿಗೆಯಲ್ಲಿಯೋ ಉಪ್ಪು, ಎಳೆಮೆಣಸು ಹಾಕಿ ಕಲಸಿದ ಅನ್ನ, ಬಾಡಿಸಿದ ಬಾಳೆಎಲೆಯಲ್ಲಿ ಕಟ್ಟಿ ಅನ್ನದ ಮಧ್ಯದಲ್ಲಿ ತುರುಕಿಸಿಟ್ಟ ಸಿಂಬೆಯೋ, ಮಾವಿನಕಾಯಿಯದೋ ಒಂದು ಚೂರು ಉಪ್ಪಿನಕಾಯಿ ನೆಂಜಿಕೊಳ್ಳಲು, ಮಿಕ್ಕಿದರೆ ಕೆಂಡಕ್ಕಿಕ್ಕಿ ಕರಿದ ಒಂದೆರಡು ತುಂಡು ಬಂಗುಡೆ, ಬಲ್ಲಿಕ್ಕಾರು ಮೀನಿನ ತುಂಡು, ಕುಡಿಯಲು ಝರಿಯ ನೀರು ! ನೆ[illegible] ಮೇಲಿನ ಕೋವಿಯನ್ನು ಮರಕ್ಕಾನಿಸಿ, ಜೋತಾಡುವ ಮದ್ದುಗುಂಡುಗಳ ಚೀಲದಲ್ಲಿ ಇಟ್ಟಿರುವ ಬುತ್ತಿಯ ಗಂಟನ್ನು [illegible]ಯು, ಚೀಲವನ್ನು ಮರಕ್ಕೆ ತೂಗು ಹಾಕಿ, ತಲೆಯ ಫೆಲ್ಟ್ ಹೇಟನ್ನು ಕಲ್ಲಿನ ತಲೆಗಿರಿಸಿ, ಸೊಂಟದ ತೋಟೆ ತುಂಬಿರುವ ಬೆಲ್ಟನ್ನು ಬದಿಗಿರಿಸಿ ಮುಖ ಕೈಕಾಲಿಗೆ ನೀರು ತೋರಿಸಿ ಮಾಡುವ ಆ ಬುತ್ತಿಯೂಟದ ಎದುರಿಗೆ 'ಮೂರು ನಕ್ಷತ್ರಗಳ ಹೋಟೆಲಿನ' ಊಟವನ್ನು ನಿವಾಳಿಸಿ ಒಗೆಯಬೇಕು ! ಇದು ಅನುಭವವೇದ್ಯವೇ ವಿನಾ ವಿವರಣೆಗೆ ನಿಲುಕುವಂಥದಲ್ಲ. ಅಂತೂ ಊಟವು ಮುಗಿದು ಮುಂದಿನ ಕಾಡುಸೋವ ವಿಚಾರಕ್ಕೆ ಬರಬೇಕಾಯಿತು. ಬೀಡಿ ಸಿಗರೇಟಿನ ಭಕ್ತರು ಅದರ ಸೇವನೆಯನ್ನು ಮುಗಿಸಿದರು. ಎಲೆ ಅಡಿಕೆಯ ಸರದಿಯೂ ಮುಗಿಯಿತು. ಮುಂದೆ ನಾವೂರ ಪಲ್ಕೆಯನ್ನು ಸೋವುವುದೆಂದು ನಿರ್ಧರಿಸಿಯಾಯಿತು..ನಾವೂರ ಬೋಂಟ್ರಿ ಜಿನ್ನಪ್ಪ ಪೂಜಾರಿಯು ಗುರಿಕಾರರನ್ನು ಗಂಡಿಯಲ್ಲಿ ನಿಲ್ಲಿಸಲು ಕರಕೊಂಡು ಹೋಗಲು ತಯಾರಾಗಿ ನಿಂತು ನಾನೂ ಗಾರ್ಡರೂ ಮೇರಮುದ್ದ ಗಂಡಿಯನ್ನು ದಾಟಿಯೇ ಹೋಗಬೇಕು. ಇಲ್ಲಿ ನಿಲ್ಲುವ ಈಡುಗಾರನು ಅತಿ ಬುದ್ಧಿವಂತನೂ, ಜಾಗರೂಕನೂ

ಆಗಿರಬೇಕು. ಹೆದರಿದ, ಪೆಟ್ಟಾದ ಮೃಗಗಳು ಇಲ್ಲಿಗೆ ಬರುವಾಗ ನಾಗಾಲೋಟದಿಂದಲೇ ಬರುತ್ತವೆ. ಕೆಲವೊಮ್ಮೆ ಅರೆ ಪೆಟ್ಟಾದ ಮೃಗಗಳೂ ಇಲ್ಲಿ ಬರುವಾಗ ವಿಪರೀತ ಆಯಾಸಗೊಂಡು ಅನಾಯಾಸವಾಗಿ ಬೇಟೆಗಾರರ ಕೈಗೆ ಸಿಗುವುದೂ ಇದೆ. ಗಾರ್ಡರು ಕಾಡಿನ ಒಡೆಯನೆಂದೂ, ನಾನು ಉತ್ತಮ ಶಿಕಾರಿ ಎಂದೂ ಜಿನ್ನಪ್ಪ ಪೂಜಾರಿಯು ನಮ್ಮಿಬ್ಬರನ್ನು ಇಲ್ಲಿ ನಿಲ್ಲಲು ನಿಯೋಜಿಸಿದ್ದ.

ಮೇರಮುದ್ಧ ಗಂಡಿಗೆ ನಾವಿಬ್ಬರೂ ಬಂದುದಾಯಿತು. ಎಡಬಲವನ್ನೊಮ್ಮೆ ನೋಡಿ ನಾನು ಖಾಯಂ ನಿಲ್ಲುವ ಸ್ಥಳದಲ್ಲಿ ಮೊದಲು ನಾನು ನಿಂತು, ಗಾರ್ಡರಿಗೆ ನನ್ನಿಂದ ನೂರು, ನೂರೈವತ್ತು ಮಾರು ದೂರದಲ್ಲಿ ನಿಲ್ಲುವ ಗಂಡಿಯ ಠಾವನ್ನು ತೋರಿಸಿದೆ. ಅವರು ಹೊರಡಲು ಕಾಲೆತ್ತುವಾಗ ಬೀಸಿದ ಗಾಳಿಯಿಂದ ದುರ್ವಾಸನೆಯನ್ನು ಗ್ರಹಿಸಿ ನಾನು ''ಗಾರ್ಡರೇ, ಹತ್ತಿರದಿಂದ ಏನೋ ದುರ್ವಾಸನೆಯು ಬರುತ್ತಿದೆ'' ಎಂದೆ. ಅದಕ್ಕವರು ''ನಿನ್ನೆ ಮೊನ್ನೆ ಯಾರೋ ಮಲೆಕುಡಿಯರು ಹೊಡೆದು ಬಿಟ್ಟುಹೋದ ಮುಸುವಿರಬಹುದು'' ಎಂದು ಹೇಳಿ ಅವರಿಗೆ ತೋರಿಸಿದ ಗಂಡಿಗೆ ಹೋದರು. ಎದುರಿಂದ ಸೋವತರ ಬೊಬ್ಬೆಯಾರ್ಭಟೆಗೆ ಆರಂಭವಾಯಿತು. ನನ್ನ ಕೋವಿಯ ಬಲ ನಳಿಗೆಗೆ L.G.ಯನ್ನೂ, ಎಡ ನಳಿಗೆಗೆ ಒಂಟಿ ಗುಂಡನ್ನು ತುಂಬಿಸಿ ಎಡಬಲವನ್ನೊಮ್ಮೆ ಪರಿಶೀಲಿಸಿ ಯಾರು ಎಲ್ಲಿ ನಿಂತಿದ್ದಾರೆ ಎಂದು ನೋಡಿ ಎದುರುಗಡೆ ದೃಷ್ಟಿ ಬೀರಿ ಮೃಗವು ಬಂದರೆ ಎಲ್ಲಿಗೆ ಬರುವಾಗ ಈಡಾಗಬೇಕು ಎಂಬುದನ್ನು ನಿರ್ಧರಿಸಿ ಮರದ ಮರೆಯಲ್ಲಿ ಸನ್ನದ್ಧನಾಗಿ ನಿಂತೆ. ಗಾರ್ಡರೂ ತುಂಬು ಉತ್ಸಾಹದಿಂದ ನಿಂತಿರುವುದು ಕಂಡಿತು. ಸಾಧಾರಣ ಬಲಗಡೆ ೨-೩ ಫರ್ಲಾಂಗು ದೂರದಿಂದ 'ಢಮಾರ್' ಎಂಬ ಈಡಿನ ಶಬ್ದವನ್ನು ಕೇಳಿ ನವೋತ್ಸಾಹದಿಂದ ಈಗ ಮೃಗ ಬರುತ್ತಿದೆ, ಈಗ ಬರುತ್ತಿದೆ ಎಂದು ಕಾತರದಿಂದ ಮುಂದೆ ನೋಡತೊಡಗಿದೆ. ಬಹುದೂರದಿಂದ ಏನೋ ಬರುವ ಸದ್ದು ಅಹುದೋ, ಅಲ್ಲವೋ ಎಂಬಂತೆ ಕೇಳಿ ಬರುತ್ತಿದೆ. ಹತ್ತಿರ ಬರುವುದು ಕಾಣುವುದಿಲ್ಲ. ಬಜಕ್ಕುರೆ ಹಕ್ಕಿಯಾಗಿರಬಹುದು ಎಂದು ಸಮಾಧಾನ ಪಟ್ಟುಕೊಂಡು ಎದುರುಗಡೆಯಲ್ಲಿ ನನ್ನಿಂದ ಸುಮಾರು ನಾನ್ನೂರು, ಐನ್ನೂರು ಮಾರು ದೂರದಲ್ಲಿರುವ ಬಂಡೆಯತ್ತ ಕಡೆ ನೋಡುತ್ತೇನೆ- ಒಮ್ಮೆ ನನ್ನ ಶ್ವಾಸವೇ ನಿಂತಂತಾಯಿತು ! ಹಚ್ಚ ಹಳದಿ ಬಣ್ಣ, ನೀಳವಾದ ಕಪ್ಪು ಪಟ್ಟೆ, ಮುಡಿಗಾತ್ರದ ಮಂಡೆಯ ಅಡ್ಡ ಬಲಿಪ ! ತನ್ನ ಕೆನ್ನಾಲಗೆಯನ್ನು ಹೊರಚಾಚಿ ದೇಹದ ಬಲಭಾಗವನ್ನು ನೆಕ್ಕುತ್ತಿದೆ. ಒಮ್ಮೆ ಕಾಲೇ ಕುಸಿಯುವಂತಾಯಿತು. ಹಾಗೆ ಹೆದರಿ ಕಂಗೆಟ್ಟರೆ ನನ್ನ ಹೆಸರಿಗೇ ಅವಮಾನವೆಂದು ಭಾವಿಸಿ ಚೇತರಿಸಿಕೊಂಡು ಮತ್ತೆ ಆ ಕಡೆಗೆ ನೋಡಿದೆ. ಅಡ್ಡ ಬಲಿಪ ಗಂಭೀರವಾಗಿ ಇಳಿದು ಗಾರ್ಡರಿದ್ದ ಗಂಡಿಯತ್ತ

ನಡೆಯುವ ಹವಣಿಕೆಯಲ್ಲಿದ್ದುದು ಕಂಡುಬಂತು. ಬಲಿಪನೆಂಬ ಸೋವು ತಿಳಿದರೆ ಸಾಕು; ಪ್ರಾಣಭೀತಿಯಿಂದ ತಲ್ಲಣಗೊಳ್ಳುವ ಗಾರ್ಡರಿಂದ ಈಡು ಹೊಡೆಯುವ ಕೆಲಸ ಖಂಡಿತವಾಗಿಯೂ ಆಗದೆಂದು ಅರಿತ ನಾನು ಅದು ಇಳಿಯುವ ಅಂದಾಜು ಮಾಡುವಾಗ ಮೆಲ್ಲನೆಂದೆ- ''ಬುಡ್ಡಿ ಬರುತ್ತಿದೆ ಗಾರ್ಡರೇ ಬಿಡಬೇಡಿ'' ಎಂದು! 'ಬುಡ್ಡಿ' ಎಂದರೆ ಹೆಣ್ಣು ಕಡಲೆ, ಕೊಂಬು ಇಲ್ಲದ್ದು ಎಂದರ್ಥ. ಪಟ್ಟೆ ಹುಲಿಯು ಅಲ್ಲಿಂದ ಇಣಿಲು ಬಲ್ಲೆಯ ಎಡೆಯಲ್ಲಿ ಇವರಿಗೆ ಕಾಣದು. ಬಲ್ಲೆಯನ್ನು ಬಗಿದುಕೊಂಡು ಬರುವ, ಬಲ್ಲೆಯ ಸೀಳನ್ನು ಅರಿತು ಅಂದಾಜಿನಿಂದ ಅವರು ಹೊಡೆಯಬೇಕು. ಹೆದರದಿದ್ದರೆ ಗಾರ್ಡರೇನೂ ಫಡಪೋಷಿ ಈಡುಗಾರರಲ್ಲ. 'ಅವರು ಹುಲಿಯನ್ನು ಹೊಡೆಯದೆ ಬಿಡಬಾರದು. ಕಡವೆಯ ಕೊಂಬನ್ನು ಕಂಡು ಅಂದಾಜು ಮಾಡುವುದು ಬೇಡ; ಹೆಣ್ಣು ಕಡವೆಯೆಂದೇ ಭಾವಿಸಿ, ಆ ಅಂದಾಜಿನಿಂದಲೇ ಹೊಡೆಯಲಿ' ಎಂದು ನಾನು ಅವರಿಗೆ ಹಾಗೆ ಹೇಳಿದ್ದು. ಹುಲಿಯೂ ಸಾಧಾರಣ ಅಷ್ಟೇ ಎತ್ತರವಿತ್ತು. ಗಾರ್ಡರು ಕೋವಿಯನ್ನು ಎದೆಗೆ ಹಾಕಿ ಒಕ್ಕಣ್ಣಿನಿಂದ ಶಿಸ್ತು ನೋಡುತ್ತಿದ್ದಾರೆ. ತರಗೆಲೆಯ ಪರಪರ ಸದ್ದು, ಬಲ್ಲೆ ಬಗಿಯುವ ಶಬ್ದ ನನಗೂ ಕೇಳುತ್ತಿದೆ. ಢಂ, ಢಮ್ಮೆಂದು ಆಯಿತು ಈಡು. ನೆಲ ಬಿರಿಯುವಂತಹ ಒಂದು ಆರ್ಭಟೆಯಾಗಿ ಸೋವತರ ಬೊಬ್ಬೆ ಇರಲಿ, ಗಾಳಿಯ ಸದ್ದೂ ನಿಂತಂತಾಯಿತು! ನೆರೆಯಲ್ಲಿ ಕೋವಿಯವರು ಮರ ಹತ್ತುವ ಭರದಲ್ಲಿ ಮರದಿಂದ ಜಾರಿ ಬೀಳುವುದು ಕಾಣುತ್ತಿತ್ತು. ಗಾರ್ಡರ ''ಓ ರೈಲೇ, ಆಂಡ್''.(ಓ, ರೈಗಳೇ ಆಯಿತು) ಎಂಬ ಆರ್ತನಾದವು ಕೇಳಿಬಂದು ಅತ್ತ ನೋಡುತ್ತೇನೆ- ಗಾರ್ಡರ ತಲೆಯ ಮೇಲೆ ನೆಗೆದ ಪಟ್ಟೆಹುಲಿಯು ತೆವಳುತ್ತಾ ಹೊಟ್ಟೆ ಎಳೆದುಕೊಂಡು ಮುಂದೆ ಹೋಗುತ್ತಿದೆ! ರಕ್ತಸ್ನಾನದಿಂದ ದೇಹವಿಡೀ ನೆನೆದು ಕೆಂಪಾಗಿ, ನೆಲದ ಮೇಲೆ ಹೆಣದಂತೆ ಅಲುಗಾಡದೆ ಬಿದ್ದ ಗಾರ್ಡರ ದೇಹವು ಕಾಣಿಸುತ್ತಿದೆ. ಬದಿಯಲ್ಲಿ ಅನಾಥವಾಗಿ ಕೋವಿ ಉರುಳಿದೆ. ಒಮ್ಮೆ ದಿಗ್ಭ್ರಮೆಗೊಂಡು ಮೂಗನಂತಾದ ನಾನು ಒಡನೆ ಗಾರ್ಡರು ಬಿದ್ದತ್ತ ಧಾವಿಸಿದೆ. ಪೆಟ್ಟಾದ ಹುಲಿಯು ಗಾರ್ಡರು ಬಿದ್ದಲ್ಲಿಂದ ಹದಿನೈದು ಮಾರು ದೂರದಲ್ಲಿ ಹೊರಳಾಡುತ್ತಿದೆ. ಹೊರಳುವ ಹುಲಿಗೆ ಅದರ ಜೀವ ಹೋಗಲೆಂದೇ- ಒಂದು ಈಡು ಹೊಡೆದೆ. ಹುಲಿಯ ಹೊರಳಾಟವು ನಿಂತಿತು.

ಹೋಗಿ, ಗಾರ್ಡರನ್ನು ಕೈಹಿಡಿದು ಎಬ್ಬಿಸಲು ಪ್ರಯತ್ನಿಸಿದೆ. ಊಹುಂ, ಅಲ್ಲಾಡುವುದೇ ಇಲ್ಲ. ಮೂಗಿಗೆ ಕೈಹಿಡಿದು ನೋಡುತ್ತೇನೆ. ಮೂಗಿನಿಂದ ಗಾಳಿ ಹೊರಡುವ ಲಕ್ಷಣವೇ ಕಾಣುತ್ತಿಲ್ಲ. 'ಗಾರ್ಡರ ಅವಸ್ಥೆ ಮುಗಿಯಿತು. ಇನ್ನು ಹುಲಿಯ ಏಟು ಗಾರ್ಡರ ಮೈಗೆ ಎಲ್ಲಿಗೆ ಬಿದ್ದಿದೆ ಎಂದು ನೋಡೋಣ' ಎಂದು ಶರೀರವಿಡೀ ರಕ್ತಸ್ನಾನವಾದ ಗಾರ್ಡರ ದೇಹವನ್ನು ಪರಿಶೀಲಿಸಿದೆ. ಹುಲಿಯ ಹಲ್ಲು

ಎಲ್ಲಿ ಊರಿದೆ, ಉಗುರು ಎಲ್ಲಿ ಗೀರಿದೆ ಎಂದು ಗಡಿಬಿಡಿಯ ಪರಮಾವಧಿಯಲ್ಲಿದ್ದ ನನಗೆ ಅರಿಯುವುದೇ ಅಸಾಧ್ಯವಾಯಿತು. ಮನುಷ್ಯನ ಬೊಬ್ಬೆ ಹುಲಿಯ ಆರ್ಭಟೆಯನ್ನು ಕೇಳಿದ ಸೋವತರಲ್ಲಿ ಮುಕ್ಕಾಲು ಪಾಲು ಜನರು ಅಲ್ಲಿಂದಲೇ ಕಾಲ್ದೆಗೆದಿರಬೇಕು. ನನ್ನ ಹಂಗಿಗರು ದೂರ ದೂರವಿರುವುದರಿಂದ ಅವರು ಬರಲು ಸ್ವಲ್ಪ ಹೊತ್ತಾಗಬಹುದು. ಹತ್ತಿರ ಯಾರಾದರೂ ಇರುವರೇ ಎಂದು ದಿಟ್ಟಿ ಹಾಯಿಸಿದೆ. ಬಂಗಾಡಿಯ ಬೇಟೆಗಾರ ಚೆಂಕ್ರ ಪೂಜಾರಿಯು ಇನ್ನೂ ಐದು ಮಾರು ಮರವೇರಿ ಮೂರು ಮಾರು ಕೆಳಗೆ ಜಾರುವ ಸಾಹಸದಲ್ಲಿ ಇದ್ದಾನೆಯೇ ಹೊರತು, ನಮ್ಮ ಸಹಾಯಕ್ಕೆ ಬರುವಂತೆ ತೋರಲಿಲ್ಲ? ಇದನ್ನು ಕಂಡ ನಾನು ಈ ಪರಿಸ್ಥಿತಿಯಲ್ಲಿಯೂ ಚೇತರಿಸಿಕೊಂಡು ''ಚೇಂಕ್ರಾ ಬಾ, ಇಲ್ಲಿ'' ಎಂದು ಗರ್ಜಿಸಿದೆ. ತಾನು ಮಾಡುವ ಹೇಡಿತನದ ಕೆಲಸಕ್ಕೆ ಹೇಸಿ ಗಡಗಡನೆ ನಡುಗುತ್ತಾ ನಮ್ಮೆಡೆಗೆ ಬಂದ. ಗಾರ್ಡರ ಚಲನಾರಹಿತ ಶರೀರವು ಅಂಗಾತ ಬಿದ್ದಿದೆ. ಏನಾಗಿದೆ. ಎಂದು ನೋಡಬೇಕಷ್ಟೆ? ಬಳಿಯಲ್ಲೆ ನೀರಿನ ಝರಿಯಿದೆ. ಆದರೆ ನೀರು ತರುವುದು ಹೇಗೆ? ಸಾಧನವಾವುದು? ಪಕ್ಕನೆ ನೆನಪಾಯಿತು. ನನ್ನ ಪೆಲ್ಟ್‌ಹೇಟನ್ನೇ ಪಾತ್ರೆಯಾಗಿ ಮಾಡಿಕೊಂಡು, ಅತ್ಯವಸರದಿಂದ ಓಡೋಡಿ ಗಾರ್ಡರ ತಲೆ, ಮುಖಕ್ಕೆ ನೀರು ಚಿಮುಕಿಸಿ, ಸ್ವಚ್ಛಗೊಳಿಸಿ ಪರಿಶೀಲಿಸಿದೆ. ಕತ್ತಿನಿಂದ ಮೇಲೆ ಎಲ್ಲಿಯೂ ಗಾಯವಾಗಿಲ್ಲ. ಇಷ್ಟಾಗುವಾಗ ಗಾರ್ಡರಲ್ಲಿ ಸ್ವಲ್ಪ ಉಸಿರಾಡುವ ಲಕ್ಷಣವೂ ಕಂಡುಬಂತು. ಕುಡಿಯಲು ಬೇಕಾದಷ್ಟು ನೀರನ್ನು ನಾನೂ ಚೇಂಕ್ರ ಪೂಜಾರಿಯೂ ಪ್ರಯತ್ನಿಸಿ ಸುರಿದೆವು. ಇಷ್ಟರಲ್ಲಿ ನನ್ನ ಕೂಡುಕಟ್ಟಿನ ಕೆಲವು ಸೋವತರೂ, ಕೋವಿಯವರೂ ನಾವದ್ದ ಕಡೆಗೆ ಅತಿ ಮೆಲ್ಲನೆ ಬರುತ್ತಿರುವುದು ಕಂಡು ನೆಮ್ಮದಿಯ ಉಸಿರನ್ನು ಎಳೆದೆ. 'ಹೆಣ ಹೊರುವ ಕೆಲಸವಾದರೂ ಉಳಿಯಿತಲ್ಲಾ' ಎಂಬ ನಿರ್ಧಾರಕ್ಕೆ ಬಂದು ಅವರನ್ನು ಬೇಗಬೇಗನೆ ಬರುವಂತೆ ಕೈಸನ್ನೆಯಿಂದ ಕರೆದುದಾಯಿತು. ಅವರ ಧನಿಯಾದ ನನ್ನ ಸನ್ನೆಗೆ ಪ್ರತಿಕ್ರಿಯೆಯಾಗಿ ಅವರು ಓಡಿಬಾರದೆ ನಿರ್ವಾಹವಿರಲಿಲ್ಲ. ಬಂದ ಆಳುಗಳ ಸಹಾಯದಿಂದ ಗಾರ್ಡರ ಯೂನಿಫಾರ್ಮನ್ನು ಬಿಚ್ಚಿಸಿ ಗಾಯವೆಲ್ಲಾಗಿದೆ ಎಂದು ಪರಿಶೀಲಿಸಲು ಆದೇಶಿಸಿದೆ. 'ಮುಟ್ಟಪ್ಪಾಳೆಯಿದ್ದವರು ಅದರಲ್ಲಿಯೂ, ಇಲ್ಲದವರು ನನ್ನ ಹ್ಯಾಟಿನಲ್ಲೂ ನೀರು ತನ್ನಿ' ಎಂದು ಹೇಳಿ ಗಾರ್ಡರ ಅಂಗಿಯ ಗುಂಡಿಗಳನ್ನು ಬಿಚ್ಚಲು ಹೋಗುತ್ತೇನೆ, ಅಯ್ಯೋ, ತಡೆಯಲು ಅಸಾಧ್ಯವಾದ ವಾಸನೆ! ಏನೆಂದು ಗಮನಿಸಿದಾಗ ಹೆದರಿದ್ದ ಗಾರ್ಡರು ಮಲಮೂತ್ರಗಳನ್ನು ವಿಸರ್ಜಿಸಿಕೊಂಡದ್ದು ಅವರ ಚಡ್ಡಿಯ ಎಡೆಯಿಂದ ರಕ್ತ ಮಿಶ್ರಿತವಾಗಿ ಹೊರಗೆ ಬಂದಿದೆ ! ಗಾರ್ಡರ ಉಡುಪನ್ನು ಕಳಚುವಂತೆ ಮಲೆಕುಡಿಯ ಅಮ್ಮುಗೆ ಸ್ವಲ್ಪ ದರ್ಪದಿಂದಲೇ ತಾಕೀತು ಮಾಡಿದೆ. ಅವನೂ

ನನ್ನಂತೆಯೇ ಮನುಷ್ಯನಲ್ಲವೇ? ಅವನಿಗೂ ಮೂಗಿಲ್ಲವೇ? ಆದರೆ ಪಾಪ, ಆತನು ಬಡ ಮಲೆಕುಡಿಯ. ನನ್ನ ಮಾತಿನಂತೆ ನಡೆಯದಿದ್ದರೆ ಮುಂದಿನ ಪರಿಣಾಮದ ಭೀತಿ! ಅಂತೂ ಕೋಟು ಕಳಚಿಯಾಯಿತು. ಕೋಟೂ ಹರಿದಿಲ್ಲ. ತಲೆಗೂ ಪೆಟ್ಟಿಲ್ಲ ಎದೆ, ಹೊಟ್ಟೆಗೆ ಗಾಯವಾಗಿಲ್ಲ. ಇದು ಮತ್ತೆಲ್ಲಿಯ ರಕ್ತ? ಬನಿಯನನ್ನೂ ಕಳಚಿದ್ದಾಯಿತು. ಉಹೂಂ, ಹುಲಿಯ ಉಗುರು, ಹಲ್ಲು ಊರಿದ ಚಿಹ್ನೆಯೇ ಇಲ್ಲ. ಮತ್ತೇನಪ್ಪಾ, ಇವರಿಗೆ ಸಿಡಿಲು ಬಡಿಯಿತೇ? ಚಡ್ಡಿಯನ್ನೂ ಕಳಚಿ ಇಡೀ ದೇಹವನ್ನು ತೊಳೆದು ಶುದ್ಧ ಮಾಡಿದುದಾಯಿತು ಬೀಳುವಾಗ ಆದ ಒಂದು ಕಲ್ಲಿನ ಗೀರಿನ ಗಾಯವಲ್ಲದೆ ಶರೀರದಲ್ಲಿ ಬೇರೆಲ್ಲಿಯೂ ಹುಲಿಯ ಹೊಡೆತದ ಗುರುತೇ ಇಲ್ಲ. ಮತ್ತೇನು ಮಾರಿ ಬಡಿದು ಇವರಿಗೆ ರಕ್ತಾಭಿಷೇಕ, ಬೋಧಹೀನತೆ ಬಂದುದು? ಎಂದು ಆಲೋಚನೆ ಮಾಡುತ್ತಿರುವಾಗ ಕೈಕಾಲು ಚಾಚಿ ಮಲಗಿದ್ದ ಗಾರ್ಡರಿಂದ ಹೊರಟಿತು ಒಂದು ಗರ್ಜನೆ! ಹುಲಿಗೆ ಈಡಾಗುವಾಗ ಅದು ಹೊಡೆದುದಕ್ಕಿಂತಲೂ ಒಂದು ಮಡಿ ಮಿಗಿಲು! ಸುತ್ತು ಮುತ್ತು ನೆರೆದವರೆಲ್ಲಾ ಬಿದ್ದ ಹುಲಿಯು ಪುನಃ ಎದ್ದಿತೋ ಎಂದು ಭೀತಿಯಿಂದ ಓಡಲು ಹವಣಿಸಿದರು. ಅವರನ್ನು ತಡೆದು ನಿಲ್ಲಿಸಿದೆ. ಎಲ್ಲರೂ ಸಾವರಿಸಿಕೊಳ್ಳಬೇಕಾದರೆ ಸ್ವಲ್ಪ ಹೊತ್ತೇ ಬೇಕಾಯಿತು. ಆದರೆ ಹುಲಿಯು ಬಿದ್ದಲ್ಲಿಯೇ ಇತ್ತು. ನಾವು ಕೇಳಿದ್ದು, ಹೆದರಿ ಮೂರ್ಛೆ ಹೋಗಿದ್ದ ಗಾರ್ಡರ ಆರ್ಭಟೆಯೆಂದು ಖಚಿತವಾಯಿತು. ಮತ್ತೆ ಪರಿಶೀಲಿಸಿ ಹುಲಿಯ ಪೆಟ್ಟನ್ನೂ ಗಾರ್ಡರ ಶರೀರವನ್ನೂ ಗಮನಿಸಿದಾಗ ಹೀಗೆ ನಿರ್ಧರಿಸಬೇಕಾಯಿತು. ಈಡಾದ ಹುಲಿಯು ಅವರ ಮೇಲೆ ನೆಗೆಯಬೇಕೆಂದು ಹವಣಿಸಿ ಕಾಲ್ದೆಗೆಯುವಾಗ ಸ್ವಲ್ಪ ಭರ ಜಾಸ್ತಿಯಾಗಿ ತಲೆಗೆ ಕಾಲಿಡಬೇಕೆಂದು ಬಗೆದುದು ತಪ್ಪಿ ಅದರ ಹೊಟ್ಟೆಯು ಅವರ ನೆತ್ತಿಗಾಯಿತು. ಆ ವೇಳೆಗೆ ಹುಲಿಯ ನೆತ್ತಿಗೆ ತಾಗಿದ್ದ ಗುಂಡು ಹೊಟ್ಟೆಯಿಂದ ಹೊರ ಬಿದ್ದಿತ್ತು! ಆ ಗಾಯದಿಂದ ಹೊರಟ ರಕ್ತದಿಂದಲೇ ಗಾರ್ಡರಿಗೆ ರಕ್ತಸ್ನಾನವಾಗಿದೆ. ಈ ಆಘಾತದಿಂದ ಹೆದರಿ ದಿಗ್ಭ್ರಮೆಗೊಂಡ ಗಾರ್ಡರು ಪ್ರಜ್ಞಾಹೀನರಾಗಿದ್ದಾರೆ. ಹುಲಿ ನೆಗೆದುದರ ಪರಿಣಾಮ ಎಷ್ಟಾಗಿದೆ ಎಂದರೆ, ಅವರರೋಮ ರಂಧ್ರಗಳಿಗೂ ಭಯ ನುಗ್ಗಿದೆ ಎಂದು ಅವರ ಶರೀರದ ಕಂಪನದಿಂದ ತಿಳಿಯಿತು. ಆದುದರಿಂದಲೇ ಅವರು ನರಳಾಡುವುದು, ಬೊಬ್ಬೆ ಹೊಡೆಯುವುದು ಎಲ್ಲ ಹುಲಿಯಂತೆಯೇ ಎಂಬ ನಿರ್ಧಾರಕ್ಕೆ ಬರಬೇಕಾಯಿತು.

ನೆರೆಮನೆಯಿಂದ ಪಡಿಯನ್ನು ತರಿಸಿ ಅದರಲ್ಲಿ ಬೈಹುಲ್ಲಿನ ಹಾಸಿಗೆಯನ್ನು ಹಾಸಿ ಗಾರ್ಡರ ಶರೀರವನ್ನು ಮಲಗಿಸಿ ಅಲ್ಲಿದ್ದವರಿಂದ ನಾವೂರಲ್ಲಿರುವ ಅವರ ಬಿಡಾರಕ್ಕೆ ಹೊತ್ತು ತರುವ ವ್ಯವಸ್ಥೆಯನ್ನು ಮಾಡಿದೆ. ಅವರೊಂದಿಗೆ ನಮ್ಮೆಲ್ಲರ ಯಾತ್ರೆಯು ಮುಂದುವರಿಯಿತು. ದಾರಿಯಲ್ಲಿ ಆಗಾಗ ಗಾರ್ಡರ ಗರ್ಜನೆಯು ನಡೆದೇ ಇತ್ತು.

ಮನೆಯ ಬಾಗಿಲಿಗೆ ಬರುವಾಗ ಈ ವಿಚಾರಗಳನ್ನು ತಿಳಿದು ಗಾರ್ಡ್‌ರ ಮನೆಯವರು ಗೈದ ರೋದನ ಹೃದಯ ವಿದೀರ್ಣವಾಗುವಂಥಾದ್ದು. ಅವರನ್ನು ಸಮಾಧಾನಪಡಿಸಬೇಕಾದರೆ ನಾನು ಪಟ್ಟ ಪಾಡು ನನಗೇ ವೇದ್ಯ. ಅಂತೂ ಗಾರ್ಡ್‌ರಿಗೇನೂ ಪೆಟ್ಟಾಗಿಲ್ಲ, ಹೆದರಿಕೊಂಡದ್ದೆಂದು ಸಮಾಧಾನಪಡಿಸಿ ನೆರೆಯ ಪಂಬದ ಕರಿಯ ಮಂತ್ರವಾದಿಯನ್ನು ಕರೆಸಿ, ಆತನ ಮೂಲಕ ವಿಭೂತಿ ಮಂತ್ರಿಸಿ ಕುರ್ದಿ, ಎಳನೀರುಗಳಲ್ಲದೆ ಕೋಳಿಯ ತಲೆ ಕ್ಯೊಸಿ ಅದರ ರಕ್ತವನ್ನೂ ಕುಡಿಸಿ ಬಲಿ ತೆಗೆದುದಾಯಿತು. ಗಾರ್ಡ್‌ರ ಸ್ಥಿತಿ ಸ್ವಲ್ಪ ಸ್ಥಿಮಿತಕ್ಕೆ ಬಂದು ನಾವು ಸಮಾಧಾನದ ಉಸಿರನ್ನೆಳೆದು ಆಪಾಯದ ಅಂಚಿನಿಂದ ಗಾರ್ಡ್‌ರು ಪಾರಾದರು ಎಂಬ ನಿರ್ಧಾರಕ್ಕೆ ಬಂದು ನಾವು ಮನೆ ಸೇರುವಾಗ ಕತ್ತಲೆ ಹರಿದು ಮನೆಯ ಹುಂಜವು 'ಕೊ-ಕ್ಕೊ-ಕ್ಕೊ-ಕೋ' ಎಂದು ಕೆಲೆಯಿತು! ಬರಿಹೊಟ್ಟೆ; ಅಡಿಗೆಯಾಳನ್ನು ಎಬ್ಬಿಸಿ, ಆಹಾರವೊದಗಿಸಲು ತಿಳಿಸಿ, ಸ್ನಾನಮಾಡಿ ಊಟಕ್ಕೆ ಕೂತುಕೊಳ್ಳುವಾಗ ನಾಲ್ಕೂ ಮುಕ್ಕಾಲು ಘಂಟೆ. ಈ ಸಂದರ್ಭದಲ್ಲೂ ಮಧ್ಯಾಹ್ನಕ್ಕೆ ಶಿಕಾರಿ ಮಾಡಿದ್ದ ಹಂದಿಯನ್ನು ಉಳಿದವರು ಹದಮಾಡಿ ನಮ್ಮ ಪಾಲಿನ ಮಾಂಸವು ಪಾಕವಾಗಿ ಊಟದ ಹೊತ್ತಿಗೆ ಸಿದ್ಧವಾಗಿತ್ತು.

ಅಂತೂ ಪ್ರಾತಃಕಾಲದಲ್ಲಿ ಕನಸು ನೆನಸಿನ ಮಧ್ಯೆ ಕಿರಿನಿದ್ರೆಯೊಂವನ್ನು ಮುಗಿಸಿ ಆತುರಾತುರವಾಗಿ ಮುಖ ತೊಳೆದು ಒಕ್ಕಲಿನವರನ್ನು ಕರೆದು ನಾವೂರು ಪಲ್ಕೆಯಲ್ಲಿ ಬಿದ್ದಿದ್ದ ಗಾರ್ಡ್‌ರಿಂದ ಹೊಡೆಯಲ್ಪಟ್ಟ ಹುಲಿಯನ್ನು ಬಂಗ್ಲೆಯ ಬಾಗಿಲಿಗೆ ತರುವ ವ್ಯವಸ್ಥೆ ಮಾಡಿಸಿ ಗಾರ್ಡ್‌ರ ಕ್ಷೇಮ ಸಮಾಚಾರವನ್ನು ವಿಚಾರಿಸಲು ಅವರ ಬಿಡಾರಕ್ಕೆ ತೆರಳಿದೆ. ಮನೆಯ ಮಕ್ಕಳು ಗಾರ್ಡ್‌ರಿಗೆ ನಾನು ಬರುವ ಸಮಾಚಾರವನ್ನು ತಿಳಿಸಿರಬೇಕು. ನನ್ನನ್ನು ಕಂಡವರೇ, ''ರೈಗಳೇ, ನಿಮ್ಮನ್ನು ನಂಬಿ ಹೆಂಡತಿ ಮಕ್ಕಳಿದ್ದವನು ಬೇಟೆಗೆ ಬರಬೇಕಯ್ಯಾ. ಬಲಿಪನನ್ನು ಬುದ್ಧಿಯೆಂದು ನಂಬಿಸಿ ನನ್ನ ಮೂಲಕ ಹೊಡೆಸುತ್ತೀರೆಂದು ನಾನು ಎಣಿಸಿರಲಿಲ್ಲ. ನೀವು ಇಂಥ ಘಾತಕನೆಂದು ಗೊತ್ತಿರಲಿಲ್ಲಸ್ವಾಮೀ'' ಎಂದು ಹೇಳಿದವರೇ ಶಯನಗ್ರಸ್ಥರಂತೆ ಮಲಗಿ ಬಿಟ್ಟರು. ಇದನ್ನು ಗಂಡು ಹೆದರಿದ ನಾನು ಪುನಃ ಪಂಬದ ಕರಿಯನನ್ನು ಕರೆಸಿ ವಿಭೂತಿ ಮಂತ್ರಿಸಿ, ಮೂರನೇ ದಿನ ಹುಲಿಭೂತಕ್ಕೆ ಕೋಲ ಕೊಡುವುದೆಂದು ನಿಶ್ಚಯಿಸಿ ಈಡು ಕಟ್ಟಿ ಮನೆಯವರಿಗೆ ಧೈರ್ಯ, ಭರವಸೆ ಕೊಟ್ಟು, ಆ ಕೆಲಸಗಳನ್ನೆಲ್ಲ ಮಾಡಿಸಿ ಗಾರ್ಡ್‌ರು ಹಿಂದಿನ ಸ್ಥಿತಿಗೆ ಬರಬೇಕಾದರೆ ವಾರ ಒಂದು ಹಿಡಿಯಿತು. ಅಂತೂ ಕೋಲ, ಬಲಿ, ತಂಬಿಲ ಎನ್ನುವಾಗ ನನಗೆ ಸಾಧಾರಣ ಅಂದಿನ ಐವತ್ತು, ಎಪ್ಪತ್ತು ರೂಪಾಯಿ ಖರ್ಚು. ಏಳು ಎಂಟು ಕೋಳಿ ಬಲಿ, ಪಂಬದ ಕರಿಯನಿಗೆ ಹದಿನೈದು ದಿನದ ಜೀವನೋತ್ಪತ್ತಿ! ಹೇಗಾದರೂ ಗಾರ್ಡ್‌ರು ಚೇತರಿಸಿಕೊಳ್ಳುವಷ್ಟರಲ್ಲಿ ನಾನು

ಹೊರಿಸಿ ಸುಲಿಸಿ ತೆಗೆದಿಟ್ಟ ಹುಲಿಯ ಚರ್ಮವನ್ನು ತಾಲೂಕು ಆಫೀಸಿಗೆ ಸಲ್ಲಿಸಿ ಹುಲಿ ಚರ್ಮದ ಸಂಭಾವನೆಯನ್ನು ಪಡೆಯಲೆಂದು ಗಾರ್ಡರು ತೆರಳಿದರು. ಮತ್ತೆ ಆ ಗಾರ್ಡರನ್ನು ನಾನು ಕಂಡದ್ದು ಹತ್ತಾರು ವರ್ಷಗಳ ಅನಂತರ ಸುಬ್ರಹ್ಮಣ್ಯದಲ್ಲಿ. ಆ ದಿನ ನನ್ನೊಂದಿಗಿದ್ದವರೊಡನೆ ಬಲಿಪ ಶಿಕಾರಿಯ ಈ ಕತೆಯನ್ನು ಗಾರ್ಡರು ಹೇಳಿದಾಗ ನಾವೆಲ್ಲರೂ ಗತಕಾಲದ ಆ ಪ್ರಸಂಗವನ್ನು ಮತ್ತೊಮ್ಮೆ ನೆನೆದುಕೊಂಡೆವು. ಹಾಗೆ. ಸಂತೋಷದಿಂದ ಸಲ್ಲಾಪಿಸುತ್ತಾ, ನಗುತ್ತಾ ಮಧ್ಯಾಹ್ನದ ಊಟವನ್ನು ಗಾರ್ಡರ ಮನೆಯಲ್ಲೇ ಪೂರೈಸಿದ ಆತ್ಮೀಯ ಸನ್ನಿವೇಶ ಸದಾ ಸ್ಮರಣೀಯವಾಗಿದೆ.

□□□□□

ಕುಂಞಿಮೋನು ಸಾಹುಕಾರ

ನಮ್ಮ ಊರು ಬಂಟ್ರ, ನೆಕ್ಕಿಲಾಡಿ, ಕಡಬ, ಕೊಂಬಾರು ಸುಬ್ರಹ್ಮಣ್ಯದತನಕ, ಕುಂಞಿಮೋನು ಬ್ಯಾರಿಗಳು ಸತ್ತು ಹತ್ತಾರು ವರ್ಷಗಳಾದರೂ ಅವರದು ಮರೆಯುವ ವ್ಯಕ್ತಿತ್ವಲ್ಲ. ಪೋಕ್ರಿ ಕುಂಞಿಮೋನುವೆಂದೇ ಹಿಂದಿನಿಂದ ಕರೆಯುವುದು ರೂಢಿ. ಗುತ್ತು ಬೀಡಿನವರ ಕೋಣಗಳನ್ನು ಕಂಬಳಕ್ಕೆ ಬಿಡಬೇಕೆ? ಕುಂಞಿಮೋನು ಬ್ಯಾರಿಯು ಬರಬೇಕು. ಬ್ಯಾರಿಯ ಕನೆಹಲಗೆಯಲ್ಲಿ ನಿಂತ ಕೋಣಗಳು ಏಳೂವರೆ ಕೋಲಿನ ನಿಶಾನಿಗೆ ನೀರು ಹಾಕದಿದ್ದರೂ ಕೊನೆಗೆ ಬಹುಮಾನ ಅವಕ್ಕೇ. ಸಾಹುಕಾರರ ಮಾತಿನ ಧಾಟಿಯಂತಹುದು. ಕೋಣ ಓಡಿದರೆ ಸಾಲದು, ಕೋಣಗಳೊಂದಿಗೆ ಹುರುಳಿ, ಹುರುಳಿಯೊಂದಿಗೆ ಕೋಣನ ಬೆನ್ನಮೇಲೆ ಬೆತ್ತ, ಹಿಂದಿನಿಂದ ಕನೆಹಲಗೆಯಲ್ಲಿ ನಿಂತವನ ಉರಾಲಿನೊಂದಿಗೆ ಮಂಜೊಟ್ಟಿ ಇಳಿದು ನಾಲಗೆಯೂ ಓಡಿದರೆ ಕಂಬಳದ ಕೋಣ ಓಡಿದಂತಾಗುವುದು. ಇಲ್ಲವಾದರೆ ಕೋಣಗಳು ಓಡಿದರೂ ಪ್ರಯೋಜನವಿಲ್ಲ ಎನ್ನುವಂತೆಯೇ ಕೃತಿ ಕೂಡಾ-ತೀಡಿದರೆ ಎಣ್ಣೆ ಬರುವಂತಹ ಮಾಂಸಖಂಡದಿಂದ ತುಂಬಿದ ಕಪ್ಪಾದ ದೇಹ. ಹುರಿಮೀಸೆ, ಅಂಗಿ ಹಾಕದ ಕಾಲಕಣ್ಣಿನವರೇಗೆ ಇಳಿಬಿಟ್ಟ ನಿಲು ಲುಂಗಿ, ಮೈಗೊಂಡು ಕೆಂಪು ಸೇಲೆ ಈ ವ್ಯಕ್ತಿಯನ್ನು ದೂರದಿಂದ ಕಂಡರೂ ''ಸಲಾಮು ಸಾಹುಕಾರ್ರೇ'' ಎನ್ನದವರು ಅಂದು ಆ ಊರಲ್ಲಿ ಅತೀ ವಿರಳ. ಊರಿನ ಯಾವ ಪಂಚಾಯಿತಿಕೆಯೇ ಇರಲಿ, ಗುತ್ತಿನ ಗುರಿಕ್ಕಾರರು ಕುಂಞಿಮೋನುಬ್ಯಾರಿಯ ಕೂಡೆ ವಿಷಯ ತಿಳಿಯದೆ ತೀರ್ಪು ಕೊಡುವಂತಿಲ್ಲ ಕಾರಣ, ಒಂದಲ್ಲ ಒಂದು ರೀತಿಯಿಂದ ಈ ಪಂಚಾಯಿತಿಕೆಯ ಒಳಗುಟ್ಟು ಕುಂಞಿಮೋನು ಅರಿತುದೇ. ಯಾರ ಮನೆಯಲ್ಲಿ ಯಾವುದು ಬೆಂದಿದೆ, ಯಾವುದು ಹಸಿ, ಬಿಸಿ ಎಂದು ಬಂಟ್ರ, ನೆಕ್ಕಿಲಾಡಿ ಗ್ರಾಮಗಳಲ್ಲಿ ಕುಂಞಿಮೋನು ಅರಿತಿಲ್ಲವೆಂದಾದರೆ ಅಂಥಹುದು ನಡೆದಿಲ್ಲವೆಂದೇ ಅರ್ಥ. ಅಂದರೆ ಹಳ್ಳಿ ಗಾದೆಯ ಮಾತಿನಂತೆ-ಮನೆಯ ಒಳಗಿನ ಬೆಕ್ಕು-ಮನೆಯ ಹೊರಗಿನ- ಆ ತುಂಬು ಮೈಕಟ್ಟಿನ ನೀಳ ದೇಹಕ್ಕೆ ತಕ್ಕುದಾದ ಕಂಚುಕಟ್ಟಿದ ಆಳು ಗಾತ್ರದ ನಾಗಬೆತ್ತವನ್ನು ಹಿಡಿದು ಕುಂಞಿಮೋನು ಬ್ಯಾರಿ ಎದುರು ಬರುತ್ತಿದ್ದರೆ ನೋಡುವ ಕಣ್ಣಿಗೆ ಹಬ್ಬ.

ಇವರಿಗೆ ಹೊಂತಕಾರಿ ಯುವಕರನ್ನು ಉಣ್ಣಲು, ತಿನ್ನಲು ಕೊಟ್ಟು ಮನೆಯಲ್ಲಿ ಸಾಕುವುದೊಂದು ಮೋಜಿನ ಹವ್ಯಾಸ. ಕೊನೆಗೆ ಅವರು ಸಾಕಿದವರೇ ಅವರಿಗೆ ಕೈಕೊಟ್ಟ ಪ್ರಸಂಗಗಳು ಹಲವಾರು ''ನನ್ನ ಅನ್ನವನ್ನು ತಿಂದು ನನ್ನ ಬೀಬಿಗೇ

ಎರಡೆಣಿಸಿದೆಯಾ ಮಗನೇ'' ಎಂಬ ನಾಣ್ನುಡಿಯು ಕುಂಞಿಮೋನು ಬ್ಯಾರಿಯ ನುಡಿಮುತ್ತುಗಳು. ಸಾಹುಕಾರರ ಮಾತನ್ನು ಕೇಳುತ್ತಾ ಕುಳಿತರೆ ಗತಿಸಿದ ಕಥೆಯು ಎದುರು ಎದುರು ನಡೆಯುವಂತೆ ತೋರುವ ಮಾತುಗಾರಿಕೆ. ದಿವಂಗತ ಬೆಳ್ಳಿಪ್ಪಾಡಿ ಮ್ಯಾಲ ರೈಗಳ-ನಡುಮುಗೇರುಗುತ್ತು ಅಮ್ಮು ಶೆಟ್ಟರ ಸಾಹಸದ ವೀರಕತೆಗಳನ್ನು, ಪಂಚಾಯಿತಿಕೆಯ ಮೋಡಿಯನ್ನು, ಇವರನ್ನು ಎತ್ತಿಕಟ್ಟಿ ಅವರು ನ್ಯಾಯವಾದಿಗಳು ಎಂದು ಸಾಧಿಸುವ ಮಾತುಗಾರಿಕೆಯನ್ನು ಕುಂಞಿಮೋನು ಬ್ಯಾರಿಯ ಬಾಯಿಯಿಂದ ಕೇಳುವುದೆಂದರೆ ಕೇಳುವವರ ಪಾಲಿಗೆ ಅದೊಂದು ಉತ್ಸವ. ಕೈ ಹಿಡಿದ ಹೆಂಗಸರ ವಿಚಾರವಲ್ಲದೆ ಬೇರೆ ಯಾವ ಹೆಂಗಸರ ವಿಚಾರದಲ್ಲಿ- ಯಾರೇ ಆಗಿರಲಿ, ಅಪಚಾರದ ಮಾತನ್ನು ಆಡಿದನೆಂದರೆ 'ಒರಿ ಅಡಿ' (ಒಂದೇಟು) ತಿಂದು ದವಡೆಯಲ್ಲಿ ಅವರ ಐದು ಬೆರಳಚ್ಚನ್ನೂ ಆತ ಕಾಣದೆ ಹೋಗಲಾರ. ನಾವು ಜವ್ವನಿಗರು, ಧನಿಯಮಕ್ಕಳು ಮರೆತು, ತಪ್ಪಿ ಬೇರೆ ಹೆಂಗಸರ ಸುದ್ದಿ ಎತ್ತಿದರೇ ಆ ಕೂಡಲೇ ದೊಡ್ಡಕ್ಕ ಗಂಡನ ಮನೆಯಿಂದ ಬಂದವರು ಪುನಃ ಹೋಗಿರುವರೇ? ಎಂದು ಎಚ್ಚರಿಸದೆ ಬಿಡುತ್ತಿರಲಿಲ್ಲ. ಆದುದರಿಂದ ನಾವು ಕೂಡಾ ಅಂಥ ವಿಚಾರಗಳನ್ನು ಏರು ಜವ್ವನದ ಕಾಲದಲ್ಲಿ ಮಾತಾಡಬೇಕಿದ್ದರೂ ತುಂಬಾ ಜಾಗರೂಕತೆ ವಹಿಸಿಯೇ ಮಾತನಾಡುತ್ತಿದ್ದೆವು. ಸಾಹುಕಾರರು ತೋರಿಸಿದ ಮರದಿಂದ ಎರಡು ಎಳನೀರು ತೆಗೆದುಕೊಡುವುದಾದರೆ ಐವತ್ತು ಸಾಮು- ದಂಡ, ಕತ್ತಿ ವರಸೆ, ಲಾಗು, ಲಳಿ, ತುಳಿ, ತ್ರಿವಳಿ, ವಂಚನೆಗಳನ್ನು ತನ್ನ ಅರುವತ್ತನೆಯ ವಯಸ್ಸಿನಲ್ಲಿಯೂ ತೋರಿಸಿ ನಮ್ಮ ಇಪ್ಪತ್ತು- ಇಪ್ಪತ್ತೆರಡು ವಯಸ್ಸನ್ನು ನಾಚಿಸುವ ರೀತಿ ಕುಂಞಿಮೋನು ಬ್ಯಾರಿಯದ್ದು. ಸಾಮು ಮಾಡಿ ನಮಗೆ ತೋರಿಸಿ ಎಳನೀರನ್ನು ಕೆತ್ತಿ ಬಾಯಿಗಿಟ್ಟು ದಮ್ಮು ಬಿಗಿದು ಒಂದೇ ಗುಟುಕಿಗೆ ಕುಡಿದು ತೇಗಿ ಮೈಬೆವರು ಒರಸಿಕೊಳ್ಳುವುದನ್ನು ನೋಡುವುದೇ ನೆರೆದವರಿಗೊಂದು ಮೋಜಿನ ಪ್ರಸಂಗ.

ಆದರೆ ಹೊಟ್ಟೆ ತುಂಬಿಸುವ ಪ್ರಮೇಯ ಬಂದಾಗ ಈ ರೀತಿ ರಿವಾಜುಗಳನ್ನು ಕೈ ಬಿಡುವ ಪ್ರಸಂಗವೂ ಬರುತ್ತಿತ್ತು. ಶಿಕಾರಿಗೆ ಹೋದಲ್ಲಿ ಹಂಡೆಗಟ್ಟಲೆ ಮಾಂಸ ಬೇಯಿಸಬೇಕಿದ್ದರೆ ಅದಕ್ಕೆ ಬೇಕಾದ ಸಂಬಾರ, ತೆಂಗಿನಕಾಯಿ, ತುಪ್ಪ, ಉಪ್ಪು, ಹುಳಿ, ಮೆಣಸು, ಅಕ್ಕಿ, ಬೆಳಗ್ಗಿನ ಕಾಫಿಗೆ ಬೇಕಾದ ಫಲಾಹಾರ ಹಾಲು ವಗೈರೆಗಳನ್ನು ಹೆದರಿಸಿ ಪುಕ್ಕಟೆಯಾಗಿಯೆ ಪಡೆಯುವಲ್ಲಿ ಈ ಧರ್ಮಶಾಸ್ತ್ರವನ್ನು ಮೀರಿದ ಸಂದರ್ಭಗಳು ಹಲವಾರು. ಇದು ತಪ್ಪಲ್ಲವೆಂದು ಅವರ ಸಮರ್ಥನೆ. ನಾವು ಆ ಊರಿಗೆ ಬೇಟೆಗೆ ಹೋಗುವುದು ಊರವರ ಬೆಳೆರಕ್ಷಣೆಗಲ್ಲವೆ? ನಾವು ಬೇಟೆಗೆ ಹೊರಟೆವೆಂದರೆ ಸಾಹುಕಾರರನ್ನು ಆಹ್ವಾನಿಸದಿದ್ದರೂ ಅವರು ರೆಡಿ. ನನಗೂ ಇವರು ಬಂದರೆ ನಾನು

ದುರ್ಜನನಾಗದೆ ನಮಗೆ ಬೇಕುಬೇಕಾದ ಸಾಮಾನುಗಳನ್ನು ಪುಕ್ಕಟೆ ಸರಬರಾಜು ಮಾಡುವ ಬೇರೊಂದು ವ್ಯಕ್ತಿ ಮತ್ತಾರು? ಆದ್ದರಿಂದ ನನಗೂ ಸಾಹುಕಾರರನ್ನು ಬಿಟ್ಟು ಬೇಟೆಗೆ ಹೋಗುವುದೆಂದರೆ ಅಷ್ಟಕ್ಕಷ್ಟೆ.

ಅಂತೆಯೆ ಒಮ್ಮೆ ಕೊಂಬಾರಿಗೆ ಶಿಕಾರಿಗೆ ಹೋಗುವ ನಿರ್ಣಯವನ್ನು ಮಾಡಿದೆವು. ಕುಂಞಿಮೋನು ಬ್ಯಾರಿಯು ಚೂರಿ ಹಾಕದ ಯಾವ ಪ್ರಾಣಿಯ ಮಾಂಸವನ್ನು ತಿನ್ನುತ್ತಿರಲಿಲ್ಲ. ಮೂರು ಹೊತ್ತು ನಮಾಜನ್ನೂ ಬಿಟ್ಟಿರಲಿಲ್ಲ. ಯಾರ ಮನೆಯಲ್ಲಿಯೂ ಶುಚಿಯಾಗಿದ್ದರೆ ಊಟಕ್ಕೆ ನಿಷೇಧವೂ ಇರಲಿಲ್ಲ. ಆದ್ದರಿಂದ ನಿರುಪದ್ರವಿ. ಆದರೆ ಬರಿಂಕ, ಮೊಲ ಇತ್ಯಾದಿ ಚಿಕ್ಕ-ನಾಲ್ಕು ಕಾಲಿನ ಪ್ರಾಣಿಗಳ ಮಾತು ಬಿಡಿ, ಕಾಡುಮೇಕೆ, ಜಿಂಕೆಯಂತಹ ಹದ ಪ್ರಾಣಿಗಳು ಸಿಕ್ಕಿದರೂ ಕುಂಞಿಮೋನು ಬ್ಯಾರಿ ಬಿಸ್ಮಿ ಕೊಟಿತೆಂದರೆ (ಚೂರಿ ಹಾಕುವುದು) ನಮಗೆ ಎರಡೆರಡು ತುಂಡೂ ದಕ್ಕುತ್ತಿರಲಿಲ್ಲ. ಬೇಯಲು ಒಲೆಯ ಮೇಲಿಟ್ಟ ಮಾಂಸ ಕುದಿ ಬರುವಾಗ ಉಪ್ಪು ಸರಿಯಾಗಿದೆಯೋ ನೀರು ಬೆರೆಸಿದ್ದು ಸಾಕೋ? ಬೆಂದುದು ಹದವಾಗಿದೆಯೋ? ಎಂದು ನೋಡಿ ಕೆಳಗಿಡಲು ಆಜ್ಞಾಪಿಸುವಾ ಸಾಧಾರಣ ಅರ್ಧಮಣ ಮಾಂಸಪದಾರ್ಥಕ್ಕೆ ಕೊಟ್ಟಿದ್ದರೂ ನಮಗೆ ದಕ್ಕುತ್ತಿದ್ದುದು ಒಂದೆರಡು ಎಲುಬಿನ ತುಂಡಿನೊಂದಿಗೆ ಅದರ ಸಾರೇ ಗತಿ. ಈ ಒಂದು ಕಾರಣಕ್ಕಾಗಿ ನಮ್ಮ ಕೂಡುಕಟ್ಟಿನವರಿಗೆ ಸಾಹುಕಾರರನ್ನು ಬೇಟೆಗೆ ಕರೆಯುವುದು ಸಮಾಧಾನವಲ್ಲದ ವಿಷಯ. ಆದರೆ ನನ್ನ ಮಟ್ಟಿಗೆ ಇವರು ಬಂದರೆ ಬಾಕಿ ಖರ್ಚೆಲ್ಲಾ ಪುಕ್ಕಟೆ ನಡೆಯುವುದು ಎಂಬ ಆಸೆಯಿಂದ ನಾನು ಬಿಟ್ಟು ಹೋಗಲು ಸಿದ್ಧನಿಲ್ಲ.

ಸುಬ್ರಹ್ಮಣ್ಯ ಜಾತ್ರೆಯ ಸಮಯ ಹುಣ್ಣಿಮೆಯಂದು ನಾವು ಕುಲುಕುಂದಕ್ಕೆ ಹೋದವರು, ಜಾನುವಾರು ಮೇಲೆ ಹತ್ತುವ ದಿವಸ ಅಮವಾಸ್ಯೆಯಂದು ಸರ್ಚ್‌ಲೈಟ್ ಶಿಕಾರಿಗೆ ಹೊರಡುವುದೆಂದು ನಿರ್ಣಯ ಮಾಡಿದೆವು. ಹತ್ತು-ಹದಿನೈದು ದಿನ ಮೋಡದೆಡೆಯ ಉರಿಬಿಸಿಲಿನಲ್ಲಿ ತಿರುಗಾಡಿ ಕೆಸರು ತುಳಿದು ಸಪ್ಪೆ ಊಟ ಮಾಡಿದ ಬಾಯಿಗಳಲ್ಲಿ ಬೇಟೆಯೆಂದೊಡನೆಯೆ ಎಲ್ಲರ ಬಾಯಲ್ಲು ನೀರೂರತೊಡಗಿತು. ನಾನು ಕೋವಿ ಹೆಗಲಿಗೆ ಹಾಕಿ ಲೈಟು ಹಿಡಿದು ಹೊರಟೆನೆಂದರೆ ಬರಿಗೈಯಲ್ಲಿ ಬರುವವನಲ್ಲವೆಂದು ಆ ಕಾಲಕ್ಕೆ ಗಾದೆಯ ಮಾತೇ ಆಗಿತ್ತು. ರೊಟ್ಟಿ ಮಾಡಿಸಿ, ಸಂಬಾರ ಅರೆಯಲು ತಾಯಿ, ಅತ್ತೆಯರಿಗೆ ಹೇಳಿ ಊಟದ ಹೊತ್ತಿಗಾಗುವಾಗ ಮೊಲ, ಬರಿಂಕದ ಮಾತು ಒತ್ತಟ್ಟಿಗಿರಲಿ, ಹಲವಾರು ಸಲ ಒಂಟಿಗ ಹಂದಿಯನ್ನೇ ಹೊಡೆದುಕೊಂಡು ಬಂದು ಅದರ ತೊಡೆಯ ಭಾಗವನ್ನು ಮಾತ್ರ ಕಿತ್ತು ಮನೆಯಲ್ಲಿ ಪದಾರ್ಥ ಮಾಡುವುದಕ್ಕೆ ಕೊಟ್ಟು ಉಳಿದುದನ್ನು ಪಾಲು ಮಾಡಿ ಮರುದಿನ ಊರಿಗೆ ಹಂಚಿದ ಪ್ರಸಂಗಗಳು ಹಲವು.

ಅಂತೆಯೇ ಏಳೆಂಟು ಜನರು ಹೊರಟುದಾಯಿತು. ತನ್ನ ಕಂಚುಕಟ್ಟಿದ ದೊಣ್ಣೆಯನ್ನೊಮ್ಮೆ ಬಳಿನಿಂತಿದ್ದ ಸಾಂತ ಗೌಡನ ಹೆಗಲ ಮೇಲಿನ ಬೈರವಾಸನ್ನು ಎಳೆದು ತಿಕ್ಕಿ ಲಕಲಕಿಸಿ ತನ್ನ ಎದುರು ಹಲ್ಲಿಲ್ಲದ ಆ ಬೊಚ್ಚು ಬಾಯಿಯನ್ನು ತೆರೆದು ಆಕಳಿಸಿ ''ಯಾ ಅಲ್ಲಾ'' ಎಂದು ಪ್ರಾರ್ಥಿಸಿ ಮುಂದಾಗಿ ಕುಂಞಿಮೋನು ಶಿಕಾರಿಗೆ ಇಳಿದುದಾಯಿತು. ನಾನೂ ಲೈಟು ಕಟ್ಟಿ ಹಳೆಗೇಟಿನ ದಾರಿಯಾಗಿ ಕೊಂಬಾರಿಗೆ ಹೋಗುವುದೆಂದು ತೀರ್ಪಿತ್ತಿದ್ದೆ. ಅಂದರೆ ಆ ಸಮಯ ಸುಬ್ರಹ್ಮಣ್ಯಕುಲುಕುಂದವು ಜನ ಜಾನುವಾರುಗಳಿಂದಲೂ, ಮನುಷ್ಯರ ಗಲಾಟೆಯಿಂದಲೂ, ಮೃಗಗಳಿಗೆ ಭೀತಿಯ ಕೇಂದ್ರವಾಗಿದ್ದರೆ ನೆರೆಯ ಕೊಂಬಾರು ಅವುಗಳಿಗೆ ಆಶ್ರಯಸ್ಥಾನವಾಗಿತ್ತು. ಆ ಸಮಯ ಮಾವ ಅಳೇರಿ ಗುಡ್ಡಪ್ಪ ರೈಗಳು ಕೊಂಬಾರಿನಲ್ಲಿ ಹೊಸದಾಗಿ ಆಸ್ತಿಯನ್ನು ಖರೀದಿಸಿ ಮನೆ ಕಟ್ಟಿ ನೆಲೆಸಿದ ಕಾರಣ ನಾವೆಷ್ಟು ಜನ ಹೋದರೂ ಊಟಕ್ಕೆ ತೊಂದರೆಯಿಲ್ಲ. ಏಳೆಂಟು ದಿನ ನಿಂತು ಕಾರುಬಾರು ನಡೆಯಿಸುವುದಿದ್ದರೂ ಸೈಯೇ. ಏನಾದರೂ ತೊಂದರೆ, ಗಲಾಟೆ ಸಂಭವಿಸಿದರೂ ಆ ಊರಲ್ಲಿ ಅವರ ಜನಪ್ರಿಯತೆಯಿಂದ ಅದನ್ನು ನಿವಾರಿಸಿಕೊಳ್ಳುವುದು ದುಸ್ತರವಾದುದಲ್ಲ. ಅತ್ತೆಯಂತೂ ಬಂದವರಿಗೆ ಇದ್ದಷ್ಟು ದಿನ ಬೇಯಿಸಿಹಾಕುವ ಧಾರಾಳ ಮನಸ್ಸಿನವರು. ಮತ್ತೇನು ತೊಂದರೆ?

ರಾತ್ರಿ ಮಾರ್ಗದ ಬದಿಗೆ ಲೈಟು ಹಾಕುತ್ತಾ ಎರಡು ಮೂರು ಮೈಲು ಮುಂದೆ ಸಾಗಿರಬಹುದು. ಲೈಟಿಗೆ ಕಣ್ಣು ಕೊಟ್ಟ ಎರಡು ಮೊಲಗಳೂ, ಒಂದು ಬರಿಂಕವೂ ನನ್ನ ಕೋವಿಯ ಈಡಿನಿಂದಾಗಿ ಸಾಹುಕಾರರ ಬಿಸ್ಮಿಗೆ ಬಲಿಯಾಯಿತು. ಇನ್ನೇನು? ಮನೆಗಿರುವುದು ಏಳೆಂಟು ಫರ್ಲಾಂಗು ಮಾತ್ರ ಮನೆಯ ಹತ್ತಿರ ದೊಡ್ಡ ಮೃಗವೇನೂ ಕಾಣಸಿಗದು. ಸಿಕ್ಕಿದುದರಲ್ಲಿ ದೊಡ್ಡ ಪಾಲು ಸಾಹುಕಾರರ ತೊಳ್ಳೆ ತುಂಬಿಸಲಾಯಿತು. ಕುಲುಕುಂದದಲ್ಲಿ ಹತ್ತು ಹದಿನೈದು ದಿನ ಜಾನುವಾರು ಸಂತೆಯಲ್ಲಿ ಓಡಾಡಿ ದಣಿದ ಬೇಸರ. ಒಮ್ಮೆ ಮನೆ ಸೇರಿದರೆ ಸಾಕೆಂಬ ಆತುರ. ಸಿಕ್ಕಿದ ಮೂರು ಪ್ರಾಣಿಗಳೂ ಬ್ಯಾರಿಯ ಬಿಸ್ಮಿಗೆ ಬಲಿಯಾಗಿ ನಮಗೆ ಬರೇ ನೀರು ಸಾರೇ ಗತಿಯೆಂಬ ಕಾತರ. ಮುಂದೆ ಎತ್ತಿ ಹೆಜ್ಜೆ ಹಾಕುತ್ತಾ ಬಂದು ಮಾರ್ಗದ ಬದಿಯ ಮಣ್ಣು ಅಗೆದ ಜಾಗಕ್ಕೆ ಲೈಟಿನ ಬೆಳಕು ಚೆಲ್ಲಿದೆ. ಕಾಣುವುದೇನು? ಸಾಣೆಗಿಕ್ಕಿದ ವಜ್ರದ ಹರಳಿನಂತಹ ಕಣ್ಣುಗಳು ಗಿರಗಿರನೆ ತಿರುಗುತ್ತಿವೆ. ಸ್ವಲ್ಪ ಹತ್ತಿರ ಹೋಗೋಣವೆಂದು ಹತ್ತು ಹೆಜ್ಜೆ ಮುಂದೆ ಬಂದು, ನೋಡುತ್ತೇನೆ. ಪ್ರಾಣಿಯೊಂದು ಮತ್ತೊಂದು ಪ್ರಾಣಿಯನ್ನು ಮೆಟ್ಟಿ ಕುಳಿತು ಕತ್ತಿನ ಭಾಗವನ್ನು ಕಿತ್ತು ತಿನ್ನುತ್ತಿದೆ. ನನಗೆ ಅರ್ಥವಾಯ್ತು. ಕೋವಿಯಲ್ಲಿ ಮೊದಲೇ ಇಟ್ಟಿದ್ದ L.G. ಯನ್ನು ತೆಗೆದು ಒಂದನೇ ನಂಬ್ರದ ಚರೆ ತೋಟೆಯನ್ನಿಟ್ಟು ತೋರ್ಬೆರಳಿನಿಂದ ಕುತ್ತಿಗೆ

ಕೈಯಿಕ್ಕಿ ಮೀಟಿದೆ. 'ಥವೂಲ್' ಎಂದು ಎಡಬಲದ ಕಾಡುಗಲು ಮಾರ್ದನಿಗೊಟ್ಟೊಡನೆಯೆ ಲೈಟನ್ನು ತಪ್ಪಿಸಿ ತೋಟೆ ತುಂಬಿಸಲು ಬಗ್ಗಿದೆ. ಬಳಿಯಲ್ಲಿ ನಿಂತಿದ್ದ ಸಾಹುಕಾರರು ಬೀಳುವೆನೆಂಬ ಗೊಡವೆಯೂ ಇಲ್ಲದೆ ಎಲ್ಲಿಯಾದರೂ ಹೊಡೆದ ಮೃಗವು ಗತಾಸುವಾದರೆ ಸತ್ತುದಕ್ಕೆ ಚೂರಿ ಹಾಕಿದ ಬ್ಯಾರಿ ಎಂದು ನಕ್ಕಾರು ಎಂದು ಓಡಿ ಚೂರಿ ಬಿಡಿಸಿ ಅಂದಾಜಿಗೇ ಕೈಯಿಕ್ಕಿ ಮೃಗದ ಕತ್ತನ್ನು ಹಿಡಿದು ಔಕಿದ್ದೇ ತಡ. 'ಯಾ ಅಲ್ಲಾ', ಇದ್ ಎಂದ್‌ಡೆ' (ದೇವರೇ ಇದೇನು? ಧನಿಗಳೇ ಬನ್ನಿ, ಇದು ಬರಿಂಕ ಅಲ್ಲ. ಹುಲಿ ನನ್ನನ್ನು ಹಿಡಿದಿದೆ. ಅಯ್ಯೋ! ಕೈಯನ್ನು ಜಗಿಯುತ್ತಿದೆ. ಎದೆ ಮೆಟ್ಟಿ ಹಿಡಿದಿದೆ. ಸತ್ತೆ. ಅಲ್ಲಾ ಸತ್ತೆ' ಎಂಬ ಬೊಬ್ಬೆ, ಆರ್ಭಟೆಯನ್ನು ಕೇಳಿ ಒಡನಿದ್ದವರು ದೂರದೂರವೆ ಹೋದರಲ್ಲದೆ ಹುಲಿ ಹಿಡಿದವನನ್ನು ಬರಿಗೈಯಿಂದ ಬಿಡಿಸಲು ಬರುವ ಹುಚ್ಚರಾರು. ನಾನು ಇದನ್ನು ಕೇಳಿದವನೆ ಹೌಹಾರಿದವನಂತೆ ಓಡಿ ಕೋವಿಯನ್ನು ಎದೆಗೆ ಹಾಕಿ ಲೈಟನ್ನು ಕೂಗುಬರುವಲ್ಲಿಗೆ ಹಾಕಿ ನೋಡುತ್ತೇನೆ, ನಾಯಿಹುಲಿಯು ಬ್ಯಾರಿಯ ಬಲಕೈಗೆ ಬಾಯಿಹಾಕಿ ಒಂದು ಹಿಡಿ ಮಾಂಸವನ್ನು ತೆಗೆದು ಬಿಚ್ಚಿದ ಬಾಯಿಯನ್ನು ಮುಚ್ಚದೆಯೆ ಪ್ರಾಣ ಬಿಟ್ಟಿದೆ. ಕುಂಞಿಮೋನುವನ್ನು ನಾನು ಎಳೆದು ಈಚೆಗೆ ನಿಲ್ಲಿಸಿದ್ದೇ ತಡ ಆ ನೀಳ ದೇಹವು ಮಾರ್ಗದಲ್ಲಿಯೇ ಕುಸಿದು ಬಿತ್ತು. ಫ್ಲಾಸ್ಕಿನಿಂದ ನೀರು ತೆಗೆದು ಶೈತ್ಯೋಪಚಾರ ಮಾಡಿದ ನಂತರವೇ ಬೋದ ಬಂದುದು. 'ನಿಂಜಳೆ ಒಕ್ಕೆ ಬನ್ನಾಲಿ ನಿಂಜಕೊನ್ನುರು ಸ್ವಾಮಿ' (ನಿಮ್ಮೊಂದಿಗೆ ಬಂದಲ್ಲಿ, ನೀವು ಕೊಲ್ಲಲು ಹೇಸುವವರಲ್ಲ ಸ್ವಾಮಿ) ಇನ್ನು ನನಗೆ ಬಿಸ್ಮಿ ಕೂಟುವ ಕೆಲಸವೇ ಬೇಡ' ಎಂದ ಕುಂಞಿಮೋನು ಬ್ಯಾರಿಯು ಅಂದಿನಿಂದ ಸಾಯುವ ತನಕ ಬೇಟೆಯಮೃಗದತ್ತ ಕತ್ತಿ ಕೂಡಾ ಎತ್ತದೆ ತಾನು ಚೂರಿ ಹಾಕಿದ ಮಾಂಸವನ್ನು ತಿಂದಿಲ್ಲವಂತೆ. ಚೇತರಿಸಿದ ಸಾಹುಕಾರರನ್ನು ಇಬ್ಬರು ಮೂವರು ಕೂಡಿ ಆದರಿಸಿ ನಮ್ಮ ಕೊಂಬಾರಿನ ಮನೆಬೈಲೋಳಿಗೆ ಬಂದು, ಮಲಗಿದ್ದ ಅತ್ತೆಯನ್ನೂ, ಮಕ್ಕಳನ್ನೂ ಎಬ್ಬಿಸಿದಾಗ ಎದುರಿಗೆ ಕಂಡ ಹುಲಿ ಹಿಡಿದು ರಕ್ತದಿಂದ ತೊಯ್ದ ಈ ರಕ್ಕಸ ಗಾತ್ರದ ಶರೀರವನ್ನು ಕಂಡು ಅವರೂ ಮೂಕವಿಸ್ಮಿತರಾಗಿ ನೋಡುವಾಗ ಬೇಗಬೇಗನೆ ಕಾಫಿ ಮಾಡಿರೆಂದು ಹೇಳಿ ಸಾಹುಕಾರರಿಗೆ ಕಾಫಿ ಕುಡಿಸಿ ನೆರೆಯ ಮಂತ್ರವಾದಿ ಚೋಮಪೂಜಾರಿಯನ್ನು ಬರಮಾಡಿ ಹುಲಿಯ ಪಂಜಿನ ಹೊಡೆತದ, ಹಲ್ಲಿನ ಇರಿತದ ನಂಜೇರದಂತೆ ಮಂತ್ರವಾದ ಮಾಡಿಸಿ, ಬಲಿ ತೆಗೆಸಿ ಮೊದಲ ಉಪಚಾರವನ್ನು ಮಾಡಿ ಮುಗಿಯುವಾಗ ಹೊಟ್ಟೆಯು ಹಸಿವೆಂದು ಅರಚತೊಡಗಿತು. ಅತ್ತೆಯೊಂದಿಗೆ ಬೇಗ ಬೇಗನೆ ಸಿಕ್ಕಿದ ಮೊಲಬರಿಂಕಗಳಿಗೆ ಸಂಬಾರವನ್ನು ಅರೆಯುವಂತೆ ಹೇಳಿ ಸಾಹುಕಾರರನ್ನು ಮಲಗಿಸಿ ಮೃಗಗಳನ್ನು

ಅಜಕ್ಕಳ ಮಾಡಿ ಒಳಗೆ ಕೊಟ್ಟು ಬೇಯಿಸಲು ಹೇಳಿಯಾಯಿತು. ಸಾಹುಕಾರರಿಗೆ ಮಾಂಸವು ನಂಜೆಂದೂ ಗಂಜಿಯು ಅಜೀರ್ಣವೆಂದೂ ಹೇಳಿ ತೆಳಿಕುಡಿಸಿ ಪ್ರತೀಕಾರ ರೂಪದಲ್ಲಿ ಉಪವಾಸ ಮಲಗಿಸಿ ನಾವು ಹೊಟ್ಟೆ ತುಂಬಾ ಉಂಡು ಮಲಗಲು ಅಣಿಯಾಗುವಾಗ ಕೋಳಿಯು ಕೊ....ಕ್ಕೊ....ಕ್ಕೋ....ಎಂದು ಕೆಲೆಯಿತು.

ಸಾಹುಕಾರರಿಗೆ ಮರುದಿನ. ಹುಲಿ ಕಚ್ಚಿ ಪರಚಿದ ನಂಜೋ, ಹೆದರಿಕೆಯಿಂದಲೋ ಎಡೆಬಿಡದೆ ಮೂರು ದಿನದ ಜ್ವರ.

ಅನಂತರ ಕೆಲವು ವರ್ಷಗಳು ಕಳೆದು ನಾನು ಪಾಣಾಜೆಯಿಂದ ಊರಿಗೆ ಬಂದುದನ್ನು ತಿಳಿದು ನನ್ನನ್ನು ತನ್ನ ಮನೆಗೆ ಬರಲು ಹೇಳುವಂತೆ ಕರೆಯಲು ಅವರ ಮಗನನ್ನು ಕಳುಹಿಸಿ ನಾನು- ಬಂದುದನ್ನು ಕಂಡ ಸಂಭ್ರಮದಲ್ಲಿ ಕೈಮುಗಿಯುತ್ತಾ ''ಧನಿಗಳೇ ಸುಖವಾಗಿದ್ದೀರಾ, ಮಕ್ಕಳು ಕ್ಷೇಮವೇ ನೀವು ಇಲ್ಲಿರುವಾಗ ತಿಂದು ಚೆಲ್ಲಿದ ಮಾಂಸವು ಇಂದು ಹುಡುಕಿದರೂ ದೊರೆಯದು. ಹಲ್ಲೆಲ್ಲಾ ಹೋಗಿ ಜಗಿಯಲು ಸಾಧ್ಯವಿಲ್ಲದಿದ್ದರೂ ನಾಲಗೆಯ ಚಪಲ ಕೇಳುವುದಿಲ್ಲ. ಹೇಗೂ ಬಂದಿರಿ. ನನ್ನ ಆಸೆಯನ್ನು ನೀವು ತೀರಿಸಿಯೇ ಹೋಗಬೇಕು. ನನಗೆ ಮಾಂಸದ ಊಟ ಕೊಡಲು ಇಂದು ನಿಮಗೆ ಮಾತ್ರ ಸಾಧ್ಯ'' ಎಂದು ಗೋಗರೆಯಿತು. ಆ ಸಮಯ ನಾನು ಶಿಕಾರಿ ಜೀವನಕ್ಕೆ ಇತಿಶ್ರೀ ಹಾಡಿದ್ದೆ. ಮುದಿ ಪ್ರಾಯದ ಹಳೆಯಗೆಳೆಯನ ಆಸೆಯನ್ನು ಪೂರೈಸದಿದ್ದರೆ ನನ್ನ ಘನಸ್ತಿಕೆಗೆ ಕುಂದು. ಹಿಂದೆ ನನ್ನ ಆಸೆ- ಆಮಿಷಗಳನ್ನು ತೀರಿಸುವುದಕ್ಕಾಗಿ ಅವನು ಗೈದ ಗೈಮೆಯನ್ನು ಊಹಿಸುವುದು ಅಸಾಧ್ಯ. ಏನು ಮಾಡೋಣ? ನಮ್ಮ ಒಕ್ಕಲು ಚಾಕೊಟೆಕೆರೆ ಕರೆ ಬ್ಯಾರಿಯು ಆಡು ಸಾಕುತ್ತಾನೆ. ನಾನು ಒಂದು ಕುಟ್ಟನನ್ನು ಕೇಳಿದರೆ ಕೊಡೆನೆನ್ನ. ನನ್ನ ಮೆಚ್ಚಿನ ಒಡನಾಡಿ. ಏಳೆಂಟು ವರ್ಷಕ್ಕೆ ಪ್ರಾಯದಲ್ಲಿ ಕಿರಿಯ. ಅವನನ್ನು ಕರೆದು ಒಂದು ಆಡನ್ನು ಚೂರಿಹಾಕಿ ಮಾಂಸ ಮಾಡಿ ತಂದು ಕುಂಞಿಮೋನು ಬ್ಯಾರಿಯ ಮನೆಗೆ ಕೊಡಬೇಕೆಂದು ಹೇಳಿದ್ದೇ ತಡ. ಅಬ್ಬೊಕರೆಯು ಮರ್ದಾಳ ಮುಕ್ರಿಯನ್ನು ಬರಮಾಡಿ ಆಡನ್ನು ಚೂರಿ ಹಾಕಿಸಿ ಮಾಂಸಮಾಡಿಸಿ ಅದರಿಂದ ನಮಗೆ ಬೇಕಾದ ಮಾಂಸವನ್ನು ಕಟ್ಟುಮಾಡಿ ಕಳುಹಿಸಿಕೊಟ್ಟು ನಾನು ಎಷ್ಟು ಒತ್ತಾಯಿಸಿದರೂ ಅದರ ಹಣವನ್ನು ತೆಗೆದುಕೊಳ್ಳದೆ ''ಇದು ಅಪರೂಪವಾಗಿ ಬಂದ ನನ್ನ ಧನಿಗೆ ಸಮ್ಮಾನವೆಂದು ಹೇಳಿ ಅವನೇ ಅಡಿಗೆ ಮಾಡಿಕೊಟ್ಟು ಮನೆಯಿಂದ ಜೀರಸಾಲೆ ಅಕ್ಕಿಯನ್ನು ತಂದು ನೈಚೋರು ಮಾಡಿ ಕುಂಞಿಮೋನು ಬ್ಯಾರಿಗೆ ಬೇಕಾದಷ್ಟು ಖಲಿಜ, ಬೀಜ, ಮೃದುಮಾಂಸದ ಭಾಗವನ್ನು ಬಡಿಸಿ ಕುಡಿಯಲು ಎರಡು ನಿಂಬೆಹಣ್ಣಿನ ಶರಬತ್ತು ಕೊಟ್ಟು ತೃಪ್ತಿಪಡಿಸಿದುದಾಯಿತು. ನಾನು ಮುದಿ ಗೆಳೆಯನನ್ನು ಬೀಳ್ಕೊಂಡು ಬರುವಾಗ ಚಾಪೆಯಿಂದ ಎದ್ದು ಕುಳಿತ ಬ್ಯಾರಿಯು

''ಧನೀ ನೀವು ಇನ್ನೊಮ್ಮೆ ಬರುವಾಗ ನಾನು ಇರುವೆನೋ, ಇಲ್ಲವೋ ಹೇಳಲು ಸಾಧ್ಯವಿಲ್ಲ. ನಿಮಗೆ ದೇವರು ಒಳ್ಳೇದು ಮಾಡಲಿ, ನಿಮ್ಮ ಮಕ್ಕಳು ಸುಖವಾಗಿರಲಿ. ಆಗಬಹುದು ಹೋಗಿಬನ್ನಿ'' ಎಂದು ಕಣ್ಣು ಅರಳಿಸಿ ಗದ್ಗದ ಕಂಠದಿಂದ ಹೇಳಿದ ಆ ಮಾತು ಇಂದೂ ಕಿವಿಯಲ್ಲಿ ಗುಂಯ್‌ಗುಡುತ್ತಿವೆ. ಆ ಮುದಿಗಣ್ಣಿಂದ ತೊಟ್ಟಿಕ್ಕುತ್ತಿದ್ದ ಕಣ್ಣೀರ ಹನಿಯು ಕಣ್ಣೆದುರು ಕಾಣುತ್ತಿದೆ. ನಾನು ಕಡಬದಿಂದ ಬಂದ ಕೆಲವು ದಿನಗಳಲ್ಲಿ ನನ್ನ ತಮ್ಮ ಪ್ರಫುಲ್ಲನ ಕಾಗದ ಬಂತು. ''ಅಣ್ಣಾ, ನೀವು ಇಲ್ಲಿ ಬಂದು ಹೋದ ಮರುದಿನವೇ ಕುಂಞಿಮೋನು ಬ್ಯಾರಿಗಳು ಹೃತ್ಕ್ರಿಯೆ ನಿಂತು ತೀರಿಹೋದರೆಂದು''. ಎದ್ದು ನಿಂತು ಪ್ರಾರ್ಥಿಸಿದೆ. ''ಶಾಂತಿಪ್ರದಾಯಕ, ದಯಾಮಯ, ಅಲ್ಲಾಹುವು ಆ ನಿರಾಡಂಬರ ನಿರಕ್ಷರಕುಕ್ಷಿ, ಧರ್ಮಭೀರುವಿನ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ'' ಎಂದು ಮುಖ ಮೇಲೆತ್ತಿ ಪ್ರಾರ್ಥಿಸುತ್ತಿರುವಾಗ ಸಮಾನ ವ್ಯಸನದ ಮೈತ್ರತ್ವದ ದ್ಯೋತಕವಾಗಿ ಎರಡು ತೊಟ್ಟು ಕಣ್ಣೀರು ತರ್ಪಣರೂಪದಿಂದಲೋ ಎಂಬಂತೆ ಹೊರಜಗುಳಿತು.

ಪಾರಿಭಾಷಿಕ ಶಬ್ದ ಕೋಶ

ಅಜಕ್ಕಲ (ಳ) = ಮಾಂಸ ಕತ್ತರಿಸಿ ಪಾಲು ಮಾಡುವುದು
ಅಗೆಲು = ಎಡೆಹಾಕು, ಭೂತಗಳಿಗೆ ಬಡಿಸುವುದು
ಅಂಡೆ = ಬಿದಿರಿನ ಬತ್ತಳಿಕೆ
ಅಡ್ಡ ಬಲಲಿಲ್ಲಪ್ಪ, ಬಲಿಪ = ಹೆಬ್ಬುಲಿ ಆವಾರ = ಆಹಾರ
ಇಯೆರು = ಕಾಡಿನಲ್ಲಿ ಸಿಗುವ ಒಂದು ಜಾತಿಯ ಗಡ್ಡೆ
ಉಗ್ಗೊದಬ = ಮನೆಯ ಯಜಮಾನಿ (ಅನ್ನ ನೀಡುವ ತಾಯಿ)
ಉರಾಲು = ಹಾಡಿನಐ 'ಓ' ಧ್ವನಿ
ಒಚ್ಚಿ = ಕತ್ತಿ ಮಸೆಯಲು ಉಪಯೋಗಿಸುವ ಮರದ ತುಂಡು
ಒಯ್ಲು = ಸೆಳೆತ ಕಣ್ಣೆ = ಹಗ್ಗ
ಕಡೆಚ್ಚಿಲು = ಮರಗೆಲಸದವರು ದ್ರುಂಡಗಿನ ರೂಪ ಕೊಡಲು ಬಳಸುವ ಸಾಧನ
ಕಿನ್ನಿಬಾಣಾಸುರು = ಸಣ್ಣ ಯಜಮಾನರು, ಬ್ರಾಹ್ಮಣರು
ಕಿಳ್ಳಿ = ಅಡಕೆ ಮರದ ಹಾಳೆಯಿಂದ ಮಾಡುವ ದೊನ್ನೆ
ಕುರ್ದಿ, ಕುರುದಿ = ದಘ್ರುಷ್ಟಿ ನಿವಾಳಿಸಲು ಮಾಡುವ ಅರಸಿನ, ಕುಂಕುಮದ ನೀರು
ಕೊದಿ = ಆಸೆಯ ದೃಷ್ಟಿ ತಾಗುವುದು
ಕೋಂಟು = ಮುಟ್ಟಾಳೆಯ ತುದಿ (ಅಡಕೆ ಹಾಳೆಯ ಟೊಪ್ಪಿ)
ಗರ್ಜಿ = ತುರ್ತು
ಗುತ್ತು = ನಾಗಾಲೋಟ, ಮನೆತನದ ಹೆಸರು
ಗೆಂಟ್ಟಿ, ಗೇಂಟಿ = ಸ್ತ್ರೀಯರು ಎದೆ ಮಾತ್ರ ಮುಚ್ಚುವಂತೆ ಕತ್ತಿನ ಹಿಂಭಾಗದಲ್ಲಿ ಗಂಟು ಕಟ್ಟುವ ರೀತಿ
ಜಂಬೂಸು = ಜಬ್ಬು
ಜಾಮುಂಗೆ ಕೋವಿ = ಕೇಪಿನ ಬಳಕೆ ಇಲ್ಲದ ಬತ್ತಿಯ ಕೋವಿ
ಜೂಲಿ = ಗೌಸು ತುಚ್ಚಿ, ಪತ್ತಿ = ಕಚ್ಚಿ, ಹಿಡಿ
ತೆಳಿ = ಗಂಜಿ ನೀರು ತೆಂಡೆ ಹೊಡೆ = ತೆನೆ ಬಿರಿಯುವುದು
ತೈನಾತಿ = ಆಪ್ತನಾದ ಆಳು, ಸ್ನೇಹಿತಹ
ತೊಡಂಕು = ಕತ್ತಿಯನ್ನು ಸೊಂಟದಲ್ಲಿ ತೂಗಾಡಿಸುವ ಸಾಧನ
ನೆರಪ್ಪು = ತಡಿಕೆ
ಪಪ್ಪು = ದನದ ಹೆಣ ಪೀನಾರಿ = ಲೋಭಿ


ಪುಂಡಿಕೇನೆ = ಒಂದು ಜಾತಿಯ ಗಡ್ಡೆ   ಪೆಂಡಿ = ವಸ್ತ್ರದ ಗಂಟು
ಬರಿಂಕ = ಬರ್ಕ, ಮೊಲದ ಜಾತಿಯಚಿಗರೆ
ಬಾಸಿ = ಬಿದಿರ ನಾರು, ದಬಣೆಬ್ಬೆ
ಬಿರ್ಸಾತಿಗೆ, ಬಿರ್ಸತ್ತಿಗೆ = ಘನತೆ, ದರ್ಬಾರು
ಬಿರು, ಪಗರಿ = ಬಿಲ್ಲು, ಬಾಣ   ಬೋಟಿ = ಮೃಗದ ಕರುಳು
ಬೋಂಟ್ರ = ಬೇಟೆಯ ದಿಗ್ದರ್ಶಕ
ಮುಟ್ಟಪ್ಪಾಳೆ, ಮುಟ್ಟಾಳೆ = ಅಡಕೆ ಹಾಳೆಯ ಟೊಪ್ಪಿ
ಮುಂಡುದ್ದ = ವೊಳದುದ್ದ
ಮೂಕಿ = ಗಾಡಿಯ ಮೂತಿ
ಸಂಕವಾಳ = ಶಂಖಪಾಲ, ಕಾಳಿಂಗ
ಸಂಧಿ, ಪಾಡ್ದನ = ತುಳು ಜಾನಪದ ಹಾಡುಗಳು
ಸೂಂಟಗೆ = ಹಂದಿಯ ಚರ್ಮ
ಪಗರಿ = ಕಡಿಣೆ   ಕೊದಿ = ಆಸೆ
ಹಡಿಲು = ಉತ್ತು ಬಿತ್ತದ ಜಾಗ್ರು
ತಂಬಿಲ = ಭೂತಕ್ಕೆ ಆವಾರ ಕೊಡುವ
ಕಿಲೆಂಜಿ = ಗುರಿ ನೋಡುವ ಗುರುತು
ಮೂರ್ತೆ = ಕಳ್ಳು ತೆಗೆಯುವುದು
ಕುಪ್ಪಿ = ಬಾಟಲು   ಮುಟ್ಟಾಲೆ = ಕೌಂಗಿನ ಹಾಳೆಯ ಶಿರಸ್ತ್ರಾಣ
ಬೆಡಿ = ಕೋವಿ   ಮುದಿಪ್ಪು = ಆಶೀರ್ವಾತ
ಸಿರ್ಕ = ಹಲವಾರು ದಿನ ಬಿಸಿಲಿನಲ್ಲಿ ಹುಳಿಯಲ್ಲಿಟ್ಟ ಕಳ್ಳು
ಹೊಟ್ಟೆಕಟ್ಟು = ಹೊಟ್ಟೆ ಉಬ್ಬರಿಸು
ದೆಂಗ = ಒಲೆಯ ಮೇಲಿನ ಅಟ್ಟಳಿಗೆ
ಗಾಡಿಗೆ ಬಿರಿಯಿಕ್ಕು = ಗಾಡಿಯು ಮುಂದೆ ಹೋಗದಂತೆ ತಡೆಯುವ ವಿಧಾನ (ಬ್ರೇಕ್)
ಕೋವಿದು ಕುತ್ತು = ಕಳುವ
ಕೊಡಿದನಿ = ವೊದಲ ಬೊಬ್ಬೆ

ಕನ್ನಡ ಪುಸ್ತಕ ಪ್ರಾಧಿಕಾರದ ಈಚಿನ ಕೆಲ ಪ್ರಕಟಣೆಗಳು

ಜನಪ್ರಿಯ ಪುಸ್ತಕ ಮಾಲೆ:		ದರ
೧. ಪುರಾಣ ಭಾರತ ಕೋಶ	ಯಜ್ಞನಾರಾಯಣ ಉಡುಪ	೭೫.00
೨. ಭಾರತೀಯ ಚಿತ್ರಕಲೆ	ಡಾ। ಶಿವರಾಮ ಕಾರಂತ	೪0.00
೩. ಕನ್ನಡ-ಕನ್ನಡಿಗ-ಕರ್ನಾಟಕ	ಸಂ. ಚಿದಾನಂದಮೂರ್ತಿ	೪0.00
೪. ದೇವುಡು ಅವರ ಆಯ್ದ ಕತೆಗಳು	ಸಂ. ಲಿಂಗರಾಜು	೪0.00
೫. ಹಾಸ್ಯ ಕಸ್ತೂರಿ	ಸಂ. ಕೆ. ಬಿ. ಪ್ರಭುಪ್ರಸಾದ್ ಎಚ್. ಎಲ್. ಕೇಶವಮೂರ್ತಿ	೬0.00
೬. ಆಯ್ದ ಕವಿತೆಗಳು	ಡಾ। ಸಿದ್ಧಲಿಂಗಯ್ಯ	೨0.00
೭. ಮೂರು ನಾಟಕಗಳು	ಬಿ. ಪಟ್ಟಸ್ವಾಮಯ್ಯ	೫೫.00
೮. ಆಯುರ್ವೇದ ಸಾರ ಭಾಗ - ೧	ಪ. ರಾಮಕೃಷ್ಣಯ್ಯ	೧00.00
೯. ಆಯುರ್ವೇದ ಸಾರ ಭಾಗ - ೨	ಪ. ರಾಮಕೃಷ್ಣಯ್ಯ	೧00.00
೧0. ಬೇಟೆಯ ನೆನಪುಗಳು	ಕೆದಂಬಾಡಿಜತ್ತಪ್ಪರೈ	೨೨ 00
೧೧. ಈ ಶತಮಾನದ ನೂರು ಇಂಗ್ಲಿಷ್ ಕವನಗಳು	ಡಾ। ಬಿ. ಸಿ. ರಾಮಚಂದ್ರಶರ್ಮ	೪೫.00
೧೨. ಶಂ. ಬಾ. ಜೋಶಿಯವರ ಆಯ್ದ ಲೇಖನಗಳು	ಸಂ. ಮಲ್ಲೇಪುರಂ ಜಿ. ವೆಂಕಟೇಶ್	೬೫.00
೧೩. ನಮ್ಮೆಲ್ಲರ ಬಾಪು ಗಾಂಧೀಜಿ	ವೆರಿಯರ್ ಎಲ್ವಿನ್ ಅನು : ಚಂದ್ರಶೇಖರಯ್ಯ ಬಿ.ಎಂ.	೧೮.00
೧೪. ಮಹಾತ್ಮ ಗಾಂಧಿ	ವಿನ್ಸೆಂಟ್‌ಷೀನ್ ಅನು : ವಿ. ಎನ್. ನಾರಾಯಣ್ ರಾವ್	೩೫.00

ಮೂಲಭೂತ ಶೈಕ್ಷಣಿಕ ಮಾಲೆ :		
೧. ಜೀವಕೋಶ ವಿಜ್ಞಾನ	ಸಾತನೂರು ದೇವರಾಜ	೨0.00
೨. ವಿದ್ಯಾರ್ಥಿಗಳ ಮಾನಸಿಕ ಸಮಸ್ಯೆಗಳು	ಡಾ। ಸಿ. ಆರ್. ಚಂದ್ರಶೇಖರ್	೨೧.00

ಮಕ್ಕಳ ಪುಸ್ತಕ ಮಾಲೆ :		
೧. ಸಂತಮ್ಮಣ್ಣ	ಬೋಳುವಾರು ಮಹಮದ್ ಕುಂಞ	೨00.00
೨. ಚಿಗುರು	ಭಾರತೀಯ ಭಾಷಾ ಸಂಸ್ಥಾನ	೩0.00
೩. ಕಥೆ ಕೇಳಿ ಕನ್ನಡ ಕಲಿ	ಎಸ್. ಸೀತಾಲಕ್ಷ್ಮಿ	೩೨.00



ಈ ಕೃತಿಯ ಬಗ್ಗೆ.....

ನಿಮ್ಮ ಕೃತಿ ಕೈ ಸೇರಿದಾಗ ಎಂತಹ ಒಂದು ಅಮೂಲ್ಯ ಕೃತಿ ಕೈ ಸೇರಿದೆ ಎಂದು ಅರಿವಾಗಲಿಲ್ಲ. ಓದಲು ತೊಡಗಿದವನಿಗೆ ಎಂತಹ ಒಂದು ಅದ್ಭುತ ರಸಾನುಭವ ಕಾದಿತ್ತು ಎಂದು ನಿಮಗೆ ನಾನು ಹೇಗೆ ವರ್ಣಿಸಲಿ - ಭಂಗಿ ಸೇದುವವನಿಗೆ ಇನ್ನೊಬ್ಬ ಖದೀಮ ಭಂಗಿ ಸೇದುವವನ ಗೆಳೆತನ ದೊರಕೊಂಡ ಹಾಗಾಯಿತು........

.....ಕನ್ನಡಕ್ಕೆ ನಿಮ್ಮ "ಬೇಟೆಯ ನೆನಪುಗಳು" ಒಂದು ಹೊಸ ಅನುಭವ ಪ್ರಪಂಚದ ಇದುವರೆಗೂ ಕನ್ನಡಕ್ಕೆ ದೊರಕದಿದ್ದ ಆಯಾಮವನ್ನೇ ತಂದು ಕೊಡುತ್ತದೆ.

- ಕುವೆಂಪು

☆ ☆ ☆

ಬೇಟೆಯ ವಿನೋದ, ಸಾಹಸದ ರಮ್ಯ ಕಥೆಯನ್ನು ರೋಮಾಂಚಕವಾಗಿ ವಿವರಿಸಿದ್ದೀರಿ. ವಿಷಯ ನಿರೂಪಣೆ, ಶೈಲಿ ವರ್ಣನೆ ಎಲ್ಲಾ ತುಂಬಾ ಸೊಗಸಾಗಿದೆ. ನಿಮ್ಮ ಬೇಟೆಯ ಕೌಶಲ-ಶೌರ್ಯದಲ್ಲಿ ನಾವೂ ಪಾಲುಗೊಳ್ಳುತ್ತೇವೆ. ಅಪಾಯದಲ್ಲಿ ನಾವೂ ಅಪಾಯವನ್ನು ಅನುಭವಿಸುತ್ತೇವೆ. ನಿಮ್ಮ ಶೈಲಿಯಲ್ಲಿ ಒಂದು ಬಗೆಯ ವಾಸ್ತವತೆ, ಆತ್ಮೀಯತೆ ಇದೆ. ಕೆಲವು ಕಡೆ ಅದು ಗದ್ಯ ಕವನದ ಮಟ್ಟವನ್ನು ತಲುಪುತ್ತದೆ. ಕಥಾನಕ ತುಂಬಾ ಸ್ವಾರಸ್ಯಕರವಾಗಿ ಸಾಗಿ ಇಷ್ಟು ಬೇಗ ಮುಗಿಯಿತಲ್ಲಾ ಎಂದು ಕೊರಗುತ್ತೇವೆ.

ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್